ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಪಿಎಚ್.ಡಿ. ಅಧ್ಯಯನದ ಮಹಾಪ್ರಬಂಧ

ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ

ಸಂಶೋಧನ ವಿದ್ಯಾರ್ಥಿ
ಎಲ್.ಎಂ. ವೆಂಕಟೇಶ್

ಮಾರ್ಗದರ್ಶಕರು
ಡಾ. ಪಿ.ವಿ. ನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2011

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಪಿಎಚ್.ಡಿ ಅಧ್ಯಯನದ ಮಹಾಪ್ರಬಂಧ

ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ

ಸಂಶೋಧನ ವಿದ್ಯಾರ್ಥಿ
ಎಲ್.ಎಂ. ವೆಂಕಟೇಶ್

ಮಾರ್ಗದರ್ಶಕರು
ಡಾ : ಪಿ.ವಿ. ನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2011

ಅಭ್ಯರ್ಥಿಯ ಪ್ರಮಾಣಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ 2011–12 ನೇ ಸಾಲಿನ ಪಿಎಚ್.ಡಿ ಪದವಿಗಾಗಿ **"ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ"** ಎಂಬ ಮಹಾಪ್ರಬಂಧವನ್ನು ಡಾ॥ ಪಿ.ವಿ. ನಾರಾಯಣ ಅವರ ಮಾರ್ಗದರ್ಶನದಲ್ಲಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 12.8.11

ಸ್ಥಳ : ಬೆಂಗಳೂರು

ಸಹಿ

(ಎಲ್.ಎಂ. ವೆಂಕಟೇಶ್)
ಸಂಶೋಧನ ವಿದ್ಯಾರ್ಥಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ 2011–12 ನೇ ಸಾಲಿನ ಪಿಎಚ್.ಡಿ ಪದವಿಗಾಗಿ **"ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ"** ಎಂಬ ಮಹಾಪ್ರಬಂಧವನ್ನು ಎಲ್. ಎಂ. ವೆಂಕಟೇಶ್ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೪.೦೮.೨೦೧೧

ಸ್ಥಳ : ಹಂಪಿ

ಸಹಿ

(ಡಾ॥ ಪಿ.ವಿ. ನಾರಾಯಣ)
ಮಾರ್ಗದರ್ಶಕರು

ಕಲ್ಯಾಣ ಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ

ಅಧ್ಯಾಯ – 1

ಕಲ್ಯಾಣ ಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಉದ್ದೇಶ:

'ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ'ದ ಅಧ್ಯಯನವು ಹನ್ನೆರಡನೆ ಶತಮಾನದಲ್ಲಿನ ಪ್ರಮುಖ ವಚನಕಾರರ ವಚನಗಳನ್ನು ಕೇಂದ್ರವಾಗಿರಿಸಿಕೊಂಡು ಅಭ್ಯಾಸ ಮಾಡಲಾಗಿದೆ. ಅಂದಿನ ಕಾಲದ ಸಾಂಸ್ಕೃತಿಕ ಸಂದರ್ಭವನ್ನು ವಚನಗಳಲ್ಲಿ ಕಂಡುಬರುವ ಸಮುದಾಯ ಪ್ರಜ್ಞೆಯ ನಿಷ್ಠೆಯಿಂದ ನೋಡಲಾಗಿದೆ. ಈ ಕಾರಣದಿಂದ ವಚನಗಳು ಸಮಕಾಲೀನ ಪ್ರಜ್ಞೆಯ ಜೊತೆಯಲ್ಲಿ ವಚನಗಳಲ್ಲಿ ಕಂಡುಬರುವ ಕಲ್ಯಾಣದ ಸಾಂಸ್ಕೃತಿಕ ಕ್ರಾಂತಿಯ ವಿಚಾರಗಳ ಜವಾಬ್ದಾರಿಯನ್ನು ಅರಿತು ಸಂಶೋಧಿಸಲಾಗುವುದು.

ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನವು ಅಗ್ರಸ್ಥಾನದಲ್ಲಿರುವುದನ್ನು ಅನೇಕ ವಿದ್ವಾಂಸರು ಸಂಶೋಧನೆ ಮೂಲಕ ತಿಳಿಸಿದ್ದಾರೆ. ದೇಶೀಯವಾದ ಸಾಂಸ್ಕೃತಿಕ ನೆಲೆಯ ಚರಿತ್ರೆಯನ್ನು ತಳಸಮುದಾಯದೊಂದಿಗೆ ಸಮೀಕರಿಸಿ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ನಂಬಿಕೆಗಳು ಭಿನ್ನಗೊಂಡಾಗ ಜನರ ಆಚಾರ–ವಿಚಾರ, ನಡೆ–ನುಡಿ, ಉಚ್ಚ–ನೀಚ, ಮೇಲು–ಕೀಳು, ಬಡವ–ಬಲ್ಲಿದ, ಭಕ್ತ–ಭವಿ, ಅರುವು–ಕುರುಹು, ಸ್ಥಾವರ–ಜಂಗಮ, ರೂಢಿ–ಸಂಪ್ರದಾಯ ಮೊದಲಾದವುಗಳಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಈ ಹಾದಿಯಲ್ಲಿ ಅನೇಕ ಪ್ರಗತಿಪರ ಧೋರಣೆಗಳೊಂದಿಗೆ ಉಗಮಗೊಂಡ ಕಲ್ಯಾಣ ಕ್ರಾಂತಿ, ಜನರ ಸಾಂಪ್ರದಾಯಿಕ ಮನಸ್ಸುಗಳ ಪರಿವರ್ತನೆ ಹಾದಿ ಹಿಡಿಯಬೇಕಾದ್ದು ಸಹಜವಾಗಿತ್ತು. ಹಲವು ವಿಚಾರಗಳೊಂದಿಗೆ ಹೊಸ ರೂಪು ಪಡೆದ ಈ ಕ್ರಾಂತಿಯು ನವ ಸಮಾಜ ನಿರ್ಮಾಣದ ಕನಸುಗಳೊಂದಿಗೆ ಉಗಮವಾಯಿತು. ಇದಕ್ಕೆ ಶರಣರ ಚಿಂತನೆಗಳು ಕಲ್ಯಾಣ ಕ್ರಾಂತಿಗೆ ಪುಷ್ಠಿ ನೀಡಿದವು.

ವಾಸ್ತವವಾಗಿ ಕಲ್ಯಾಣದಲ್ಲಿ ಆದ ಕ್ರಾಂತಿಯ ಉಗಮ, ಕ್ರಾಂತಿಗೆ ಕಾರಣೀಭೂತವಾದ ರಾಜಕೀಯ, ಸಾಮಾಜಿಕ, ಧಾರ್ಮಿಕ ವಲಯಗಳಲ್ಲಿ ಉಂಟಾದ ಬಿಕ್ಕಟ್ಟು 12ನೇ ಶತಮಾನದಲ್ಲಿ ಕ್ರಾಂತಿಯ ಉಗಮಕ್ಕೆ ಕಾರಣವಾಯಿತು. ಇದರ ಪರಿಣಾಮಗಾಗಿ ಸಾಮಾನ್ಯರ ಜನಜೀವನದಲ್ಲಿ ತಾತ್ವಿಕ ಮತ್ತು ಬೌದ್ಧಿಕ ಬದಲಾವಣೆಗಳು 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂದು ಅರಿತ ಶರಣರು ಶೋಷಿತ ಸಮುದಾಯಗಳನ್ನು ಒಗ್ಗೂಡಿಸಿ ಅವರಲ್ಲಿ ಹುದುಗಿರುವ ಮೌಢ್ಯತೆಯನ್ನು ತೊಡೆದುಹಾಕಲು ಜ್ಞಾನವೆಂಬ ಅಸ್ತ್ರವನ್ನು ಬಳಸಿಕೊಂಡರು. ಪ್ರಜ್ಞಾವಂತರ ಜ್ಞಾನ ವಿಕಾಸದ ಜೊತೆಗೆ ಸಮುದಾಯಗಳನ್ನು ಪರಿವರ್ತಿಸುವ ಕಾರ್ಯನೆಡೆಯಿತು. ಅಸಮಾನತೆಯಿಂದ ಬೇಸತ್ತ ಪ್ರಜ್ಞಾವಂತ ಮನಸ್ಸುಗಳು ಒಂದೆಡೆ ಸೇರಲು ಪ್ರೇರಣೆಯಾಯಿತು.

ಇನ್ನೊಂದೆಡೆ ಸರ್ವಾಧಿಕಾರಿ ಆಡಳಿತದ ಧೋರಣೆಗಳು, ಸಮಾಜದ ಮುಖ್ಯವಾಹಿನಿಯಲ್ಲಿ ಅಸ್ತಿತ್ವದಲ್ಲಿದ್ದ ವಿಪರೀತ ಆಚರಣೆಗಳು ಹಾಗೂ ಮೂಢ ನಂಬಿಕೆಗಳು ಅಂದಿನ ಜನ ಸಾಮಾನ್ಯರನ್ನು ದಿಕ್ಕು ತಪ್ಪಿಸಿದ್ದವು. 'ಕಲ್ಲನಾಗರ ಕಂಡೆ ಹಾಲನೆರೆ ಎಂಬರಯ್ಯ, ದಿಟ ನಾಗರ ಕಂಡರೆ ಕೊಲ್ಲೆಂಬರಯ್ಯ......' ಎಂಬ ಬಸವಣ್ಣನವರ ವಚನದಲ್ಲಿ ಢಂಬಾಚಾರಗಳನ್ನು ಒರೆಗೆ ಹಚ್ಚುವ ಮೂಲಕ ಸಮಾಜದ ಅನಿಷ್ಠಗಳನ್ನು ತೊಡೆದುಹಾಕುವ ಪ್ರಯತ್ನ ಮಾಡಿದರು.
12ನೇ ಶತಮಾನದಲ್ಲಿ ಕೇವಲ ಧಾರ್ಮಿಕ ಹಾಗೂ ಸಾಮಾಜಿಕವಾಗಿ ಮಾತ್ರ ಬದಲಾವಣೆಗಳಾಗಲ್ಲಿಲ್ಲ. ಭಾಷೆಯಲ್ಲಿಯೂ ಕೂಡಾ ಬದಲಾವಣೆ ಕಂಡು ಬಂದಿತು.

ಸಾವಿರಾರು ವರ್ಷಗಳಿಂದ ಜನಪದರ ಜೀವ ಸೆಲೆಯಾಗಿ ಬಾಯಿಂದ ಬಾಯಿಗೆ ಹರಿದು ಬರುತ್ತಿರುವ ಜನಪದ ಸಾಹಿತ್ಯದ ಪ್ರಭಾವ ಸಾಮಾನ್ಯವಾಗಿ ಮಾರ್ಗ ಸಾಹಿತ್ಯದ ಮೇಲೂ ಬೀರಿರುವುದನ್ನು ಗುರುತಿಸಬಹುದು. ಪಂಪ, ರನ್ನರು ಮಹಾ ಕಾವ್ಯಗಳನ್ನು ಸೃಷ್ಟಿಸಿದರು. ಆದರೆ ಜನ ಸಾಮಾನ್ಯರ ಭಾಷೆಯನ್ನು ತಮ್ಮ ಕೃತಿಗಳಲ್ಲಿ ದುಡಿಸಿಕೊಳ್ಳಲಿಲ್ಲ. ಪರಿಣಾಮವಾಗಿ ಎಲ್ಲಾ ವರ್ಗದವರಿಗೆ ಅವರ ಸಾಹಿತ್ಯಿಕ ಭಾಷೆ ತಲುಪಲಿಲ್ಲ. ಬದಲಾಗಿ ವಿಚಾರಗಳು ವ್ಯಕ್ತಿಯಿಂದ ವ್ಯಕ್ತಿಗೆ ಯಶಸ್ವಿಯಾಗಿ ಸಂವಹನಗೊಳ್ಳಲಿಲ್ಲ.

ಹೀಗೆ ಸಾಗಿದ ಭಾಷಾ ಸಾಹಿತ್ಯವು ಸರಳೀಕರಣದ ಸೃಷ್ಟಿ ಬಿಟ್ಟು, ಕ್ಲಿಷ್ಟಕರಾದ ಗದ್ಯ-ಪದ್ಯಗಳಿಂದ ಕೂಡಿದ ಛಂದೋಬದ್ಧ ರಚನೆಯುಳ್ಳ ಸಾಹಿತ್ಯ ಕೃತಿಗಳನ್ನು ರಚಸತೊಡಗಿದರು.

ಇದರಿಂದ ಹೊರಹೊಮ್ಮಿದ ರಾಜಾಶ್ರಯ ಮೂಲದ ಕೃತಿಗಳು ಪಂಡಿತರಿಗೆ ಮಾತ್ರ ಮೀಸಲಾಗಿದ್ದವು. ಅಂದಿನ ಕಾಲದ ಸಾಹಿತ್ಯದಲ್ಲಿ 'ಮುನ್ನಿನಕಬ್ಬಗಳೆಲ್ಲವನ್ನುಇಕ್ಕಿಮೆಟ್ಟಿದು', 'ಕಬ್ಬಮಂಕೂಸುಮನೀವುದೀವುದರಿಕೇಸರಿಗಲ್ಲದವಸ್ತುಗೀವುದೇ', 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪಂ' ಎಂಬ ಅಗ್ಗಳಿಕೆಯ ಮಾತುಗಳನ್ನು ಗಮನಿಸಿದಾಗ ಅಂದು ಇದ್ದಂಥ ಸಾಹಿತ್ಯದಲ್ಲಿ ಪ್ರಭುತ್ವ, ಭಾಷಾಯಜಮಾನಿಕೆಯ ವಿಚಾರಗಳು ಪ್ರಧಾನವಾಗಿದ್ದವು. ಇದರಿಂದ ಅಕ್ಷರ ರೂಪಿಯಾದ ಸಾಹಿತ್ಯವು ಕೆಲವೇ ವರ್ಗದ ಸೊತ್ತಾಗಿತ್ತೆ ವಿನಃ, ಸಾಮಾನ್ಯನ ಬದುಕಿಗೆ ಜೀವ ಸೆಲೆಯಾಗಲಿಲ್ಲ. ಆ ಕಾರಣ ನಿಮಿತ್ತವಾಗಿ ಹೊಸ ಭಾಷಾ ಸಾಹಿತ್ಯದ ಕಡೆಗೆ ಒಲವು ಮೂಡಿರಬಹುದು.

ಯಾವುದೇ ಒಂದು ಕ್ರಾಂತಿ ಯಶಸ್ವಿಯಾಗಬೇಕಾದರೆ ಭಾಷೆಯು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಸಂವಹನಕ್ಕೆ ಅದು ಅತ್ಯಗತ್ಯವೂ ಹೌದು. ಅಂದರೆ ಭಾಷೆಯ ತಿರುವು ಆ ಕಾಲದಲ್ಲಿ ಉಂಟಾಯಿತು. "ಹೆಚ್ಚು ಪ್ರೌಢವಾದ ಮಾರ್ಗೀಯಶೈಲಿಯು ತುಂಬಾ ಸರಳವಾದ ದೇಶಿಶೈಲಿಗೆ ಸಂಕ್ರಮಣವಾದದ್ದು 12ನೇ ಶತಮಾನದ ಮಧ್ಯಭಾಗದಲ್ಲಿ, ಸಾಹಿತ್ಯದ ದೃಷ್ಟಿಯಿಂದಲೂ ಆ ಶತಮಾನದ ಮಧ್ಯಭಾಗವು, ಒಂದು ಸಂಧಿಯಕಾಲವೆಂದು ಹೇಳಬಹುದು. ಚಂಪೂಕಾವ್ಯಗಳೇ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಿದ್ದ ಕನ್ನಡದಲ್ಲಿ ವಚನ ಸಾಹಿತ್ಯವು ಹೆಚ್ಚು ಹೆಚ್ಚಾಗಿ ಗೋಚರವಾಗಿ ಕನ್ನಡ ಸಾಹಿತ್ಯವನ್ನು ಪುಷ್ಟಿಗೊಳಿಸಿದ್ದು ಈ ಕಾಲದಲ್ಲಿಯೇ"–1 ಇಂತಹ ಭಾಷಾಸನ್ನಿವೇಶವು ಜನಸಾಮಾನ್ಯರ ಸಾಂಸ್ಕೃತಿಕ ಬದುಕನ್ನು ಅರ್ಥವಾಗುವ ರೀತಿಯಲ್ಲಿ ಪ್ರತಿಪಾದಿಸಿತು ಎಂದು ಹೇಳಬಹುದು.

ಬಸವಾದಿಶರಣರ ಸರಳಜೀವನ ಆಚಾರ–ವಿಚಾರಗಳು ಸಂವಹನ ಭಾಷೆಯಲ್ಲಿ ಸರಳತೆ – ಇತ್ಯಾದಿಗಳು ಅವರ ಉದ್ದೇಶಿತ ಕಾರ್ಯ ಸಫಲವಾಗಲು ಮುಖ್ಯ ಕಾರಣವಾಯಿತು. ವೃತ್ತಿ ಆಶ್ರಯಿತ ಜೀವನ, ಜಾತ್ಯಾತೀತವಾದ ಮನೋಭಾವ ಅದಕ್ಕೆ ಪೂರಕವಾದ ಶಿವಸಂಸ್ಕೃತಿಯ ಭಾಷಾ ಮಾಧ್ಯಮವು ಎಲ್ಲ ಸ್ಥರದವರು ಒಟ್ಟುಗೂಡುವುದಕ್ಕೆ ಸಹಾಯಕವಾಯಿತು. ಇದು ಭಾಷೆಯ ಬೆಳವಣಿಗೆಗೆ ಪ್ರೇರಣೆ ನೀಡಿತು,

ಅಂದರೆ ಭಾಷಾಮಾದ್ಯಮವನ್ನು ಬಳಸಿದ ವಿಚಾರಗಳ ಬಗೆಗೆ ತಮ್ಮ ಆರಾಧ್ಯದೈವನ, ಜೀವನೋಪಾಯಕ್ಕಾಗಿ ಆಯ್ದುಕೊಂಡ ವೃತ್ತಿ ಹಾಗೂ ಅನುಸರಿಸುತ್ತಿರುವ ಆಹಾರ ಪದ್ಧತಿ ಮುಂತಾದವುಗಳು ಸಂಕ್ರಮಣಕಾಲದೊಡನೆ ಕ್ರಾಂತಿಯ ಉದ್ದೇಶವನ್ನು, ಬದಲಾದ ಭಾಷೆಯ ಮೂಲಕ ವಚನಗಳ ರೂಪದಲ್ಲಿ ವಿಚಾರಗಳನ್ನು ಬಿತ್ತತೊಡಗಿದರು. ಈ ಬಗೆಯ ಭಾಷಾ

ಪ್ರಯೋಗ ಕಲ್ಯಾಣ ಪ್ರದೇಶಕ್ಕೆ ಸೀಮಿತವಾಗಿರದೆ ಇತರ ಪ್ರದೇಶಗಳಿಗೂ ವಿಸ್ತರಿಸಿತು. ಉತ್ತರದ ಸೊಲ್ಲಾಪುರದಿಂದ ಕರ್ನಾಟಕ ರಾಜ್ಯದ ದಕ್ಷಿಣ ಭಾಗದವರೆಗೂ ವ್ಯಾಪಿಸಿದ್ದನ್ನು ನೋಡಬಹುದು. ಪ್ರಸ್ತುತ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು ಸುತ್ತಲಿನ ಶಿವಶರಣರ ಸಂಚಾರದ ಕಾರ್ಯಕ್ಷೇತ್ರಗಳನ್ನು ಪರಿಚಯಿಸುವುದರ ಜೊತೆಗೆ, ವಚನಕಾರರ ಭಾಷೆಯ ವಿಶೇಷತೆಯನ್ನು ಅವಲೋಕಿಸಲಾಗುವುದು.

ಈ ಅಧ್ಯಯನಕ್ಕೆ ನನ್ನ ತಾಲ್ಲೂಕಿನ ಅಕ್ಕ-ಪಕ್ಕದಲ್ಲಿರುವ ಶಿವಶರಣರು ಉತ್ತರದಿಂದ ದಕ್ಷಿಣಕ್ಕೆ ಬಂದು ತಪಸ್ಸನ್ನು ಆಚರಿಸಿ ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುವುದರೊಂದಿಗೆ ಅವರಲ್ಲಿ ನೈತಿಕತೆಯನ್ನು ಬಿತ್ತುವ ಪ್ರಯತ್ನ ಮಾಡಿದರು. ಇಂಥ ಕ್ಷೇತ್ರಗಳ ಪರಿಚಯವನ್ನು ಪ್ರಸ್ತುತ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗುವುದು. ಸಾಂಸ್ಕೃತಿಕ ಸನ್ನಿವೇಶಕ್ಕೆ ಇದು ಅನಿವಾರ್ಯವೂ ಹೌದು.

ಶಿವಶರಣರು ಬಂದು ಜನಸಾಮಾನ್ಯರಿಗೆ ನೀಡಿದ ಪ್ರವಚನಗಳು ಜನರಲ್ಲಿ ಜಾಗೃತಿ ಮೂಡಿಸಿ ಶರಣ ಸಂಸ್ಕೃತಿ ಬೆಳವಣಿಗೆಗೆ ಕಾರಣವಾಗಿವೆ ಎಂದು ಭಾವಿಸಿಕೊಳ್ಳಲಾಗಿದೆ. ಏಕೆಂದರೆ ಆ ಕ್ಷೇತ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜನಸಾಮಾನ್ಯರು 12ನೇ ಶತಮಾನದ ವಚನಕಾರರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದಾಗ ಅವರಿಗೆ ವಚನ ಸಾಹಿತ್ಯ ಮತ್ತು ಅಂದಿನ ಕಾಲದ ಶಿವಶರಣರ ಬಗ್ಗೆ ತಿಳುವಳಿಕೆಯಿದ್ದು, ಅವರ ಸಾಂಸ್ಕೃತಿಕ ಜಾಥಾ ಈ ಪ್ರದೇಶಕ್ಕೆ ಬಂದು ಕೆಲ ಕಾಲ ನೆಲೆ ನಿಂತು ಬೋಧಿಸಿದ ಉಪದೇಶಗಳು, ವಚನಗಳು ಜನರ ಮನಸ್ಸಿನಲ್ಲಿ ಇರುವುದನ್ನು ಕಾಣಬಹುದು. ಆದ್ದರಿಂದ ವಿವಿಧ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿದ್ದ ಅನುಭವ ಹಾಗೂ ಅವುಗಳ ವಿಶೇಷತೆಯನ್ನು ಈ ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕಾರಣದಿಂದಾಗಿ 12ನೇ ಶತಮಾನವು ಧಾರ್ಮಿಕ ಸುಧಾರಣೆಯಲ್ಲಿ ಬಹುರೂಪಿಯಾಗಿದ್ದು, ಹಲವು ವಿಶಿಷ್ಟ ಅಂಶಗಳೊಂದಿಗೆ ಮೇಳೈಸಿದೆ. ಈ ಚಳವಳಿಯಲ್ಲಿ ಎಲ್ಲಾ ಸಮುದಾಯಗಳ ಶೋಷಿತರು ಒಗ್ಗೂಡಿದರು. ಅಂದಿನ ಕಾಲದಲ್ಲಿ ಜೈನ, ವೈದಿಕ, ಶೈವ ಮತ್ತಿತರ ಧರ್ಮಗಳಲ್ಲಿ ಕಂಡುಬರುತ್ತಿದ್ದ ಬಿಗುವಿನ ಏಕತಾನತೆಯನ್ನು ಕಲ್ಯಾಣ ಕ್ರಾಂತಿಯ ಮೂಲಕ ನಾಂದಿಯಾಡಲು ಪ್ರಯತ್ನಿಸಿತು.

ಶರಣರ ಕಲ್ಯಾಣ ಕ್ರಾಂತಿಯು ಚೈತನ್ಯದಾಯಕ ಸಂಸ್ಕೃತಿಯನ್ನು ಹುಟ್ಟು ಹಾಕಿತು. ಇಂಥ ಸಂಸ್ಕೃತಿಯ ನವವಿಚಾರಧಾರೆಗಳು ಸಮಾಜದಲ್ಲಿದ್ದ ಮೌಢ್ಯತೆ ಮತ್ತು ಅಂಧಕಾರದ ಸಂಸ್ಕೃತಿಯನ್ನು ನಾಶಪಡಿಸಲು ಯತ್ನಿಸಿತು. ಆ ನಿಟ್ಟಿನ ಸಂಸ್ಕೃತಿಯ ಅಂಶಗಳಾವುವು.? ಆ ಸಾಂಸ್ಕೃತಿಕ ಸಂದರ್ಭದಲ್ಲಿ ಕಾಣಿಸಿಕೊಂಡ ನಂಬಿಕೆಗಳು ಮತ್ತು ಆ ಕಾಲಘಟ್ಟದಲ್ಲಿ ಜನಸಾಮಾನ್ಯರು ಅನುಭವಿಸಿದ ವೇದನೆಗಳನ್ನು ತಿಳಿಸುವ ಅಗತ್ಯವನ್ನು ಈ ಸಂಶೋಧನೆ ಒಳಗೊಂಡಿರುತ್ತದೆ.

12ನೇ ಶತಮಾನದಲ್ಲಿ ನಡೆದ ಧಾರ್ಮಿಕ ಕ್ರಾಂತಿಯಿಂದ ಜನಸಾಮಾನ್ಯರ ಸಂಸ್ಕೃತಿಯ ಮೇಲೆ ಅನೇಕ ಸ್ಥಿತ್ಯಂತರಗಳಾದವು. ಕಲ್ಯಾಣ ಕ್ರಾಂತಿಯ ಕಾಲದಲ್ಲಿದ್ದ ಕಾಯಕ ಯೋಗಿಗಳು ಹೊಸ ಬದಲಾವಣೆಗೆ ತಮ್ಮನ್ನು ತಾವು ತೊಡಗಿಸಿಕೊಂಡು, ಸಮಾಜದಲ್ಲಿದ್ದ ವಿಲಕ್ಷಣ ಪದ್ಧತಿಗಳನ್ನು ತಮ್ಮದೇ ನೆಲೆಗಟ್ಟಿನಲ್ಲಿ ವಿಮರ್ಶಿಸುತ್ತಾ ಬದಲಾವಣೆಗೆ ನಾಂದಿ ಹಾಡಿದರು.

ಈ ರೀತಿಯ ಸಾಂಸ್ಕೃತಿಕ ಕ್ರಾಂತಿಯು ವ್ಯಕ್ತಿಯ ಆತ್ಮವ್ಯವಸಾಯದ ಫಲವಾಗುತ್ತದೆ. ಅವನ ಅಂತರಂಗದಲ್ಲಿ ನಡೆದ ಸಂಘರ್ಷ ಹಾಗೂ ಅದರಿಂದ ನಿರ್ಮಾಣವಾದ ಶಿವಶರಣರ ಸುಧಾರಿತ ಸಮಾಜವನ್ನು ವಿಶ್ಲೇಷಿಸುವ, ಉಳ್ಳವರು–ಉಳ್ಳದವರ ನಡುವೆ ಅಸಮಾನತೆ, ಪರಂಪರಾಗತವಾದ ನಿರ್ಬಂಧಗಳು, ಅರ್ಥವಿಲ್ಲದ ಆಚರಣೆಗಳು; ಜನರ ನಡುವೆ ನಿರ್ಮಾಣವಾದ ಜಾತಿಯ ಗೋಡೆಗಳು ಮತ್ತು ಜೈನ ಧರ್ಮದಲ್ಲಿದ್ದ ಕಠಿಣ ವ್ರತಾಚರಣೆಗಳು ಜನಸಾಮಾನ್ಯರ ಬದುಕನ್ನು ಸಂಕೀರ್ಣಗೊಳಿಸಿದ್ದು ಮಾತ್ರವಲ್ಲದೆ, ಆ ಕಟ್ಟುಪಾಡುಗಳಿಂದ ಜನರು ಸಿಡಿದೇಳುವಂತಹ ಪರಿಸ್ಥಿತಿ ನಿರ್ಮಾಣ ಮಾಡಿತು. ಇಂತಹ ಸಾಂಸ್ಕೃತಿಕ ಪರಿಸರದಲ್ಲಿ ಕಂಡುಬರುವ ವಿಶೇಷತೆಯನ್ನು ಚರ್ಚಿಸಲಾಗುವುದು.

ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೇರೂರಿದ್ದ ಸಾಂಪ್ರದಾಯಿಕ ಅನಿಷ್ಟ ವರ್ಣವ್ಯವಸ್ಥೆಯನ್ನು ಬುಡಮೇಲು ಮಾಡಲು ಹವಣಿಸಿದಂತೆ ನಡೆದ ಚಳವಳಿ ಇದಾಗಿದೆ. 'ಭಕ್ತ–ಭವಿ' ಎಂಬ ಭೇದಮಿತಿಯೊಳಗೆ, ಸಮಾನತೆಯ ಪ್ರಗತಿಪರ ಆಶಯಗಳನ್ನು ಕಾಣಿಸುತ್ತಲೇ ಆರ್ಥಿಕ ಮೂಲದ ವರ್ಗಸಂಘರ್ಷದ ಹಲವು ಒಳಸೂಕ್ಷ್ಮಗಳನ್ನು ತನ್ನ ತೆಕ್ಕೆಯಲ್ಲಿ ತಬ್ಬಿಕೊಂಡು ಈ ಚಳವಳಿ ಬೆಳೆದಿದೆ. ಮೇಲಿನ ಅಂಶಗಳಿಗೆ ಪುಷ್ಟಿ ನೀಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಂದಿನಕಾಲದ ಜನಾಂಗೀಯ ಶೋಷಣೆಗಳು ವ್ಯವಸ್ಥೆಯ ವಿರುದ್ಧ ಸಿಡಿದೇಳುವುದು ಒಂದು ಕಡೆಯಾದರೆ, ಇನ್ನೊಂದೆಡೆ ವ್ಯವಸ್ಥೆಗೆ ವಿರೋಧವಾಗಿ ಪರ್ಯಾಯ ಕಲ್ಪನೆಯ ಅಡಿಯಲ್ಲಿ

ಸ್ವತಂತ್ರವಾದ ಬದುಕನ್ನು ಕಂಡುಕೊಂಡು, ಕ್ಷಿಪ್ರರೀತಿಯ ಬದಲಾವಣೆಗೆ ಕಾರಣವಾದ ಅಂಶಗಳ ವಿಸ್ತೃತವಾದ ಚರ್ಚೆ ಈ ಅಧ್ಯಯನದ ಒಳನೋಟವು ಹೌದು.

ಅಂದಿನ ಕಾಲದ ಶೈವಧರ್ಮ, ಜೈನಧರ್ಮಗಳಲ್ಲಿ ಕಂಡು ಬರುತ್ತಿದ್ದ ಅಂಧಾನುಕರಣೆ-ಮುಂತಾದ ಆಚರಣೆಗಳಿಂದ ಜನಸಾಮಾನ್ಯರು ಬೇಸರಗೊಂಡಿದ್ದರೆಂಬುದನ್ನು ಮುಂದಿನ ಅಧ್ಯಾಯದಲ್ಲಿ ವಚನಗಳ ಮೂಲಕ ವಿಶ್ಲೇಷಿಸಲಾಗಿದೆ. ಬಲವಂತವಾದ ಆಚರಣೆಗಳನ್ನು ಜನಸಾಮಾನ್ಯರ ಬದುಕಿನ ಮೇಲೆ ಹೇರಿದಾಗ, ಅವರ ಆರ್ಥಿಕ ಸ್ಥಿತಿಗತಿಗಳು ಸಾಂಸ್ಕೃತಿಕ ಬದುಕನ್ನು ಛಿದ್ರಗೊಳಿಸುತ್ತವೆ. ಈ ಸನ್ನಿವೇಶದಲ್ಲಿ ಮೂಡಿಬಂದ ಸಾಂಸ್ಕೃತಿಕ ಬದಲಾವಣೆಯೇ 'ಕಲ್ಯಾಣಕ್ರಾಂತಿ'ಯ ವಸ್ತುವಾಗಿದೆ.

ಧರ್ಮವನ್ನು ಕೇಂದ್ರವಾಗಿರಿಸಿಕೊಂಡ 'ಕಲ್ಯಾಣ ಕ್ರಾಂತಿ' ದೈನಂದಿನ ಬದುಕಿನ ಮೇಲೆ ಅಗಾಧ ಪರಿಣಾಮವನ್ನು ಬೀರಿತು. ಅಂದಿನ ರಾಜಪ್ರಭುತ್ವದ ಹಾಗೂ ಪುರೋಹಿತ ಶಾಹಿಯ ಧೋರಣೆಗಳನ್ನು ಈ ಕ್ರಾಂತಿಯು ವಿರೋಧಿಸಿತು. ಆ ಸಂದರ್ಭದಲ್ಲಿ ಆರಾಧಿಸುತ್ತಿದ್ದ ಶೈವ, ವೈದಿಕ ಮತ್ತು ಜೈನ ಧರ್ಮಗಳನ್ನು ಶರಣರು ತಮ್ಮ ವಚನಗಳ ಮೂಲಕ ಖಂಡಿಸಿದರು. ಶರಣರ ಧರ್ಮವು ಸಮಾಜ ಮುಖಿಯಾದ್ದುದ್ದರಿಂದ ಅದು ಜನರ ಜೀವನದಲ್ಲಿ ಒಂದು ಹೊಸ ಯುಗವನ್ನೇ ತೆರೆಯಿತು. ಬೌದ್ಧಧರ್ಮ ಜನಪ್ರಿಯತೆ ಕಳೆದುಕೊಂಡ ಪರಿಣಾಮವಾಗಿ ವೀರಶೈವ ಧರ್ಮದ ಬೆಳವಣಿಗೆಗೆ ದಾರಿಮಾಡಿ ಕೊಟ್ಟಂತಾಯಿತು. ಆ ಕಾಲದಲ್ಲಿ ವೀರಶೈವ ಧರ್ಮದ ಜೊತೆಗೆ ಶ್ರೀ ರಾಮಾನುಜರಿಂದ ಶ್ರೀವೈಷ್ಣವ ಧರ್ಮವೂ ಪ್ರಚಾರದಲ್ಲಿತ್ತು. ಆದರೂ ಅಂದಿನ ಸ್ಥಿತಿಯಲ್ಲಿ ಶರಣರ ಧರ್ಮ ಹೆಚ್ಚು ಮನ್ನಣೆ ಪಡೆದಿತ್ತು ಎಂದರೆ ತಪ್ಪಾಗಲಾರದು.-1

ಈ ಮೇಲಿನ ಸಂಗತಿಯನ್ನು ಸಮರ್ಥಿಸುವಂತೆ ಮುಂದಿನ ಅಧ್ಯಾಯಗಳಲ್ಲಿ ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ವಿಶ್ಲೇಷಿಸಲಾಗಿದೆ. ಶರಣರು ಕಂಡಂತಹ ಕುಟುಂಬದ ಪರಿಕಲ್ಪನೆ ಬಹಳ ವಿಶಾಲವ್ಯಾಪ್ತಿಯುಳ್ಳದ್ದಾಗಿದೆ. ಭಕ್ತಿ, ದೇವರು, ಧರ್ಮ, ಲಿಂಗ, ಆಚಾರ, ವಿಚಾರ, ನಡೆ, ನುಡಿ, ವೃತ್ತಿ, ವರ್ಗನೀತಿ, ಜಾತಿ ಬಹುಮುಖಿ ಸಂಸ್ಕೃತಿಗಳ ಪೋಷಣೆ ; ಏಕದೇವೋಪಾಸನೆಯ ಪರಿಕಲ್ಪನೆಯಲ್ಲಿ ಎಲ್ಲಾ ವರ್ಗದವರನ್ನು ಒಟ್ಟುಗೂಡಿಸುವ ಕಾರ್ಯವನ್ನು ಶರಣರು ಯಶಸ್ವಿಯಾಗಿ ನಿರ್ವಹಿಸಿದರು.

ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶಕ್ಕೆ ಸಂಬಂಧಿಸಿದಂತೆ ವಚನಗಳಲ್ಲಿ ಒಂದು ರೀತಿಯ ಸಂಪ್ರಾದಾಯಗಳು ಕೂಡ ವಿಕಾಸಶೀಲ ಗುಣವನ್ನು ಪಡೆದು ಅಂದಿನ ಸಂದರ್ಭಕ್ಕೆ ಸವಾಲೆನಿಸಿದ ವಿಚಾರಗಳನ್ನು ವಚನಗಳ ಮೂಲಕ ಬಿತ್ತಿದರು. ಪಂಡಿತಕೇಂದ್ರಿತ ಸಾಹಿತ್ಯ ಭಾಷೆಯನ್ನು ಚಲನಶೀಲಗೊಳಿಸಿ ಸಾಮಾಜಿಕ ಬದುಕಿನ ಸುಧಾರಣೆಗೆ ಒತ್ತುಕೊಟ್ಟರು. ಆಗಿನ ಸಾಂಸ್ಕೃತಿಕ ಇತಿಹಾಸವನ್ನು ಗಮನಿಸಿದರೆ, ಸ್ತ್ರೀ ಪರ ನಿಲುವುಗಳು, ಸಹಭಾಗಿತ್ವದ ಪರಿಕಲ್ಪನೆ ಕಂಡುಬರುತ್ತದೆ. ಸಮಾಜದಲ್ಲಿ ಸ್ತ್ರೀಯರಿಗೆ ಪೂಜ್ಯ ಸ್ಥಾನವನ್ನು ಕಲ್ಪಿಸಿ ಮುಖ್ಯವಾಹಿನಿಗೆ ತರಲು ಅವಕಾಶವಾಯಿತು. ಇದು ಕಲ್ಯಾಣ ಕ್ರಾಂತಿಯ ವಿಶೇಷವೇ ಸರಿ.

ಒಟ್ಟಿನಲ್ಲಿ ವಚನಕಾರರು ಸಮಾಜ ಸುಧಾರಣೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡವರು. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಮಹಾ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದ ಸಂದರ್ಭದಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರುವುದರ ಮೂಲಕ ಎಲ್ಲಾ ವರ್ಗದ ಜನರ ಹಿತದೃಷ್ಟಿಯನ್ನು ಮುಖ್ಯವಾಗಿ ಗಮನಿಸಿದ್ದರು. ಜಾತಿ ನಿರ್ಮೂಲನೆಗೆ ಪ್ರಾಮುಖ್ಯತೆ ನೀಡುವುದರ ಮೂಲಕ ಎಲ್ಲಾ ವರ್ಗದವರಲ್ಲಿ ಸಮಾನತೆಯನ್ನು ತರುವಲ್ಲಿ ಶ್ರಮಿಸಿದರು. ಸನಾತನ ಗುರುಪರಂಪರೆಯನ್ನು ನಿರಾಕರಿಸಿ 'ಅರಿವೇಗುರು' ಎನ್ನುವುದನ್ನು ಪ್ರತಿಪಾದಿಸಿ ವೃತ್ತಿಗೆ ಮಹತ್ವ ನೀಡಿ ಗೌರವಿಸಿದರು. ಸಂಪನ್ಮೂಲದ ಸಮಾನ ಹಂಚಿಕೆಯ ಕಾರ್ಯ ಕೈಗೊಂಡು ಸ್ತ್ರೀ ಸಮಾನತೆಗೆ ಒತ್ತು ನೀಡಿ ಶೈಕ್ಷಣಿಕವಾಗಿಯೂ ಅವರು ಸಬಲರಾಗುವಂತೆ ಸಹಕರಿಸಿದರು.

ಶೈಕ್ಷಣಿಕವಾಗಿ ಎಲ್ಲಾ ವರ್ಗದವರ ಪಾಲ್ಗೊಳ್ಳುವಿಕೆಯೂ ಅಕ್ಷರ ಕಲಿಕೆಗೆ ಪ್ರೇರಣೆಯಾಗಿ ಅಭಿವ್ಯಕ್ತಿಗೆ ಮುಕ್ತವಾತಾವರಣವು ನಿರ್ಮಾಣವಾಯಿತು. ಪರಿಣಾಮವಾಗಿ ಎಲ್ಲಾ ಸ್ಥರದವರು ವಚನಗಳ ರಚನೆಯಲ್ಲಿ ತೊಡಗಿದರು. ಈ ಸಂಗತಿಗಳು ಅನುಷ್ಠಾನಗೊಂಡ ಪರಿಯನ್ನು ಮತ್ತು ಅದಕ್ಕೆ ಪೂರಕವಾದ ಭೂಮಿಕೆ ಸಜ್ಜುಗೊಂಡ ವೈಶಿಷ್ಟ್ಯವನ್ನು ಪ್ರಸ್ತುತ ಪ್ರಬಂಧದಲ್ಲಿ ವಿವಿಧ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗುವುದು.

ಸ್ವರೂಪ: ವಚನ ಎಂದರೆ ಮಾತು, ಪ್ರಮಾಣ ಎಂಬ ಅರ್ಥಗಳನ್ನು ನಿಘಂಟಿನಲ್ಲಿ ಕಾಣಬಹುದು. ವಚನ ಸಾಹಿತ್ಯವು ಭಾಷೆ ಹಾಗೂ ವಿಚಾರಗಳ ದೃಷ್ಟಿಯಿಂದಲೂ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಶಕೆಯನ್ನು ಆರಂಭ ಮಾಡಿತು. ಶರಣರು ತಮ್ಮ ಅನಿಸಿಕೆಗಳನ್ನು ಮುಕ್ತಕಗಳ ರೂಪವಾದ ವಚನಗಳಲ್ಲಿ ಅಭಿವ್ಯಕ್ತಿಸಿದರು. ಈ ಬಗೆಯ ವಚನ ಸಾಹಿತ್ಯದ

ಪ್ರಾಚೀನತೆಯನ್ನು ಜೇಡರ ದಾಸಿಮಯ್ಯನವರೆಗೂ ಕೊಂಡೊಯ್ಯಲಾಗಿದೆ. ಅದಕ್ಕೂ ಪೂರ್ವದಲ್ಲಿ ವಚನಗಳು ರಚನೆಯಾಗಿದ್ದವು ಎನ್ನುವುದಕ್ಕೆ ನಿಖರವಾದ ಆಧಾರಗಳಿಲ್ಲ. ವಚನ ಸಾಹಿತ್ಯಕ್ಕೆ ಪ್ರೇರಣೆ ನೀಡಿದ್ದು ತಮಿಳುನಾಡಿನ ಶೈವಸಿದ್ಧಾಂತವೊ, ಸಂಸ್ಕೃತದ ಸ್ತೋತ್ರ ಸಾಹಿತ್ಯವೊ, ಎಂಬ ಬಗ್ಗೆ ವಿದ್ಯಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ತ್ರಿಪದಿಗಳೇ ಇದಕ್ಕೆ ಮೂಲವೆಂಬ ವಾದವೂ ಇದೆ. ಒಟ್ಟಿನಲ್ಲಿ ಕನ್ನಡ ನೆಲದಲ್ಲಿ ರೂಪಗೊಂಡಿರಬಹುದೆಂದು ಊಹಿಸಿದರೂ ತಪ್ಪಾಗಲಾರದು. ಗದ್ಯ ಹಾಗೂ ಪದ್ಯಗಳ ರೂಪ ಹೊಂದಿರುವ ಈ ವಚನಗಳು ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಗುಣವನ್ನು ಹೊಂದಿವೆ. ಈ ಬಗೆಯ ವಚನಗಳನ್ನು ಅನುಭವ ಮಂಟಪದಲ್ಲಿ ಚರ್ಚಿಸುವಾಗ ಇಲ್ಲವೇ ಹಾಡುವಾಗ ಅವುಗಳನ್ನು ಬರೆದುಕೊಳ್ಳಲು ಹಲವಾರು ಕರಣಿಕರನ್ನು ನೇಮಿಸಲಾಗಿತ್ತು. ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಆ ಕಾಲಘಟ್ಟದಲ್ಲಿ ಸುಮಾರು 270 ಕ್ಕೂ ಹೆಚ್ಚು ವಚನಕಾರರು ಇದ್ದರೆಂದು ಅಂದಾಜಿಸಲಾಗಿದೆ. ಪ್ರತಿ ವಚನಗಳಲ್ಲಿ ಕಂಡುಬರುವ ಅಂಕಿತಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ಕರ್ತೃವನ್ನು ನಿರ್ಧರಿಸಲಾಗಿದೆ. ವಚನಗಳಲ್ಲಿನ ವಿಷಯದ ಸಂಕ್ಷಿಪ್ತತೆ, ಛಂದಸ್ಸಿಗೆ ಒಳಪಡದ ರೀತಿ, ಭಾವಪ್ರಧಾನತೆಯನ್ನು ಒಳಗೊಂಡಿರುವುದು ಸೇರಿದಂತೆ ಒಂದು ಬಗೆಯ ಲಯವನ್ನು ಕಾಣಬಹುದಾಗಿದೆ.

"ನೀರಿಗೆ ನೈದಿಲೆಯೆ ಶೃಂಗಾರ

ಸಮುದ್ರಕ್ಕೆ ತೆರೆಯೆ ಶೃಂಗಾರ

ನಾರಿಗೆ ಗುಣವೆ ಶೃಂಗಾರ,

ಗಗನಕೆ ಚಂದ್ರಮನೆ ಶೃಂಗಾರ,

ನಮ್ಮ ಕೂಡಲ ಸಂಗನ ಶರಣರಿಗೆ

ನೊಸಲ ವಿಭೂತಿಯೆ ಶೃಂಗಾರ"-2

ಎನ್ನುವ ಬಸವಣ್ಣನವರ ವಚನದಲ್ಲಿ ಪದ್ಯದ ಛಂದೋಗತಿ ಕಾಣದಿದ್ದರೂ ಪದ್ಯವೆಂದು ಕರೆಯಿಸಿಕೊಳ್ಳುತ್ತದೆ. ಈ ರೀತಿಯಾದ ಗೇಯ ಗುಣವೇ ವಚನಗಳಿಗೆ ಪದ್ಯದ ಚೌಕಟ್ಟನ್ನು ತಂದುಕೊಟ್ಟಿದೆ. ಹಾಗೆಯೇ,

" ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ಹದ್ದು ಬಲ್ಲದೆ ಅಯ್ಯ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯ?
ಚನ್ನ ಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ನಿಲುವ ನೀವೆ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯ?–3

ಎಂಬ ವಚನದಲ್ಲಿ ನಿಯಮಕ್ಕೆ ಒಳಪಡದಿರುವ ಒಂದು ಲಯವನ್ನು ಕಾಣುತ್ತೇವೆ. ಕೆಲವರ ಷಟ್ಪದಿ ಲಕ್ಷಣವನ್ನು, ಅಂಶ ಲಯವನ್ನು ಮತ್ತು ಮಾತ್ರಾ ಲಯವನ್ನು ಈಗಾಗಲೆ ಗುರುತಿಸಲಾಗಿದೆ.

ವಚನಕಾರರು ತಮ್ಮ ವಚನಗಳ ರಚನೆಯಲ್ಲಿ ಆಡುಭಾಷೆಯ ನುಡಿಗಳನ್ನು, ಗಾದೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. 'ಹುಣಸೆಯ ಹೂವೆಲ್ಲಾ ಕಾಯಾಗಬಲ್ಲುದೆ', 'ಕೊಲತುದಿಯ ಕೋಡಗದಂತೆ' 'ಎಮ್ಮೆಗೊಂದು ಚಿಂತೆ: ಸಮ್ಮಗಾರಗೊಂದು ಚಿಂತೆ', 'ಬಂಜೆ ಬೇನೆಯನರಿವಳೆ?' ಈ ರೀತಿಯ ಆಡುನುಡಿಗಟ್ಟುಗಳನ್ನು ತಮ್ಮ ವಚನಗಳಲ್ಲಿ ಶರಣರು ಬಳಸಿಕೊಂಡು ಒಂದು ಬಗೆಯ ಸಹಜತೆಯನ್ನು ಕಟ್ಟಿಕೊಟ್ಟಿದ್ದಾರೆ. ಜೊತೆಗೆ ಭಾಷೆಯನ್ನು ಸೂಕ್ತ ರೀತಿಯಲ್ಲಿ ದುಡಿಸಿಕೊಂಡಿದ್ದಾರೆ.

ವಚನಗಳ ವೈಶಿಷ್ಟ್ಯವೆಂದರೆ ಸಂಭಾಷಣೆಯ ರೂಪದಲ್ಲಿ ಇರುವುದು. 'ಶೂನ್ಯ ಸಂಪಾದನೆ' ಕೃತಿಯಲ್ಲಿ ಈ ಬಗೆಯ ವಿಶೇಷತೆಯನ್ನು ಕಾಣಬಹುದಾಗಿದೆ. 'ತಾನು ಸತಿ ಲಿಂಗ ಪತಿ' ಎಂಬ ಭಾವನೆಯಲ್ಲಿ ಶರಣರು ಆತ್ಮ ನಿವೇದನೆ ಮಾಡಿಕೊಳ್ಳುವುದನ್ನು ಪ್ರಮುಖವಾಗಿ ಕಾಣಬಹುದು. ಅಂದರೆ ತಮ್ಮ ಮನಸ್ಥಿತಿಯನ್ನು ಮತ್ತೊಬ್ಬರ ಬಳಿ ಹೇಳಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ. ಒಂದು ರೀತಿಯ ಆತ್ಮೀಯತೆಯ ಶೈಲಿ ಇಲ್ಲಿದೆ. ವಚನಗಳಲ್ಲಿ ವ್ಯಕ್ತವಾಗುವ ಪ್ರಶ್ನೆಗಳಿಗೆ ಅದೇ ವಚನಗಲ್ಲಿ ಉತ್ತರವನ್ನು ಕಡೆದು ನಿಲ್ಲಿಸುವುದು ಅವುಗಳ ಸ್ವರೂಪವಾಗಿದೆ.

ಅಂತರಂಗದ ಘರ್ಷಣೆ, ಪಾಪ–ಪುಣ್ಯಗಳ ವಿಶ್ಲೇಷಣೆ, ಭಕ್ತ–ಭವಿಯ ಲಕ್ಷಣ ಇತ್ಯಾದಿಗಳನ್ನು ವಚನಗಳು ಪ್ರಮುಖವಾಗಿ ಚರ್ಚಿಸುತ್ತವೆ. ಇದರೊಂದಿಗೆ ಸಾಮಾಜಿಕ ವಿಡಂಬನೆಯನ್ನು ಮಾಡುವುದರ ಜೊತೆಗೆ ಉತ್ತಮ ಮಾರ್ಗವನ್ನೂ ಅವು ಅಭಿವ್ಯಕ್ತಗೊಳಿಸುತ್ತವೆ. ಬೂಟಾಟಿಕೆ ಮತ್ತು ವಂಚನೆಯ ಮುಖವಾಡ ಧರಿಸಿದವರನ್ನು ಕಟುವಾಗಿ ಟೀಕಿಸುತ್ತಾ ನಿಜ ಸಾಧಕನ ದಾರಿಯನ್ನು ಸೂಚಿಸುತ್ತವೆ.

ಉಪಮೆ–ರೂಪಕಗಳನ್ನು ವಚನದಲ್ಲಿ ತರುವುದರ ಮೂಲಕ ಓದುಗನಲ್ಲಿ ಒಂದು ಸ್ಪಷ್ಟ ಚಿತ್ರಣವನ್ನು ಸಮರ್ಥವಾಗಿ ಮೂಡಿಸುತ್ತವೆ. 'ಬಡಪಶು ಪಂಕದಲಿ ಬಿದ್ದಡೆ', 'ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ', 'ಬೆಟ್ಟದ ಮೇಲೊಂದು ಮನೆಯ ಮಾಡಿ', 'ಮರಮರ ಮಥನಿಸಿ ಕಿಚ್ಚು ಹುಟ್ಟಿ' ಎಂಬ ವಚನಗಳಲ್ಲಿ ತಮ್ಮ ಭಾವನೆಯನ್ನು ಸೊಗಸಾಗಿಯೂ ಸ್ಪಷ್ಟವಾಗಿಯೂ ವ್ಯಕ್ತಪಡಿಸಲು ಹಲವು ಅಲಂಕಾರಗಳನ್ನು ಮತ್ತು ಉಪಮೆಗಳನ್ನು ಬಳಸಿದ್ದಾರೆ. ಇದಲ್ಲದೆ. ವಿವಿಧ ಪ್ರಾಣಿಗಳು, ಸಸ್ಯಗಳು ಹಾಗೂ ಪ್ರಾಕೃತಿಕ ವಸ್ತುಗಳ ಪ್ರತಿಮೆಗಳನ್ನು ಬಳಸುವುದರ ಮೂಲಕ ತಮ್ಮ ಅನುಭವವನ್ನು ವ್ಯಕ್ತಪಡಿಸಿದ್ದಾರೆ.

ಶರಣರು ವಚನಗಳನ್ನಲ್ಲದೆ ಇತರೆ ಕೆಲವು ರಚನೆಗಳನ್ನು ಮಾಡಿದ್ದಾರೆ. ಸಿದ್ದರಾಮ ಮತ್ತು ಅಕ್ಕಮಹಾದೇವಿ ಅವರು 'ತ್ರಿವಿಧಿ' ಗಳನ್ನು ರಚಿಸಿದ್ದಾರೆ. ಅಕ್ಕಮಹಾದೇವಿ ಅವರ 'ಯೋಗಾಂಗ ತ್ರಿವಿಧಿ' ತ್ರಿಪದಿ ಛಂದಸ್ಸನ್ನು ಒಳಗೊಂಡಿದ್ದು, ಯೋಗಕ್ಕೆ ಸಂಬಂಧಿಸಿದ ಕೃತಿಯಾಗಿದೆ. ಚನ್ನಬಸವಣ್ಣನವರ 'ಕರಣ ಹಾಸೆಗೆ'ಯೂ ದೇಹದಲ್ಲಿನ ಸೂಕ್ಷ್ಮ ತತ್ವಗಳನ್ನು ತಿಳಿಸುತ್ತದೆ. ಇಲ್ಲಿ ಗುರು, ಲಿಂಗ, ಜಂಗಮ, ಪಾದೋದಕ ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳ ಮಹಿಮೆಯ ವರ್ಣನೆಯೂ ಇದೆ.

ಪ್ರಸ್ತುತ ಅಧ್ಯಯನವು ನಮ್ಮ ಗ್ರಂಥಾಲಯಗಳಲ್ಲಿ ಲಭ್ಯವಿರುವ ವಚನ ಸಾಹಿತ್ಯವನ್ನು ಕುರಿತಾದ ಸಂಪಾದನೆ ಹಾಗೂ ಸಂಶೋಧನಾ ಗ್ರಂಥಗಳನ್ನು ನಮ್ಮ ಮಿತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗುವುದು. ಜೊತೆಗೆ ಸಾಂಸ್ಕೃತಿಕ ಸನ್ನಿವೇಶ ಒಂದು ಕೇಂದ್ರದಿಂದ ಇತರೆ ಭಾಗಗಳಿಗೆ ತದನಂತರ ಹೇಗೆ ವಿಸ್ತರಿಸಿತು ಎಂಬುದನ್ನು ತಿಪಟೂರು ತಾಲ್ಲೂಕ್ ಸುತ್ತಲಿನ ಪ್ರದೇಶದಲ್ಲಿ ಶರಣರು ಸಂಚಾರಮಾಡಿದ ಕ್ಷೇತ್ರಗಳನ್ನು ವೀಕ್ಷಿಸುವುದು, ಅಲ್ಲಿ ಪ್ರಚಲಿತದಲ್ಲಿರುವ ಶರಣರ ಕುರಿತಾದ ಸಂಗತಿಗಳನ್ನು ಚರ್ಚಿಸಲಾಗುವುದು. ಇದರ ವಿಸ್ತೃತ ರೂಪವನ್ನು ಮುಂದಿನ ಅಧ್ಯಾಯದಲ್ಲಿ ಕೊಡಲಾಗಿದೆ.–3.

ವ್ಯಾಪ್ತಿ: ಈ ಪ್ರಂಬಂಧದ ವಿಷಯವು 12ನೇ ಶತಮಾನದಲ್ಲಿ ಕಲ್ಯಾಣ ಪಟ್ಟಣದಲ್ಲಿ ನಡೆದ ವಿಚಾರ ಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ಶಿವಶರಣರ ಕೆಲವು ವಚನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ಆ ಸಂದರ್ಭದಲ್ಲಿ ಕಲಚೂರಿ ರಾಜರುಗಳ ಪ್ರಭುತ್ವದ ಸನ್ನಿವೇಶ ಹಾಗೂ ಶಿವಶರಣರ ಸಾಮಾಜಿಕ ಬದುಕಿನ ಚಿತ್ರಣವನ್ನು ಕೊಡಲಾಗುವುದು. ಅವರ ಸ್ವತಂತ್ರ ಆಡಳಿತ ಅಲ್ಪಾವಧಿಯದ್ದು, ಅಂದರೆ ಕೇವಲ 22 ವರ್ಷ ಅವಧಿಯಲ್ಲಿ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಾದ ಬದಲಾವಣೆಗಳನ್ನು ಗುರುತಿಸುವ ಉದ್ದೇಶವಿದ್ದು, ಅದಕ್ಕೆ ಪೂರಕವಾದ ಎಲ್ಲಾ ವಚನಕಾರರನ್ನು ಅಧ್ಯಯನದಲ್ಲಿ ಪ್ರಸ್ತಾಪಿಸಲು ಸಾಧ್ಯವಿಲ್ಲದ ಕಾರಣ ಕೆಲವರನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗುವುದು. ಶಿವಶರಣರು ಕೈಗೊಂಡ ವಿಚಾರ ಕ್ರಾಂತಿ ಅಂದರೆ ಸಾಮಾಜಿಕವಾಗಿ ಉಂಟುಮಾಡಿದ ಸುಧಾರಣೆಯ ಸಮಗ್ರ ಚಿತ್ರಣವನ್ನು ಪ್ರಸ್ತುತ ಪ್ರಬಂಧದಲ್ಲಿ ನೀಡಲಾಗಿಲ್ಲ. ಬದಲಿಗೆ ಅದರ ಕೆಲ ಮುಖಗಳನ್ನು ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕಲ್ಯಾಣ ಕ್ರಾಂತಿಯನ್ನುವುದನ್ನು ವ್ಯಕ್ತಿಗಳ ಮನಸ್ಸು ಮತ್ತು ಅವರು ವಾಸಿಸುವ ಸಮಾಜದಲ್ಲಾದ ಆರೋಗ್ಯ ಪೂರ್ಣವಾದ ಬದಲಾವಣೆಗೆ ಸಂಬಂಧಿಸಿದ ಪರಿಕಲ್ಪನೆಯನ್ನು ಒಳಗೊಂಡಿರುವಂತಹದ್ದು. ವ್ಯಕ್ತಿಯ ಪರಿವರ್ತನೆಯಿಂದ ಸಮಾಜದಲ್ಲಿ ಉಂಟಾದ ಪರಿಶುದ್ಧತೆ ಮತ್ತು ಆಂತರಿಕ ಸಂಘರ್ಷದಿಂದ ಮೂಡಿಬಂದಿದೆ. ಈ ರೀತಿಯ ಮಾನಸಿಕ ಆಂದೋಲನವೇ ಕಲ್ಯಾಣ ಕ್ರಾಂತಿ. ಅದರಿಂದುಂಟಾಗುವ ಸಾಂಸ್ಕೃತಿಕ ಸನ್ನಿವೇಶವನ್ನು ಈ ಅಧ್ಯಯನದಲ್ಲಿ ವಿಮರ್ಶಿಸಲಾಗಿದೆ. ಅದಕ್ಕಾಗಿ ಕಲ್ಯಾಣ ನಗರದ ಅಂದಿನ ಪರಿಸ್ಥಿತಿಯನ್ನು ಸ್ಥೂಲವಾಗಿ ಗಮನಿಸಲಾಗುವುದು.

ಮಾನಸಿಕ ಕ್ರಾಂತಿಯ ಆಯಾಮಗಳು ಕಲ್ಯಾಣದ ಹೊರಭಾಗಗಳಲ್ಲಿ ಉಂಟು ಮಾಡಿರುವ ಮಾರ್ಪಾಡುಗಳನ್ನು ತಿಪಟೂರು ತಾಲ್ಲೂಕಿನ ಸುತ್ತ-ಮುತ್ತಲಿನ ಪ್ರದೇಶಗಳಾದ ಗೊಡೇಕೆರೆ, ದೊಣೆಗಂಗ ಕ್ಷೇತ್ರ, ಕೆಂಕೆರೆ, ಯಳನಡು, ತಮ್ಮಡಿಹಳ್ಳಿ, ಸಿದ್ಧರಾಮ ದೇವರಹಳ್ಳಿ, ಸೋಲೂರು (ಕಡೂರು ತಾಲ್ಲೂಕ್) ಈ ಮುಂತಾದೆಡೆಗಳಲ್ಲಿ ಶರಣರು ಸಂಚರಿಸಿದ ಕ್ಷೇತ್ರಗಳನ್ನು ಸಂದರ್ಶಿಸುವುದರ ಮೂಲಕ ಅದರ ಸಾಂಸ್ಕೃತಿಕ ಮುಖವನ್ನು ಪರಿಚಯಿಸುವ ಯತ್ನಮಾಡಲಾಗಿದೆ. ಈ ಬಗೆಯ ಸಾಂಸ್ಕೃತಿಕ ಪ್ರತಿನಿಧಿಗಳಾದ ಮತ್ತು 15ನೇ ಶತಮಾನದಲ್ಲಿ ಬಂದುಹೋದ

ಮಂಟೇಸ್ವಾಮಿ, ಸಿದ್ದಪ್ಪಾಜಿ ಮುಂತಾದ ಸಾಂಸ್ಕೃತಿಕ ನಾಯಕರನ್ನು ಈ ಅಧ್ಯಯನದಲ್ಲಿ ಪರಿಚಯಿಸಲಾಗಿದೆ.

ಅಡಿಟಿಪ್ಪಣಿಗಳು

1. ಕನ್ನಡ ಶಾಸನಗಳ ಸಂಸ್ಕೃತಿ ಅಧ್ಯಯನ, ಡಾ॥ ಎಂ.ಚಿದಾನಂದ ಮೂರ್ತಿ, 1979, ಪು 7–8.
2. ಬಸವಣ್ಣನವರ ವಚನಗಳು: ಸಂ,ಡಾ. ಎಂ.ಎಂ ಕಲ್ಬುರ್ಗಿ, 1993, ಪು–21. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
3. ಶಿವಶರಣೆಯರ ವಚನ ಸಂಪುಟ: ಸಂ. ಡಾ. ವೀರಣ್ಣ ರಾಜೂರ, 1993, ಪು–49, ವ–157, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಅಧ್ಯಾಯ – 2

ಕಲ್ಯಾಣದ ಚಾರಿತ್ರಿಕ ಮಹತ್ವ.

ಕಲ್ಯಾಣದ ಚಾರಿತ್ರಿಕ ಮಹತ್ವ ಎನ್ನುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಮನುಷ್ಯನ ಅಂತರಂಗದ ವಿಚಾರಕ್ರಾಂತಿಯನ್ನು ಗುರುತಿಸುವುದಾಗಿದೆ. ಅದಕ್ಕೆ ಪೂರಕವಾಗಿ ಆ ವೇಳೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜನನ್ನು ಪ್ರಸ್ತಾಪಿಸಲಾಗಿದೆ. ಇಲ್ಲಿ ಸಂಪೂರ್ಣವಾಗಿ ಮನುಷ್ಯನ ಮನಸ್ಸಿನಲ್ಲಿ ನಡೆದ ವಿಚಾರ ಕ್ರಾಂತಿಯ ಕಡೆ ಗಮನ ಹರಿಸಲಾಯಿತು. ಅದೇ ಮುಖ್ಯವಲ್ಲವೇ.

ಅದು ಕೈಗೂಡಿದರೆ ಉಳಿದೆಲ್ಲವೂ ಸಿದ್ಧಿಯಾಗುವುದೆಂದು ಅನುಭಾವಿಗಳಾದ ಶರಣರು ಮನಗಂಡಿದ್ದರು. ಅದಕ್ಕಾಗಿಯೇ ಅವರು ಆ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಮತ್ತು ಅನುಭವಜನ್ಯವಾದ ನಡೆಯನ್ನು ನುಡಿಗಳಲ್ಲಿ ಹಿಡಿದಿಟ್ಟರು. ಅವುಗಳು 'ಕನ್ನಡನಾಡಿನ ಉಪನಿಷತ್'ಗಳೆಂದು ಪ್ರಸಿದ್ಧಿ ಪಡೆದವು.

ವ್ಯಕ್ತಿ ಬದಲಾಗದೆ ಸಮಾಜ ಬದಲಾಗದು ಎಂಬುದು ಅನುಭವದ ಮಾತು, ಘನ ವ್ಯಕ್ತಿತ್ವ ನಿರ್ಮಾಣಗೊಳ್ಳಲು ಮನಸ್ಸಿಗೆ ಚಿಕಿತ್ಸೆಯನ್ನು ನೀಡಬೇಕು. ಆ ಚಿಕಿತ್ಸೆಯಿಂದ ಸಂಸ್ಕಾರಗೊಳ್ಳವ ಕ್ರಿಯೆ ನಡೆಯುತ್ತದೆ. ಅಂದರೆ ಉಳಿಯ ಪೆಟ್ಟಿನಿಂದ ಹೇಗೆ ಒರಟು ಕಲ್ಲು ಒಂದು ಸುಂದರ ಶಿಲ್ಪವಾಗಿ ರೂಪುಗೊಳ್ಳುತ್ತದೋ ಹಾಗೆಯೇ ಸಂಸ್ಕಾರಗೊಳ್ಳವ ಕಾರ್ಯದಿಂದ ಉನ್ನತ ವ್ಯಕ್ತಿತ್ವ ಒಡಮೂಡುತ್ತದೆ. ಇಂಥ ಒಳನೋಟವನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಬೆಳೆದದ್ದು ವಚನ ಸಾಹಿತ್ಯ ಚಳವಳಿ. ಕಲ್ಯಾಣ ಕ್ರಾಂತಿ ಎಂದರೆ ಆ ಕೇಂದ್ರದಿಂದ ನೀಡಿದ ವಿಚಾರಕ್ರಾಂತಿ, ಅದರ ಪ್ರಭಾವದಿಂದ ವ್ಯಕ್ತಿಯ ಒಟ್ಟು ಜೀವನದ ಕ್ರಮವೇ ಹೊಸ ಮಾರ್ಗದಲ್ಲಿ ಸಾಗಿ ಸಾಂಸ್ಕೃತಿಕ ಸನ್ನಿವೇಶವನ್ನು ಸೃಷ್ಟಿಮಾಡಿದ್ದು ಒಂದು ಇತಿಹಾಸ. ನಮ್ಮ ಸಂಪ್ರದಾಯ ಚರಿತ್ರೆಯು ಅರಸರುಗಳ ವಿವರಣೆಯನ್ನು ಪ್ರಧಾನವಾಗಿ ಒಳಗೊಂಡಿರುವಂತಹದ್ದು. ಅಲ್ಲಿ ಸಾಮಾನ್ಯ ಪ್ರಜೆಯೊಬ್ಬನ ಬದುಕು ಗೌಣ. ಹೀಗಾಗಿ ಜನಸಾಮಾನ್ಯರ ಜೀವನ ಮಟ್ಟವನ್ನು ಸಮರ್ಥವಾಗಿ ಅರಿಯಲು ನಾವು ಸಂಪೂರ್ಣ ಯಶಸ್ವಿಯಾಗಿಲ್ಲ. ಆದರೂ ಲಭ್ಯವಿರುವ ಮಾಹಿತಿಯ ಹಿನ್ನೆಲೆಯಿಂದ ಚಾರಿತ್ರಿಕ ವಿಶೇಷತೆಯನ್ನು ತಿಳಿಸುವ ಪ್ರಯತ್ನ ನಿರಂತರವಾಗಿ ಸಾಗಿದೆ.

ಕರ್ನಾಟಕದಲ್ಲಿ 12ನೇ ಶತಮಾನದ ವೇಳೆಗೆ ಕಲ್ಯಾಣ ಚಾಲುಕ್ಯರ ಸಾರ್ವಭೌಮತ್ವ ದುರ್ಬಲ ಹಂತವನ್ನು ತಲುಪಿತ್ತು. ಅದರ ಸದುಪಯೋಗವನ್ನು ಸಾಮಂತರಾಗಿದ್ದವರಲ್ಲಿ 2ನೇ ಬಿಜ್ಜಳನು ಪಡೆದುಕೊಂಡನು. ಬಿಜ್ಜಳನ ಪೂರ್ವಿಕರು ಮೂಲತಃ ಮಧ್ಯಭಾರತದಿಂದ ಬಂದವರು. ಬಿಜ್ಜಳನು ಕಲ್ಯಾಣ ಚಾಲುಕ್ಯರ 3ನೇ ತೈಲಪನ ಕಾಲಕ್ಕೆ ಮಹಾಮಂಡಲೇಶ್ವರನಾಗಿ ಪ್ರಭಾವಶಾಲಿಯಾಗಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. "ಇವನ ಮುತ್ತಜ್ಜಿಯಾದ ಚಂದೊದೇವಿಯು ಚಾಲುಕ್ಯ ದೊರೆ ವಿಕ್ರಮಾದಿತ್ಯನ ರಾಣಿಯಾಗಿದ್ದಳೆಂದು ಒಳಸಂಗದ ಶಾಸನವೊಂದರಲ್ಲಿ ತಿಳಿಸಲಾಗಿದೆ"–1.

ಹೀಗೆ ರಕ್ತ ಸಂಬಂಧ ಹಾಗೂ ರಾಜ ವ್ಯವಸ್ಥೆಯ ಒಳಜಗಳಗಳ ಮರ್ಮವನ್ನು ಅರಿತು ವಚನ ಚಳವಳಿಯ ವೇಳೆಗೆ ತಾನೇ ಕಲ್ಯಾಣ ಚಕ್ರವರ್ತಿಯಾಗಿ ಹೊರಹೊಮ್ಮಿದನು. ಆಗ ರಾಜ್ಯದ ಅಂತಃಕಲಹಗಳು ಸಂಪೂರ್ಣವಾಗಿ ಕಣ್ಮರೆಯಾಗಿರಲಿಲ್ಲ. ಆದರೂ ರಾಜ್ಯಾಂಗದ ವಿವಿಧ ಪಟ್ಟುಗಳನ್ನು ಬಲ್ಲವನಾಗಿದ್ದ ಬಿಜ್ಜಳ ಎಲ್ಲವನ್ನು ತನ್ನ ಹತೋಟಿಯಲ್ಲಿ ತಂದುಕೊಂಡು ಆಡಳಿತದ ಚುಕ್ಕಾಣಿಯನ್ನು ಸೂಕ್ತವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದನು.

ಮಾಂಡಲಿಕರನ್ನೆಲ್ಲಾ ಶಿಸ್ತಿನಿಂದ ತನ್ನ ಹಿಡಿತಕ್ಕೆ ತಂದುಕೊಂಡ ಬಿಜ್ಜಳನು ಆಡಳಿತದಲ್ಲಿ ಸುಧಾರಣೆಯನ್ನು ತಂದನು. ಅಂದರೆ ಬಸವಣ್ಣನಿಗೆ ಉನ್ನತ ಸ್ಥಾನವಾದ ಮಂತ್ರಿ ಪದವಿಯನ್ನು ಕೊಟ್ಟು ಆತನ ಕಾರ್ಯಕ್ಷೇತ್ರಕ್ಕೆ ಅವಕಾಶ ಮಾಡಿಕೊಟ್ಟ ಪರಿಣಾಮವಾಗಿ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಪರಿಸ್ಥಿತಿಗಳ ಆರೋಗ್ಯಪೂರ್ಣ ಬದಲಾವಣೆಗೆ ಕಾಲ ಪಕ್ವಗೊಳ್ಳತೊಡಗಿತು.

ಬಸವಣ್ಣ ಹಾಗೂ ಆತನ ಅನುಯಾಯಿಗಳ ಸಮಾಜಮುಖಿ ಚಿಂತನೆ: ಮೇಲು–ಕೀಳು, ಮಡಿ–ಮೈಲಿಗೆ, ಬಡವ–ಬಲ್ಲಿದ ಎನ್ನುವ ತಾರತಮ್ಯವನ್ನು ಮೀರಿದ ಮಾನವ ಪ್ರೀತಿ ಹಾಗೂ ಸಮಾನತೆಯ ದೃಷ್ಟಿ ಬಹುಬೇಗ ಜನಪ್ರಿಯವಾಗತೊಡಗಿತು. ಪರಿಣಾಮವಾಗಿ ಬಸವಣ್ಣನ ಕರ್ಮಭೂಮಿಯಾದ ಕಲ್ಯಾಣಕ್ಕೆ ನಾಡಿನ ವಿವಿಧ ಭಾಗಗಳಿಂದ ಶರಣರು ಆಗಮಿಸ ತೊಡಗಿದರು.

ಈ ಬಗೆಯ ಜನರ ಆಕರ್ಷಣೆಗೆ ಮುಖ್ಯಕಾರಣ ಎಲ್ಲಾ ವರ್ಗದವರು ಒಂದೇ ವೇದಿಕೆಯ ಅಡಿಯಲ್ಲಿ ಸೇರುವಂತಹಂಥಾಗಿದ್ದು. ಪರಂಪರಾಗತವಾಗಿ ಶೋಷಣೆಯ ಸುಳಿಯಲ್ಲಿ ನಲುಗಿದ ಜನಸಾಮಾನ್ಯರಿಗೆ ಧಾರ್ಮಿಕ ಜೀವನದಲ್ಲಿ ಬದಲಾವಣೆಯನ್ನು ಎದುರು ನೋಡುವಂತಾಗಿತ್ತು.

ಇಂತಹ ವೇಳೆಯಲ್ಲಿ ಶರಣರ ಏಕದೇವೋಪಾಸನೆ, ಅಂದರೆ ಶಿವನನ್ನು ಆರಾಧಿಸುವ ಮೂಲಕ ವೀರಶೈವ ಧರ್ಮವನ್ನು ಪ್ರತಿಪಾದಿಸಿದರು.

ಈ ಧರ್ಮವು ಶೈವ ಧರ್ಮದ ಪರಿಷ್ಕೃತ ರೂಪವಾಗಿದೆ. 'ಭೂಗರ್ಭಶಾಸ್ತ್ರ ಸಂಶೋಧಕರು ನಾಲ್ಕು-ಐದು ಸಾವಿರ ವರ್ಷಗಳ ಹಿಂದಕ್ಕೆ ವೀರಶೈವ ಅಥವ ಶಿವನ ಆರಾಧನೆ ಇತ್ತೆಂದು ಅಭಿಪ್ರಾಯಪಟ್ಟಿದ್ದಾರೆ'-2 ಹರಪ್ಪ- ಮಹೆಂಜೊದಾರೋಗಳ ಕಾಲದಲ್ಲೂ ಶಿವನು ಪೂಜಿಸಲ್ಪಡುತ್ತಿದ್ದನೆಂಬುದನ್ನು ಇತಿಹಾಸಕಾರರು ಈಗಾಗಲೇ ಗುರ್ತಿಸಿದ್ದಾರೆ. ಹೀಗೆ ಪ್ರಾರಂಭವಾದುದು 12 ನೇ ಶತಮಾನದ ವೇಳೆಗೆ ಒಂದು ನಿರ್ದಿಷ್ಟರೂಪವನ್ನು ಪಡೆಯಿತೆಂದು ಹೇಳಬಹುದು.

ವಚನಕಾರರ ಧಾರ್ಮಿಕ ದೃಷ್ಟಿ ಮತ್ತು ಏಕದೇವೋಪಾಸನೆಯಂತಹ ಚಟುವಟಿಕೆಗಳು ಅಪ್ಯಾಯಮಾನವಾಗಿ ಕಂಡವು. 'ದೇವನೊಬ್ಬ ನಾಮ ಹಲವು', 'ದಯವೇ ಧರ್ಮದ ಮೂಲವಯ್ಯ' ಎನ್ನುವ ವಚನಗಳು ದೇವನನ್ನು ಮನುಷ್ಯನ ಉತ್ತಮ ಗುಣಗಳಿಗೆ ಸಮೀಕರಿಸಿದ್ದು, 'ಏನಿ ಬಂದಿರಿ, ಹದುಳಿದ್ದಿರೆ ಎಂದಡೆ ನಿಮ್ಮೈಸಿರಿ ಹಾರಿ ಹೋಹುದೆ?' 'ಮೃದು ವಚನವೆಸಕಲ ಜಪಂಗಳಯ್ಯ ಮೃದು ವಚನವೇ ಸಕಲ ತಪಂಗಳಯ್ಯ' ಮುಂತಾದ ವಚನಗಳು ನಡೆ-ನುಡಿಗಳಲ್ಲಿ ದೈವತ್ವವನ್ನು ಕಾಣಿಸಿದ್ದು; ದೇವರ ಕುರಿತು ಹೊಸ ಆಲೋಚನೆಗಳನ್ನು ಜನರಲ್ಲಿ ಹುಟ್ಟು ಹಾಕಿದವು. ಶರಣರ ಹೊಸ ಪರಿಕಲ್ಪನೆಯ 'ರಾಜಾ ಪ್ರತ್ಯಕ್ಷ ದೇವತಾಃ' ಎಂಬ ಸಂಪ್ರದಾಯ ಮನೋಭಾವವನ್ನು ಮುರಿದು ಅವನೂ ಸಹ ಎಲ್ಲರ ಹಾಗೆ ಮನುಷ್ಯನು ಎಂಬುದನ್ನು ಮನಗಾಣಿಸಿತು. ಬಹುಶಃ ಈ ಬಗೆಯ ದೃಷ್ಟಿಕೋನವು ಚಾರಿತ್ರಿಕವಾದದ್ದು ಎಂದರೆ ತಪ್ಪಾಗಲಾರದು. 'ವಚನ ಸಾಹಿತ್ಯ' ಒಂದು ಸಾಂಸ್ಕೃತಿಕ ಅಧ್ಯಯನ'ದಲ್ಲಿ ಡಾ. ಪಿ.ವಿ ನಾರಾಯಣರು ಈ ಸಂಗತಿಯನ್ನು ಈಗಾಗಲೇ ದಾಖಲಿಸಿದ್ದಾರೆ. ಮನುಷ್ಯ-ಮನುಷ್ಯರ ನಡುವಿನ ಅಂತರವನ್ನು ನಿರ್ಮೂಲ ಮಾಡಲು ವಚನ ಚಳವಳಿ ತುಳಿದ ಹಾದಿ ಮುಂದಿನ ಜನಾಂಗಕ್ಕೆ ದಾರಿ ದೀಪವಾಗುತ್ತಿರುವುದು ಐತಿಹಾಸಿಕವಾದುದಾಗಿದೆ.

ವೃತ್ತಿ ಘನತೆಯನ್ನು ಎತ್ತಿ ಹಿಡಿದ ಶರಣರು ತಾವು ಮಾಡುವ ಕೆಲಸದಲ್ಲಿ ದೈವತ್ವವನ್ನು ಕಂಡರು. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತನ್ನು ಅಕ್ಷರಶಃ ತಮ್ಮ ಜೀವನದಲ್ಲಿ

ಅಳವಡಿಸಿಕೊಂಡು ಇತರರಿಗೆ ಮಾದರಿಯಾದರು. ಅದುವರೆಗೂ ವೃತ್ತಿ ಆಧಾರದ ಮೇಲೆ ವರ್ಗ ಮಾಡಲಾಗಿದ್ದ ಜಾತಿ ವ್ಯವಸ್ಥೆಗೆ ಕೊಡಲಿಪೆಟ್ಟು ಬಿದ್ದ ಹಾಗಾಯಿತು. ಇದು ಸಹಜವಾಗಿಯೇ ಸಂಪ್ರದಾಯವಾದಿಗಳನ್ನು ಕೆರಳಿಸಿತು ಇಂಥ ವಿರೋಧಿಗಳ ಗುಂಪಿನ ಕೈ ಮೇಲಾಗಿ ವಿಚಾರವಾದಿಗಳಿಗೆ ತಡೆಯನ್ನೊಡ್ಡಲು ಕೈಗೊಂಡ ರಕ್ತಕ್ರಾಂತಿ ರಾಜಕೀಯ ಅರಾಜಕತೆಯನ್ನು ಸೃಷ್ಟಿ ಮಾಡಿದರೂ, ನಂತರದ ದಿನಗಳಲ್ಲಿ ಆ ಚಳವಳಿಯ ಮಹತ್ವ ಪ್ರಸರಣಗೊಳ್ಳತೊಡಗಿತು.

ಕಲ್ಯಾಣದಲ್ಲಿ 'ಅನುಭವ ಮಂಟಪ' ವೆಂಬ ವೇದಿಕೆಯ ಅಡಿಯಲ್ಲಿ ಒಟ್ಟುಗೂಡಿದ್ದು, ಪುರುಷರು ಮಾತ್ರವಲ್ಲ ಸ್ತ್ರೀಯರೂ ಅಲ್ಲಿ ಸಮಾನತೆಯಿಂದ ಭಾಗವಹಸಿದ್ದು ಚಾರಿತ್ರಿಕವಾದದ್ದು. ಸ್ತ್ರೀಯರಿಗೆ ಸಮಾನತೆಯ ಹಕ್ಕು ಮತ್ತು ಅವರನ್ನು ಗೌರವಿಸುವಂತಹ ಉದಾರತೆಯ ವಾತಾವರಣ ನಿರ್ಮಿಸಿದ್ದು, ಶರಣರ ವಿಶಾಲ ದೃಷ್ಟಿಕೋನವನ್ನು ತೋರಿಸುತ್ತದೆ. ಶರಣರ ಚಳವಳಿಗಿಂತ ಪೂರ್ವದಲ್ಲಿ ಸಾಮಾಜಿಕ ಅಸಮಾನತೆಯಲ್ಲಿ ನಲುಗಿ ಹೋಗಿದ್ದ ಸ್ತ್ರೀ ಸಮೂಹಕ್ಕೆ 12ನೇ ಶತಮಾನದಲ್ಲಿ ಬೀಸಿದ ಸಮತೆಯ ಗಾಳಿ ಅವರಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರಹಾಕಲು ನೆರವಾಯಿತು. ಮಾತೆ ಎಂಬ ಪೂಜ್ಯತೆಯನ್ನು ನೀಡಿ ನಿಯಮಗಳಲ್ಲಿ ಬಂಧಿಸುವ ಬದಲು ಸ್ವತಂತ್ರವಾಗಿ ಬದುಕಲು ಹಾಗೂ ಆಲೋಚಿಸಲು ಅವಕಾಶ ಮಾಡಿಕೊಟ್ಟಿದ್ದು ಅವರ ಬದುಕಿನಲ್ಲಿ ಹೊಸ ಭಾಷ್ಯವನ್ನು ಬರೆಯಿತೆಂದು ಹೇಳಬಹುದು.

ಆಧ್ಯಾತ್ಮಿಕ ಬದುಕು ವ್ಯಕ್ತಿಯನ್ನು ಸರಳಗೊಳಿಸುತ್ತದೆ. ಎಲ್ಲಾ ಆಸೆ-ಆಮಿಷಗಳಿಂದ ಮುಕ್ತಗೊಳಿಸುತ್ತದೆ. ದ್ವೇಷಾಸೂಯೆಗಳನ್ನು ಕಿತ್ತೊಗೆಯುತ್ತದೆ. ಸಮಾಜಮುಖಿ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಮೋಹವನ್ನು ಕಳೆದು ನಾನು-ನನ್ನಿಂದ ಎನ್ನುವ ಅಹಂ ಭಾವವನ್ನು ಸುಟ್ಟುಹಾಕುತ್ತದೆ. ಎಲ್ಲರನ್ನು ಪ್ರೀತಿಸುವ ಎಲ್ಲವನ್ನು ಗೌರವಿಸುವ, ಎಲ್ಲದರಲ್ಲಿಯೂ ದೈವತ್ವವನ್ನು ಕಾಣುವ ದೃಷ್ಟಿಯನ್ನು ನೀಡುತ್ತದೆ. ಈ ಬಗೆಯ ಮಾನಸಿಕ ಹಂತವನ್ನು ಪಡೆಯುವುದೇ ಶರಣರ ಜೀವನದ ಗುರಿಯಾಗಿತ್ತು. ಆದ್ದರಿಂದಲೇ ಅವರು ತಮ್ಮ ವೃತ್ತಿಯಲ್ಲಿಯೇ ಕೈಲಾಸದ ಒಡೆಯನನ್ನು ಕಂಡದ್ದು. ಅಷ್ಟು ಮಾತ್ರವಲ್ಲ 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' 'ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು' ಎಂದು ಹೇಳುವುದರ ಮೂಲಕ ಮಾನವ ಜನ್ಮದ ಮಹತ್ವವನ್ನು ಎತ್ತಿಹಿಡಿದರು. ಜೊತೆಗೆ ಸಕಲ ಜೀವಿಗಳಿಗೂ ಲೇಸನ್ನು ಬಯಸಿದರು. ತಮ್ಮಂತೆಯೇ ಇತರರು ಎಂದು ಭಾವಿಸಿ ಬಾಳಿದರು. ಇದೆಲ್ಲವೂ ಸಾಧ್ಯವಾದದ್ದು ಆತ್ಮವನ್ನು ಅರಿಯುವ ಆಧ್ಯಾತ್ಮಿಕ

ಮಾರ್ಗದಲ್ಲಿ ಎಂಬುದು ಮುಖ್ಯವಾದುದು. ಅಂದರೆ ವ್ಯಕ್ತಿಗಳನ್ನು ಸಚ್ಚಾರಿತ್ರವುಳ್ಳವರನ್ನಾಗಿ ರೂಪಿಸುವುದೇ ಆಧ್ಯಾತ್ಮಿಕದ ಉದ್ದೇಶವೂ ಹೌದು. ಇದರ ಪರಿಕಲ್ಪನೆ ಹಾಗೂ ಆಚರಣೆ ವೇದಗಳಿಂದಲೂ ಇದೆಯಾದರೂ ಅದು ಜನಸಾಮಾನ್ಯರಿಗೆ ನಿಲುಕದಂತಾಗಿತ್ತು. ಅದನ್ನು ಪಡೆಯಲು ಅತ್ಯಂತ ಸಾಮಾನ್ಯನಿಂದಲೂ ಸಾಧ್ಯವಿದೆ. ಸಂಸಾರ ಮತ್ತು ಪ್ರಾಪಂಚಿಕರ ನಡುವೆ ಇದ್ದು ಅದನ್ನು ಗಳಿಸಿಕೊಳ್ಳಬಹುದು ಎಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟದ್ದು ಕಲ್ಯಾಣದ ಶರಣರ ಚಾರಿತ್ರಿಕ ಹೆಜ್ಜೆಯಾಗಿದೆ.

ಬಿಜ್ಜಳನ ಅಧಿಕಾರದ ವಿಕೇಂದ್ರಿಕರಣದ ಸುಳುಹುಗಳು ಸ್ಪಷ್ಟವಾಗಿ ಇದುವರೆಗೂ ಕಾಣಬರುವುದಿಲ್ಲ. ಆದರೆ ಸಂಪತ್ತಿನ ವಿಕೇಂದ್ರಿಕರಣವಾಗಿದ್ದನ್ನು ಬಸವಣ್ಣನ ಅಧಿಕಾರ ವ್ಯಾಪ್ತಿಯಲ್ಲಿ ಗುರುತಿಸಬಹುದು. ಭಂಡಾರದ ಮಂತ್ರಿಯಾಗಿದ್ದ ಆತ ರಾಜಧನವನ್ನು ಸಮಾಜ ಸೇವೆಗಾಗಿ ಧಾರಾಳವಾಗಿ ವಿನಿಯೋಗಿಸುತ್ತಾರೆ. ಇದನ್ನು ಸಹಿಸದ ಶರಣ ವಿರೋಧಿಗಳು ರಾಜನಿಗೆ ಭಂಡಾರ ಖಾಲಿಯಾಗಿದೆ ಎಂದು ದೂರು ನೀಡುತ್ತಾರೆ. ಆದರೆ ಬಸವಣ್ಣನವರು ಭಂಡಾರದಲ್ಲಿ ಸಂಪತ್ತಿರುವಂತೆ ಮಾಡುತ್ತಾರೆ. ಪವಾಡವನ್ನು ಶ್ರಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಅದರ ಮಹತ್ವವನ್ನು ಅರಿಯಬಹುದಾಗಿದೆ.

ಬಸವಣ್ಣನವರ ಆರ್ಥಿಕ ನೀತಿಯನ್ನು ಪ್ರಸ್ತುತ ಆರ್ಥಿಕ ವ್ಯವಸ್ಥೆಯ ಜೊತೆ ಸಮೀಕರಿಸಿ ನೋಡಿದರೆ ಪ್ರಜಾಪ್ರಭುತ್ವದ ಬೇರುಗಳು 12ನೇ ಶತಮಾನದಲ್ಲಿಯೇ ಗೋಚರಿಸಿರುವುದನ್ನು ಕಾಣಬಹುದಾಗಿದೆ. ಆ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನ ನಡೆಯುವ ಅಗತ್ಯವಿದೆ.

ಒಂದೊಂದು ಕಾಲಘಟ್ಟಗಳ ಮಹತ್ವವನ್ನು ಅರಿಯಬೇಕಾದರೆ, ಆ ಸನ್ನಿವೇಶಗಳಲ್ಲಿ ನಡೆಯವ ಸಾಂಸ್ಕೃತಿಕ ಘಟನೆಗಳು ಚಾರಿತ್ರಿಕ ಸಂದರ್ಭಕ್ಕೆ ಹತ್ತಿರವಾದ ಸಾಕ್ಷಿಗಳೆನಿಸುತ್ತವೆ ಮತ್ತು ಪೂರಕವಾಗಿರುತ್ತವೆ. ಯಾವುದೋ ಒಂದು ಕಾರಣನಿಮಿತ್ತ ಮಾತ್ರವಾಗಿರಬಹುದು ಅಥವಾ ಸಾಮೂಹಿಕ ಜನರ ಪ್ರಕ್ರಿಯೆಯಲ್ಲಿ ಬದಲಾಗುವ ಜೀವನ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸುತ್ತದೆ. ವಚನಕಾರರು ನಿರ್ಮಿಸಿದ ಸಾಂಸ್ಕೃತಿಕ ಚರಿತ್ರೆಯು ಧಾರ್ಮಿಕವಾದುದು. ಈ ಬಗೆಯ ಬದಲಾವಣೆಯು ಅಂದಿನ ಎಲ್ಲಾ ಸಾಂಸ್ಕೃತಿಕ ವಲಯದಲ್ಲಿ ಹೊಸಸಂಚಲನವನ್ನುಂಟು ಮಾಡಿದೆ. ಈ ಎಲ್ಲದರ ಪರಿಣಾಮವಾಗಿ ಜನ ಸಾಮಾನ್ಯರ ನಡಾವಳಿಯಲ್ಲಿ ಮಹತ್ತರವಾದ ವೈಚಾರಿಕ ಸಂಘರ್ಷಗಳು ಘಟಿಸಿದವು.

12ನೇ ಶತಮಾನದಲ್ಲಿ ಶರಣರ ಕ್ರಿಯಾಕೇಂದ್ರವೆನಿಸಿದ್ದ 'ಕಲ್ಯಾಣ' ಎಂಬ ಭೌಗೋಳಿಕ ಅಂಶವು ಈ ಸಂಶೋಧನೆಯಲ್ಲಿ ಪ್ರಮುಖ ಅಧ್ಯಯನದ ವಿಷಯ ವಸ್ತುವಾಗಿದೆ. 'ಕಲ್ಯಾಣ' ಎಂಬ ಶಬ್ದವು ವಿಭಿನ್ನ ಅರ್ಥಗಳನ್ನು ಸಾಂಸ್ಕೃತಿಕ ಸಂದರ್ಭದಲ್ಲಿ ನೀಡುತ್ತದೆ. ಈ ಸಂಶೋಧನೆಯಲ್ಲಿ ಶರಣರ ಸಮಾಜದ ಸುಧಾರಣೆಯ ಚಾರಿತ್ರಿಕ ಘಟನಾವಳಿಗಳಿಗೆ ಮಾತ್ರ ಸೀಮಿತಗೊಳಿಸಿ ಅಭ್ಯಾಸ ಮಾಡಲಾಗಿದೆ.

ಕಲ್ಯಾಣದ ಮಹತ್ವವನ್ನು ತಿಳಿಯಹೊರಟಾಗ ಆಳ್ವಿಕೆ ಮಾಡಿದ ರಾಜಪ್ರಭುತ್ವದ ಧೋರಣೆ ಅನಿವಾರ್ಯ, ಅಂದಿನ ಬಿಜ್ಜಳನ ಆಸ್ಥಾನವು ಕಾಯಕ ಜೀವಿಗಳ ಸಂಘಟನೆಯ ಪರಿಣಾಮವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷದಿಂದ ಅನೇಕ ಸಂದರ್ಭಗಳಲ್ಲಿ ಪ್ರಗತಿಪರವಾದ ಕೆಲವು ಸವಾಲುಗಳನ್ನು ಎದುರಿಸಬೇಕಾಯಿತು. ಅದೇ ವೇಳೆಯಲ್ಲಿ ರಾಜಕೀಯ ಅಭದ್ರತೆಗಳು, ಅಂತಃಕಲಹಗಳನ್ನು ಹುಟ್ಟುಹಾಕುವದರ ಮೂಲಕ ಪ್ರಭುತ್ವದ ಶಕ್ತಿಯನ್ನು ಕಳೆಗುಂದುವಂತೆ ಮಾಡಿದವು. ಆಗಿಂದಾಗ್ಗೆ ನಡೆಯುತ್ತಿದ್ದ ಯುದ್ಧಗಳಿಂದ ಜನ ಸಾಮಾನ್ಯರು ಕಂಗೆಟ್ಟಿದ್ದರು. ರಾಜರಾದವರು ಯುದ್ಧದ ವೆಚ್ಚವನ್ನು ಸುಂಕದ ರೂಪದಲ್ಲಿ ಜನರಿಂದ ವಸೂಲಿ ಮಾಡುತ್ತಿದ್ದಾಗ ಸಾಮಾಜಿಕವಾಗಿ ಘರ್ಷಣೆಗಳು ಉಂಟಾಗುತ್ತಿದ್ದವು. 'ಸುಂಕಕಂಜಿ ಇರುಳೆಲ್ಲಾ ನಡೆದ....' ಎಂಬ ಜೇಡರ ದಾಸಿಮಯ್ಯನವರ ವಚನ ಅಂದಿನ ಸಂದರ್ಭವನ್ನು ಸ್ಪಷ್ಟೀಕರಿಸುತ್ತದೆ. ಅಂತಹ ಸನ್ನಿವೇಶದಲ್ಲಿ ಕಾಯಕ ಯೋಗಿಗಳು ತಮ್ಮ ವೃತ್ತಿಯ ಮೂಲಕ ಅನೇಕ ಸಾಮಾಜಿಕ ನ್ಯಾಯವನ್ನು ಒದಗಿಸಲು ಮುಂದಾದರು. ಈ ಬಗೆಯ ಆರ್ಥಿಕ ಸಬಲೀಕರಣದಿಂದ ತಳ ಸಮುದಾಯದ ಸಾಮಾಜಿಕ ಭದ್ರತೆಯು ಉತ್ತಮಗೊಳ್ಳತೊಡಗಿತ್ತು. ಬಸವಣ್ಣನವರ ನಾಯಕತ್ವದಲ್ಲಿ ಹಲವು ಜನಪರ ಯೋಜನೆಗಳು ಕಾರ್ಯಗತಗೊಂಡವು. ಈ ಯೋಜನೆಗಳು ಪ್ರಭುತ್ವ ವಿರೋಧಿ ಚಟುವಟಿಕೆಗಳೆಂದೇ ಆಸ್ಥಾನದ ಒಳಹೊರಗೆ ಸುಳಿಯತೊಡಗಿದವು. ಇದರಿಂದ ಬಿಜ್ಜಳನು ಬಸವಣ್ಣನವರ ಕಾರ್ಯಚಟುವಟಿಕೆಗಳನ್ನು ಸಂಶಯದಿಂದ ನೋಡುವಂತಾಯಿತು. ಈ ಕಾರಣದಿಂದಾಗಿ ನೊಂದುಕೊಂಡ ಬಸವಣ್ಣನವರು 'ಬಿಜ್ಜಳನ ಭಂಡಾರ ಎನಗೇಕಯ್ಯ....' ಎಂಬ ವಚನದಲ್ಲಿ ಪ್ರಭುತ್ವದ ಮೇಲಿನ ಅಸಮಾಧಾನವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಕಾಯಕ ಮಾರ್ಗದ ಮೂಲಕ ಸಾಮಾಜಿಕ ನ್ಯಾಯವನ್ನು ತರಲು ಶ್ರಮಿಸಿದರು. ಈ ಬಗೆಯ ರಾಜಕೀಯ ಸ್ಥಿತ್ಯಂತರವು ಆಡಳಿತದ ವೈರುಧ್ಯವನ್ನು ತೋರಿಸುತ್ತದೆ.

ಕಲ್ಯಾಣದ ಕಲಚೂರಿಗಳ ಸಾಮ್ರಾಜ್ಯದಲ್ಲಿ ಎರಡನೆಯ ಬಿಜ್ಜಳನ ಆಳ್ವಿಕೆಯು ಮಹತ್ತರ ಬದಲಾವಣೆಯಿಂದ ಕೂಡಿತ್ತು. ಏಕೆಂದರೆ ಬಸವಣ್ಣನವರ ಆಡಳಿತದ ವೈಖರಿಯಲ್ಲಿ ಜನಸಾಮಾನ್ಯರ ಹಿತ ಕಾಪಾಡಲು ಶ್ರಮಿಸಲಾಯಿತು. ರಾಜಕೀಯವಾದ ಯಾವುದೇ ಧೋರಣೆಗಳನ್ನು ಬಲವಂತವಾಗಿ ಜನರ ಮೇಲೆ ಹೇರುವ ಪ್ರಸಂಗ ನಡೆಯಲಿಲ್ಲ. ಸಾಮಾಜಿವಾಗಿ ಜನಸಾಮಾನ್ಯರನ್ನು ಗೌರವದಿಂದ ಕಾಣುವ ಪರಿಸರ ನಿರ್ಮಾಣವಾಗಿತ್ತು. ಕಾಯಕಕ್ಕೆ ಮಹತ್ವ ನೀಡಿದ್ದರಿಂದ ಆಯಾ ವೃತ್ತಿಯಲ್ಲಿ ತೊಡಗಿದವರ ಆರ್ಥಿಕ ಸ್ಥಿತಿಯೂ ಸುಧಾರಣೆಯತ್ತ ಸಾಗಿತ್ತು. ಈ ಎಲ್ಲದರ ನಡುವೆ ಅದರಲ್ಲೂ ಶರಣರ ದೃಷ್ಟಿಯಲ್ಲಿ ಕಲ್ಯಾಣವು ಆತ್ಮಸಿದ್ಧಿ ಪಡೆಯುವ ಶಕ್ತಿ ಕೇಂದ್ರವೆನಿಸತೊಡಗಿತ್ತು. ಅವರುಗಳೇ ಹೇಳಿದಂತೆ.:

"ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತು
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ
ಇದಂತುವನಾರು ಬಲ್ಲರಯ್ಯಾ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕತೆನಗಾಯಿತ್ತು
ಕೇಳಾ ಚೆನ್ನಮಲ್ಲಿಕಾರ್ಜುನ"-2.

ಮಹಾದೇವಿಯಕ್ಕನ ವಚನವು ಹೇಳಿದ್ದಂತೆ, ಕಲ್ಯಾಣವು ಒಳಗೂ ಮತ್ತು ಹೊರಗೂ ಮಾನವನ ಏಳಿಗೆಯ ಜೊತೆಯಲ್ಲಿ ಆತ್ಮಶುದ್ಧಿಯ ಒಳಹನ್ನು ಕಾಣುವುದರ ಸೂಚನೆ ನೀಡುತ್ತದೆ. ಇದರ ಜೊತೆಗೆ ಇವೆಲ್ಲವುದರ ಕೇಂದ್ರಬಿಂದುವಾದ ಬಿಜ್ಜಳ ರಾಜನ ಭಂಢಾರಿಯಾದ ಬಸವಣ್ಣನವರು ಈ ಕಲ್ಯಾಣದಲ್ಲಿ ನಡೆದ ವಿನೂತನ ಕಾರ್ಯಯೋಜನೆಗಳಿಗೆ ಕಾರಣವಾಗುತ್ತಾರೆ. ಇವರು ಕಂಡುಕೊಂಡ "ಅಕ್ಷರರೂಪದ ಕ್ರಾಂತಿ"ಯು ಮುಂದೆ ಸಾಮಾಜಿಕ ಬದಲಾವಣೆಯನ್ನು ತರುತ್ತದೆ.

ಬಿಜ್ಜಳನ ಸಾಮ್ರಾಜ್ಯಶಾಹಿಧೋರಣೆ, ಜೈನ, ಬೌದ್ಧ, ಶೈವಧರ್ಮಗಳಲ್ಲಿ ಕಂಡುಬರುತ್ತಿದ್ದ ಮೌಢ್ಯಗಳು ಇವುಗಳಿಂದ ಸಾಮಾನ್ಯ ಜನರಿಗೆ ಬಿಡುಗಡೆ ಅನಿವಾರ್ಯವಾಗಿತ್ತು. ಪರಿಣಾಮವಾಗಿ ಶರಣರ ಸೂಳ್ನುಡಿಗಳು ಜನರಿಗೆ ಹಿತವಾಗತೊಡಗಿದವು. ಅಷ್ಟು ಮಾತ್ರವಲ್ಲ ಪರಂಪರಾಗತ ಧೋರಣೆಗಳನ್ನು ವಚನಕಾರರು ಟೀಕಿಸತೊಡಗಿದರು :

"ಶಾಸ್ತ್ರ ಘನವೆಂಬೆನೆ ಕರ್ಮವ ಭಜಿಸುತ್ತಿದೆ.

ವೇದ ಘನವೆಂಬೆನೆ ಪ್ರಾಣಿವಧೆಯ ಹೇಳುತ್ತಿದೆ
ಶ್ರುತಿ ಘನವೆಂಬೆನೆ ಮುಂದಿಟ್ಟು ಅರಸುತ್ತಿದೆ,
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ
ತ್ರಿವಿಧದಾಸೋಹದಲಲ್ಲದೆ ಕಾಣಬಾರದು ಕೂಡಲಸಂಗಮದೇವನ" –3

ಈ ವಚನದಲ್ಲಿ ಕಂಡುಬರುವ 'ಶಾಸ್ತ್ರ', 'ವೇದ', 'ಶ್ರುತಿ'ಗಳು ಹೇಳುವ ಸಾಮಾಜಿಕ ಮೌಢ್ಯಗಳನ್ನು ಖಂಡಿಸುತ್ತ ಹೊಸಬದುಕಿನ ಚಿತ್ರಣವನ್ನು ಹೇಗೆ ಕಾಣಬೇಕೆಂಬುದನ್ನು ಸೂಚಿಸುತ್ತಾರೆ. 'ತ್ರಿವಿಧದಾಸೋಹ'ವಾದ ಗುರು, ಲಿಂಗ, ಜಂಗಮವನ್ನು ಅರಿತು ಅವುಗಳನ್ನು ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಹಸನಾಗುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

ಈ ವಿಚಾರ ಕ್ರಾಂತಿಯಲ್ಲಿ ಮೇಲ್ವರ್ಗ ಮತ್ತು ಕೆಳವರ್ಗಗಳೆಂಬ ತಾರತಮ್ಯವಿಲ್ಲದೆ, 'ಶರಣ'ನಾದ ಬಳಿಕ ಒಂದೇ ಎಂಬ ಭಾವನೆಯೊಳಗೆ ಸಾಮಾಜಿಕ ಭಾಗವಾಗಿ ಸಂಘಟನಾತ್ಮಕ ಚಿಂತನೆಯಲ್ಲಿ ಸಂಘರ್ಷ ಉಂಟಾಯಿತು. ಪರಿಣಾಮವಾಗಿ ಕಲ್ಯಾಣದ ಸಾಂಸ್ಕೃತಿಕ ಬದುಕಿನಲ್ಲಿ ಚಾರಿತ್ರಿಕವೆನ್ನಬಹುದಾದ ಸುಧಾರಣೆಗಳು ಮೈದಾಳಿದವು. ಇದು ಅಂತರ್ಜಾತಿಯ ವಿವಾಹವನ್ನು ಮಾಡಿಸುವುದರ ಮೂಲಕ ಸಮಾನತೆಯ ಹೊಸ ಹಾದಿಯನ್ನು ಸೃಷ್ಟಿಸಿತು.

ಬಂಡಾಯದ ಬೇರುಗಳನ್ನು ವಚನಸಾಹಿತ್ಯದಲ್ಲಿ ಈಗಾಗಲೇ ಗುರುತಿಸಲಾಗಿದೆ. ಏಕೆಂದರೆ ಎಲ್ಲಾ ವರ್ಗದ ಜನರಿಗೆ ಮಾತುಕಲಿಸಿದ್ದು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮನ್ನಣೆ ಸಿಕ್ಕಿದ್ದು ಈ ಸಂದರ್ಭದಲ್ಲಿಯೆ. ದನಿಯಿಲ್ಲದವರ ದನಿಯಾಗಿ ರೂಪಗೊಂಡಿದ್ದು ವಚನ ಸಾಹಿತ್ಯದ ವಿಶೇಷತೆ.

ವಚನ ಚಳವಳಿಯ ಮುಂಚೂಣೆಯಲ್ಲಿದ್ದ ಬಸವಣ್ಣನವರು: ತಾನು ಸೇವಕರಲ್ಲಿ ಸೇವಕ, ಹೊಲೆಯರಲ್ಲಿ ಹೊಲೆಯ ಎಂಬ ವಿನಮ್ರವಾದ ನುಡಿಗಳು ಎಲ್ಲಾ ಜನರು ಅನುಭವ ಮಂಟಪ ಎಂಬ ವೇದಿಕೆಯ ಅಡಿಯಲ್ಲಿ ಸೇರಲು ಕಾರಣವಾದವು. ಮುಂದುವರಿದ ಅವರು:

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ,
ಇವನಮ್ಮವ, ಇವನಮ್ಮವ, ಇವನಮ್ಮವನೆಂದೆನಿಸಯ್ಯ,
ಕೂಡಲಸಂಗಮದೇವಾ,
ನಿಮ್ಮ ಮನೆಯ ಮಗನೆಂದೆನಿಸಯ್ಯಾ"–4

ಎನ್ನುವ ವಚನದಲ್ಲಿ ಜನರ ನಡುವೆ ಭೇದವನ್ನು ಎಣಿಸದೆ ಜಾತಿ-ಧರ್ಮ, ವರ್ಣ-ವರ್ಗ, ಸ್ತ್ರೀ-ಪುರುಷ ಎಂಬ ತಾರತಮ್ಯದ ಹೊರಗೆ ಮನುಷ್ಯ ಬದುಕನ್ನು ಕಟ್ಟತೊಡಗಿದರು. ಎಲ್ಲರನ್ನು ನಮ್ಮವರೆಂದು ಕಾಣುವ ಆತ್ಮೀಯತೆ ಜನರನ್ನು ಆಕರ್ಷಿಸಿತು. ಪರಿಣಾಮವಾಗಿ ನಾಡಿನ ಅನೇಕ ಭಾಗಗಳಿಂದ ಶರಣರು ಕಲ್ಯಾಣಕ್ಕೆ ಆಗಮಿಸತೊಡಗಿದರು. ಹೀಗೆ ಆಗಮಿಸಿದ ಶರಣರು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಸಂಖ್ಯೆಯಲ್ಲಿದ್ದರು ಎಂದು ಅಂದಾಜಿಸಲಾಗಿದೆ.

ಹೀಗೆಯೆ ಅಧಿಕ ಸಂಖ್ಯೆಯ ಶಿವಶರಣರಿಂದ ಕೂಡಿದ್ದ ಕಲ್ಯಾಣ ನಗರವನ್ನು ಬಸವಣ್ಣನವರು ತಮ್ಮ ವಚನವೊಂದರಲ್ಲಿ :

"ಅಂಗುಲ ಹನ್ನೆರಡು ಕೂಡಲು ಒಂದು ಗೇಣು,
ಗೇಣು ಎರಡು ಕೂಡಲು ಒಂದು ಮೊಳ
ಮೊಳವೆರಡು ಕೂಡಲು ಒಂದು ಹಸ್ತ
ಹಸ್ತವೆರಡು ಕೂಡಲು ಒಂದು ನೂರು
ಮೂರೆರಡು ಕೂಡಲು ಒಂದು ಜಂಘೆ
ಜಂಘೆ ಏಳನೂರೆಪ್ಪತ್ತು ಕೂಡಲು ಒಂದು ಪಾದಚ್ಚಯ
ಪಾದಚ್ಚಯವೆರಡು ಸಾವಿರದೆಂಟುನೂರು ಕೂಡಲು ಒಂದು ಕೂಗಳತೆ,
ಕೂಗಳತೆ ನಾಲ್ಕು ಕೂಡಲು ಒಂದು ಹರಿದಾರಿ
ಹರಿದಾರಿ ನಾಲ್ಕು ಕೂಡಲು ಒಂದು ಯೋಜನೆ,
ಅಂಥ ಯೋಜನ ನಾಲ್ಕು ಪ್ರಮಾಣಿಕನ ಕಟ್ಟಳೆಯಾಯಿತು
ಇಂತಪ್ಪ ಕಟ್ಟಳೆಯಾಗಿದ್ದ ಕಲ್ಯಾಣದೊಳಗಿರುವ ಗಣಂಗಳೆಲ್ಲರನೂ
ಕೂಡಲಸಂಗಯ್ಯ ನಿಮ್ಮೊಳು ಕಂಡು ಸುಖಿಯಾಗಿರ್ದೆನು".[5]

ಮೇಲಿನ ವಚನದಲ್ಲಿ ಕಲ್ಯಾಣದ ವಿಸ್ತೀರ್ಣತೆ ಮತ್ತು ಅದರ ಘನತೆಯನ್ನು ಹೇಳಲಾಗಿದೆ. ಇದೇ ಸಂಗತಿಯನ್ನು ಕುರಿತು ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಪ್ರಸ್ತಾಪಿಸಿದ್ದಾರೆ. ಇಲ್ಲಿ ಪ್ರಸ್ತಾಪವಾಗಿರುವ ಅಳತೆಯು ಆ ಕಾಲದ್ದಾಗಿದೆ. ಅದರ ಪ್ರಕಾರ ಉದ್ದ 44 ಮೈಲಿಗಳು, ಸುತ್ತಳತೆ 576 ಮೈಲುಗಳು ಎಂದು ಅಂದಾಜಿಸಲಾಗಿದೆ. ಕಲ್ಯಾಣದ ಆ ವಿಸ್ತೀರ್ಣತೆ ಮತ್ತು ಶಿವಗಣಂಗಳ ಸಂಖ್ಯೆ ನಮ್ಮನ್ನು ಸೋಜಿಗಗೊಳಿಸುತ್ತದೆ.

ಚಾರಿತ್ರಿಕವಾದಂತಹ ಸಾಮಾಜಿಕ ಸುಧಾರಣೆಗೆ ಭೂಮಿಕೆಯನ್ನು ಒದಗಿಸಿ, ಕಲ್ಯಾಣ ಪಟ್ಟಣವನ್ನು ಆಳಿದ ದೊರೆಗಳ ಪಟ್ಟಿ ಈ ಕೆಳಗಿನಂತಿದೆ.

ಕಲಚೂರಿ ವಂಶಾವಳಿ

ಉಚಿತ (ಸು.ಕ್ರಿ .ಶ.925) — ರಾಜ–1

ಅಸಗ (ಸು.ಕ್ರಿ .ಶ.950)

ಕನ್ನಮ–1(ಸು.ಕ್ರಿ .ಶ.975)

ಕಿರಿಯಸಗ (ಅಸಗ–2) (ಕ್ರಿ .ಶ.1000)

ರಾಜ (ರಾಜಲ–2) (ಸು.1025) — ಬಿಜ್ಜ (ಬಿಜ್ಜಳ –1) (ಕ್ರಿ.ಶ.1057)

ಕೃಷ್ಣ ಅಥವಾ ಕನ್ನಮ–2 (ಕ್ರಿ .ಶ.1067)

ಅಮ್ಮುಗಿ ಶಂಖವರ್ಮ (ಸಂಕಮ) — ಜೋಗಮ (ಕ್ರಿ.ಶ. 1080–1118)

ಪೆರ್ಮಾಡಿ (ಕ್ರಿ.ಶ. 1118–30)

ಬಿಜ್ಜಳ–2 (ಕ್ರಿ.ಶ. 1130–68) — ರಾಜ–3 — ಮೈಲುಗಿ (ಕ್ರಿ.ಶ. 1167)

ವಜ್ರದೇವ ಆಹವಮಲ್ಲ (1180–83) — ರಾಯಮುರಾರಿ ಸಿಂಘಣ (ಕ್ರಿ.ಶ.1167–76) (1183–84) — ಸೋವಿದೇವ — ಮಲ್ಲಿಕಾರ್ಜುನ (1175–76) — ಸಂಕಮ–2 (1175–80)

ಕರ್ಣ(1167) — ವೀರಬಿಜ್ಜಳ–3 (1193) –6

ಕಲಚೂರಿ ವಂಶದವನಾದ ಬಿಜ್ಜಳನು ಸಾಮಂತನಾಗಿ ಹುಟ್ಟಿ ಸಾಮ್ರಾಟನಾದನು. ಇದು ಜನತೆಯಲ್ಲಿ ಹಾಗೂ ಕೆಲಸಾಮಂತರಲ್ಲಿ ತೀರಾ ಅಸಮಾದಾನವನ್ನು ಉಂಟುಮಾಡಿತು. ಇಂಥ ಸಂದರ್ಭದಲ್ಲಿ ಜನರ ಬೆಂಬಲ ಅವನಿಗೆ ಅನಿವಾರ್ಯವಾಗಿತ್ತು. ಮಾನವ ಕಲ್ಯಾಣ ಕಾರ್ಯದಲ್ಲಿ ನಿರತರಾಗಿದ್ದ ಬಸವಣ್ಣನು ಅಸಂಖ್ಯಾತ ಭಕ್ತರನ್ನು ತಮ್ಮತ್ತ ಸೆಳೆದುಕೊಂಡಿದ್ದರು. ಇವರೊಂದಿಗೆ ಗುರುವಿನ ಸ್ವರೂಪವಾಗಿ ಅಲ್ಲಮ ಪ್ರಭುಗಳು ಬಸವಣ್ಣನವರ ಜೊತೆಗಿದ್ದರು. ಇದರೊಂದಿಗೆ ಚನ್ನಬಸವಣ್ಣ, ಸಕಲೇಶ ಮಾದರಸ, ಡೋಹರ ಕಕ್ಕಯ್ಯ, ಕಿನ್ನರಿ ಬೊಮ್ಮಯ್ಯ ಮೋಳಿಗೆಯ ಮಾರಯ್ಯ, ದಾಸೋಹದ ಸಂಗಣ್ಣ, ಅರಿವಿನ ಮಾರಣ್ಣ, ರಾಯಸದ ಮಂಚಣ್ಣ, ವೀರಗೊಲ್ಲಾಳ, ಕೋಲ ಶಾಂತಯ್ಯ, ತೆಲಗು ಜೊಮ್ಮಯ್ಯ, ಬಿಚ್ಚಿ ಬಾಚಯ್ಯ, ಶಿವಲೆಂಕ ಮಂಚಣ್ಣ, ಢಕ್ಕೆಯ ಬೊಮ್ಮಣ್ಣ, ಉರಿಲಿಂಗ ದೇವ, ಉರಿಲಿಂಗ ಪೆದ್ದಿ, ಬೊಕ್ಕಸದ ಚಿಕ್ಕಣ್ಣ, ಅಮುಗಿ ದೇವಯ್ಯ ಮುಂತಾದ ಅಸಂಖ್ಯಾತರು ಕಲ್ಯಾಣಕ್ಕೆ ಆಗಮಿಸಿದರು. ಇವರುಗಳ ಆಗಮನದಿಂದಾಗಿ ಬಸವಣ್ಣನವರ ಮಹಾಮನೆ ಶಿವಾನುಭವವಾಯಿತು. ಅಲ್ಲಿ ಶರಣರು ನೂತನ ತತ್ವ, ಧರ್ಮ ಸಮಾಜಗಳ ಸ್ವರೂಪಗಳನ್ನು ಕುರಿತು ಚರ್ಚಿಸತೊಡಗಿದರು. ಈ ಅನುಭವ ಮಂಟಪದ ಶರಣಸಮೂಹದ ಚರ್ಚೆಯ ಪ್ರತಿಫಲವೇ ಕಲ್ಯಾಣದ ವಿಚಾರ ಕ್ರಾಂತಿ.

ಹೀಗೆ ಹಿಡಿಯಾಗಿ ಕಲ್ಯಾಣದ ಶರಣರ ಚಾರಿತ್ರಿಕ ಮಹತ್ವವನ್ನು ನೋಡುವುದಾದರೆ, ಅಂದಿನ ಆಡಳಿತದಲ್ಲಿ ಬಸವಾದಿ ಪ್ರಮಥರ ಕಾರಣದಿಂದ ಸುಧಾರಣೆಗಳಿದ್ದರೂ ಅಂತಃಕಲಗಳು ಸ್ಥಾನಪಡೆದಿದ್ದವು ಎಂದು ತಿಳಿದು ಬರುತ್ತವೆ. ಈ ಬಗೆಯ ಕಲಹಗಳು ಶರಣರ ಧಾರ್ಮಿಕ ಸುಧಾರಣೆಗೆ ಪ್ರಾರಂಭದಲ್ಲಿ ಅಡ್ಡಿ ಆಗಲಿಲ್ಲ. ತದನಂತರ ಅವರು ಜಾತಿ ನಿರ್ಮೂಲನೆಗೆ ಕೈಗೊಂಡ ಕಾರ್ಯಚಟುವಟಿಕೆಗಳ ಸಂದರ್ಭದಲ್ಲಿ ಮೇಲುಗೈ ಸಾಧಿಸಿದವು. ಸಂಪ್ರದಾಯವಾದಿಗಳಿಗೆ ರಾಜಾಶ್ರಯ ದೊರೆತ ಕಾರಣ ಪ್ರಗತಿ ಪರವಾದ ಶರಣ ಚಳವಳಿಯನ್ನು ಹತ್ತಿಕ್ಕುವ ಹುನ್ನಾರ ನಡೆಯಿತು. ಪರಿಣಾಮವಾಗಿ ವಿಚಾರ ಕ್ರಾಂತಿಯು ಸೈನಿಕರ ಮೂಲಕ ರಕ್ತ ಕ್ರಾಂತಿಯ ರೂಪವನ್ನು ಪಡೆದದ್ದು ಒಂದು ಚಾರಿತ್ರಿಕ ದುರಂತ ಘಟನೆ.

12ನೇ ಶತಮಾನದ ಪೂರ್ವಕಾಲವು ಧಾರ್ಮಿಕ ಸಂಕ್ರಮಣಕಾಲವಾಗಿತ್ತು. ಆ ವೇಳೆಗೆ ರಚಿತವಾಗಿದ್ದ ಧಾರ್ಮಿಕ ಕೃತಿಗಳು ಬಿಗುವಾದ ಭಾಷಾ ಸಂರಚನೆಗಳಿಂದ ಜನಸಾಮಾನ್ಯರು ದೂರವಾಗಿದ್ದರು. ಪುರೋಹಿತಶಾಹಿಗಳ ಕಪಿಮುಷ್ಠಿಯಲ್ಲಿ ಜನ ನಲುಗತೊಡಗಿದ್ದರು. ಇಂತಹ

ವೇಳೆಯಲ್ಲಿ ಶರಣ ಸಾಹಿತ್ಯದ ಉದಯ ಜನರಲ್ಲಿ ಹೊಸ ಸಂಚಲನವನ್ನುಂಟುಮಾಡಿತ್ತು. ವಚನಕಾರರು ಸಂವಹನ ಮಾಧ್ಯಮಕ್ಕೆ ಆಡುನುಡಿಯನ್ನು ಬಳಸಿಕೊಂಡಿದ್ದು ಎಲ್ಲಾ ವರ್ಗದ ಜನರನ್ನು ತಲುಪಲು ಸಾಧ್ಯವಾಯಿತು.

ನಿಯಮಗಳಿಲ್ಲದ ಶರಣರ ಧರ್ಮವು ಶೋಷಿತ ಜನರಿಗೆ ಸಮಾನತೆಯ ಹೊಸ ಬದುಕನ್ನು ರೂಪಿಸಿತು. ಮಾತ್ರವಲ್ಲದೇ ಅವರವರ ವೃತ್ತಿಯ ಬಗೆಗೆ ಅಪಾರವಾದ ಗೌರವವನ್ನು ತಂದುಕೊಡುವುದರೊಂದಿಗೆ. ಅವರು ಮಾಡುವ ಕಾಯಕದಲ್ಲಿಯೇ ದೈವತ್ವವನ್ನು ಕಾಣಿಸಿದ್ದು, ಅದರ ವಿಶೇಷವಾಗಿದೆ, ಈ ಬಗೆಯ ಉದಾರ ದೈವಕಲ್ಪನೆಯು ಅದುವರೆಗೂ ಮೂಕವಾಗಿದ್ದ ತಳಸಮುದಾಯಕ್ಕೆ ದನಿಯನ್ನು ತಂದುಕೊಟ್ಟಿತು. ಪುರುಷಪ್ರಧಾನ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಮಹಿಳೆಯು ಮುಖ್ಯವಾಹಿನಿಗೆ ಬರಲು ಪ್ರೋತ್ಸಾಹವನ್ನು ನೀಡಿತು. ಇದರ ಪ್ರತಿಫಲವಾಗಿಯೇ ಅಕ್ಕಮಹಾದೇವಿಯಿಂದ ಹಿಡಿದು ಸೂಳೆ ಸಂಕವ್ವೆವರೆಗೆ ಅನುಭವ ಮಂಟಪವೆಂಬ ಸಮಾನ ಮನಸ್ಕರ ವೇದಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶ ಒದಗಿಬಂದಿತು. ಅಷ್ಟುಮಾತ್ರವಲ್ಲದೆ ವಚನರಚನೆಯ ಪರಿಣಾಮವಾಗಿ ಎಲ್ಲಾ ವರ್ಗದವರೂ ಶೈಕ್ಷಣಿಕವಾಗಿ ಬಲಗೊಂಡು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದು ಒಂದು ಐತಿಹಾಸಿಕ ಘಟ್ಟವೂ ಹೌದು.

ವಚನ ಚಳುವಳಿಯು ಸಾಮಾಜಿಕ ಅಂತರವನ್ನು ತೊಡೆದುಹಾಕಿತು, ರಾಜ–ಪ್ರಜೆಗಳು ಒಂದೇ ಎನ್ನುವ ಮನಃಸ್ಥಿತಿಗೆ ಭೂಮಿಕೆಯನ್ನು ಸೃಷ್ಟಿಮಾಡಿತು. ಬಸವಣ್ಣನವರು ಕಾಯಕ ತತ್ವ ಮತ್ತು ಸರಳತೆಯನ್ನು ಸ್ವತಃ ತಮ್ಮ ನಡೆ–ನುಡಿಗಳಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಜನಸಾಮಾನ್ಯರಲ್ಲಿ ಬೆರೆತುಹೋದರು ಶರಣರ ಈ ಬಗೆಯ ಸರಳತೆಯೇ ಎಲ್ಲಾ ವರ್ಗದ ಜನತೆಯನ್ನು ಆಕರ್ಷಿಸಿತು ಎಂದರೆ ತಪ್ಪಾಗಲಾರದು. ವೃತ್ತಿಪ್ರಾದಾನ್ಯತೆಯನ್ನು ಎತ್ತಿಹಿಡಿದ ಪರಿಣಾಮವಾಗಿ ಜನರ ಜೀವನ ಮಟ್ಟವೂ ಸುಧಾರಿಸಿ ಅವರಲ್ಲಿ ಸ್ವಾವಲಂಬನೆ ಮತ್ತು ಸ್ವಾಭಿಮಾನಗಳನ್ನು ಹುಟ್ಟುಹಾಕಿತು.

ಅಡಿ ಟಿಪ್ಪಣಿಗಳು

1. ಡಾ. ಎಸ್.ಸಿ. ನಂದಿಮಠರ ಲೇಖನಗಳು, ಸಂ. ಡಾ. ಬಿ.ವ್ಹಿ. ಶಿರೂರ, 2007, ಪು–242.
2. ಶಿವಶರಣೆಯರ ಸಂಪುಟ, ಡಾ. ವೀರಣ್ಣ ರಾಜೂರ, 1993, ವ 40

3. ಬಸವಣ್ಣನವರ ವಚನಗಳು, ಡಾ. ಎಂ. ಎಂ. ಕಲ್ಬುರ್ಗಿ, 2003, ಪು 18 ವ 62

4. ಬಸವಣ್ಣನವರ ವಚನಗಳು, ಡಾ. ಎಂ. ಎಂ. ಕಲ್ಬುರ್ಗಿ, 2003, ಪು 18 ವ 62

5. ಬಸವಣ್ಣನವರ ವಚನಗಳು, ಡಾ. ಎಂ. ಎಂ. ಕಲ್ಬುರ್ಗಿ, 2003, ಪು 259 ವ 968

6. ಕರ್ನಾಟಕ ಚರಿತ್ರೆ, ಪ್ರೊ. ಬಿ. ಷೇಕ್ ಅಲಿ ಪ್ರೊ. ಸುರೇಂದ್ರರಾವ್, 1997, ಪು 72

ಅಧ್ಯಾಯ-3

ಕಲ್ಯಾಣ ಕ್ರಾಂತಿಯ ಆಯಾಮಗಳು

ಕಲ್ಯಾಣ ಕ್ರಾಂತಿಯ ಸಾಂಸ್ಕೃತಿಕ ಘಟ್ಟಗಳು :

3.1 ಕಲ್ಯಾಣ ಕ್ರಾಂತಿಯ ಆಂತರಿಕ ಆಯಾಮ.

3.2 ಕಲ್ಯಾಣ ಕ್ರಾಂತಿಯ ಬಾಹ್ಯ ಆಯಾಮ.

3.3 ಕಾಯಕ ಸಂಸ್ಕೃತಿ ಮತ್ತು ಕಾಯಕ ಜೀವಿಗಳು.

3.4 ಧರ್ಮನಿರಾಕರಣೆಯೊಳಗೆ ಒಡಮೂಡಿದ ಧರ್ಮ.

ಹನ್ನೆರಡನೇ ಶತಮಾನದಲ್ಲಿ ಅತ್ಯಂತ ಗಮನಾರ್ಹವಾದ ಬದಲಾವಣೆಗಳಾದುದ್ದನ್ನು ಕಾಣಬಹುದು. ಅಂದರೆ ಜನರ ಅಂತರಂಗದ ಬದಲಾವಣೆ ಹಾಗೂ ಶರಣ, ಶರಣೆಯರು ಸಮಾಜದ ಒಳಿತಿಗೆ ನೀಡಿದ ಸುಧಾರಣೆಗಳು. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಹುಟ್ಟಿಕೊಂಡ ಅಕ್ಷರಸ್ಥ ಸಮೂಹವು ದೈನಂದಿನ ಬದುಕನ್ನು ಸುಗಮಗೊಳಿಸಲು ರಚನಾತ್ಮಕವಾದ ಸಮಾಜವನ್ನು ರೂಪಿಸಲು ಹೊರಡುತ್ತಾರೆ. ಈ ಸಂದರ್ಭದಲ್ಲಿ ಮಾತಿನ ರೂಪದಲ್ಲಿ ಕ್ರಾಂತಿಯ ರೂಪರೇಷೆಗಳನ್ನು ಕಟ್ಟಿಕೊಡುವಲ್ಲಿ 12 ನೆಯ ಶತಮಾನದ ಶರಣರು ಮುಂದಾಗುತ್ತಾರೆ. ಮಾತನ್ನು ಪ್ರಯೋಗಾತ್ಮಕವಾದ ಚಟುವಟಿಕೆಗಳಲ್ಲಿ ಬಳಸಿಕೊಂಡು ಸ್ಥಾವರಗೊಂಡಿದ್ದ ಸಾಂಸ್ಕೃತಿಕ ಬದುಕನ್ನು ಚಲನಶೀಲಗೊಳಿಸ ಹೊರಟರು. ಹೀಗೆ ಬಹುರೂಪದಲ್ಲಿ ಕಾರ್ಯವ್ಯಾಪ್ತಿ ಆರಂಭಿಸಿದ ಕಲ್ಯಾಣಕ್ರಾಂತಿಯು ಹಲವು ರೀತಿಯಲ್ಲಿ ಕ್ರಿಯಾತ್ಮಕಗೊಂಡು ಸಮಾಜದ ಆಗು-ಹೋಗುಗಳ ಬಗ್ಗೆ ಅವಲೋಕನಕ್ಕೆ ಇಳಿಯುತ್ತದೆ.

ಕಲ್ಯಾಣ ಕ್ರಾಂತಿಯ ಆಯಾಮಗಳನ್ನು ಅಧ್ಯಯನದ ದೃಷ್ಟಿಯಿಂದ 2 ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ.

1. ಕಲ್ಯಾಣ ಕ್ರಾಂತಿಯ ಆಂತರಿಕ ಆಯಾಮ.
2. ಕಲ್ಯಾಣ ಕ್ರಾಂತಿಯ ಬಾಹ್ಯ ಆಯಾಮ.

3.1 ಕಲ್ಯಾಣಕ್ರಾಂತಿಯ ಆಂತರಿಕ ಆಯಾಮ :

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಆದಂತಹ ಆಂತರಿಕ ಬದಲಾವಣೆ ಅಂದರೆ ಸಮಾಜದ ಜನರ ದೃಷ್ಟಿಕೋನದಲ್ಲಿ ಆದಂತಹ ಬದಲಾವಣೆ ಹಾಗೂ ಜನರ ಅಂತರಂಗದ ಮಾರ್ಪಾಡು ಇವುಗಳನ್ನು ಕಲ್ಯಾಣ ಕ್ರಾಂತಿಯ ಪ್ರಮುಖ ಘಟ್ಟಗಳೆಂದೇ ಕರೆಯಬಹುದು. ಏಕೆಂದರೆ ಮನುಷ್ಯನ ಜಡ್ಡುಗಟ್ಟಿದ ಸಮಾಜದಲ್ಲಿ ಇದ್ದಂತಹ ಗುರುತರ ಬದಲಾವಣೆಗಳನ್ನು ಶರಣ, ಶರಣೆಯರು ತಂದರು. ಕಲ್ಯಾಣ ಕ್ರಾಂತಿಯು ಮೊದಲಿಗೆ ಆಂತರಿಕ ಆಯಾಮಗಳಲ್ಲಿ

ಸ್ಫೋಟಗೊಳಿಸುವುದನ್ನು ಕಾಣಬಹುದು. ಕ್ರಾಂತಿಯ ತಾತ್ವಿಕ ನೋಟಗಳು ವೈಯಕ್ತಿಕ ನೆಲೆಯಲ್ಲಿ ಪ್ರಾರಂಭವಾಗಿ, ನಂತರದಲ್ಲಿ ಸಾರ್ವತ್ರಿಕವಾದ ನೆಲೆಯಲ್ಲಿ ಮುಕ್ತಾಯಗೊಳುತ್ತದೆ. ಈ ವಚನವನ್ನು ಪರಿಶೀಲಿಸಬಹುದು.

" ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಅಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವಪರಿ." 1

ಮನುಷ್ಯ ಸಾಮಾಜಿಕ ಜೀವನದಲ್ಲಿ ಗೌರವ ಸ್ಥಾನವನ್ನು ಪಡೆಯಬೇಕಾದರೆ ಅಂತರಂಗ, ಬಹಿರಂಗಗಳು ಪರಿಶುದ್ಧವಾಗಬೇಕೆಂಬುದನ್ನು ಪ್ರತಿಪಾದಿಸುತ್ತದೆ. ಅಂದರೆ ಸಾಮಾನ್ಯವಾಗಿ ಶರಣರು ತಮ್ಮ ವೈಯಕ್ತಿಕ ಜೀವನ ಮೊದಲಿಗೆ ಸುಧಾರಿಸುತ್ತಾ, ನಂತರದಲ್ಲಿ ಸಾರ್ವತ್ರಿಕವಾಗಿ ಸುಧಾರಿಸುವ ನಿಲುವು ಹೊಂದಿದ್ದರೆಂಬುದಕ್ಕೆ ಬಸವಣ್ಣನವರ ಈ ವಚನವನ್ನು ನಿದರ್ಶಿಸಬಹುದು.

"ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ.
ಕೂಡಲಸಂಗಮದೇವ."-2

ಈ ಮೇಲ್ಕಂಡ ವಚನವನ್ನು ವಿಶ್ಲೇಷಿಸ ಹೊರಟರೆ, ಲೋಕದ ಅಂಕುಡೊಂಕುಗಳನ್ನು ತಿದ್ದುವ ಮೊದಲೇ ತನ್ನೊಳಗೆ ಬೆಳವಣಿಗೆಗೆ ಮಾರಕವಾಗಿರುವ ಅಂಶಗಳನ್ನು ಮೊದಲು ತಿದ್ದಬೇಕು ಎಂಬ ನಿಯಮಗಳನ್ನು ಪ್ರತಿಪಾದಿಸುತ್ತಾರೆ. ಈ ಅಂಶವು ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಭಾಗವಹಿಸಿದ ಶರಣರು ತಮ್ಮಲ್ಲಿದ್ದ ನಡೆ-ನುಡಿ, ಆಚಾರ-ವಿಚಾರಗಳನ್ನು ಮೊದಲು ತಿದ್ದುಕೊಳ್ಳುವಲ್ಲಿ ಸಫಲರಾಗುತ್ತಾ ಹೊರಟರು. ಈ ನಿಟ್ಟಿನಲ್ಲಿ ನೋಡಿದಾಗ ಶರಣರು ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಾ ನಂತರ ಸಮಾಜ ವಿಮರ್ಶೆಯಲ್ಲಿ ತೊಡಗಿದರೆನ್ನಬಹುದು.

3.2 ಕಲ್ಯಾಣ ಕ್ರಾಂತಿಯ ಬಾಹ್ಯ ಆಯಾಮ :

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಅನೇಕ ಮಹತ್ತರ ಬದಲಾವಣೆಗಳಾದವು. ಅದರಿಂದ ಆಂತರಿಕ ಮತ್ತು ಬಾಹ್ಯವಾಗಿ ಕಣ್ಣಿಗೆ ಗೋಚರಿಸುವಂತಹ ಸಮಾಜವನ್ನು ಮಾರ್ಪಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಈ ನಿಟ್ಟಿನಲ್ಲಿ ಸೊಲ್ಲಾಪುರದಲ್ಲಿ ಸಿದ್ಧರಾಮರು ಅನೇಕ ಕೆರೆಗುಂಟೆಗಳನ್ನು ನಿರ್ಮಿಸಿ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಗುರುತರ ಬದಲಾವಣೆಗಳನ್ನು ತಂದರು. ಗೋಡೆಕೆರೆಯಲ್ಲಿ ಸ್ಥಿರ ಮತ್ತು ಚರ ಅಧ್ಯಕ್ಷರ ಪೀಠ, ದೊಣೆಗಂಗಾ ಕ್ಷೇತ್ರದಲ್ಲಿ ಸಿದ್ಧರಾಮರ ತಪೋವನ, ತಮ್ಮಡಿಹಳ್ಳಿಯಲ್ಲಿ ಸಿದ್ಧರಾಮರ ಕುರುಹುಗಳು, ಕೆಂಕೆರೆಯಲ್ಲಿ ಚನ್ನಬಸವಣ್ಣನವರು ಹಾಗೇಯೇ ಸಿದ್ಧರಾಮ ದೇವರಹಳ್ಳಿ, ಯಳನಡು, ಕಡೂರಿನ ಸೋಲೂರು, ಸೊಲ್ಲಾಪುರ ಇನ್ನೂ ಅನೇಕ ಕಡೆಗಳಲ್ಲಿ ತಮ್ಮ ಕಾಯಕ ವೃತ್ತಿಯನ್ನು ಮುಂದುವರೆಸಿ ಜನೋಪಯೋಗಿ ಕೆಸಲಗಳನ್ನು ಮಾಡುವ ಮೂಲಕ ಕಾಯಕದಲ್ಲಿಯೇ ಶಿವನನ್ನು ಕಾಣುವ ಮಾರ್ಗವನ್ನು ಸಾಮಾನ್ಯ ಜನರಿಗೆ ತೋರಿಸಿದರು.

ಶರಣ ವಿಚಾರಗಳು ವ್ಯಷ್ಠಿ ಮತ್ತು ಸಮಷ್ಠಿ ನೆಲೆಯಲ್ಲಿ ನಿರೂಪಿತಗೊಳ್ಳುತ್ತವೆ. ವಚನಗಳು ತಮ್ಮ ಕಾಯಕ ಜೀವನದಿಂದ ಬಂದಂತಹ ಅನುಭವ ಜನ್ಯವಾದವುಗಳು. ವಚನಗಳು ಬಾಹ್ಯವಿಧಾನದಲ್ಲಿ ಅವರು ಕಂಡುಕೊಂಡ ಅಂದಿನ ಬದುಕಿನ ವಿಧಿ–ವಿಧಾಗಳನ್ನೇ ಬಳಸಿರುವುದನ್ನು ಕಾಣಬಹುದು.

ವಚನಕಾರರು ಮೊದಲು ತಮ್ಮ ಬದುಕನ್ನು ಸುಧಾರಿಸಿಕೊಂಡು ನಂತರದಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಿಂದ ದೂರ ಉಳಿದಿದ್ದ ತಳಸಮುದಾಯಗಳಲ್ಲಿನ ವ್ಯಕ್ತಿಬದುಕಿನ ಕಡೆ ಗಮನ ಹರಿಸಿದರು. ಅರ್ಹತೆಗೆ ತಕ್ಕಂತೆ ವೃತ್ತಿ ನಿರ್ವಹಿಸುತ್ತಿದ್ದ ಕಾಯಕಯೋಗಿಗಳನ್ನು ಒಗ್ಗೂಡಿಸಿ ಅವರಲ್ಲಿ ವೃತ್ತಿಗೌರವ, ಸ್ವಾಭಿಮಾನ, ಕುಲಗೋತ್ರಗಳ ಬಗ್ಗೆ ಅಭಿಮಾನ ಮೂಡಿಸುವಂತೆ ಮಾಡಿದರು. ಸನಾತನ ಕಾಲದಿಂದಲೂ ಜಾತಿನಿಂದನೆ ಹಾಗೂ ಆರ್ಥಿಕ ಶೋಷಣೆಗೊಳಪಟ್ಟ ಜನಸಮುದಾಯಕ್ಕೆ ಇವು ಸ್ಫೂರ್ತಿದಾಯಕವಾದವು. ಈ ಕ್ರಾಂತಿಯಿಂದ ಜನರ ಮನದಲ್ಲಿ ವೈಚಾರಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳು ಹೊಸರೂಪು ಪಡೆದವು. ಈ ಕ್ಷೇತ್ರಗಳಲ್ಲಿ ಅನುಭವಗಳನ್ನು ವಚನಕಾರರು ತಮ್ಮ ವಚನಗಳಲ್ಲಿ ಘಂಟಾಘೋಷವಾಗಿ

ಬರೆಯತೊಡಗಿದರು. ಸಮಾನತೆಯ ಅಭಿವ್ಯಕ್ತಿ, ಸ್ವಾತಂತ್ರ್ಯದ ಪರಿಕಲ್ಪನೆ, ಸಮಾಜವಾದ, ಸಮತಾವಾದಗಳ ವಿಚಾರಗಳು ಸ್ಪಷ್ಟಗೊಂಡು ರಾಜಶಾಹಿ ಮತ್ತು ಪುರೋಹಿತಶಾಹಿ ಆಡಳಿತಗಳಿಂದ ಬೇಸತ್ತಿದ್ದ ಮನಸ್ಸುಗಳು ಅವಘಡಗಳ ವಿರುದ್ಧ ನೇರವಾಗಿ ಕ್ರಾಂತಿಗೆ ಕಾರಣವಾದವು.

"ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನಿಯೆ,
ಅಮೃತಗಣ ದೇವಗಣನರಿಯೆ,
ಕೂಡಲ ಸಂಗಮ ದೇವ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ" –3

ಬಸವಣ್ಣನವರ ಈ ವಚನದಲ್ಲಿ ರಾಜಾಶ್ರಯದಿಂದ ಹೊರಹೊಮ್ಮುತ್ತಿರುವ ಪಾಂಡಿತ್ಯ, ಪ್ರತಿಭೆಗಳನ್ನು ನಿರಾಕರಿಸಿ ಎಲ್ಲಾ ಜಾತಿ, ವರ್ಗಗಳು ಸಾಂಸ್ಕೃತಿಕ ಬದಲಾವಣೆಯಿಂದ ಪ್ರೇರಣೆಗೊಂಡು ಬದುಕಿನ ಶ್ರೇಷ್ಠತೆ ಕಡೆಗೆ ಗಮನ ಹರಿಸಿದವು. 'ಇಷ್ಟ ಲಿಂಗ ಗುರುವಿನ ಅಂಗು, ಚಿತ್ತ ಕಾಮನ ಅಂಗು....' ಈ ವಚನದಂತೆ ಸ್ವಾಭಿಮಾನಿಯಾಗಿ ಬದುಕುವ ರೀತಿಯನ್ನು ಮತ್ತು ವ್ಯಕ್ತಿಗತ ಬದುಕಿನ ಬದಲಾವಣೆಗಳನ್ನು ಕಾಣತೊಡಗಿದರು. ಯಾರ ಹಂಗಿಗೂ ಒಳಗಾಗದೆ. ತಮ್ಮ ಪ್ರತಿಭಾ ಶಕ್ತಿ ಬಳಸಿಕೊಂಡು ಸಮಾನತೆ ಜೀವನವನ್ನು ನಡೆಸಬೇಕೆಂಬುದು ಶರಣರ ಆಶಯವಾಗಿತ್ತು.

ಪ್ರಸ್ತುತ ವಚನವು ಬದುಕಿನ ಬಾಹ್ಯ ಜೀವನದಲ್ಲಿ ಅನುಸರಿಸಬೇಕಾದ ಮಾರ್ಗವನ್ನು, ಮನುಷ್ಯ ವಾಸಿಸುವ ಪರಿಸರ ಸಂಬಂಧಗಳನ್ನು ಸಂವಹಿಸುತ್ತದೆ.

" ಕಾಗೆ ಒಂದಗುಳ ಕಂಡೊಡೆ ಕರೆಯದೇ ತಮ್ಮ ಬಳಗವ ?
ಕೋಳಿ ಒಂದು ಕುಟುಕ ಕಂಡೊಡೆ ಕೂಗಿ ಕರೆಯದೇ ತನ್ನ ಕುಲವನೆಲ್ಲಾ ?
ಶೈವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ
ಕೂಡಲಸಂಗಮದೇವಾ." –4

ತನ್ನ ವೈಯಕ್ತಿಕವಾದ ನಿಲುವುಗಳನ್ನು ಹೇಳುತ್ತಾ, ಸಾಮಾಜಿಕ ಆಸ್ತಿ ತನ್ನೊಬ್ಬನ ಸ್ವತ್ತಲ್ಲ. ಸರ್ವ ಜನಾಂಗದ ಸ್ವತ್ತೆಂಬ ವಿಚಾರವನ್ನು ವೈಯಕ್ತಿಕ ನೆಲೆಯಿಂದ ಸಾರ್ವತ್ರೀಕರಣಗೊಳಿಸುತ್ತಾರೆ. ಇದು ವಚನಕಾರರ ಬಾಹ್ಯಮಾದರಿಯ ಜೀವನವನ್ನು ಹಾಗೂ ಅವರ ಮನಸ್ಸಿನ ಪರಿಶುದ್ಧಿಯನ್ನು

ಎತ್ತಿಹಿಡಿಯುತ್ತದೆ. ಶರಣರು ದೈವ ಮತ್ತು ಭಕ್ತಿ ಕೇಂದ್ರಿತವಾದ ನೆಲೆಯಲ್ಲಿ ಸಾಮಾಜಿಕ ಜೀವನವನ್ನು ನೋಡಲು ಪ್ರಯತ್ನಿಸುತ್ತಾರೆ.

ಶಿವಶರಣರು ಚಿಂತಿಸಿದ ಎಲ್ಲಾ ಸಾಂಸ್ಕೃತಿಕ ಅಂಶಗಳನ್ನು ಚರ್ಚಿಸುವುದು ಅಸಾಧ್ಯ, ಅನವಶ್ಯ ಕೂಡ. ಅವರು ನಮ್ಮ ಸಾಮೂಹಿಕ ಚಿಂತನೆಯಲ್ಲಿ ಆಗ ಇದ್ದ ಸಮಾಜದ ಸ್ವರೂಪಕ್ಕಿಂತ ಭಿನ್ನವಾದ ಪರ್ಯಾಯವೊಂದನ್ನು ಕುರಿತು ಚಿಂತಿಸಿದರು ಎಂಬುದಷ್ಟೇ ಇಲ್ಲಿ ಮುಖ್ಯವಾಗಿದೆ. ವಚನಕಾರರು ತಮಗೆ ಸವಾಲಾಗಿದ್ದ ಸನಾತನ ಮಾದರಿಯ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗೆ ಎಲ್ಲಾ ರೀತಿಯಿಂದಲೂ ಸಮರ್ಪಕವಾದ ಬದಲಾವಣೆತರಲು ಭಾವಿಸಿದ್ದು ನಿಜ. ಆಗಲೇ ಮಾನವ ಜೀವನವು ತೀರ ಸಂಕೀರ್ಣವಾದ ಸ್ವರೂಪವನ್ನು ಪಡೆದಿತ್ತು. ವಚನಕಾರರಿಗೆ ತಮ್ಮ ಮುಂದಿದ್ದ ಆ ಮಾದರಿಗೆ ಬದಲಾವಣೆ ತರಬೇಕೆಂಬ ನಿಟ್ಟಿನಲ್ಲಿ ಉದ್ದೇಶ ಪೂರ್ವಕವಾಗಿ ಒಂದು ಅಂಶದ ಜಾಗದಲ್ಲಿ ಮತ್ತೊಂದು ಅಂಶವನ್ನು ರೂಪಿಸುವ ಜರೂರು ಕಾಣಿಸಿರಬಹುದು. ತಮ್ಮ ಆರಾಧ್ಯ ದೈವದ ಆಯ್ಕೆಯಿಂದ ಹಿಡಿದು ತುಂಬಾ ಜಟಿಲವಾದ ತಾತ್ವಿಕತೆಯವರೆಗೆ ಅವರ ಚಿಂತನೆಗಳಿದ್ದವು. ಹಾಗಾಗಿ "ವರ್ಣ–ಜಾತಿಗಳ ಶ್ರೇಣಿಕೃತ ಸಮಾಜದ ಬದಲಿಗೆ ಸಮಾನತೆಯ ನೆಲೆಗಟ್ಟಿನ ಜಾತಿರಹಿತ ವ್ಯವಸ್ಥೆ, ದೇವಸ್ಥಾನದ ಬದಲಿಗೆ ಇಷ್ಟಲಿಂಗ; ಯಜ್ಞಗಳಂತಹ ಬದಲಿಗೆ ಅಸಲಿಯಾದ ಭಕ್ತಿ, ಜ್ಞಾನದ ಬದಲು ದಾಸೋಹ, ಸಂಸ್ಕೃತದ ಬದಲು ಕನ್ನಡ, ಮಂತ್ರಗಳ ಬದಲು ವಚನ, ಸ್ಮೃತಿ ಸಂಹಿತೆಯ ಬದಲು ಪಂಚಾಚಾರ, ಈ ಪರಿಕಲ್ಪನೆಗಳನ್ನು ನೋಡಬಹುದು." -5 ಕಲ್ಯಾಣಕ್ರಾಂತಿಯ ಸಮಯದಲ್ಲಿ ಜರುಗಿದ ವಿಚಾರಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ಗಮನ ಹರಿಸಿದಾಗ ಅಂದಿನ ಜನಜೀವನದಲ್ಲಿದ್ದ ರೂಢಿ ಮೂಲ ಸಂಪ್ರದಾಯಗಳನ್ನು ತಿರಸ್ಕರಿಸಿ, ವಿನೂತನವಾಗಿ ಕಟ್ಟಿಕೊಂಡ ಸತ್ಯಗಳನ್ನು ಅನುಸರಿಸ ತೊಡಗಿದರು. ಇವುಗಳು ಕ್ರಮೇಣ ಅಂತರ್ಗತ ಮತ್ತು ಬಾಹ್ಯ ಆಯಾಮಗಳಾಗಿ ತೆರೆದುಕೊಂಡವು.

ಕಲ್ಯಾಣಕ್ರಾಂತಿಯ ಸಾಂಸ್ಕೃತಿಕ ಘಟ್ಟಗಳು :

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಉಂಟಾದ ಸಾಂಸ್ಕೃತಿಕ ಪಲ್ಲಟವು ಜನಸಾಮಾನ್ಯರ ಮೇಲೆ ಅಗಾಧವಾದ ಸಾಂಸ್ಕೃತಿಕ ಪರಿಣಾಮ ಉಂಟುಮಾಡಿತ್ತು. ಕ್ರಾಂತಿಯ ಸಮಯದಲ್ಲಿ ಪಲ್ಲಟಗೊಳ್ಳುತ್ತಿದ್ದ ಸಂಸ್ಕೃತಿ ವಿಭಿನ್ನ ಮಾದರಿಯಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಧಾನ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಸಂಘರ್ಷದಿಂದ ಹೊಸ ಬಗೆಯ ಸಂಸ್ಕೃತಿಯ ಅನ್ವೇಷಣೆಗೆ

ಸಹಕಾರವಾಗುತ್ತದೆ. ಇವೆಲ್ಲವಕ್ಕೆ ಹಿನ್ನಲೆಯಾಗಿ ಮುಗಿದುಹೋಗಿ ಬರಿ ಪಳೆಯುಳಿಕೆಗಳಂತಾಗಿದ್ದ, ಜೈನ ಮತ್ತು ಬೌದ್ಧ ಸಂಸ್ಕೃತಿಗಳ ಪ್ರಾಚೀನತೆಯ ಅರಿವು ಕಲ್ಯಾಣದಲ್ಲಿ ಉಂಟಾದ ಕ್ರಾಂತಿಯ ಪರಿಣಾಮದಿಂದ ಅಕ್ಷರಸ್ಥ ಕಲಿತ ಸಮುದಾಯ ತಮ್ಮ ಮೂಲ ಸಂಸ್ಕೃತಿಯಿಂದ ಹೊಸ ಸಂಸ್ಕೃತಿಯ ಹುಟ್ಟುವಿಕೆಗೆ ಕಾರಣವಾಗುತ್ತದೆ. ಈ ಎಲ್ಲಾ ಧಾರ್ಮಿಕ ಸಂಸ್ಕೃತಿಗಳ ನಡುವೆ ಹಾಗು ಶೈವ ಸಂಸ್ಕೃತಿಯ ಕೆಲವಾರು ಅಂಶಗಳಿಂದ ಸ್ಥಾವರಗೊಳ್ಳತೊಡಗಿತು. ಕ್ರಿಯಾಶೀಲತೆ ಇಲ್ಲದ ಶೈವ ಸಂಸ್ಕೃತಿಯ ವಿಚಾರಗಳಿಂದ ಹೊರಬಂದ ಶ್ರಮಿಕ ವರ್ಗ ತನ್ನದೇ ಆದ ಕಾಯಕ ಆಧಾರಿತ ಶಿವ ಸಂಸ್ಕೃತಿಯ ಹುಟ್ಟುವಿಕೆಗೆ ಕಾರಣವಾಯಿತು. ಪ್ರಭುತ್ವಶಾಹಿ ಸಂಸ್ಕೃತಿಯಿಂದ ಶ್ರಮಿಕ ವರ್ಗ ಶೋಷಣೆಗೊಳಗಾದಾಗ ಇದರ ಬದಲಿ ವ್ಯವಸ್ಥೆಯಂತೆ ಮೂಡಿಬಂದದ್ದೆ ಈ 'ಶರಣ ಸಂಸ್ಕೃತಿ.'

ಶಿಷ್ಟ ಸಂಸ್ಕೃತಿ ಮತ್ತು ನೆಲಮೂಲ ಸಂಸ್ಕೃತಿ ಇವೆರಡರ ಸಂಸ್ಕೃತೀಕರಣದಿಂದ, ಶರಣ ಸಂಸ್ಕೃತಿ ಉಗಮವಾಗುತ್ತದೆ. ಶರಣರ ಜೀವನ ವಿಧಾನವನ್ನು ಗಮನಿಸಿದರೆ ಅವರ ಆಚಾರ-ವಿಚಾರ, ನಡೆ-ನುಡಿ, ವೇಷ-ಭೂಷಣ, ಪೂಜಾ ವಿಧಾನ, ಕಾಯಕಾಧಾರಿತ ಜೀವನ ನಿರ್ವಹಣೆ, ತಾವು ಕಂಡುಕೊಂಡ ದಾಸೋಹ ಪದ್ಧತಿ ಮುಂತಾದ ಅಂಶಗಳು ಹೊಸ ಬಗೆಯಲ್ಲಿ ಕಂಡು ಬರುತ್ತದೆ. ಇವುಗಳ ನೆಲೆಯನ್ನು ತಿಳಿಯುವ ಮೊದಲೇ ಸಂಸ್ಕೃತಿ ಎಂದರೇನು? ಎಂಬ ಪ್ರಶ್ನೆಗೆ ಹಲವು ವಿದ್ವಾಂಸರ ಹೇಳಿಕೆಗಳನ್ನು ಈ ರೀತಿ ಗ್ರಹಿಸಬಹುದಾಗಿದೆ. ತಾನಾಗಿ ಮೊದಲಿನಿಂದಲೇ ಇರುವುದು ಪ್ರಕೃತಿವಾದ. ಅದಕ್ಕೆ ಮಾನವ ಮೂಡಿಸಿರುವುದು ಸಂಸ್ಕೃತಿ ಎಂಬ ವ್ಯಾಖ್ಯೆಯನ್ನು ಪ್ರಾಯಶಃ ನಾವು ಸ್ವೀಕರಿಸಬಹುದೆನ್ನಿಸುತ್ತದೆ. ಮಾನವ ಶಾಸ್ತ್ರಜ್ಞರು ಮೊದಮೊದಲು 'Culture is what we are use and civilization is what we use' ಎಂಬ ವ್ಯಾಖ್ಯೆಯನ್ನು ನೀಡುತ್ತಿದ್ದರು. ಆದರೆ ಆ ನಂತರದ ಮಾನವ ಶಾಸ್ತ್ರಜ್ಞರು 'Man made part of the environment is culture' ಈ ಮಾನವ ನಿರ್ಮಿತ ಪರಿಸರದಲ್ಲಿ ಆತನು ಬಳಸುವ ವಸ್ತುಗಳಿಂದ ಹಿಡಿದು ಅವನು ನೆರವೇರಿಸುವ ವಿಧಿಗಳು ಮತ್ತು ಮೂಡುವ ಆಲೋಚನೆಗಳೆಲ್ಲಾ ಸೇರುತ್ತವೆ. ಹೀಗಾಗಿ ಈಗ ನಾಗರೀಕತೆ ಮತ್ತು ಸಂಸ್ಕೃತಿಗಳ ನಡುವಣ ಭಿನ್ನತೆ ನಿವಾರಣೆಯಾಗಿ ಮಾನವ ಶಾಸ್ತ್ರಜ್ಞರ ದೃಷ್ಟಿಯಲ್ಲಿ ಒಟ್ಟಾರೆ ಸಂಸ್ಕೃತಿಯೆಂದೇ ಎನಿಸಿಕೊಳ್ಳುತ್ತದೆ.

ನಮ್ಮ ಅಧ್ಯಯನದ ದೃಷ್ಟಿಯಿಂದ ಈ ಸಂಸ್ಕೃತಿಯನ್ನು ಸ್ಥೂಲವಾಗಿ ಎರಡು ಭಾಗ ಮಾಡಬಹುದು. ಜಡತ್ವ ಸಂಸ್ಕೃತಿ ಮತ್ತು ಚಲನಶೀಲ ಸಂಸ್ಕೃತಿ. ಜಡತ್ವ ಸಂಸ್ಕೃತಿಯಲ್ಲಿ

ಉನ್ನತವರ್ಗವರು ಮಾಡಿಕೊಂಡಂತಹ ಕೆಲವು ಕಟ್ಟುಪಾಡುಗಳು, ಅಂದರೆ ಸೃಷ್ಟಿ ಮಾಡಿಕೊಂಡ ವಸ್ತುಗಳು, ಸಲಕರಣೆಗಳು, ಉಪಕರಣಗಳು, ಬೌದ್ಧಿಕ ಅನುಕೂಲಗಳೆಲ್ಲ ಸೇರುತ್ತವೆ. ಚಲನಶೀಲ ಸಂಸ್ಕೃತಿಯಲ್ಲಿ ಶಿವಶರಣರು ಸಮಾಜದಲ್ಲಿ ಉಂಟುಮಾಡಿದ ಕ್ರಾಂತಿಯಫಲವಾಗಿ ಉಂಟಾದ ಮಹತ್ತರವಾದ ಬದಲಾವಣೆಗಳು ಅಂದರೆ ಮೂರ್ತ ವಿಚಾರಗಳು, ಅವುಗಳ ಬಾಹ್ಯ ರೂಪಗಳಾದ ಆಚರಣೆಗಳು ಸೇರಿ ಉಂಟಾದದ್ದು. ಮನುಷ್ಯರು ವಂಶಾನುಗತವಾದ ಕೆಲವು ವಿಶೇಷ ಲಕ್ಷಣ, ಶಕ್ತಿಗಳೊಡನೆ ಹುಟ್ಟುತ್ತಾರೆ. ಉದಾಹರಣೆಗೆ– ಭಾಷೆ, ಮನೆ ಕಟ್ಟುವುದು, ವಸ್ತ್ರಗಳ ಉಪಯೋಗ, ವ್ಯವಸಾಯ, ಸಂಪ್ರದಾಯಗಳು ಇತ್ಯಾದಿಗಳು ಇವು ಹುಟ್ಟಿನೊಡನೆ ವ್ಯಕ್ತಿಯಿಂದ ವ್ಯಕ್ತಿಗೆ ಹರಿಯುವುದಿಲ್ಲ. ಮನೆ ಕಟ್ಟುವುದನ್ನೆ ತೆಗೆದುಕೊಂಡರೆ ಹುಟ್ಟಿನೊಡನೆ ಸ್ವಭಾವ ಸಿದ್ಧವಾಗಿ ಬರುತ್ತದೆ. ಒಂದು ಸಾವಿರ ವರ್ಷಗಳ ಹಿಂದೆ, ಪಕ್ಷಿಗಳು ಹೇಗೆ ಗೂಡು ಕಟ್ಟಿಕೊಳ್ಳುತ್ತಿದ್ದವೋ ಹಾಗೇ ಈಗಲೂ ಗೂಡು ಕಟ್ಟುತ್ತವೆ. ಮನುಷ್ಯನು ತನ್ನ ಪರಿಸರದಿಂದ ಕಲಿತುಕೊಂಡು ಉತ್ತಮಗೊಳಿಸುತ್ತಾ ಹೋಗುತ್ತಾನೆ.

ಹೀಗೆ "ಹುಟ್ಟಿನಿಂದ ಬಾರದ ಮನುಷ್ಯ ತನ್ನ ಪರಿಸರದಿಂದ ಕಲಿತುಕೊಳ್ಳುವ ಭಾಷೆ, ಉಪಕರಣಗಳ ತಯಾರಿಕೆ, ಕೈಗಾರಿಕೆ, ಕಲೆ, ವಿಜ್ಞಾನ, ಕಾನೂನು, ಆಡಳಿತ, ನೀತಿ ಮತ್ತು ಧರ್ಮ– ಇತ್ಯಾದಿಗಳೆಲ್ಲವನ್ನು ಒಳಗೊಳ್ಳುತ್ತವೆ. ಸಂಸ್ಕೃತಿ, ಅದರಿಂದ ಸಂಸ್ಕೃತಿಯೆಂದರೆ ಒಂದು ಸಮಾಜದ ಜೀವನ ವಿಧಾನ ಅದರ ಆಚಾರ ವ್ಯವಹಾರಗಳು ಅದರ ಸಂಸ್ಥೆಗಳು, ಆಲೋಚನಾ ವಿಧಾನಗಳು, ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪ್ರಪಂಚವನ್ನು ಸ್ವತಂತ್ರವಾಗಿ ನೋಡಲಾರ. ಅವನ ಸಮಾಜದ ಆಲೋಚನಾ ವಿಧಾನಗಳು, ಆಚಾರ ವ್ಯವಹಾರಗಳು, ಸಂಪ್ರದಾಯಗಳು ಅವನ ದೃಷ್ಟಿಯನ್ನು ನಿಯಂತ್ರಿಸುತ್ತದೆ ಹಾಗೂ ಮಾರ್ಪಡಿಸುತ್ತದೆ."

ಈ ವಿವರಣೆಗಳು ಒಂದೊಂದು ಕಾಲಘಟ್ಟದಲ್ಲಿ ಸಂಭವಿಸುವ ಸಾಂಸ್ಕೃತಿಕ ಚರಿತ್ರೆಗಳು ವಿಭಿನ್ನವಾಗಿರುತ್ತವೆ. ಯಾವುದೇ ಒಂದು ಕಾರಣ ನಿಮಿತ್ತ ಮಾತ್ರವಾಗಿರಬಹುದು. ಮಧ್ಯಕಾಲೀನ ಇತಿಹಾಸದಲ್ಲಿ ನಡೆದ ಕ್ರಾಂತಿಯ ಸಂದರ್ಭದಲ್ಲಿ ಕ್ರಾಂತಿಯ ಶಿಶುವಾಗಿದ್ದ ಕಲಚೂರಿ ರಾಜನಾದ 2ನೇ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ ಬಸವಣ್ಣನವರು ಸಾಮಾಜಿಕ ವಲಯ ಮತ್ತು ಮನುಷ್ಯನ ಅಂತರಂಗ, ಬಹಿರಂಗಗಳ ಬದುಕನ್ನು ಹಸನಗೊಳ್ಳುವುದಕ್ಕೆ ಪ್ರಥಮ

ಆದ್ಯತೆಯನ್ನು ನೀಡಿದರು. ಜಡ್ಡುಗಟ್ಟಿದ ಸಮಾಜಕ್ಕೆ ಜಂಗಮಶೀಲ ಕ್ರಿಯಾಗುಣವನ್ನು ತುಂಬಲು ಪ್ರಯತ್ನಿಸಿದರು.

ಇದರ ಪರಿಣಾಮವಾಗಿ ಬಿಜ್ಜಳನ ಸಾಮ್ರಾಜ್ಯದಲ್ಲಿ ಹಲವು ಹೊಸ ಮಾರ್ಪಾಡುಗಳಾದವು. ಬಿಜ್ಜಳ ರಾಜನ ಹೆಸರು ಸುಪ್ರಸಿದ್ಧವಾಗತೊಡಗಿತು. ಜೊತೆಗೆ ಬಸವಣ್ಣನವರ ಸಮಾಜ ಸುಧಾರಣಾ ನೀತಿಯು ಬಹಳ ಜನಪ್ರಿಯವಾಯಿತು. ಪ್ರತಿಫಲವಾಗಿ ಹಲವು ರೂಪಧರಿಸಿದ ಹೊಸ ಸಂಸ್ಕೃತಿಗಳ ಉಗಮವಾಯಿತು. ಹೀಗೆ ರೂಪುಗೊಂಡ ಸಂಸ್ಕೃತಿಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

1. ಸ್ಥಾವರ ಸಂಸ್ಕೃತಿ (ಜಡತ್ವ ಸಂಸ್ಕೃತಿ)
2. ಜಂಗಮ ಸಂಸ್ಕೃತಿ (ಚಲನಶೀಲ ಸಂಸ್ಕೃತಿ)

ಸ್ಥಾವರ ಸಂಸ್ಕೃತಿಯೆಂದರೆ ಎಲ್ಲಾ ಕಾಲದಲ್ಲೂ ಇರುವಂತಹ ಬೌದ್ಧಿಕವಾದಂತಹ ವಸ್ತು ರೂಪವಾಗಿದೆ. ಈ ಸಂಸ್ಕೃತಿಯು ಮಾನವ ನಿರ್ಮಿತವಾದುದು. ಕಾಲಗತಿಸಿದಂತೆ ನಶಿಸಿದಂತೆ. ಉಳ್ಳವರ ಕೇಂದ್ರಬಿಂದುವಾದ ಈ ಸಂಸ್ಕೃತಿಯು ಸಾಮಾಜಿಕವಾಗಿ ವರ್ಗಗಳ ಸೃಷ್ಟಿಗೆ ಕಾರಣವಾಯಿತು. ದೇವಾಲಯ, ದೇವರು, ಜಾತ್ರೆ, ಹಬ್ಬ-ಹರಿದಿನ ಮುಂತಾದ ಸಾಂಸ್ಕೃತಿಕ ಬದುಕಿಗೆ ಪೂರಕವಾದದ್ದು ಸ್ಥಾವರ ಸಂಸ್ಕೃತಿ. ದೇವಸ್ಥಾನಗಳ ನಿರ್ಮಾಣ, ಜಿನ ಮಂದಿರಗಳು, ಮಠ ಮಾನ್ಯಗಳು, ದೀಪಮಾಲೆ ಮತ್ತು ಕೆರೆ, ದೇವರ ಶಾಲೆಗಳು ಮುಂತಾದವುಗಳನ್ನು ದಾನ-ದತ್ತಿಗಳ ಮೂಲಕ ಸ್ಥಾಪಿಸಿ ಶ್ರೀ-ಸಾಮಾನ್ಯನ ನಿರಂತರ ಬದುಕಿನಲ್ಲಿ ಹಾಸುಹೊಕ್ಕಾಗುವಂತೆ ಮಾಡಿದವು. ಒಂದು ಕಾಲದಲ್ಲಿ ದೇವಾಲಯಗಳನ್ನು ನಿರ್ಮಿಸುವುದು ಪ್ರತಿಷ್ಠೆಯ ಕೆಲಸವಾಗಿತ್ತು. ದೇವಾಲಯ ಹಾಗೂ ಅದರೊಳಗೆ ಸ್ಥಾವರಗೊಂಡ ಮೂರ್ತಿಗಳಿಗೆ ಪೂಜೆ ಪುನಸ್ಕಾರಗಳು, ವ್ರತಾಚರಣೆಗಳು, ವರ್ಗ ಸಾಂಕೇತಿಕತೆ ಮುಂತಾದವುಗಳು ಸಮಾಜದಲ್ಲಿ ಆಚರಣೆಯಲ್ಲಿರುವುದಕ್ಕೆ ಕಾರಣವಾದವು. ಹೀಗೆ ಸ್ಥಾವರ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಾ ಬಂದ ಪುರೋಹಿತ ಶಾಹಿ ವರ್ಗ ಮುಂದೆ ಪ್ರಭುತ್ವ ಶಾಹಿ ಸಂಸ್ಕೃತಿಯ ಬಿಂಬವಾಗಿ ತೋರಲ್ಪಟ್ಟಿತು. ಸಾಮಾನ್ಯನ ಬದುಕನ್ನು ಹಸನುಗೊಳಿಸಲು ಬಂದಂತಹ ಸ್ಥಾವರ ಸಂಸ್ಕೃತಿ ಮುಂದೆ ವರ್ಗಭೇದ ಮತ್ತು ಸಮಾಜದಲ್ಲಿ ಅಸಮಾನತೆಗೆ

ಕಾರಣವಾಯಿತು. ಇದನ್ನು ವಿರೋಧಿಸಿ ಬಂದ ಸಂಸ್ಕೃತಿಯೇ ಜಂಗಮ ಸಂಸ್ಕೃತಿ. ಸ್ಥಿರ ಶೀಲವಾದ ಅಳಿಸಿ ಗತಿಶೀಲವಾದ ಬದುಕು ಬೆಳೆಯುತ್ತದೆ.

ಜಂಗಮ ಸಂಸ್ಕೃತಿ:

ಯಾವಾಗಲೂ ಚಲನಶೀಲವಾದ ಬದುಕನ್ನು ಕಟ್ಟಿಕೊಳ್ಳುವುದು. ಹೀಗೆ ಚಲನಶೀಲವಾದ ಜಂಗಮ ಸಂಸ್ಕೃತಿಯು ಶರಣರು ತಮ್ಮ ಬದುಕಿನಲ್ಲಿ ಕಂಡುಕೊಂಡ ಹೊಸ ಅನ್ವೇಷಣೆಯಾಗಿದೆ. ಇದರಿಂದ ಸಾಮಾಜಿಕ ಬದುಕಿನಲ್ಲಿ ಸ್ಥಗಿತಗೊಂಡಿದ್ದ ಮತ್ತು ತಮ್ಮ ಬದುಕಿನಲ್ಲಿ ಉಪಯೋಗಕ್ಕೆ ಬರುವಂತಹ ಮೌಲ್ಯಗಳಿಗೆ ಪುನಃ ಚಾಲನೆ ನೀಡಿದರು. ಅದರ ಜೊತೆಗೆ ಸಾಮಾಜಿಕವಾಗಿ ಮೌಢ್ಯತೆಗಳನ್ನೊಳಗೊಂಡ ಅನೇಕ ಸಂಗತಿಗಳಿಗೆ ಬದಲಿ ವ್ಯವಸ್ಥೆ ರೂಪಿಸಿದರು.

ಸ್ಥಿರ ಸಮಾಜದಲ್ಲಿ ತುಂಬಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನವೆಂಬ ದೀವಿಗೆ ಹಿಡಿದು ಜಂಗಮ ಸಂಸ್ಕೃತಿ ಉಗಮವಾಯಿತು. ಜಡಸಂಸ್ಕೃತಿಯ ಜೊತೆಯಲ್ಲಿ ಹೊಂದಾಣಿಕೆಯನ್ನು ಬಯಸದೆ ಪ್ರತ್ಯೇಕವಾದ ಅಸ್ತಿತ್ವವನ್ನು ರೂಪಿಸಿಕೊಂಡು ಸಾಂಪ್ರದಾಯಿಕವಾಗಿ ಅನುಸರಿಸುತ್ತಾ ಬಂದಿದ್ದ ಜಟಿಲ ಸಂಪ್ರದಾಯಗಳನ್ನು ವಿರೋಧಿಸಿತ್ತು. ಇಲ್ಲಿಯ ಸ್ಥಾವರ ಸಂಸ್ಕೃತಿ ಮತ್ತು ಜಂಗಮ ಸಂಸ್ಕೃತಿಗಳ ವಿಚಾರಗಳನ್ನು ಅನೇಕ ಶಿವಶರಣರ ವಚನಗಳೊಂದಿಗೆ ಸ್ಪಷ್ಟಪಡಿಸಬಹುದು:

" ಉಳ್ಳವರು ಶಿವಾಲಯವ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ.
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ." -7

"ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ ?
ಎನ್ನೊಳಗಿದ್ದು ನಿನ್ನ ತೋರಲೇಕೆ ನಿನ್ನ ರೂಪವಾದೆ.

ಇನ್ನು ಜಂಗಮವೇ ಲಿಂಗವೆಂದು ನಂಬಿದೇ
ಕೂಡಲಸಂಗಮದೇವಾ." -8

"ಸ್ಥಾವರ ಪೂಜೆಯನ್ನು ನಿರಾಕರಿಸಿದ ಬಸವಣ್ಣನ ನಿಲುವಿನಲ್ಲಿ ಸಂಸ್ಥೀಕರಣಗೊಂಡಿದ್ದ ದೇವಾಲಯ ಮಠ ಮಾನ್ಯ ವರ್ಗವನ್ನು ವಿರೋಧಿಸುವ ದೃಷ್ಟಿಯಿದೆ. ಆದರೂ ಆ ವಿರೋಧ ಬಡವರನ್ನು ಸಮಾಧಾನ ಪಡಿಸಿ ಪರ್ಯಾಯವಾಗಿ ಮತ್ತೊಂದು ಕ್ರಿಯೆಯ ಕಡೆ ಅವರ ದೃಷ್ಟಿಯನ್ನು ಹರಿಸುತ್ತಾ ಅದಕ್ಕಿಂತ ಇದು ಉನ್ನತವಾದುದು ಎಂಬುದನ್ನು ಒತ್ತಿ ಹೇಳುವುದಾಗಿದೆ." -9 ಇಲ್ಲಿ ಉಳ್ಳವರು ಶಿವಾಲಯ ಮಾಡುವುದನ್ನು ಬಸವಣ್ಣ ಕಟುವಾಗಿ ಪ್ರಶ್ನಿಸುತ್ತಿಲ್ಲ, ನಿರಾಕರಿಸುತ್ತಿಲ್ಲ, ಬದಲಾಗಿ ಉಳ್ಳವರು ಮಾಡುತ್ತಾರೆ. ನಾನು ಬಡವ ಮಾಡಲಾರೆ ಎಂಬ ವ್ಯಂಗ್ಯ ಸ್ಥಿತಿಯಲ್ಲಿ ವಚನದ ದನಿ ತಗ್ಗುತ್ತದೆ. ಮುಂದೆ ಅದೇ ದನಿ ತೆಗೆದುಕೊಳ್ಳುವ ದೇಹವನ್ನೇ ದೇವಾಲಯವಾಗಿಸಿರುವ, ಜಡವನ್ನು ಜಂಗಮವಾಗಿಸಿರುವ, ಕಾಯವನ್ನು ಕಾಯಕವಾಗಿಸಿರುವ, ವ್ಯಕ್ತಿ ಸಾಧನದ ಮೂಲದ ಕಡೆಗೆ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಸಾಲಿನಲ್ಲಿ ಪ್ರಗತಿಪರ ಆಶಯದ ಸಮಷ್ಟಿ ಚಿಂತನೆ ವ್ಯಂಜಿತವಾಗುತ್ತದೆ. ಅದನ್ನು ಓದುತ್ತಾ ಕಂಡುಕೊಳ್ಳಬೇಕಾಗುತ್ತದೆ." -10 ಹಾಗೆಯೇ ಬಡವ ಎನ್ನುವ ಪದ್ಯುಅಂದಿನ ಸಮಾಜದಲ್ಲಿದ್ದ ದಲಿತ ಮತ್ತು ಹಿಂದುಳಿದ ತಳ ಸಮುದಾಯಗಳ ವ್ಯಕ್ತಿಗಳ ಸ್ಥಾನದಲ್ಲಿ ನಿಂತು ಬಸವಣ್ಣನವರು ಹೇಳುವ ಮಾತಾಗಿದೆ. ಇಡೀ ದೇಹದ ಅಂಗಾಂಗಳನನ್ನು ದೇವಾಲಯಕ್ಕೆ ಹೋಲಿಸಿಕೊಳ್ಳುವುದು ಜಂಗಮ ಸಂಸ್ಕೃತಿಯನ್ನು ಉನ್ನತೀಕರಿಸಿದರೂ ಪ್ರಧಾನವಾಗಿ ದೇವರು ಉಳ್ಳವರಿಗೆ ಮಾತ್ರವೆಂದು ನಂಬಿ ಪುರೋಹಿತ ಶಾಹಿಯ ದೌರ್ಜನ್ಯಕ್ಕೆ ತುತ್ತಾಗಿ ಅಸ್ಥಿತ್ವದಲ್ಲಿದ್ದ ಮೂಢನಂಬಿಕೆಗಳನ್ನು ಆಚರಿಸುತ್ತಾ ಬಂದಿದ್ದ ಕೆಳ ಸಮುದಾಯದ ಜನತೆಯ ಮನದಲ್ಲಿ ತಮ್ಮ ಆತ್ಮದಲ್ಲೇ ಇರುವ ದೇವರನ್ನು ಜ್ಞಾನವೆಂಬ ಕಣ್ಣಿನಿಂದ ನೋಡುವಂತೆ ಮಾಡಿತು. ಒಂದು ಕಾಲಘಟ್ಟದಲ್ಲಿ ದೇವಾಲಯಗಳು ಮಾನವನ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿ ಧಾರ್ಮಿಕ ಮೂಲವಾದ ಮನಸ್ಸುಗಳನ್ನು ನಿಯಂತ್ರಿಸುವ ಸಾಧನಗಳಂತೆ ಇದ್ದವು.

ಒಂದು ವ್ಯವಸ್ಥೆಯ ಪರವಾಗಿ ಶಿಷ್ಟಸಂಸ್ಕೃತಿಯನ್ನು ಬಿಂಬಿಸಿ, ಶ್ರಮಮೂಲ ಸಂಸ್ಕೃತಿಯನ್ನು ತಮ್ಮ ಹಿತಾಸಕ್ತಿಗೆ ಬೇಕಾದ ರೀತಿಯಲ್ಲಿ ಬಳಸುವುದು ವಾಡಿಕೆಯಾಯಿತೆಂದು ತಿಳಿದು ಬರುತ್ತದೆ. ಇದರ ಪ್ರತಿಫಲಿತವಾಗಿ ಶರಣ ಚಳುವಳಿಯು "ಪರಂಪರಾಗತವಾಗಿ ಜನರ ಬದುಕಿನೊಂದಿಗೆ ಬೆಸೆದುಕೊಂಡು ಬಂದ ದೇವಸ್ಥಾನವೆಂಬ ಸಂಸ್ಥೆಯನ್ನು, ನಿಜವಾದ ದೈವ

ಭಕ್ತರೂ, ಧರ್ಮಶ್ರದ್ಧೆಯುಳ್ಳವರೂ ಆದ ಈ ಶಿವಶರಣರು ಮೊಟ್ಟಮೊದಲು ವೈಚಾರಿಕ ಚಿಕಿತ್ಸೆಗೆ ಒಳಪಡಿಸಿ ಅದನ್ನು ಆಧ್ಯಾತ್ಮಿಕ ನೆಲೆಯಲ್ಲಿ ಪುನರ್ ವ್ಯಾಖ್ಯಾನಿಸಿದ ರೀತಿ ಭಾರತೀಯ ಧಾರ್ಮಿಕ ಇತಿಹಾಸದಲ್ಲಿಯೇ ಒಂದು ದಿಟ್ಟ ಹೆಜ್ಜೆಯಾಗಿದೆ. ಒಂದು ರೀತಿಯಲ್ಲಿ ಇದು ನೋಟಕ್ಕೆ ದೇವರನ್ನು, ಧರ್ಮವನ್ನು ಒಪ್ಪಿಕೊಂಡು 'ದೇವಸ್ಥಾನ' ವನ್ನು ನಿರಾಕರಿಸುವ ನಿಲುವಿನಂತೆ ತೋರಿದರೂ ಮೂಲತಃ 'ದೇವಾಲಯ' ದ ಕಲ್ಪನೆಯನ್ನು ಈ ಶರಣ ಧರ್ಮ ತಾನು ಕಟ್ಟಿದ ಹೊಸ ಧರ್ಮದ ತಾತ್ವಿಕ ನೆಲೆಯಲ್ಲಿ ಪುನರಚನೆಗೊಳಿಸಿದ ಕ್ರಮ ಅತ್ಯಂತ ವೈಚಾರಿಕವಾಗಿದೆ ಹಾಗೂ ಅದರ ಸಾಮಾಜಿಕ ಕ್ರಾಂತಿಯ ಆಶಯಕ್ಕೆ ಉಚಿತವಾದುದಾಗಿದೆ." -11 ಸ್ಥಾವರಗೊಂಡ ದೇವಾಲಯವನ್ನು ನಿರಾಕರಿಸಿ ಒಂದು ಕಾಲದಲ್ಲಿ ಮಾನವನ ದೇಹವನ್ನು ನಿರ್ಲಕ್ಷಿಸಿದ ಧಾರ್ಮಿಕ ಮೂಲಭೂತವಾದಿಗಳಲ್ಲಿ ವೈಚಾರಿಕತೆಯನ್ನು ಮೂಡಿಸುವುದು ಹಾಗೂ (ಜನಸಾಮಾನ್ಯನ) ಕಟ್ಟಕಡೆಯ ಮನುಷ್ಯನ ಸಾಮಾಜಿಕ ಶೋಷಣೆಯನ್ನು ತಪ್ಪಿಸುವುದು.

ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ತಮ್ಮ ಸ್ವಂತ ನೆಲೆಯಲ್ಲಿಯೇ 'ದೇವರು', 'ದೇವಾಲಯ' ತನ್ನನ್ನು ಸೃಷ್ಟಿಸುವುದು ಹೇಗೆಂಬ ಪರಿಕಲ್ಪನೆಯನ್ನು ಅವರ ವೈಯಕ್ತಿಕ ನೆಲೆಯಲ್ಲಿ ಭಾವಿಸುವ ಹೊಸ ತನವನ್ನು ರೂಪಿಸಿದರು. ಭೌತಿಕವಾದ ದೇವಾಲಯ ಸಂಸ್ಕೃತಿಯ ಬದಲಾಗಿ ಮನುಷ್ಯ ದೇಹ ದೇಗುಲವಾಗುವ ವಿಶಿಷ್ಟ ಪರಿಭಾಷೆಯನ್ನು ಬಳಸುತ್ತಾ ಪ್ರಾಯೋಗಿಕವಾಗಿ ಜಾರಿಗೊಳಿಸಿದರು.

12ನೇ ಶತಮಾನದ ವಚನಕಾರರ ಗುರಿಗಳಲ್ಲಿ ಒಂದಾದ ದೈವಾರಾಧನಾ ಕ್ರಮ ಬದಲಾವಣೆಯೇ ಆಗಿದೆ ವಿನಃ ದೇವನಿರಾಕರಣೆಯಲ್ಲ. ಸನಾತನಿಗಳು ದೈವವನ್ನು ಗೋಡೆಗಳ ನಡುವೆ ಬಂಧಿಮಾಡಿ ದೈವದ ಹೆಸರಿನಲ್ಲಿ ಹೊಟ್ಟೆಹೊರೆಯುವುದನ್ನು ನೇರವಾಗಿ ವಿರೋಧಿಸಿದರು ಸ್ಥಾವರ ನಿರ್ಮಾಣಗಳ ಹಿಂದೆ ಶೋಷಣೆಯೂ ಪ್ರಧಾನ ಭೂಮಿಕೆಯಾಗಿ ವಚನಕಾರರಿಗೆ ಕಂಡಿತು ಆಕಾರ ಸ್ವರೂಪಿ ದೈವವನ್ನು ತ್ಯಜಿಸಿ ನಿರಾಕಾರ ದೈವವನ್ನು ಪ್ರತಿಪಾದಿಸುತ್ತಾರೆ. ಆಕಾರವೇ ಇಲ್ಲದ ದೈವವನ್ನು ಸ್ಥಾವರ ಮಾಡಲು ಸಾಧ್ಯವೇ? ಅದಕ್ಕಾಗಿ ಅಲ್ಲಮ ಪ್ರಭು ತನ್ನ ಒಂದು ವಚನದಲ್ಲಿ ಈ ರೀತಿ ಹೇಳುತ್ತಾನೆ:

"ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದೆಡೆ, ದೇವರೆತ್ತ ಹೋದರೂ?

ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರ". -12

ಪ್ರತಿಷ್ಠೆಗೊ, ಶೋಷಣೆಗೊ ಹಾಗೂ ಹೆಮ್ಮೆಗೊ ಅಹಂಕಾರದಿಂದ ಮಾಡಿದ ಈ ಸ್ಥಾವರಗಳು ಶಾಶ್ವತವಲ್ಲ, ಕಾಲ ಬದಲಾದಂತೆ ಜನರಲ್ಲಿ ಪ್ರಜ್ಞೆ ಮೂಡಿ ಬಂಡಾಯವೇಳುತ್ತಾರೆ,

ಇದಕ್ಕೆ ಚರಿತ್ರೆಯಲ್ಲಿ ಹಲವು ನಿದರ್ಶನ ಕಂಡುಬಂದಿದ್ದು, ಅವು ಜನಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿ ಕಾಣಬರುತ್ತದೆ. "ದೇವಸ್ಥಾನ ನಿರ್ಮಾಣದ ವಿಷಯದಲ್ಲಿ ಹೆಚ್ಚು ಹುರುಪು ಉತ್ಸಾಹಗಳು ಗೋಚರವಾಗುವುದು. 8 ಅಥವಾ 9 ನೆಯ ಶತಮಾನದ ಬಳಿಕ ಈ ಉತ್ಸಾಹವು ಒಂದು ರೀತಿಯ ವೀರವ್ರತವಾಗಿಯೂ ಪರಿಣಮಿಸಿರುವುದುಂಟು, ಶ್ರೀಮಂತನಲ್ಲದ ಒಬ್ಬ ವ್ಯಕ್ತಿಗೆ ದೇವಸ್ಥಾನವನ್ನು ಕಟ್ಟಿಸಬೇಕೆಂಬ ಬಯಕೆ ಮೂಡಿದರೆ, ಆತ ಬಹು ಸಹಜವಾಗಿಯೂ ವೀರ ಪ್ರತಿಜ್ಞೆಯನ್ನು ಕೈಗೊಂಡವನಂತೆ ಕಾರ್ಯಶೀಲನಾಗಬೇಕಾಗುತ್ತದೆ. ಇದಕ್ಕೆ ಕೆಲವು ನಿದರ್ಶನಗಳನ್ನು ಕೊಡಬಹುದು. ಕುಂಬಾರ ಜಾತಿಯ ಬಮ್ಮಣ್ಣ ಎಂಬಾತನು, ತಲೆಯನ್ನು ತೊಳೆಯದ ಅನ್ನವುಣ್ಣದ, 'ವೀರವ್ರತ' ವನ್ನು ಕೈಗೊಂಡು ಕುಂಬೇಶ್ವರ ದೇವರನ್ನು ಪ್ರತಿಷ್ಠಾಪಿಸಿದ. ವಿಷಯವನ್ನು ಶಾಸನ ತಿಳಿಸುತ್ತದೆ. ಲಿಂಗ, ಶಿವ, ಜೀವ ಎಂಬುವರು ಭಿಕ್ಷಾವೃತ್ತಿಯಿಂದ ಹಣವನ್ನು ಸಂಪಾದಿಸಿ ಜಟಿಂಗ ರಾಮೇಶ್ವರದಲ್ಲಿದ್ದ ಇಟ್ಟಿಗೆಯ ರಾಮೇಶ್ವರ ದೇವಸ್ಥಾನವನ್ನು ಕೆಡವಿಸಿ ಅದನ್ನು ಶಿಲೆಯಲ್ಲಿ ಕಟ್ಟಿಸಿ ಕಳಶವನ್ನು ಇಡಿಸುವುದಲ್ಲದೇ, ಇನ್ನು ಅನೇಕ ದೇವಸ್ಥಾನಗಳನ್ನು ಕಲ್ಯಾಣಿ ಕಟ್ಟಿಸಿದ ಸಂಗತಿ ಶಾಸನವೊಂದರಲ್ಲಿ ದೊರಕಿದೆ. ಶ್ರೀಮಂತರ ಮನೆಗಳಲ್ಲಿದ್ದ ಅಡಿಗೆಯವರು, ದೇವಸ್ಥಾನಲ್ಲಿದ್ದ ಪೂಜಾರಿಗಳು, ದೇವಸ್ಥಾನಗಳನ್ನು ಕಟ್ಟಿಸಿದರೆಂದ ಮೇಲೆ ಪ್ರಾಚೀನ ಕನ್ನಡಿಗರಿಗೆ ದೇವಸ್ಥಾನ ನಿರ್ಮಾಣದ ವಿಷಯದಲ್ಲಿ ಶ್ರದ್ಧೆ ನಿಷ್ಠೆಗಳಿಗೆ ಹೆಚ್ಚು ಪ್ರಮಾಣಗಳು ಬೇಕಿಲ್ಲ.

ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಬೇರೆ ಬೇರೆ ಕಡೆ ಹತ್ತಾರು ದೇವಸ್ಥಾನಗಳನ್ನು ಕಟ್ಟಿಸಿ ಕೀರ್ತಿವಂತನಾದ ನಿದರ್ಶನಗಳು ಸಿಗುತ್ತವೆ. 'ಭಾವನಾ ಗಂಧಧಾರಣ' ಎಂಬ ಬಿರುದಿನ ಸಾಮಂತನೊಬ್ಬನು ಕಲ್ಯಾಣದಲ್ಲಿ ತುಂಬೇಶ್ವರ ದೇವಸ್ಥಾನ ಮಠ, ದೀಪ ಮಾಲೆ ಮತ್ತು ಕೆರೆ, ಅಣ್ಣಿಗೇರೆಯಲ್ಲಿ ಚೋಳಗೊಂಡ ತ್ರೈ ಪುರುಷ ದೇವರ ಶಾಲೆ ಮುಳಗೊಂದದಲ್ಲಿ ಶ್ರೀ ಪಾಳೇಶ್ವರ ಮಠ, ಮುಂಡಲಗೆರೆಯಲ್ಲಿ ಶಂಭುನಾರಾಯಣ ದೇವಸ್ಥಾನ, ಬೆಳಗುಲಿ ಕಪಿಲ ತೀರ್ಥದಲ್ಲಿ ಕೇತೇಶ್ವರ, ನವಿಲೆಯ ಜಟ್ಟೆಯ ಶಂಕರ ದೇವಾಲಯ, ನಂದವಾಡಿಯಲ್ಲಿ ಶ್ರೀ ನಾಗಾಲೇಶ್ವರ ಮತ್ತು ಮಠ ಪೆರೂರಲ್ಲಿ ಕೇತೇಶ್ವರ ಇದೇ ಮೊದಲಾವುದವನ್ನು ಕಟ್ಟಿಸಿದ್ದಲ್ಲದೇ ಪನಗುಂದದ ತ್ರಿಭುವನ ಜೀನಾಲಯ, ಮಹಾಶ್ರೀಮಂತ ಬಸದಿ, ಪೂಜಾಗೂರಿನ ವೀರ ಜಿನಾಲಯ, ಕುಂದರಗೆಯ ಜಿನ

ಮಂದಿರಗಳನ್ನು ಹೊಸತು ಮಾಡಿಸುತ್ತಾನೆ. (ಹೊಸದಾಗಿ) ಇಷ್ಟು ಸಾಲದೆಂಬಂತೆ ಸಂಗವದ ಎಂದರೆ ಬಹುಶಃ ಕೂಡಲ ಸಂಗಮೇಶ್ವರ ದೇವರಿಗೆ ದತ್ತಿಗಳನ್ನು ಬಿಡುತ್ತಾನೆ." -13 ಶ್ರೀ ಸಾಮಾನ್ಯನ ನಿರಂತರ ಸಾಂಸ್ಕೃತಿಕ ಬದುಕಿನಲ್ಲಿ ದೇವಾಲಯ ಸಂಸ್ಕೃತಿಯು ಹಾಸು ಹೊಕ್ಕಾಗಿದ್ದು, ಒಂದು ಕಾಲದಲ್ಲಿ ದೇವಾಲಯವನ್ನು ನಿರ್ಮಿಸುವುದು ತಮ್ಮ ಪ್ರತಿಷ್ಠೆಯ ಸಂಕೇತವೆನಿಸಿತ್ತಲ್ಲದೇ, ಯಾವುದೇ ಒಂದು ವರ್ಗದ ಸಾಂಕೇತಿಕ, ಸಾಂಸ್ಕೃತಿಕ ಮೆರುಗನ್ನು ಸೂಚಿಸುವ ತಾಣವಾಗಿರುತ್ತಿತ್ತು. ಇನ್ನುಳಿದ ವರ್ಗಗಳ ಹಿತಾಸಕ್ತಿಯನ್ನು ಕಡೆಗಣಿಸುವ ಕೇಂದ್ರಬಿಂದುಗಳಂತೆ ಮುಂದೆ ಕಾಣ ತೊಡಗಿದವು. ಈ ನಿಟ್ಟಿನಲ್ಲಿ ದೇವಾಲಯ ಪರಂಪರೆಯು ಸ್ಥಾವರ ಸಂಸ್ಕೃತಿಯನ್ನು (stagent culture) ಪ್ರತಿಪಾದಿಸುವತ್ತ ಹೊರಡುತ್ತದೆ. ದೇವಾಲಯಗಳು ಅಂದು ತಮ್ಮ ಮೂಲ ಆಶಯಗಳನ್ನು ಮರೆತು ಪ್ರಭುತ್ವ ಸಂಸ್ಕೃತಿಯ ಬಿಂಬವಾಗಿ ತೋರಲ್ಪಡುತ್ತದೆ. ಆದಕಾರಣ ದೇವಾಲಯ ಹಾಗೂ ಅದರೊಳಗೆ ಸ್ಥಾವರಗೊಂಡ ಮೂರ್ತಿಗಳಿಂದ ಸಾಮಾಜಿಕವಾಗಿ ಆಗುವ ಪರಿಣಾಮಗಳನ್ನು ಶರಣರು ಮೇಲ್ಕಂಡ ವಚನಗಳಲ್ಲಿ ಪ್ರತಿಪಾದಿಸುತ್ತಾರೆ. ಅದಕ್ಕೆ ಪರ್ಯಾಯ ಚಿಂತನೆ ನಡೆಸುತ್ತಾ ಸಂಸ್ಕೃತಿಯು ಸಾಮಾನ್ಯನ ಬದುಕನ್ನು ಹಸನುಗೊಳಿಸುವಂತಾದಾಗ ಮಾತ್ರ ಅದನ್ನು ಕ್ರಿಯಾಶೀಲಗೊಳಿಸಬೇಕೆಂದು ಪ್ರತಿಪಾದಿಸಿದರು.

ಅಕ್ಕಮಹಾದೇವಿ ತನ್ನ ದೈವವನ್ನು ಆರಾಧಿಸಿದ್ದು, ಹುಡುಕಿದ್ದು ದೇವಾಲಯಗಳಲ್ಲ ನಿಸರ್ಗದಲ್ಲಿ ಅದಕ್ಕೆ ಸಾಕ್ಷಿಯೆಂಬಂತೆ.

'ಚಿಲಿಮಿಲಿ ಎಂದು ಒದುವ ಗಿಳಿಗಳಿರಾ,
ನೀವುಕಾಣಿರೆ, ನೀವುಕಾಣಿರೆ.
ಸರವೆತ್ತಿ ಪಾಡುವ ಕೋಗಿಲೆಗಳಿರಾ,
ನೀವುಕಾಣಿರೆ, ನೀವುಕಾಣಿರೆ.
ಎರಗಿಬಂದಾಡುವ, ತುಂಬಿಗಳಿರಾ.
ನೀವುಕಾಣಿರೆ, ನೀವುಕಾಣಿರೆ.
ಕೊಳನತಡಿಯೊಳಾಡುವ ಹಂಸಗಳಿರಾ,
ನೀವುಕಾಣಿರೆ, ನೀವುಕಾಣಿರೆ.
ಗಿರಿ ಗಹ್ವರಗೊಳಾಡುವ ನವಿಲುಗಳಿರಾ,
ನೀವುಕಾಣಿರೆ, ನೀವುಕಾಣಿರೆ, ಚನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ."-14

ಪ್ರಕೃತಿಯ ಭಾಗವಾದ ಗಿಳಿಗಳ ಚಿಲಿಮಿಲಿಯಲ್ಲಿ, ಕೋಗಿಲೆಯ ಹಾಡಿನಲಿ, ದುಂಭಿಯ ಝೇಂಕಾರದಲ್ಲಿ, ಹಂಸಗಳ ಆಟಗಳಲ್ಲಿ, ನವಿಲಿನ ನರ್ತನದಲ್ಲಿ, ದೈವವನು ಹುಡುಕುತ್ತಾಳೆ.

ಸಾಮಾಜಿಕ ವ್ಯವಸ್ಥೆಯ ಜಿಡ್ಡಿಗೆ ಸಂಕ್ರಮಣತೆಯನ್ನು ತರಲು ಸ್ಥಾವರವ ಅಲ್ಲಗೆಳೆದು, ಅಪವಿತ್ರವೆಂದು ದೂರವಿರಿಸಿದ್ದ ದೇಹಕ್ಕೆ ದೇವಾಲಯವನ್ನು ಸ್ಥಳಾಂತರಿಸಿದರು. ಇದಕ್ಕೆ ಪೂರಕವೆಂಬಂತೆ ಅಲ್ಲಮನ ವಚನ ಸಾಕ್ಷಿಯಾಗುತ್ತದೆ: "ಕಾಲೇ ಕಂಭಗಳಾದವೆನ್ನ ದೇಹವೇ ದೇಗುಲವಾಯಿತಯ್ಯ! ನನ್ನ ನಾಲಿಗೆಯೆ ಘಂಟೆ, ಶಿರ ಸುವರ್ಣದ ಕಳಶ-ಇದೇನಯ್ಯ ".. -15 ಎನ್ನುವ ಅಲ್ಲಮನು ಸ್ಥಾವರದ ಘಂಟೆ ನಾಲಿಗೆಯಾಗಬೇಕೆಂದು ಬಯಸುತ್ತಾರೆ. ಸಮಾಜಕ್ಕೆ ನಾಲಿಗೆಯಿಂದ ಬರುವ ವೈಚಾರಿಕವಾದ ಚಲನಶೀಲವಾದ ಶಬ್ಧ ಬೇಕೆ ವಿನಃ ಘಂಟೆಯ ಢಣ-ಢಣ ಶಬ್ಧವಲ್ಲ ಎಂದು ಜಂಗಮತತ್ವವನ್ನು ಪ್ರತಿಪಾದಿಸುತ್ತಾರೆ

"ಮರ್ತ್ಯ ಲೋಕದ ಮಾನವರು
ದೇಗುಲದಳೊಂದು ದೇಗುಲವ ಮಾಡಿದಡೆ ಆನು ಬೆರೆಗಾದನಯ್ಯ
ನಿಚ್ಚಕ್ಕೆ ನಿಚ್ಚ ಅರ್ಚನೆಯ ಪೂಜೆಯ ಮಾಡಿಸಿ
ಭೋಗವ ಮಾಡುವರ ಕಂಡು ನಾನು ಬೆರೆಗಾದೆನು
ಗುಹೇಶ್ವರ, ನಿಮ್ಮ ಶರಣರ ಹಿಂದೆ ಲಿಂಗವರಿಸಿ ಹೋದರು"...16

ಸ್ಥಾವರಗಳ ನಿರ್ಮಾಣಗಳ ಹಿಂದೆ ಅಧಿಕಾರಶಾಹಿ ಮತ್ತು ಪುರೋಹಿತಶಾಹಿ ವರ್ಗವಿದ್ದುದ್ದನ್ನು ಕಂಡು ವಚನಕಾರರು ಬೆರೆಗಾದರು. ಏಕಕಾಲಕ್ಕೆ ವಚನಕಾರರಿಗೆ ಎರಡು ವರ್ಗಗಳನ್ನು ಎದುರಿಸಿ ಜಂಗಮತ್ವವನ್ನು ಪ್ರತಿಪಾಧಿಸಬೇಕಾಯಿತು. ಭಕ್ತಿ ಇಲ್ಲದೆ ಭೋಗ ಮಾಡುವರನ್ನು ಬದಲಿಸಿ, ಭಕ್ತಿಯ ದೃಢತೆ, ಹಾಗೂ ಶಿವ ಸ್ವರೂಪದ ಕಡೆಗೆ ಎಳೆಯಬೇಕಾಯಿತು. ಇಂತಹ ಪರಿಪೂರ್ಣ ಕ್ರಾಂತಿಯನ್ನು ವಚನಕಾರರು ನಿರ್ವಹಿಸಿ ಯಶಸ್ವಿಯಾದರು.

" ದೇಹದೊಳಗೆ ದೇವಾಲಯವಿದ್ದು
ಮತ್ತೆ ಬೇರೆ ದೇವಾಲಯವೇಕೆ?

ಎರಡಕ್ಕೆ ಹೇಳಿಲ್ಲವಯ್ಯ! ಗುಹೇಶ್ವರ ಕಲ್ಲಾದರೆ ನಾನೇನಪ್ಪೆನು? -17

ದೇಹದ ಒಳಗಿನ ದೇವಾಲಯ ಹೃದಯ, ಹೃದಯವೇ ದೇವಾಲಯವಾದಮೇಲೆ ದೇವರಿಗೆ ಸ್ಥಾವರವೇಕೆ? ದೇವರೇ ಕಲ್ಲಾದರೆ ಯಾರಿಗೆ ದೂರಲಿ. ದೇವರಿಗೆ ಕಲ್ಲಿನ ಸ್ವರೂಪ ಕೊಟ್ಟ ಪುರೋಹಿತ ಪ್ರಜ್ಞೆಯನ್ನ ಅಲ್ಲಮ ಪ್ರಭು ಪ್ರಶ್ನಿಸಿದ್ದಾರೆ.

'ಸಕಲ ಪ್ರಾಣಿಗಳಲ್ಲಿ ಲೇಸ ಬಯಸುವ'... ಮಾನವೀಯ ಸಂಬಂಧಗಳು, ಸಹಜತೆಯ ನಡೆ-ನುಡಿಗಳಲ್ಲಿ ಒಂದಾದ ಜೀವನ ಕ್ರಮವನ್ನು ಅನುಸರಿಸುವಂತೆ ಸಾಂಸ್ಕೃತಿಕ ಕ್ರಾಂತಿಯನ್ನು ರೂಪಿಸಿದ್ದು 'ಕಲ್ಯಾಣಕ್ರಾಂತಿ' ಯ ವಿಶಿಷ್ಟತೆಯಾಗಿದೆ. ವೀರಶೈವ ಧರ್ಮದ ಶಿವನ ಕಲ್ಪನೆ ತೀರ ವಿಭಿನ್ನವಾಗಿದೆ. ಶಿವನಿಗೆ ನಿರಾಭರಣ ಸುಂದರ ಅಥವಾ ಬುಡಕಟ್ಟನ್ನು ಪ್ರತಿಪಾದಿಸುವ ವೇಷಭೂಷಣಧಾರಿಯಾದ ಶಿವನ ಆರಾಧಕರಾಗಿ ಶಿವತತ್ವ ಸಂಸ್ಕೃತಿಯನ್ನು ಶರಣ-ಶರಣೆಯರು ಪ್ರತಿಪಾದಿಸುತ್ತಾರೆ. ಲಿಂಗ ತಾರತಮ್ಯವಿಲ್ಲದೇ ಸಾಂಸ್ಕೃತಿಕ ಬದುಕನ್ನು ರೂಪಿಸುವ ಮಾರ್ಗವನ್ನು ಸೂಚಿಸುತ್ತಾರೆ. ಅಕ್ಕನ ವಚನಗಳಲ್ಲಿ ಶಿವನ ಪ್ರತಿರೂಪದ ಕಲ್ಪನೆಯನ್ನು ಹೀಗೆ ಹೇಳುತ್ತಾರೆ.

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ !
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು.
ಸೀಮೆಯಿಲ್ಲದ ನಿಸ್ಸೀಮಂಗೊಲಿದೆನಾನು ". -18

ನಿರಾಕಾರ, ಸಹಜ ಸೌಂದರ್ಯ, ಸಾವು ಕೇಡುಗಳಿಲ್ಲದ ನಿರ್ಭಯನಾದ ಚೆಲುವನಾಗಿರುವ ಶಿವ ಜಂಗಮಶೀಲ ವ್ಯಕ್ತಿತ್ವವುಳ್ಳ ಆದರ್ಶ ವ್ಯಕ್ತಿಯಾಗಿ ಶರಣರಲ್ಲಿ ರೂಪುಗೊಳ್ಳುತ್ತಾನೆ. ಕಲ್ಯಾಣದಲ್ಲಿ ಸುಧಾರಿಸ ಹೊರಟ ಶಿವ ಸಂಸ್ಕೃತಿಯು ವಿಭಿನ್ನ ರೂಪ ತಾಳಿತು. ಈ ಸಂಸ್ಕೃತಿಯಲ್ಲಿ ಕಂಡುಬರುವ ದೇವರ ಕಲ್ಪನೆ ಅಸಾಮಾನ್ಯಕ್ಕಿಂತಲೂ ಸಾಮಾನ್ಯವಾದದ್ದು. ಆಧ್ಯಾತ್ಮ ಮತ್ತು ಅನುಭಾವಿಕ ನೆಲೆಯಲ್ಲಿ ಅಂತರ್ಗತವಾಗಿ ಮೂಡುವ ಶಿವ ಅಮೂರ್ತ ಸ್ವರೂಪದ್ದಾಗಿದೆ. "ವೀರಶೈವದ 'ದೇವರ ಕಲ್ಪನೆ' ಮೂಲತಃ ಪರಂಪರಾಗತವಾದ 'ದೇವರ' ಕಲ್ಪನೆಯಿಂದ ಭಿನ್ನವಾದದ್ದು. ಒಂದೆಡೆ ಪುರಾಣೋಕ್ತವಾದ ಶಿವನ ಮೂರ್ತಿ, ಪೂಜೆ, ಮತ್ತು ಶಿವನ ಸಂಕೇತವಾದ ಲಿಂಗ (ಸ್ಥಾನಕಲಿಂಗ)

ಪೂಜೆ ರೂಢಿಯಲ್ಲಿ ಇದ್ದವುಗಳು, ಆದರೆ ವಚನಕಾರರು ದೇವಸ್ಥಾನ ಕೇಂದ್ರಿತವಾದ ಈ ಎರಡೂ ರೂಪಗಳನ್ನು ದೇವಸ್ಥಾನದ ಸಮೇತ ನಿರಾಕರಿಸಿ, ದೇವತ್ವ ಕಲ್ಪನೆಯ ಸಾಂಕೇತಿಕ ರೂಪವನ್ನಾಗಿ, ಇಷ್ಟಲಿಂಗವನ್ನು ಸ್ವೀಕರಿಸಿ, ತಮ್ಮ ಕೊರಳಲ್ಲಿ ಕೊಂಡರು. ಈ ಅರ್ಥದಲ್ಲಿ ಇಷ್ಟಲಿಂಗ ರೂಪವು ಅಲ್ಲ, ಅರೂಪವು ಅಲ್ಲ ಅದರ ಬದಲು ಅದು ನಿರಾಕಾರಕ್ಕೆ ಅತ್ಯಂತ ಸಮೀಪವಾದ ಒಂದು ಸಂಕೇತ ಮಾತ್ರ. ಹೀಗೆ ದೇವರ ಕಲ್ಪನೆಯನ್ನು ದೇವಾಲಯದಿಂದ ಮತ್ತು ಅದರ ಪೌರಾಣಿಕ ಹಿನ್ನಲೆಗಳಿಂದ ಬಿಡಿಸಿ ಮನುಷ್ಯನ ಶರೀರಕ್ಕೆ ಸ್ಥಳಾಂತರ ಮಾಡುವುದರ ಮೂಲಕ ಮನುಷ್ಯನ ಶರೀರವನ್ನೇ ದೇವಸ್ಥಾನವನ್ನಾಗಿ ಮಾಡಿದ್ದಲ್ಲದೆ, ಆ ಕಾರಣದಿಂದ ಮನುಷ್ಯತ್ವಕ್ಕೆ ಒಂದು ಘನತೆ ಗೌರವವನ್ನು ವಚನಕಾರರು ತಂದುಕೊಟ್ಟರೆಂಬುದು ತೀರ ಮಹತ್ವದ ಸಂಗತಿಯಾಗಿದೆ." -19 ಸಾಂಪ್ರದಾಯಿಕ ಚೌಕಟ್ಟನ್ನು ಹೊರತುಪಡಿಸಿ ತನ್ನದೇ ಆದ ಮಾನವೀಯತೆ ನೆಲೆಯಲ್ಲಿ ಮಾನವನ ಜೀವನವನ್ನೇ ಪವಿತ್ರವಾಗಿಸುವಲ್ಲಿ ಸಫಲತೆ ಪಡೆಯುತ್ತಾರೆ. ದೇಹ ಪಾವಿತ್ರತೆಯನ್ನು ತಿರಸ್ಕರಿಸಿ ಅತೀತವಾದ ಅಗೋಚರ ಶಕ್ತಿಗಳ ಕಡೆಗೆ ಮಾರುಹೋಗುತ್ತಿದ್ದ ಜನಸಮುದಾಯಗಳನ್ನು ಒಗ್ಗೂಡಿಸಲು ಪ್ರಯತ್ನಿಸಿದ್ದು, ಹೊಸ ಸಂಸ್ಕೃತಿಯ ಉದಯಕ್ಕೆ ಕಾರಣವಾಯಿತು. ಇದರಿಂದ ಹಣ, ಕಾಲಹರಣ ಮಾಡುತ್ತಿದ್ದ ಜನ ತಮ್ಮ ಬದುಕಲ್ಲಿ ದೇವಾಲಯ ಮತ್ತು ದೇವರುಗಳನ್ನು ಕಂಡುಕೊಳ್ಳ ತೊಡಗಿದರು, ನಂತರ ಅದರ ಆಚಾರ – ವಿಚಾರ, ನಡತೆಗಳಲ್ಲಿ ಮಹತ್ತರ ಬದಲಾವಣೆಯನ್ನು ತಂದುದು ಗಮನಾರ್ಹವಾಗಿದೆ.

ಸ್ಥಾವರ ಸಂಸ್ಕೃತಿ ಮತ್ತು ಜಂಗಮ ಸಂಸ್ಕೃತಿಗಳ ಮುಖಾಮುಖಿಯಾಗಿಸುತ್ತಾ ಎರಡು ವಿಚಾರಧಾರೆಗಳನ್ನು ಪ್ರಯೋಗಾತ್ಮಕ ಬದುಕಾಗಿ ನೈಜ ಬದುಕಿನಲ್ಲಿ ಉತ್ತಮವಾದ ಜಂಗಮ ಸಂಸ್ಕೃತಿಯನ್ನು ಆಯ್ಕೆ ಮಾಡಿಕೊಂಡು ಇತರರನ್ನು ಪ್ರೇರೇಪಿಸಿದರು.**

"ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ.
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ
ನಮ್ಮ ಕೂಡಲಸಂಗನಶರಣರ ಕಂಡು ಉದಾಸೀನವ ಮಾಡಿದಡೆ
ಕಲ್ಲತಾಗಿದ ಮಿಟ್ಟೆಯಂತಪ್ಪರಯ್ಯಾ". -20

ಸಾಮಾನ್ಯ ಮನಸ್ಥಿತಿಯನ್ನು ತಿಳಿದು ಜನಜೀವನದಲ್ಲಿ ಕಂಡು ಬರುತ್ತಿದ್ದ ವಿಗ್ರಹ ಆರಾಧನೆಯಂತಹ ಅನೇಕ ಮೂಢನಂಬಿಕೆಗಳನ್ನು ಹತ್ತಿರದಿಂದ ಗಮನಿಸಿದರು. ವಾಸ್ತವತೆಯ ಬದುಕಿನಲ್ಲಿ ಆಚರಿಸುತ್ತಿದ್ದ ನಂಬಿಕೆಗಳನ್ನು ಅಲ್ಲಗಳೆದು ಹೊಸ ಬದುಕಿಗೆ ಮಾರ್ಗ ಕಲ್ಪಿಸಿದ್ದು, ಒಂದು ಕ್ರಾಂತಿಯಾಗಿದೆ. ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ಕಲ್ಲುನಾಗರ ಆರಾಧನೆಯನ್ನು ವಿರೋಧಿಸಿ ನೈಜತೆಯ ಬದುಕಿನತ್ತ ಹೆಜ್ಜೆ ಹಾಕುವಂತೆ ಈ ಕಲ್ಯಾಣ ಕ್ರಾಂತಿಯು ಪ್ರೇರೇಪಿಸಿದೆ.

ಶರಣರ ವಿಚಾರಧಾರೆಯಿಂದ ದೇಸಿ ಮೂಲದಲ್ಲಿಯೇ ಹುಟ್ಟಿಕೊಂಡ ಶರಣ ಸಂಸ್ಕೃತಿ ಮೂಲದಲ್ಲಿ ಇದ್ದಂತಹ ಬಹುಮುಖ ಸಂಸ್ಕೃತಿಯು ಮುಖಾಮುಖಿಯಾಗುತ್ತದೆ. ಕ್ರಾಂತಿ ಮೂಲದಲ್ಲಿ ಹುಟ್ಟಿದ ಸಂಸ್ಕೃತಿಯು ಬಹುಮುಖಿ ಸಂಸ್ಕೃತಿಯನ್ನು ಪ್ರಶ್ನಿಸುವಂತಾಗಿ ಹಲವು ಮೂಲಗಳಲ್ಲಿ ಇದ್ದಂತಹ ಉಪಸಂಸ್ಕೃತಿಗಳ ಜೊತೆ ಸಂಧಾನ ಕಾರ್ಯ, ಕ್ರಿಯೆಗೆ-ಪ್ರತಿಕ್ರಿಯೆಯಾಗುತ್ತಾ ಹೊಸತೊಂದರ ಉಗಮಕ್ಕೆ ನಾಂದಿಯಾಗುತ್ತದೆ. ಹೀಗೆ ಆಗುವಲ್ಲಿ ಜಾತಿ, ಕುಲ, ಧರ್ಮ, ಜನಾಂಗಗಳು, ಸಂಸ್ಕೃತೀಕರಣಗೊಳ್ಳುತ್ತದೆ. ಅದರ ಫಲಿತವಾಗಿಯೇ ಶರಣ ಸಂಸ್ಕೃತಿಯ ವಿಚಾರಗಳು ಕಲ್ಯಾಣದಲ್ಲಿ ಪ್ರಸಾರಗೊಂಡವು.

ಒಂದೇ ಸಮಾಜದಲ್ಲಿ ಹಲವು ರೀತಿಯ ಆಚರಣೆ, ರೂಢಿ, ಸಂಪ್ರದಾಯ, ಜನಾಂಗ, ಜಾತಿ, ನಂಬಿಕೆ ಮುಂತಾದ ವಿಚಾರಗಳಲ್ಲಿ ವಿಭಿನ್ನತೆಗಳಿದ್ದು ಒಂದು ಸಮಾಜದಲ್ಲಿ ಮತ್ತು ತಮ್ಮ ಬದುಕಿನ ವಿಧಾನದಲ್ಲಿಯೇ ಬದಲಾವಣೆಗಳಿದ್ದರೆ ಅದು ಉಪಸಂಸ್ಕೃತಿಯಾಗುತ್ತದೆ.

ಒಂದು ಪ್ರಧಾನ ಸಂಸ್ಕೃತಿಯ ಒಡನಾಟದೊಳಗೆ ಉಪಸಂಸ್ಕೃತಿಗಳ ನಂಟು ಒಂದಿಲ್ಲೊಂದು ರೀತಿಯಲ್ಲಿ ಇದ್ದೇ ಇರುತ್ತದೆ. ಇಂತಹ ಸಂಸ್ಕೃತಿಯು ಸೀಮಿತ ವ್ಯಾಪ್ತಿಯ ಕೆಲವೇ ಲಕ್ಷಣಗಳನ್ನು ಹೊಂದಿರುತ್ತವೆ. ಅವುಗಳನ್ನು ಈ ರೀತಿ ಹೇಳಬಹುದು.

1. ಒಂದು ವ್ಯಾಪ್ತಿ ಪ್ರದೇಶಕ್ಕೆ ಮಾತ್ರ ಸೀಮಿತವಾದ ಗುಣಲಕ್ಷಣಗಳಿರುತ್ತವೆ.
2. ಅವರದೇ ಆದ ಬದುಕು, ದೇವರು, ಧರ್ಮ, ಆಚಾರ-ವಿಚಾರ, ರೂಢಿ, ಸಂಪ್ರದಾಯಗಳು ಬೇರೆ ಬೇರೆ ಇರುತ್ತವೆ.
3. ಸಾಮಾಜಿಕ ಜೀವನವು ವಿಭಿನ್ನತೆಯಿಂದ ಕೂಡಿರುತ್ತದೆ.

4. ಉಪಸಂಸ್ಕೃತಿಗಳಲ್ಲಿ ಜನಪದ ಸಂಸ್ಕೃತಿಯು ಹಾಸು ಹೊಕ್ಕಾಗಿರುತ್ತದೆ.
5. ಭಾಷೆ, ಜೀವನ ಪದ್ಧತಿ, ವೃತ್ತಿಪರವಾದ ಜೀವನ, ಕೌಟುಂಬಿಕ ಕಟ್ಟಳೆಗಳು, ವೈಯಕ್ತಿಕ ನೆಲೆಯಲ್ಲಿ ಗಟ್ಟಿರೂಪ ಪಡೆಯುತ್ತದೆ.
6. ಉಪಸಂಸ್ಕೃತಿಯು ಆಧುನಿಕತೆಯನ್ನು ಸುಲಭವಾಗಿ ಸ್ವೀಕರಿಸುವುದು ಕಷ್ಟ ಸಾಧ್ಯವಾಗುತ್ತದೆ.
7. ಉಪಸಂಸ್ಕೃತಿಯಲ್ಲಿ ಯುದ್ಧ ಕಲೆ, ಆಡಳಿತ, ರಾಜಕೀಯ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಆಹಾರ ಪದ್ಧತಿ, ವ್ಯಾಪಾರ, ನಾಣ್ಯ ಪದ್ಧತಿ, ಚಿತ್ರಕಲೆ, ವೈವಾಹಿಕ ಪದ್ಧತಿ, ವಿದ್ಯಾಭ್ಯಾಸ ಮುಂತಾದವುಗಳು ಪ್ರಧಾನ ಸಂಸ್ಕೃತಿಗಿಂತ ಭಿನ್ನವಾಗಿರುತ್ತವೆ.
8. ಉಪಸಂಸ್ಕೃತಿಯಲ್ಲಿ ಕುಲದೈವಗಳು ಹಾಗೂ ಗ್ರಾಮ ದೇವತೆಗಳು ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಹಬ್ಬ–ಆಚರಣೆ, ಜಾತ್ರೆ,–ಸಂತೆಗಳು ಮುಂತಾದ ಚಟುವಟಿಕೆಗಳು ಸ್ಥಳೀಯ ಆಶಯಗಳನ್ನು ಒಳಗೊಂಡು ಆಚರಿಸಲಾಗುತ್ತದೆ.

ವಚನಕಾರರು ಪ್ರಥಮವಾಗಿ ವಿರೋಧಿಸ ಹೊರಟ ವಿಚಾರಗಳೆಂದರೆ ಕುಲ ಮತ್ತು ಜಾತಿ, ಸಮಾಜಕ್ಕೆ ಆತಂಕಕಾರಿಯಾದ ವಿಷಯಗಳನ್ನು ಬುಡಮುಟ್ಟ ಕಿತ್ತುಹಾಕಬೇಕೆಂಬ ಮಹದಾಸೆಯಿಂದ ಸಾಂಸ್ಕೃತಿಕ ಕ್ರಾಂತಿ ಪ್ರಾರಂಭಿಸುತ್ತಾರೆ. ಜಾತಿ ಹುಟ್ಟನ್ನು ಭಿನ್ನ ನೆಲೆಯಲ್ಲಿ ಯೋಚಿಸಿರುವ ಅಂಬಿಗ ಚೌಡಯ್ಯನವರು ಮನುಷ್ಯನ ಅಂಗಾಂಗಗಳಿಗೆ ಹೋಲಿಸುವುದು ಎಷ್ಟುಸರಿ ಎಂಬಂತಹ ಪ್ರಶ್ನೆಯನ್ನು ಸನಾತನರಿಗೆ ಹಾಕುತ್ತಾರೆ. ಇದರಿಂದ ಅಂದಿನ ವ್ಯವಸ್ಥೆಯೋಳಗಿದ್ದ ಜಾತಿಯ ಕ್ರೂರತೆಯನ್ನು ಬಿಡುವಂತೆ ತಿಳಿಸಿದ್ದಾರೆ. ಆವ ಜಾತಿ, ಕುಲ, ಗೋತ್ರದಲ್ಲಿ ಹುಟ್ಟಿದರೂ, ತಮ್ಮ ಕಾಯಕ ಭಕ್ತಿಗೆ ಸೂತಕವಿರಬಾರದು ಎಂದು ತಿಳಿಸಿದ್ದಾರೆ. ಹುಟ್ಟಿನ ಜೊತೆ ವೃತ್ತಿಯ ಉಗಮ ಹೇಗಾಯಿತೆಂಬುದು ವಚನಕಾರರಿಗೆ ತಿಳಿದಿತ್ತು. ಇದಕ್ಕೆ ಸಾಕ್ಷಿಯಂಬಂತೆ ಅಂಬಿಗರ ಚೌಡಯ್ಯನವರ ವಚನ:

" .... ಬಂದೆ ನಾವು ಶೀಲವಂತರೆಂಬುವ ಮನುಜ ಕೇಳಿ :,
ಕಣ್ಣೆ ಕುಂಚಗಾರ, ಕರ್ಣವೇ ಬಣಜೀನ ಮೂಗೇ ? ಈಳಿಗ
ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೇ ಕಲ್ಲುಕುಟಿಗ,
ತಲೆ , ಬೆಣ್ಣೆ ಜೇಡ, ಅಂಗೈ ಅಕ್ಕಸಾಲಿಗ,
ಮುಂಗೈಯೇ ಬಡಿಗ, ಕರವೇ ಕೊಮಟಿಗ,

ಕಣಕಾಲೇ ಕಾಳಿಂಗ,ಕುಂಡಿಯೇ ಕುಡು ವೂಕ್ಕಲಿಗ
ಒಳದೊಡೆಯೇ ಸಮಗಾರ,ಹೊರ ದೊಡೆಯೇ ಮಚ್ಚಿಗ,
ಮೇಗಾಡಿ ಹೊಲೆಯ, ಬುದ್ಧಿಯೇ ಬಯಲ ಬಂಗಾರ
ಇಂತಪ್ಪ ಕುಲ, ಹದಿನೆಂಟು ಜಾತಿ
ಎಲುಬು ಮಾಂಸವನು ತುಂಬಿಟ್ಟುಕೊಂಡು
ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು
ಹೊಡೆದಾಡುವಂತಹ ಅಣ್ಣಗಳನ್ನು ಹಿಡಿ ತಂದು
ಮೂಗನೇ ಸವರಿ, ಮೆಣಸಿನ ಹಿಟ್ಟು, ತುಪ್ಪವ ತುಂಬಿ
ನಮ್ಮ ಪಡಿಹಾರಿ ಉತ್ತಣ್ಣನ ವಾಮಪಾದುಕೆಯಿಂದ
ಪಡಪಡನೆ ಹೊಡಿ ಎಂದಾತ, ನಮ್ಮ ಅಂಬಿಗರ ಚೌಡಯ್ಯ." –21

ಸೊಡ್ಡಳ ದೇವರು ಹದಿನೆಂಟು ವೃತ್ತಿಗಳನ್ನು ಕಾಯಕವೆಂದು ಕರೆದಿದ್ದಾರೆ. ಅವರ ಅಭಿಪ್ರಾಯವು ಕೂಡಾ ಜಾತಿಗಳು ಪುರುಷನ ಅಂಗಾಂಗದಿಂದ ಆಗಿಲ್ಲ ವೆಂಬುದನ್ನು ಸ್ಪಷ್ಟಪಡಿಸಿದ್ದಾರೆ ಅವುಗಳನ್ನು ಈ ರೀತಿ ಸಾಮ್ಯತೆಯಿಂದ ಕಂಡಿದ್ದಾರೆ. ಶಿಖಿ–ಬ್ರಾಹ್ಮಣ, ಶೆಟ್ಟಿ, ಕ್ಷತ್ರಿಯ–ನಯನ, ಬಾಣಜಿಗ–ನಾಸಿಕ, ಒಕ್ಕಲಿಗ–ತುಟಿ, ಗೊಲ್ಲ–ಕರ್ಣ, ಕುಂಬಾರ–ಕೊರಳು, ಪಂಚಾಳ–ಬಾಹು, ಉಪ್ಪಾರ–ಅಂಗೈ, ನಾವಿಂದ–ನಖ, ಡೊಂಬ–ಒಡಲು, ಅಗಸ–ಬೆನ್ನು, ಜೇಡ–ಚರ್ಮ, ಕಬ್ಬಿಲ–ಕುಂಡಿ, ಹೊಲಿಯ–ಒಳದೊಡೆ; ಈಳಿಗ–ಮೊಣಕಾಲು, ಸಮಗಾರ:ಕಣಗಲು ಮಚ್ಚುಗ, ಮೇಗಾಲು; ಶುದ್ಧ ಮಾದಿಗ–ಅಂಗಾಲು ಹೀಗೆ ವಿವರವಾಗಿ ಹೇಳಿರುವ ವಚನವನ್ನು ಗಮನಿಸಬಹುದು.

" ಶಿಖಿ ಬ್ರಾಹ್ಮಣ, ನಯನಕ್ಷತ್ರಿಯ, ನಾಸಿಕ ಬಾಣಜಿಗ, ಅಧರ ಒಕ್ಕಲಿಗ
ಕರ್ಣಗೊಲ್ಲ, ಕೊರಳು, ಕುಂಬಾರ, ಬಾಹು, ಪಂಚಾಳ, ಅಂಗೈ, ಉಪ್ಪಾರ,
ನಖ ನಾಯಿಂದ, ಒಡಲು ಡೊಂಬ, ಬೆನ್ನು ಅಗಸ, ಚರ್ಮ ಬೇಡ
(ಪೃಷ್ಠ ಸ್ಥಾನ ಕಬ್ಬಿಲಿಗ , ಒಳದೊಡೆ ಹೊಲೆಯ,
ಮೊಣಕಾಲು ಈಳಿಗ ಕಣಕಾಲು ಸಮಗಾರ)
ಮೇಗಾಲು ಮಚ್ಚುಗ,ಚಲಪಾದವೆಂಬ ಅಂಗಾಲು ಶುದ್ಧ, ಮಾದಿಗ ಕಾಣಿಸಿರೋ

ಇಂತೀ ಹದಿನೆಂಟು ಜಾತಿಗೆ ತನ್ನಲ್ಲಿ ಉಂಟು,
ಇವು ಇಲ್ಲವೆಂದು ಜಾತಿಗೆ ಹೊರುವ ಅಜ್ಞಾನಿಗಳ
ನಮ್ಮ ಸೊಡ್ಡಲ ದೇವರು ಮೆಚ್ಚನಯ್ಯಾ.." –22

ತಮ್ಮ ಹುಟ್ಟಿನಿಂದ 'ವರ್ಣ ಮತ್ತು ಜಾತಿ' ಯನ್ನು ನಿರ್ಧರಿಸುತ್ತಿದ್ದ ಒಂದು ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸುತ್ತಾ ಅದಕ್ಕೆ ಪರ್ಯಾಯವಾದ ವ್ಯವಸ್ಥೆಗಳನ್ನು ಸೃಷ್ಟಿಸಿದರು. ಅದರ ಫಲಶೃತಿಯೆಂಬತೆ, ಉಪಸಂಸ್ಕೃತಿ ಮತ್ತು ಪ್ರಧಾನ ಸಂಸ್ಕೃತಿಗಳ ಸಂಸ್ಕೃತೀಕರಣ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇದರ ಪರಿಣಾಮವಾಗಿ ರೂಢಿ, ಮೂಲವಾಗಿ ಹರಿದುಬಂದಿದ್ದ ಆಚಾರ ,ವಿಚಾರ, ನಂಬಿಕೆ, ಸಂಪ್ರದಾಯ, ಹಬ್ಬ, ಹರಿದಿನಗಳು, ಪೂಜೆ, ಶಾಸ್ತ್ರ, ಮಂತ್ರ, ಆರಾಧ್ಯ ದೇವಾಚರಣೆ, ಉಡುಪು, ಆಹಾರ ಪದ್ಧತಿ, ವೃತ್ತಿಪರವಾದ ಕಸುಬುಗಳಲ್ಲಿ, ನಡೆನುಡಿಗಳಲ್ಲಿ, ವೇಷ–ಭೂಷಣಗಳಲ್ಲಿ, ಭೌತಿಕವಾಗಿ ಮಾತ್ರ ಮಹತ್ವವಹಿಸಿದ್ದ ಕಾಲಘಟ್ಟದ ಸನ್ನಿವೇಶದಲ್ಲಿ, ಸಂಸ್ಕೃತಿಯ ಮೇಲ್ಮೈಯಷ್ಟೇ ಅಲ್ಲದೇ, ಸಂಸ್ಕೃತಿಯ ಆಂತರ್ಯಗಳ ಆಶಯಗಳತ್ತ ಗಮನಹರಿಸಿದ್ದು, ಗಮನಾರ್ಹವಾದುದು. ನಿರ್ಜೀವ ಮೂಲದಿಂದ ಸಜೀವತೆಯ ಕಡೆಗೆ ಸಂಸ್ಕೃತಿಯ ಸ್ಥಾನ ಪಲ್ಲಟಗೊಳಿಸಿ ಮನುಷ್ಯ ದೇಹ ರಚನೆ, ಅಂಗಗಳೇ ಜಗತ್ತಿನ ಆಗು ಹೋಗುಗಳಿಗೆ, ಕಾರಣವೆಂದು ಭಾವಿಸಿದರು. ಮೇಲಿನ ವಚನಕಾರರು ಅಸ್ಥಿತ್ವ ಜಾತಿಗಳ ಹುಟ್ಟಿನ ಸಮೀಕರಣದ ಬಗ್ಗೆ ಹೇಳಿದರೆ, ಜಾತಿಗಳು ಹೇಗಾದವೆಂದು ಬಸವಣ್ಣನವರು ಈ ವಚನದಲ್ಲಿದ್ದ. ಸ್ಪಷ್ಟಪಡಿಸುತ್ತಾರೆ.

" ಹೊಲೆಗಂಡಲ್ಲದೇ ಪಿಂಡದ ನೆಲೆಗಾಶಯವಿಲ್ಲ
ಜಲಬಿಂದುವಿನ ವ್ಯವಹಾರ ಒಂದೇ,
ಆಶಯಾಮಿಷ ರೋಷ ಹರುಷ ನಿಶೆಯಾದಿಗಳೆಲ್ಲಾ ಒಂದೇ
ಏನನೋಡಿ ಏನಕೇಳಿ ಏನು ಫಲ ?
ಕುಲಜನರೆಂಬುದಕ್ಕೆ ಆವುದು ದೃಷ್ಟ ?
ಸಪ್ತಧಾತು ಸಮಂ ಪಿಂಡಂ ಸಮಯೋನಿಸಮದ್ಭವಂ
ಆತ್ಮಜೀವ ಸಮಯುಕ್ತಯುಂ ವರ್ಣಾನಂ, ಪ್ರಯೋಜನಂ ॥ ಎಂದುದಾಗಿ
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ

ಕರ್ಣ ಜನಿಸದವರುಂಟೆ, ಜನದೊಳಗೆ?
ಇದು ಕಾರಣ ಕೂಡಲ ಸಂಗಮದೇವ,
ಲಿಂಗಸ್ಥಲವನರಿದವನೆ ಕುಲಜನೇ ! "–23

ಜಾತಿ ಮತ್ತು ಹುಟ್ಟು ಪೂರ್ವ ನಿರ್ಧರಿತವಲ್ಲ, ಸಾಮಾಜಿಕ ಶ್ರೇಣೀಕರಣ ಮಾಡುವಾಗ ಹುಟ್ಟಿನ ಅಂಶದಿಂದ ನಿರ್ಧರಿತಗೊಳ್ಳುತ್ತಿತ್ತು. ಇಂತಹ ಸಾಮಾಜಿಕ, ಸಾಂಸ್ಕೃತಿಕ ಮಾನವೀಯ ಸಂಬಂಧಗಳನ್ನು ಅಲ್ಲಗಳೆದು, ಅದಕ್ಕೆ ಪ್ರತಿ ಹುಟ್ಟುವಿಕೆಯ ಸಂಸ್ಕೃತಿಯ ಬಗ್ಗೆ ಅರಿವುಂಟು ಮಾಡುತ್ತಾರೆ. ಪ್ರಕೃತಿ ಕೊಡುಗೆಗಳಾದ ಗಾಳಿ, ಬೆಳಕು, ನೆಲ, ಜಲ, ವಿಷಯಗಳು ಮನುಷ್ಯ ಸಹಜ ಬಯಕೆಗಳೊಂದಿಗೆ ಸಮೀಕರಿಸಿ ವೃತ್ತಿಪರವಾದ ಹಾಗೂ ವ್ಯಕ್ತಿ ನಿಷ್ಠವಾದ ಪ್ರತಿಭೆಯ ಜೊತೆಗೆ ತಮ್ಮ ಬದುಕಿನಲ್ಲಿ ಪ್ರಯೋಗಿಸ ಹೊರಟರು. ಮನುಷ್ಯನ ಬಯಕೆಯ ಈಡೇರಿಕೆಗಾಗಿ ವೃತ್ತಿಯನ್ನು ಆಯ್ದುಕೊಂಡವರ ಬಗ್ಗೆ ಸಾಮ್ಯತೆಯನ್ನು ಹೇಳುತ್ತಾರೆ. ಇದ್ದ ವ್ಯವಸ್ಥೆಯ ಕಟ್ಟುಪಾಡುಗಳನ್ನು ತಿರಸ್ಕರಿಸಿ ವೃತ್ತಿಪರ ಸಂಸ್ಕೃತಿಯ ಹೊಸ ಬದುಕಿಗೆ ಬೆಳಕಾಗುತ್ತಾರೆ. "ವಿವಿಧ ಜಾತಿಗಳಾದ ಕಮ್ಮಾರ, ಮಡಿವಾಳ, ಸಾಲಿಗ, ಹಾರುವ ಮುಂತಾದ ಚಿಕ್ಕಪುಟ್ಟ ವೃತ್ತಿಗಳು ಬೆಳೆದಂತೆಲ್ಲಾ ಉಪ ಸಂಸ್ಕೃತಿಗಳಾಗಿದ್ದು, ಒಂದಾದರೆ ಕಲ್ಯಾಣದ ಸಂದರ್ಭದಲ್ಲಿ ಮೂಡಿ ಬಂದ ಚಿಂತನೆಗಳು, ಉಪಸಂಸ್ಕೃತಿಗಳನ್ನು ಏಕ ಚಲನಾತ್ಮಕವಾಗಿ ಬದಲಾಯಿಸ ಹೊರಟಿದ್ದರಿಂದ ಚಿಕ್ಕ-ಚಿಕ್ಕ ಆಶ್ರಯಗಳಾಗಿ ಮೂಡಿದ್ದ ಉಪಸಂಸ್ಕೃತಿಯ ಅಂಶಗಳಿಗೆ ಪೆಟ್ಟು ಬೀಳತೊಡಗಿತು. ಛತ್ತೀಸ ಕೋಟಿ, ವೈದಿಕ ದೇವತೆಗಳು ಮತ್ತು ಅವುಗಳ ಮೂರ್ತಿಗಳು ಅನುಭವ ಲೋಕದ ಅರಿಯುವಿಕೆಗೆ ಮತ್ತು ಭೌತಿಕ ಲೋಕದ ಇರುವಿಕೆಗೆ ಕಿರಿ ಕಿರಿ ಉಂಟು ಮಾಡುವಂತಥವು ಎಂಬುವುದರ ಸ್ಪಷ್ಟ ಕಲ್ಪನೆ ಬಸವಣ್ಣನವರಿಗೆ ಇತ್ತು, ಅಭಂಗ ಅವಸ್ಥೆಯಲ್ಲಿ ಮಾತ್ರ ನಿಜದೇವನ ಜೊತೆ ಅನುಸಂಧಾನ ಸಾಧ್ಯವೆಂಬುದು ಅದರ ಧೃಢ ನಿಲುವು. "ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ" ಎಂದು ಬಸವಣ್ಣನವರು ಹೇಳಿದರು, ನೆಲವನ್ನು ದೇವರಾಗಿ ನೋಡದೇ ಕೇವಲ ನೆಲವಾಗಿ ನೋಡುವುದನ್ನು ಕಲಿಸಿದರು. ಹೀಗೆ ನೋಡಿದಾಗ ನೆಲವು ಭಾವನಾತ್ಮಕ ಪ್ರಶ್ನೆಯಾಗದೇ ಬದುಕಿಗೆ ಉತ್ತರವಾಗುವುದು. 'ಜಲವೊಂದೇ ಶೌಚಶಮನಕ್ಕೆ' ಎಂದು ತಿಳಿಸಿದಾಗ ಜಲದೇವತೆಯಾಗಿರುವುದಿಲ್ಲ. ನೀರನ್ನು ನೀರಾಗಿ ನೋಡಿದಾಗ, ಅದರ ಸೌಂದರ್ಯ ಮತ್ತು ಉಪಯೋಗದ ಪ್ರಜ್ಞೆ, ಏಕಕಾಲಕ್ಕೆ ಬರುವುದು. ಜಲವು ದೇವತೆಯಾದಾಗ ಜನ ಅದರೊಳಗೆ ಮುಳುಗುವರು. ಗಂಗೆಯ ಜಲಮಾಲಿನ್ಯಕ್ಕೆ ಅದು ದೇವತೆಯೆಂಬ ಮೂಢ ನಂಬಿಕೆಯೆ ಕಾರಣ.

ಅಗ್ನಿಯನ್ನು ದೇವತೆಯೆಂದು ತಿಳಿದಿದ್ದರಿಂದಲೇ, ಯಜ್ಞ ಸಂಪ್ರದಾಯ ಬೆಳೆಯಿತು. ಅದು ಅರಣ್ಯ ನಾಶಕ್ಕೆ ನಾಂದಿಯಾಯಿತು. ವರ್ಷಗಟ್ಟಲೆ ನಡೆಯುತ್ತಿದ್ದ ಯಜ್ಞಯಾಗಾದಿಗಳಿಂದ ಅದೆಷ್ಟು ಪ್ರಾಣಿಗಳು ಮತ್ತು ಮರಗಳು ಬಲಿಯಾಗಿವೆ ಎಂಬುದನ್ನು ಊಹಿಸಲು ಅಸಾಧ್ಯ ಅಂತೆಯೇ ಬಸವಣ್ಣನವರು ವೈದಿಕ ಅಗ್ನಿದೇವತೆಗೆ 'ಕಿಚ್ಚು' ಎಂದು ಕರೆದಿದ್ದಾರೆ." -26 ಇಷ್ಟೇ ಅಲ್ಲದೇ ವೈದಿಕ ಶಾಹಿಯು ಪ್ರಕೃತಿಯನ್ನು ಸ್ವಾರ್ಥಕ್ಕಾಗಿ ಬಳಸಿದ್ದಲ್ಲದೇ, ನಿಸರ್ಗವನ್ನೇ ದೇವರಾಗಿ ಪೂಜಿಸುತ್ತಿದ್ದ ತಳಸಮುದಾಯದವರಿಗೂ ಈ ಬಗೆಯ ದೃಷ್ಟಿಕೋನ ದೈವಪೂಜೆಯಲ್ಲಿ ದ್ವಂದ್ವಗಳನ್ನು ಉಂಟುಮಾಡಿತು. ಆದಾಗ್ಯೂ ಅಂದಿನ ಕಾಲದ ಪ್ರಕೃತಿಯೊಳಗೆ ನಿಜ ದೈವತ್ವವನ್ನು ಪುರಸ್ಕರಿಸಿ ಆಡಂಬರದ ಮೌಢ್ಯವನ್ನು ನಿರಾಕರಿಸಿದರು. ಏಕೆಂದರೆ ವೈದಿಕಶಾಹಿಯು ನಿಸರ್ಗವನ್ನು ಹೇಗೆಬಳಸುತ್ತಿದ್ದರೆಂದನ್ನು ಬಸವಣ್ಣನವರು ಉದಾಹರಿಸುತ್ತಾರೆ.

"ಕಿಚ್ಚು ದೈವವೆಂದು ಹದಿಯನಿಕ್ಕುವ ಹಾರುವರ ಮನೆಯಲ್ಲಿ
ಕಿಚ್ಚೆದ್ದು ಸುಡುವಾಗ
ಬಚ್ಚಲ ನೀರ ಬೀದಿಯ ದೂಳ ಹೊಯ್ದು.
ಬೊಟ್ಟಿಟ್ಟವರೆಲ್ಲರ ಕರೆವರಯ್ಯಾ
ಕೂಡಲಸಂಗಮದೇವಾ
ವಂದನೆಯ ಮರೆದು ನಿಂದಿಸುತ್ತಿದ್ದರು." -24

ಹೀಗೆ ಬಸವಣ್ಣನವರು ಅಗ್ನಿ ದೈವನ ನಿಜ ಸ್ವರೂಪವನ್ನು ತೋರಿಸುತ್ತಾ ನಮ್ಮನ್ನು ನಿಜದ ನೆಲೆಗೆ, ತಂದು ನಿಲ್ಲಿಸುತ್ತಾರೆ. ಸಕಲ ಸಜೀವ ಮತ್ತು ನಿರ್ಜೀವ ವಸ್ತುಗಳನ್ನು ದೈವತ್ವಕ್ಕೆ ಸಮಾನವೆಂದು ನಂಬಿಕೊಂಡು ಬಂದಿದ್ದ ಸನಾತನ ಮೂಲ ನಂಬಿಕೆಗಳಿಗೆ ಪ್ರಗತಿಪರವಾದ ಆಲೋಚನೆಗಳಿಂದ ರೂಢಿ ಮೂಲವಾದ ದೈವಿಕ ಭಾವನೆಗೆ ತಡೆ ಒಡ್ಡಿ ಬದುಕು ಸಹಜತೆಯ ಬಗ್ಗೆಚಿಂತಿಸಬೇಕೆಂದು ಹೇಳಿದರು. ಐಚ್ಚಿಕವಾದ ಸಮುದಾಯ ಪ್ರಜ್ಞೆಗಳಿಗೆ ಇಂಥಹ ವಿಚಾರಗಳು ಎಚ್ಚರವನ್ನುಂಟು ಮಾಡುತ್ತವೆ. ಸಾಮಾಜಿಕ ಹಿನ್ನಡೆಗೆ ಮೂಲಭೂತ ಕಾರಣವೆನ್ನಬಹುದಾದ ಅತಿಯಾದ ಮೌಢ್ಯ ದೈವತ್ವದ ಪ್ರಶ್ನೆಯನ್ನು ಮಾಡುತ್ತಾರೆ.

"ಮಡಿಕೆ ದೈವ ಮೊರ ದೈವ, ಬೀದಿಯ ಕಲ್ಲುದೈವ,

ಹಣಿಗೆ ದೈವ, ಬಿಲ್ಲನಾರಿ ದೈವ ಕಾಣಿರೋ!
ಕೊಳಗ ದೈವ, ಗಿಣ್ಣಿಲಿ ದೈವ ಕಾಣಿರೋ!
ದೈವ ದೈವವೆಂದು
ದೈವನೊಬ್ಬನೇ ಕೂಡಲಸಂಗಮದೇವ." –25

ಸಾಮಾನ್ಯವಾಗು ದಿನನಿತ್ಯ ಬಳಸುವ ವಸ್ತುಗಳೆಲ್ಲಾ ದೈವವಾದರೆ, ವಸ್ತುಗಳನನು ಬಳಸುವ ಸಾಧ್ಯತೆಗಳೇ ನಿಂತುಹೋಗುತ್ತದೆ. ಆಚರಣೆಯೇ ಇರಲಿ ದೈವವೇ ಇರಲಿ ಆದರೆ ಅದರ ಹಿಂದಿನ ಅಸಂಬದ್ಧತೆ ಜನರನ್ನು ಪ್ರಪಾತಕ್ಕೆ, ಮೌಢ್ಯತೆತಯ ಕೂಪಕ್ಕೆ ಎಳೆದೊಯ್ಯುತ್ತದೆ. ಇಂಥ ಸಮಾಜದಲ್ಲಿ ಬಹುಮುಖಿ ಆಚರಣೆಯಲ್ಲಿರುವ ಅಸಂಬದ್ಧವಾದ ಆಚರಣೆಗಳನ್ನು ಖಂಡಿಸುತ್ತಾರೆ. ಸಂದಿಗ್ಧ ಪರಿಸ್ಥಿತಿಯಲ್ಲಿ ಏಕದೇವೋಪಾಸನೆಯನ್ನು ಭಕ್ತಿ ಮತ್ತು ಧಾರ್ಮಿಕ ವಿಧಿ ವಿಧಾನಗಳಲ್ಲಿ ಏಕರೂಪತೆಯನ್ನು ಸಾಧಿಸಲು ಹೊರಟದ್ದು, ಉಪಸಂಸ್ಕೃತಿಗಳ ಏಕೀಕರಣ ಎನ್ನಬಹುದು. ವಿವಿಧ ಆಚರಣೆ ಪೂಜಾವಿಧಾನಗಳನ್ನು ರಚನಕಾರರು ಖಂಡಿಸುತ್ತಾರೆ. "ಮೈಲಾರನ ಪೂಜಿಸಿ ನಾಯಾಗಿ ಬಾಳುವುದು ಕಂಡ." ಒಳ್ಳೆಯ ಮೈಲಾರನ ಒಳಗೆಲ್ಲಾ ಸೆಣಬು, ಹೊರಗಣ, ಬಣ್ಣಕರ ಬೇಸಾಹಿತ್ತಯ್ಯ" ಎಂದು ಬಸವಣ್ಣ ವಿಳಂಬಿಸಿದರೆ "ಮಿಂಡ ಮೈಲಾರ ಭೀರ ಭೈರವ, ಎಕ್ಕನಾದಿ ಕುಕ್ಕನೂರ ಬಸದಿಕೇತ, ದೂಳನೆಂಬ ಕಾಳುದೈವಕ್ಕೆರಗಿ ನಾನು ಶಿವಭಕ್ತರೆನಿಸಿಕೊಂಡ ಚಂಡಿನಾಯಿಗಳ ಕಂಡು ಎನ್ನಮ್ಮನ ಏಸಿತ್ತು ಕಾಣಾ, ಕುಲದೇವರ ದೇವ" ಎಂದು ಮಡಿವಾಳ ಮಾಚಯ್ಯ ಹೇಳಿದ್ದಾರೆ.. "ಭೈರವವನಾರಾಧಿಸಿ ಬಾಹಿರಾದರಯ್ಯ ಮೈಲಾರ ಕರುಳ ಬೆರಳ ಕಡಿಸಿಕೊಂಡು ನಾಯಾಗಿ ಬೊಗುಳು ತಿಪ್ಪರಯ್ಯ" ಎಂದು ಚನ್ನಬಸವಣ್ಣ ತಿಳಿಸಿದರೆ, 'ಮೈಲಾರಕ್ಕೆ ಹೋದನೆಂಬುವರು ಮಾದಗಿತ್ತಿಯ ಮಕ್ಕಳಯ್ಯಾ' ಎಂದು ಅಂಬಿಗರ ಚೌಡಯ್ಯ ತೀವ್ರತರವಾಗಿ ವಿಡಂಬಿಸಿದ್ದಾರೆ" –26

"ಮೌಢ್ಯತೆ ಕ್ರೂರ ಆಚರಣೆಗಳು ಎಲ್ಲಿಯೇ ಇರಲಿ ಅದನ್ನೆಲ್ಲಾ ವಚನಕಾರರು ಖಂಡಿಸಿದರು. ಉಪಸಂಸ್ಕೃತಿಗಳ ಆಚರಣೆಗಳು ಅತಿ ಕ್ರೂರವಾದಾಗ, ಭಕ್ತಿಯ ಹೆಸರಿನಲ್ಲಿ ಹಿಂಸೆ, ಕ್ರೌರ್ಯ ನೆರೆದಾಗ ವಚನಕಾರರು ವಿಡಂಬಿಸಿದ್ದು ನಿಜ. ಅವರ ವಿಡಂಬನೆಯ ಹಿಂದೆ ಸಾತ್ವಿಕವಾದ ಸಿಟ್ಟು ಇದೆಯೇ ಹೊರತು ಅನ್ಯಧರ್ಮ- ದೈವಗಳ ಅವಹೇಳನವಿಲ್ಲ. ಹಾಗಿದ್ದರೆ ಅವರು ತಮ್ಮ ಮೂಲ ಪರಂಪರೆಯಾದ ಶೈವರನ್ನು ಟೀಕಿಸುತ್ತಿರಲಿಲ್ಲ. ಮೌಢ್ಯಾಚಾರಣೆಗೊಳಗಾದಾಗ ಶೈವರು, ವೀರಶೈವರು, ವೈದಿಕರು, ಜೈನರು ಎಲ್ಲಾ ಧರ್ಮೀಯರು, ಅವರ ಟೀಕೆಗೊಳಗಾಗಿದ್ದಾರೆ,

ಉಪಸಂಸ್ಕೃತಿ ಹಾಗೂ ಗ್ರಾಮೀಣ ಸಂಸ್ಕೃತಿಗಳ ವಿವಿಧ ಜನಾಂಗಗಳ ಮೌಢ್ಯಾಚರಣೆಗಳನ್ನು ವಚನಕಾರರು ನೇರವಾಗಿ ಖಂಡಿಸಿದ್ದಾರೆ. ಇಂತಹ ಖಂಡನೆಗಳನ್ನು ಕೆಲವರು ತಪ್ಪಾಗಿ ಗ್ರಹಿಸಿ ವಚನಕಾರರು ದಲಿತ ವಿರೋಧಿಗಳು, ಉಪಸಂಸ್ಕೃತಿಗಳ ವಿರೋಧಿಗಳು ಎಂಬರ್ಥ ಬರುವಂತೆ ಲೇಖನಗಳನ್ನು ಬರೆದಿರುವುದುಂಟು. ವಚನಕಾರರ ಅಂತರಂಗವನ್ನು ತಿಳಿದುಕೊಂಡವರು ಈ ರೀತಿ ಅಭಿಪ್ರಾಯಕ್ಕೆ ಬರುವುದಿಲ್ಲ. ಇರಲಿ ಇರದಿರಲಿ ದೇವರುಗಳು ತುಂಬಿದ್ದ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಏಕದೇವೋಪಾಸನೆಯ ಮೂಲಕ ಜನತೆಯನ್ನು ಜಾಗೃತಿಗೊಳಿಸಿದ್ದು ವಚನಕಾರರ ನೈತಿಕ ಧೈರ್ಯಕ್ಕೆ ಸಾಕ್ಷಿಯಂತಿದೆ. ಸಂಸ್ಕೃತಿಯೊಂದರ ಸ್ಥಗಿತತೆಯನ್ನು ಮೀರುವ ಕ್ರಿಯೆ ಇದೇ ಆಗಿದೆ". –27 ಸ್ಥಾವರ ಸಂಸ್ಕೃತಿಗಳನ್ನು ಚಲನಶೀಲಗೊಳಿಸುತ್ತಾ ಕೆಲವೊಂದು ಮೌಢ್ಯಗಳನ್ನು ಸುಧಾರಿಸಿ ಏಕಮುಖಿ ಸಂಸ್ಕೃತಿಯನ್ನು ಪ್ರತಿಪಾದಿಸ ಹೊರಟರು. ಹೀಗೆ ಹೊರಟಾಗ ಉಪಸಂಸ್ಕೃತಿಗಳಲ್ಲಿ ಇದ್ದಂಥ ಸಂಪ್ರದಾಯಶೀಲ ಮನಸ್ಸುಗಳು ಸಹಜವಾಗಿ ಹೊಸ ವ್ಯವಸ್ಥೆಯ ವಿರುದ್ಧ ಸಹಜವಾಗಿಯೇ ಪ್ರತಿಕ್ರಿಯಿಸುತ್ತಾರೆ. ಈ ಉಪಸಂಸ್ಕೃತಿಯಲ್ಲಿಯೇ ಬೆಳೆದ ಪ್ರಗತಿಶೀಲ ಮನಸ್ಸುಗಳು ಸಂಸ್ಕೃತೀಕರಣಗೊಂಡು ತಮ್ಮ ಮೂಲ ಸಂಪ್ರದಾಯಗಳಿಗೆ ತಿಲಾಂಜಲಿ ಇಟ್ಟು ಹೊಸತೊಂದರ ಬದುಕಿನ ಸಂಕ್ರಮಣಾವಸ್ಥೆಯಲ್ಲಿ ತಮ್ಮ ಆರಾಧ್ಯ ದೈವಗಳ ಹೆಸರಿನಲ್ಲಿಯೇ ತಮ್ಮ ವೃತ್ತಿ ಜೀವನವನ್ನು ಕಂಡುಕೊಳ್ಳುತ್ತಾರೆ. ಹೊಸ ಬದುಕೊಂದರ ವಿಚಾರಧಾರೆಗಳಿಗೆ ಅಂಟಿಕೊಂಡ ಮನಸ್ಸು, ಈ ಹಿಂದೆ ಕಂಡುಕೊಂಡಿದ್ದ ವ್ಯವಸ್ಥೆಯ ಬಗ್ಗೆ ನಿರಾಕರಣ ಮನೋಭಾವ ಹುಟ್ಟಿ ಸಂಪೂರ್ಣವಾಗಿ ತಮ್ಮ ಹುಟ್ಟು, ಜಾತಿ, ಕುಲ, ಧರ್ಮ, ದೇವರು ಮುಂತಾದ ಸಾಂಸ್ಕೃತಿಕ ವಿಚಾರಗಳಿಗೆ ನಿರ್ಗಮನ ಹೇಳುತ್ತಾರೆ. ಇದರ ಆಲೋಚನೆಯಲ್ಲಿ ರೂಪುಗೊಂಡಿದ್ದ, ತಮ್ಮ ಹುಟ್ಟಿನ ಕ್ರಮದ ಬಗ್ಗೆ ಜಾತಿ ವ್ಯವಸ್ಥೆ ಕುಲ ಗೋತ್ರ, ಧರ್ಮ ದೇವರುಗಳ ಬಗ್ಗೆ, ಸೈದ್ಧಾಂತಿಕ ವಿಚಾರಗಳನ್ನು ಮೊದಲು ಅಂತರ್ಗತವಾಗಿ ರೂಪಿಸಿಕೊಂಡು ನಂತರದ ದಿನಗಳಲ್ಲಿ ಬಾಹ್ಯ ರೂಪಗೊಳ್ಳುವಂತೆ ಮಾಡುತ್ತಾರೆ.

1. ಹಲವು ದೇವರುಗಳ ಬದಲಾಗಿ ಏಕದೇವೋಪಾಸನೆ
2. ದೇವಾಲಯದ ಬದಲು, ದೇಹವನ್ನೇ ದೇವಾಲಯವಾಗಿಸಬಹುದು.
3. ವಿಭಿನ್ನಜಾತಿಗಳನ್ನು ಬಿಟ್ಟು ಮನುಷ್ಯ ಜಾತಿವೊಂದೇ ಎಂದು ಹೇಳುವುದರ ಜೊತೆಯಲ್ಲಿ ಗಂಡು ಮತ್ತು ಹೆಣ್ಣಿನ ನಡುವೆ ಭೇದವಿಲ್ಲದಂತೆ ನೋಡಿಕೊಳ್ಳುವುದು.
4. ದಾನ ಮಾಡುವ ಕ್ರಮದಲ್ಲಿ ಬದಲಾಯಿಸಿ ಸ್ವತಃ ವೃತ್ತಿಯನ್ನು ಮಾಡಿ, ಆದಾಯದಲ್ಲಿ ಸಮಾಜದ ದಾಸೋಹ ಕಾರ್ಯಗಳಿಗೆ ಬಳಸುವುದು.

5. ಪ್ರಭುತ್ವದ ಬದಲಿಗೆ ಸಾಮೂಹಿಕ ನಾಯಕತ್ವವನ್ನು ಬೆಳಸುವುದು.

6. ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ ತೀಡುವುದು.

ಹೀಗೆ ಹಲವು ಅಂಶಗಳಿಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸ ಹೊರಟರು. ಸ್ಥಾವರ ಮತ್ತು ಜಂಗಮ ಸಂಸ್ಕೃತಿ ಉಗಮಗಳ ಹಿನ್ನಲೆಯಲ್ಲಿ ಶಾಶ್ವತ-ಕ್ಷಣಿಕ, ಮೂರ್ತ-ಅಮೂರ್ತ, ಸಾಂಪ್ರದಾಯಿಕ ಹಾಗೂ ವೈಚಾರಿಕತೆಯ ನಡುವಿನ ಹೋರಾಟವಾಯಿತು. ಈ ಹೋರಾಟ ಕ್ರಾಂತಿಯ ಸ್ವರೂಪ ಪಡೆದು ಜಂಗಮ ಸಂಸ್ಕೃತಿ ರೂಪುಗೊಂಡಿತು. ಇದರಿಂದ ಸ್ಥಾವರ ಸಂಸ್ಕೃತಿಯನ್ನು ಜಂಗಮ ಸಂಸ್ಕೃತಿಯನ್ನಾಗಿ ಬದಲಾವಣೆ ಮಾಡಿದರು. ಕರ್ಮದಿಂದ ಧರ್ಮಕ್ಕೆ, ಅಂಗದಿಂದ ಲಿಂಗಕ್ಕೆ, ಲಿಂಗದಿಂದ ಜಂಗಮಕ್ಕೆ ಹೆಜ್ಜೆಯಿಡುತ್ತಾ ದೇಹದಲ್ಲಿ ಆತ್ಮ, ಆತ್ಮದಲ್ಲಿ ಪರಮಾತ್ಮನನ್ನು ಕಾಣುವ ಮಾರ್ಗವನ್ನು ತೋರಿಸಿಕೊಟ್ಟರು. ಈ ಪರಿಣಾಮವಾಗಿ ಕುಲಜರಂತೆ ಅಂತ್ಯಜರು ರಾಜರಂತೆ ಪ್ರಜೆಗಳು ಬದುಕಿ ಇತಿಹಾಸ ನಿರ್ಮಿಸಿದರು. ವಚನಕಾರರು ಕಲ್ಯಾಣದಲ್ಲಿ ಹಲವು ಮಾದರಿ ವ್ಯವಸ್ಥೆಗಳನ್ನು ರೂಪಿಸಿ, ಕಾರ್ಯೋನ್ಮುಖರಾದರು. ಇದರಿಂದ ಉಪಸಂಸ್ಕೃತಿಗಳಿಗೆ ಹಿನ್ನಡೆಯೆನ್ನಬಹುದಾದರೂ, ಉಪಸಂಸ್ಕೃತಿಯ ಅಂದಿನ ಆಚರಣಾ ವಿಧಾನದಲ್ಲಿ ಅನೇಕ ಕಟ್ಟುಪಾಡುಗಳು ಇದ್ದವು. ಉದಾಹರಣೆ ಪ್ರಾಣಿ ಬಲಿ ಕೊಡುವ ಪದ್ಧತಿ, ಅಸಮಾನತೆ ವಿಗ್ರಹಾರಾಧನೆ, ಆಹಾರ ಪದ್ಧತಿಯಲ್ಲಿ ವಿಭಿನ್ನತೆ, ಹಬ್ಬ ಹರಿದಿನಗಳ ದುಂದುಗಾರಿಕೆ ಇನ್ನು ಅನೇಕ ಅಂಶಗಳಿದ್ದವು. ಈ ಅಂಶಗಳನ್ನು ನಿವಾರಿಸಲು ತಮ್ಮ ವಿಚಾರಗಳಲ್ಲಿ ಸರಳತೆ, ವೈಜ್ಞಾನಿಕತೆಯನ್ನು ತಂದರು. ಪ್ರಸ್ತುತ ಸಂದರ್ಭದಲ್ಲೂ ಮಾದರಿಯಾಗಬಹುದಾದ ವಿಚಾರ ಕ್ರಾಂತಿಯನ್ನು ಬಳಸಿದರ ಪರಿಣಾಮಗಾಗಿ ಕಲ್ಯಾಣದಲ್ಲಿ ಹೊಸದೊಂದು ಸಾಂಸ್ಕೃತಿಕ ಕ್ರಾಂತಿ ಸಂಭವಿಸಿತು.

3.3 ಕಾಯಕ ಸಂಸ್ಕೃತಿ ಮತ್ತು ಕಾಯಕ ಜೀವಿಗಳು :

ಮನುಷ್ಯನ ದೈಹಿಕ ಮತ್ತು ಮಾನಸಿಕ ಶಕ್ತಿಗಳ ಸಂವರ್ದನೆಗಾಗಿ ಶರಣರು ಕಂಡುಕೊಂಡ ವಿಚಾರಗಳು ಗಮನಾರ್ಹವಾಗಿವೆ. ಯಾವುದೇ ಭಾರತೀಯ ಸಮಾಜದಲ್ಲಿ ಕಾಯಕ ಸಂಸ್ಕೃತಿಯಿಂದ ವಿಚಾರ ಮಾಡಿದ್ದು ತೋರಬರುವುದಿಲ್ಲ. ಪ್ರಾಚೀನ ಕಾಲದಿಂದಲೂ ಕೂಡ ಯೋಗಸಿದ್ಧರು ತಮ್ಮ ಮನಸ್ಸುಗಳನ್ನು ಸ್ಥಿರವಾಗಿಟ್ಟುಕೊಳ್ಳಲು ಇಂತಹ ಆಲೋಚನೆಗಳನ್ನು ನಡೆಸಿದ್ದು ಕಂಡುಬರುತ್ತದೆ. ಇವರು ಬಹುತೇಕ ಅಲೆಮಾರಿ ಜೀವನ ಸಾಗಿಸಿಕೊಂಡೇ ತಮ್ಮ ಕುಲವಿಕಾಸಕ್ಕಾಗಿ ತಾವು

ಹೋದಕಡೆಯಲ್ಲೆಲ್ಲ. ಶ್ರೇಷ್ಠರನ್ನಾಗಿ ಸ್ವೀಕರಿಸುತ್ತಿದ್ದರು. ಅವರನ್ನು ವೃತ್ತಿಕಾಯಕಯೋಗಿಗಳನ್ನಾಗಿ ಮಾಡಿ ಸಮಾಜದ ಸುಧಾರಣೆಗೆ ಪಣ ತೊಡುವಂತೆ ಮಾಡುತ್ತಿದ್ದರು. ಇಂತವರು ಕುಲಸಂವರ್ದನೆಗಾಗಿ ಬಿಕ್ಷಾಟನೆಯನ್ನು ಸ್ವೀಕರಿಸುತ್ತಿದ್ದರು. ಪರಂಪರೆ ನಿರ್ಧಿಷ್ಟ ಕಾಲಮಾನಗಳನ್ನು ಸೂಚಿಸಲು ಆಗುವುದಿಲ್ಲ. ಜನಪದ ವೃತ್ತಿಕಾಯಕದವರಾದ ಇವರು ತಮ್ಮ ಬದುಕಿನಲ್ಲಿ ಅನೇಕ ನೋವು ನಲಿವುಗಳನ್ನು ಅನುಭವಿಸುತ್ತಿದ್ದರು. ಇಂತವರ ಬದುಕಿನ ರೀತಿ ವಿಶಿಷ್ಟವಾದುದು.

ಸಮಾಜದ ಪ್ರಗತಿಗಾಗಿ ಅನೇಕ ಮಾರ್ಪಾಡುಗಳನ್ನು ಮೆರೆದು ತಮ್ಮಲ್ಲಿನ ವಿಶಿಷ್ಟ ಸಮರ್ಪಣಾ ಮನೋಭಾವದಿಂದ ಹೆಸರನ್ನುಗಳಿಸಿಕೊಂಡಿದ್ದರು. ಇಂತವರ ಆದರ್ಶಗಳು ಶರಣರಿಗೆ ಪ್ರೇರಣೆ ಒದಗಿಸಿರಬೇಕು. ಈ ರೀತಿಯ ವೃತ್ತಿಗಾಯಕ ಪರಂಪರೆಯಿಂದ ಬಂತಹವರಲ್ಲಿ ಮಂಟೇಸ್ವಾಮಿ, ಜುಂಜಪ್ಪ, ಮಾದೇಶ್ವರ, ಮೈಲಾರ, ಸಿದ್ಧಪಾಜಿ, ಕರಿಬಂಟ, ಗುರುಸ್ವಾಮಿ, ರೇವಣಸಿದ್ಧನಂತವರು ವೃತ್ತಿಗಾಯಕ ಪಂಪರೆಯಿಂದ ಬಂದವರು.

ಇವರ ಜೀವನ ವಿಧಾನಗಳನ್ನು ಶುದ್ಧವಾಗಿಸುವ ಕಥೆಯನ್ನೊಳಗೊಂಡ ಜನಪದ ಮಹಾಕಾವ್ಯಗಳಾದ ಮಂಟೇಸ್ವಾಮಿ ಕಥಾ ಪ್ರಸಂಗ, ಮಾದೇಶ್ವರ ಕಥಾ ಪ್ರಸಂಗ, ಕೋಡಗಲ್ಲು ಬಸವನ ಪರಂಪರೆಯನ್ನು ಕಾಣಬಹುದು. ಶರಣ ಪರಂಪರೆಯ ಜೊತೆಗಿನ ಅವಿನಾಭಾವ ಸಂಬಂಧಗಳಿರುವುದು. ಇಂದಿಗೂ ಜನರ ಮನಸ್ಸಿನಲ್ಲಿ ಉಳಿದಿರುವುದರಿಂದ ಶರಣ ಚಳವಳಿಯ ಪ್ರೇರಕ ಶಕ್ತಿ ಎಷ್ಟಿತ್ತೆಂಬುದು ಅರಿವಾಗುತ್ತದೆ.

ವಚನಕಾರರು ಆರಂಭಿಸಿದ ಕಾಯಕವು ಆಳಿನಿಂದ ಹಿಡಿದು ಅರಸನವರೆಗೆ, ಗುರುವಿನಿಂದ ಹಿಡಿದು ಜಂಗಮದವರೆಗೂ ಭಕ್ತನಾದಮೇಲೆ ಈ ಶರಣರ ಕಾಯಕ ನೀತಿಯನ್ನು ಪಾಲಿಸಬೇಕಾಗಿತ್ತು. ಶರಣರು ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥತೆಗಳಿಂದ ಕಾಯಕ ಮಾಡುತ್ತಾ ಸಂತೃಪ್ತಿಹೊಂದಿ, ವೃತ್ತಿಯಿಂದ ಬಂದ ಪ್ರತಿಫಲದಲ್ಲಿ ರಾಜನಿಗೆ ನೀಡಬೇಕಾದುದ್ದನ್ನು ಸತ್ಯವಾಗಿ ಸಲ್ಲಿಸಿ ಉಳಿದದನ್ನು ದಾಸೋಹ ಕಾರ್ಯಕ್ಕೆ ಬಳಸುತ್ತಿದ್ದರು. ಸ್ತ್ರೀ-ಪುರುಷ, ಮೇಲು-ಕೀಲುಗಳೆಂಬ ಭೇದ-ಭಾವಗಳಿಲ್ಲದೇ ಸಮಾನ ಮನಸ್ಕರಾಗಿ ದುಡಿಯುತ್ತಿದ್ದುದು ಅವರ ಮತ್ತೊಂದು ವಿಶೇಷ ಗುಣವಾಗಿದೆ.

ಶರಣರು ಹೆಚ್ಚು ಸಂಪತ್ತಿನ ಸಂಗ್ರಹ ಪ್ರವೃತ್ತಿಯನ್ನು ವಿರೋಧಿಸುತ್ತಾರೆ ಆದ್ದರಿಂದಲೇ ಆಯ್ದಕ್ಕಿ ಲಕ್ಕಮ್ಮ ಎಂಬ ಶಿವಶರಣೆಯು ಗಂಡ ಮಾರಯ್ಯ ಒಮ್ಮೆ ಅಗತ್ಯಕ್ಕಿಂತ ಹೆಚ್ಚು ಅಕ್ಕಿ ತಂದಿದ್ದನ್ನು ವಿರೋಧಿಸಿ 'ಈಸಕ್ಕಿಯಾಸೆ ನಮಗೇಕಯ್ಯ' ಎಂಬ ಮಾತಿನೊಂದಿಗೆ ತಮಗಾಗಿ ತಂದ ಹೆಚ್ಚುವರಿ ಅಕ್ಕಿಯಾಸೆಯನ್ನು ನಿರಾಕರಿಸುತ್ತಾರೆ. ಇದು ಶರಣರಲ್ಲಿದ್ದ ಶುದ್ಧ ಕಾಯಕ ನಿಷ್ಠೆಯನ್ನು ಸಾರುತ್ತದೆ.

ಅಂದಿನ ತಳಸಮುದಾಯದವರು ಜಾತಿ-ಭೇದವೆನಿಸದೇ ತಮ್ಮ ವೃತ್ತಿಯಲ್ಲಿ ತೊಡಗಿಕೊಂಡರು. ತಮ್ಮ ಜ್ಞಾನದ ವ್ಯಾಪ್ತಿಯನ್ನು 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ತತ್ವದಡಿಯಲ್ಲಿ ಶರಣರು ಬಾಳಿ ಬದುಕಿದರು. ಈ ಮಾತಿಗೆ ಪೂರಕವೆಂಬಂತೆ ಒಕ್ಕಲಿಗ ಮುದ್ದಯ್ಯನ ವಚನವು ಇಂತಿದೆ:

"ವೇದ ಶಾಸ್ತ್ರಕ್ಕೆ ಓದುವುದಕ್ಕೆ ಹಾರುವನಲ್ಲ
ಇದ ಮರೆಯುವುದಕ್ಕೆ ಕ್ಷತ್ರಿಯನಲ್ಲ,
ವ್ಯವಹರಿಸುವುದಕ್ಕೆ ವೈಶ್ಯನಲ್ಲ, ಉಳುವ ಒಕ್ಕಲು ಮಗನ, ಕಪ್ಪನೋಡದೆ
ಒಪ್ಪಕೊಳ್ಳಯ್ಯ ಕಾಮಭೀಮ ಜೀವದೊಡೆಯ" –28

ಕಾಯಕ ಪರಂಪರೆಯ ಹಿನ್ನೆಲೆಯುಳ್ಳವರು ಸಾಮಾನ್ಯವಾಗಿ ಕಟ್ಟಕಡೆಯ ಮನುಷ್ಯನಾಗಿ ಉಳ್ಳದ್ದರಿಂದ ಸಾಮಾಜಿಕ ಜೀವನದಲ್ಲಿ ಶ್ರಮಿಕ ಜೀವನ ಬಿಟ್ಟರೆ ಐಷಾರಾಮಿ ಜೀವನ ನಡೆಸುವುದಕ್ಕೆ ಅವಕಾಶಗಳಿರುವುದಿಲ್ಲ. ಅಕ್ಷರ ಕಲಿಕೆ ರಾಜಾಳ್ವಿಕಗಳು, ವ್ಯವಹಾರ ಜೀವನವು ಮುಂತಾದ ಉನ್ನತ ಮಟ್ಟದ ಆಚಾರ-ವಿಚಾರಗಳು, ಪೂಜೆ-ಪುನಸ್ಕಾರಗಳು, ವೇದ-ಶಾಸ್ತ್ರ ಓದುಗಳು, ವೈದಿಕ-ಕ್ಷತ್ರಿಯರು ಅನುಸರಿಸುವ ಸಾಮಾಜಿಕ ಪದ್ಧತಿಗಳಾಗಿದ್ದವು. ಆದ ಕಾರಣ ಶ್ರಮ ಸಂಸ್ಕೃತಿಯ ಜನರಿಗೆ ಇಲ್ಲಿ ಅವಕಾಶಗಳಿರಲ್ಲಿಲ್ಲ. ಇವರೇನಿದ್ದರೂ ದೈಹಿಕವಾಗಿ ಬೆವರು ಸುರಿಸುವ, ದೇಹ ದಂಡಿಸಿ ದುಡಿಮೆ ಮಾಡುವ ಕೆಲಸಗಳಿಗೆ ಮಾತ್ರ ಸೀಮಿತವಾಗಿದ್ದರು. ಆದ್ದರಿಂದ ಶಿವಶರಣರು ಅವ್ಯವಸ್ಥೆಗೆ ಕಾರಣವಾಗಿದ್ದ ವೈದಿಕ ಸಾಹಿತ್ಯದ ವಿಚಾರಗಳನ್ನು ಸಾಕ್ಷ ಸಮೇತ ನಿರಾಕರಿಸಿದರು. ಇದಕ್ಕೆ ಅಕ್ಕನ ವಚನ ಪೂರಕವಾಗಿದೆ: 'ವೇದಶಾಸ್ತ್ರಾಗಮ ಪುರಾಣಗಳೆಂಬುವ ಕುಟ್ಟುತ್ತಾ ನುಚ್ಚು ತೌಡು ಕಾಂಬೋ' ಎಂದು ಸಿಪ್ಪೆನಾರು ಬಿಡಿಸುವುದರಲ್ಲಿ ಕಾಲಗಳೆಯದೇ ಹಾಗೂ ವೇದಾದಿಗಳ ಬತ್ತವನ್ನು ಕುಟ್ಟಿ-ಕುಟ್ಟಿ ಕಾಳನ್ನು ಕಾಣದೇ ನೋವನ್ನು ತಿಂದಿರುವಿರಿ. ಎಲ್ಲಾ ನೋವನ್ನು ತಿಂದಿರುವ ನಿಮ್ಮನ್ನು

ಬಂಧನದಿಂದ ಮುಕ್ತಗೊಳಿಸುತ್ತೇವೆಂದು ಶರಣ ಕಾಯಕ ತತ್ವಕ್ಕೆ ಮೊರೆ ಹೋಗುವಂತೆ ಕರೆನೀಡಿದರು.

ಭಾರತೀಯ ಪರಂಪರೆಯಲ್ಲಿ ಪೂಜ್ಯಭಾವದ ಗ್ರಂಥಗಳೆಂದು ಜನಸಾಮಾನ್ಯರಲ್ಲಿ ತುಂಬುತ್ತಾ ಬಂದಿದ್ದ ವೈದಿಕ ಶಾಹಿತ್ವಗಳನ್ನು ಬಸವಣ್ಣನವರ ವಚನವು ನಿರಾಕರಿಸುವುದನ್ನು ನೋಡಬಹುದು.:

"ಆದಿ ಪುರಾಣ ಅಸುರರಿಗೆ ಮಾರಿ, ವೇದ ಪುರಾಣ ಹೋತಿಂಗೆ
ಮಾರಿ, ರಾಮಪುರಾಣ ರಕ್ಕಸರಿಗೆ ಮಾರಿ, ಭಾರತ ಪುರಾಣ ಗೋತ್ರಕ್ಕೆ
ಮಾರಿ, ಎಲ್ಲಾ ಪುರಾಣ ಕರ್ಮಕ್ಕೆ ಮೊದಲು" –29

ಹೀಗೆ ಹಲವು ಪುರಾಣಗಳು ನೀವು ನಿಮ್ಮನ್ನು, ನಿಮ್ಮ ಪೂರ್ವಿಕರನ್ನು ಧಾರ್ಮಿಕ ಮೂಢತೆಯಿಂದ ಶೋಷಿಸುತ್ತಲೇ ಬಂದಿದೆ. ಆ ಕಾರ್ಯದಿಂದ ನಿಮ್ಮ ಬದುಕನ್ನು ಉನ್ನತೀಕರಿಸಲು ನಮ್ಮ ವಚನಗಳನ್ನು ಕೇಳಿ ಬದುಕಿನ ರೀತಿಯನ್ನು ಬದಲಾಯಿಸಿ ಎಂದು ನೊಂದ ಜೀವಿಗಳಿಗೆ ಕರೆನೀಡಿದರು. ಇಂತಹ ಕ್ರಾಂತಿಕಾರಕ ವಿಚಾರಗಳಿಂದ ಪ್ರೇರೇಪಿತವಾದ ಶ್ರಮಿಕವರ್ಗ ತಮ್ಮ ವೃತ್ತಿಗಳಿಗೆ ಹೊಸ ರೂಪ ಕೊಟ್ಟರಲ್ಲದೇ ಕಂಕಣ ಬದ್ಧರಾದರು.

12 ಶತಮಾನದಲ್ಲಿ ಆರಂಭಗೊಂಡ ಕಲ್ಯಾಣ ಕ್ರಾಂತಿ, ವೃತ್ತಿ ಆಧಾರಿತವಾದಂತಹ ಸಂಸ್ಕೃತಿ ಪ್ರಾರಂಭಕ್ಕೆ ದಾರಿಯಾಯಿತು. ಶ್ರಮ ಜೀವಿಗಳಿಂದ ಆರಂಭಗೊಂಡ, ಕಾಯಕ ಸಂಸ್ಕೃತಿ ಸಾಮಾಜಿಕ ಜೀವನಕ್ಕೆ ಹೊಸ ಬುನಾದಿಯನ್ನು ಹಾಕಿದ್ದಲ್ಲದೇ ಸ್ವಾಭಿಮಾನದ ಬದುಕನ್ನು ರೂಪಿಸುವಲ್ಲಿ ಈ ಸಂಸ್ಕೃತಿ ಪೂರಕವಾಯಿತು. ಈ ಸದಾಚಾರದಿಂದ ಯಾವೊಬ್ಬ ಶರಣರು ಹಿಂಜರಿಯುವ ಅಥವಾ ನಿರಾಕರಿಸುವಂತಿಲ್ಲ. ಏಕೆಂದರೆ ಕಾಯಕ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ವೃತ್ತಿಯಲ್ಲಿ ತಮ್ಮ ದೇಹವನ್ನು ಸ್ವಯಂಪೂರ್ಣವಾಗಿ ದಂಡಿಸಿದರು. ದೈಹಿಕ ಹಾಗು ಮಾನಸಿಕ ಸಾಮರ್ಥ್ಯವನ್ನು ಬಳಸಿ ಸಮಚಿತ್ತದಿಂದ ಕಾರ್ಯ ನಿರ್ವಹಿಸುವಂತೆ ಇದು ಪ್ರೇರೇಪಿಸಿತು. ಇದರಿಂದ ಸಮಾಜದ ಸರ್ವತೋಮುಖ ಅಭಿವೃದ್ಧಿ ಮುನ್ನಡೆಗೆಕಾರಣವಾಗುತ್ತದೆ. ಇಂತಹ ಕಾಲಘಟ್ಟಗಳಲ್ಲಿ ಮೂಡಿ ಬಂದ ಎಲ್ಲಾ ವರ್ಗಗಳ ಸಮಾಜಮುಖಿಯಾಗಿ ದುಡಿಯುವ ಶರಣರ ಒಂದು ಸಮುದಾಯವನ್ನು ಕಾಣಬಹುದು. ಹೀಗೆ ಕಾಯಕವನ್ನು ಅವಲಂಬಿಸಿ ದುಡಿಯುವಂತಹ ಕೆಲವು ಸಾಂಸ್ಕೃತಿಕ ಚಿಂತನಕಾರರು ಮತ್ತು ಪ್ರಯೋಗಶೀಲ ವ್ಯಕ್ತಿಗಳ ಹೆಸರು ಮತ್ತು ವೃತ್ತಿಗಳನ್ನು ಚಾರಿತ್ರಿಕ ದೃಷ್ಟಿಯಿಂದ

ಹೆಸರಿಸಬಹುದು. ಇದರಲ್ಲಿ ಸ್ತ್ರೀ–ಪುರುಷರೆಂಬ ಭೇದವಿಲ್ಲದೆ ದುಡಿಯುವ ಕಾಯಕ ಜೀವಿಗಳು ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಇದು ಪ್ರಸ್ತುತ ಸಮಾಜಕ್ಕೆ ಮಾನದಂಡವಾಗಿದೆ.

"ಇದರಲ್ಲಿ ಉಪಲಬ್ಧ ಪ್ರಮುಖ ವಚನಕಾರರ ಅಂಕಿತ, ವೃತ್ತಿ ಹೆಸರುಗಳ ಉಲ್ಲೇಖಗಳನ್ನು ಹೆಸರಿಸಿದೆ.

1	ಅಂಗಸೋಂಕಿನ ಲಿಂಗತಂದೆ	ಭೋಗವಂಕೇಶ್ವರ	ವಚನಶಾಸ್ತ್ರಗಾರ
2	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ ಅಂಬಿಗ	ವಚನಶಾಸ್ತ್ರಗಾರ/ ವೀರಶೈವ ಚಿಂತಾಮಣಿ
3	ಅನಂತದೇವ	ಅನಂತಗುಪ್ತ ಅಲ್ಲಮಪ್ರಭು	ಕರ್ನಾಟಕ ಚಿಂತೆ ಭಾಗ–1 (ಪು. 559)
4	ಅನಾಮಿಕ	ಅನಾಮಿಕ ಬೆಟ್ಟಸಂಗಯ್ಯ	ಕರ್ನಾಟಕ ಚರಿತೆ ಭಾಗ–1 (ಪು. 559)
5		ಬಸವಣ್ಣ ಪ್ರಿಯ ಬೆಟ್ಟಸಂಗಯ್ಯ	ಶಿವಶರಣೆಯ ವಚನಗಳು (ಸಮಗ್ರ ಸಂಪುಟ)
6	ಅಕ್ಕಮ್ಮ	ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ	ವಚನಶಾಸ್ತ್ರದ ಷಟ್‌ಪ್ರಕಾರ ಸಂಗ್ರಹ
7	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	ಮಹಾದೇವಿಯಕ್ಕನ ವಚನಗಳು
8		ವೀರಸೋಮೇಶ್ವರ	
9			ವಚನಶಾಸ್ತ್ರಗಾರ, ವೀರಶೈವ

10	ಅಜಗಣ್ಣ	---	ಚಿಂತಾಮಣಿ ದಣ್ಣಾಯಕರ 20 ವಚನಕ್ಕೆ ಅಜಗಣ್ಣ ಐದು ವಚನಗಳನ್ನು
11	ಅನಾಮಿಕ ನಾಚಯ್ಯ ನಾಗಮ್ಮ	----	ಬಸವಣ್ಣ
12	ಅಪ್ಪಯ್ಯ	ಚನ್ನರಾಮೇಶ್ವರ	ವಚನಕಾತ್ಮಕ
13	ಅ	ಈಶ್ವರಿಯ ವರದಮಹಾಲಿಂಗ	ಸರ್ವಪುರಾತನರ ವಚನಗಳು
14	ಅಮರಗೊಂಡರ ಮಲ್ಲಿಕಾರ್ಜುನ	ಅಮರಗೊಂಡದ ಮಲ್ಲಿಕಾರ್ಜುನ ತಂದೆ	ಅಮರಗೊಂಡದ ಮಲ್ಲಿಕಾರ್ಜುನನೆಂದರೆ ಮಲ್ಲಿಕಾರ್ಜುನ ಪಂಡಿತ ಕಾವ್ಯವೆಂದು ಆರ್ ನರಸಿಂಹಾಚಾರ್ ಪುರದ ನಾಗಣ್ಣನೆಂದು ಹಳಕಟ್ಟಿಯವರು ಅಭಿಪ್ರಾಯ ಪಟ್ಟಿದ್ದಾರೆ.
15	ಅಮ್ಮುಗೆದೇವ	ಸಿದ್ಧ ಸೋಮನಾಥ, ಮಹಾಘನ ಸಿದ್ಧ ಸೋಮನಾಥ ಸೋಮೇಶ್ವರ ಲಿಂಗ ಸೋಮೇಶ	ವಚನಶಾಸ್ತ್ರಗಾರ/ ಷಟ್‌ಪ್ರಕಾರ ಸಂಗ್ರಹ, ವೀರಶೈವ ಚಿಂತಾರ್ಯ
16	ಅಮ್ಮುಗೆ ದೇವರ ಪತ್ನಿ ಅಮ್ಮುಗೆರಾಯಮ್ಮ	ಅಮುಗೇಶ್ವರಲಿಂಗ	ಶೀಲ ಸಂಪಾದನೆ
17	ಅರಿವಿನ ಮಾರಿ ತಂದೆ	ಸದಾಶಿವ ಮೂರ್ತಿ ಲಿಂಗ	ಷಟ್‌ಪ್ರಕಾರ ಸಂಗ್ರಹ,

18	ಅಲ್ಲಮಪ್ರಭು	ಗುಹೇಶ್ವರ ಅಕ್ರಮಾನ ಗುಹೇಶ್ವರ	ವಚನಶಾಸ್ತ್ರಗಾರ ಪ್ರಭುದೇವರ ವಚನಗಳು, ಶೂನ್ಯ ಸಂಪಾದನೆ
19	ಅವಸರದ	ಸದ್ಯೋಜಾತ ಲಿಂಗ	ವಚನಶಾಸ್ತ್ರಗಾರ,
20	ಅವಸರದ ಭೀಮಯ್ಯ	ನಿರಹಂಕಾರದ ಭೀಮಯ್ಯ	ಕರ್ನಾಟಕ ಕವಿ ಚರಿತೆ
21	ಆ ಆಗಮಮೋಹಿನಿ	ಆಗಮ ಮೋಹಿನಿ	ಮುಕ್ತಿಕಂಠಾಭರಣ
22	ಆಣತಿಯ ಚೌಡಯ್ಯ	ಆಣತಿ ಮುಂಗ	ಕರ್ನಾಟಕ ಕವಿ ಚರಿತೆ ಪುಟ – 238
23	ಆದಯ್ಯ	ಸೌರಾಷ್ಟ್ರ ಸೋಮೇಶ್ವರ	ಆದಯ್ಯನ ವಚನಗಳು
24	ಆನಂದಯ್ಯ	ಆನಂದ ಸಿಂಧು ರಾಮೇಶ್ವರ	ಸರ್ವ ಪುರಾತನರ ವಚನಗಳು
25	ಆಯ್ದಕ್ಕಿ ಮಾರಯ್ಯ	ಅಮರೇಶ್ವರಲಿಂಗ	ವಚನಶಾಸ್ತ್ರಸಾರ
26	ಆಯ್ದಕ್ಕಿ ಲಕ್ಕಮ್ಮ	ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ	ವಚನಶಾಸ್ತ್ರಸಾರ
27	ಉಗ್ಘಡಿಸುವ ಗಬ್ಬಿದೇವ ಗಟ್ಟಿದೇವ	ಕೂಡಲಸಂಗಮದೇವರಲ್ಲಿ ಬಸವಣ್ಣ	ಗಬ್ಬಿದೇವ(ಕೆ499) ಬೆಡಗಿನ ವಚನಗಳು ಗಟ್ಟಿದೇವರು (ಕೆಬಿ448) ಶರಣಚಾರಿತ್ರದ ವಚನಗಳು
28	ಉಪ್ಪರಗುಡಿಯ ಸೋಮದೇವಯ್ಯ	ಗಾರುಡೇಶ್ವರಲಿಂಗ	ವಚನಶಾಸ್ತ್ರಸಾರ
29	ಉರಿಲಿಂಗದೇವ	ಉರಿಲಿಂಗದೇವ	ವಚನಶಾಸ್ತ್ರಸಾರ

30	ಉರಿಲಿಂಗಪೆದ್ದಿ	ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರ	ವಚನಶಾಸ್ತ್ರ, ಉರಿಲಿಂಗ ಪೆದ್ದಿಯ ವಚನಗಳು
31	ಉಳಿಯುಮೇಶ್ವರ ಚಿಕ್ಕಣ್ಣ	ಉಳಿಯುಮೇಶ್ವರ	ವಚನಶಾಸ್ತ್ರಸಾರ
32	ಎಚ್ಚರಿಕೆಕಾಯಕದ ಮುಕ್ತಿನಾಥಯ್ಯ	ಭವ ಹರಕುರಂಗೇಶ್ವರ ಲಿಂಗ, ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ-ಕುರಂಗೇಶ್ವರಲಿಂಗ	ಶೀಲಸಂಪಾದನೆ-ವ.428 (ಕೆ 499) ವಚನಶಾಸ್ತ್ರಸಾರ
32ಅ	ಎಡೆಮಠದ ನಾಗಿದೇವ (?)	?	?
33	ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ	ನಿಜಗುಣೇಶ್ವರಲಿಂಗ	ಶೀಲಸಂಪಾದನೆ ವಚನಶಾಸ್ತ್ರಸಾರ
34	ಎಲೆಗಾರ ಕಾಮಣ್ಣ	ಆತುರೇಶ್ವರಲಿಂಗ	ಸಕಲಪುರಾತನರ ವಚನಗಳು (ಭಾಗ-3)
35	ಏಕಾಂತರಾಮಿ ತಂದೆ	ಎನ್ನಯ್ಯ ಚನ್ನರಾಮ, ಎನ್ನಯ್ಯ ಪ್ರಿಯ ಚನ್ನರಾಮ, ಚೆನ್ನಕೂಡಲ ರಾಮೇಶ್ವರ	ವಚನಶಾಸ್ತ್ರಸಾರ ಷಟ್‌ಪ್ರಕಾರಸಂಗ್ರಹ
36	ಏಕಾಂತರಾಮಿತಂದೆ	ಏಕಾಂತ ವೀರಸೊಡ್ಡಳ	
37	ಏಲೇಶ್ವರದ ಕೇತಯ್ಯ	ಏಲೇಶ್ವರಲಿಂಗ, ರಾಮೇಶ್ವರ ಲಿಂಗ, ಚೆನ್ನಬಸವಣ್ಣ ಪ್ರಿಯ ಏಲೇಶ್ವರ ಲಿಂಗ	ವಚನಶಾಸ್ತ್ರಸಾರ ಕರ್ನಾಟಕಕವಿಚರಿತೆ 1
38	ಒಕ್ಕಲು ಮುದ್ದಯ್ಯ	ಕಾಮಭೀಮ ಜೀವದೊಡೆಯ	ವಚನಶಾಸ್ತ್ರಸಾರ
39	ಕಡಕೋಳ ಮಡಿವಾಳಪ್ಪ	ನಿರುಪಮ ನಿರಾಳಮತ್	ಆರ್.

		ಪ್ರಭುವೇ ಮಹಾಂತ	ನರಸಿಂಹಾಚಾರ ಅವರ ಉಲ್ಲೆಖ
40	ಕದಿರ ರೆಮ್ಮವ್ವೆ ರೆಬ್ಬವೆ	ಕದಿರ ರೆಮ್ಮಯೊಡೆಯ ಗುಹೇಶ್ವರ ಗುಮ್ಮಶ್ವರ ಗುಮ್ಮೇಶ್ವರ ಗುಮ್ಮೇಶ್ವರ	ಶೀಲಸಂಪಾದನೆ
40ಅ	ಕದಿರಕಾಯಕದ ಕಾಳವ್ವೆ	ಗುಮ್ಮೇಶ್ವರ	ಶಿವಶರಣೆಯರ ವಚನಗಳು
41	ಕನಕದ ನಾಚಯ್ಯ	ಕನಕದ ನಾಚಿಲಿಂಗ.	ಕ. ಕ. ಚ. ಐ.ಪಿ. 513
42	ಕಂಕರಿ ಕಕ್ಕಯ್ಯ		
43	ಕಂಬದ ಮಾರಯ್ಯ	ಕದಂಬಲಿಂಗ	ಷಟ್‌ಪ್ರಕಾರ ಸಂಗ್ರಹ, ವಚನಶಾಸ್ತ್ರಸಾರ
44	ಕನ್ನಡಿಕಾಯದ ಅಮುಗಿದೇವಯ್ಯ/ಅಮ್ಮಿದೇವಯ್ಯ	ಚೆನ್ನಬಸವಣ್ಣಪ್ರಿಯ ಕಮಳೇಶ್ವರ ಲಿಂಗಚೆನ್ನಬಸವಣ್ಣ ಸಾಕ್ಷಿ, ಚೆನ್ನಬಸವಣ್ಣಮುಂತು	ವಚನಗಳು ವ.
45	ಕನ್ನಡಿಕಾಯಕದ ರೆಮ್ಮಮ್ಮ, ಕನ್ನಡಿಕಾಯಕದ ರೇಮಮ್ಮ	ಸದ್ಗುರುಸಂಘ ನಿರಂಗಲಿಂಗ	ಶೀಲಸಂಪಾದನೆ, ವಚನಗಳು
46	ಕನ್ನದ ಮಾರಿತಂದೆ	ಮದನಾಂಗ ದೂರಮಾದೇಶ್ವರ	ಬೆಳಗಿನ ವಚನಗಳು . ಪಿ. 248
47	ಕರಸ್ಥಲದ ನಾಗಿದೇವ ಕರಸ್ಥಲದ ವೀರಣ್ಣ	ಗುರುಶಾಂತ/ ಕರಸ್ಥಲದ ಗುರುಶಾಂತಯೋಗಿ	ಕ.ಕ.ಚ. ಐ ಪಿ 515
47ಅ	ಕರಿಬಸವೇಶ್ವವರ		ಕ.ಕ.ಚ. ಐ ಪಿ 515
48	ಕರುಳಕೇತಯ್ಯ	ಮನಕ್ಕೆ ಮನೋಹರ ಶಂಕೇಶ್ವರ ಲಿಂಗ	ವಚನಶಾಸ್ತ್ರಸಾರ, ಕ.ಕ.ಚ. ಐ ಪಿ 229
49	ಕಲಕೇತ ಬೊಮ್ಮಯ್ಯ/ ಕಲಕೇತಯ್ಯ	ಮೇಕಾಲೇಶ್ವರ ಲಿಂಗ	ಕ.ಕ.ಚ. ಐ ಪಿ 229

50	ಕಾಟಕೂಟಯ್ಯ/ವೀರಗೊಲ್ಲಾಳ	ವೀರಬೀರೇಶ್ವರ	ವ.ಶಾ.ಸಾ.ಷಟ್ ಪ್ರಕಾರ ಸಂಗ್ರಹ
51	ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ	ಕುಂಭೇಶ್ವರ	ವ.ಶಾ.ಸಾ. ಶೀಲ ಸಂಪಾದನೆಯ ವಚನಗಳು
52	ಕಾಡಸಿದ್ಧೇಶ್ವರ	ಕಾಡಿನೊಳಗಾದ ಶಂಕರ ಪ್ರಿಯ, ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ	ಕಾಡಸಿದ್ಧೇಶ್ವರ ವಚನಗಳು
53	ಕಾಮಾಟ (ಕಾಮಪಟ್ಟ) ದ ಭೀಮಣ್ಣ	ಧಾರೇಶ್ವರಲಿಂಗ, ಧಾರೇಶ್ವರ	ಸಕಲ ಪುರಾತನರ ಬೆಡಗಿನ ವಚನಗಳು. ಪು. ಕೆ.499
54	ಕಾಲುಕಣ್ಣಿಯಕಾಯಮ್ಮ/ ಕಾಮಮ್ಮ (ಶಿಲಸಂಪಾದನೆ)	ನಿರ್ಭೀತನಿಜಲಿಂಗ	ವ.ಶಾ.ಸಾ. ಶೀಲಸಂಪಾದನೆ
55	ಕಾಳಿ (ಣಿ) ಲಿಂಗದೇವ	ಕಾಳಲಿಂಗ	ವ.ಶಾ.ಸಾ.
56	ಕಿನ್ನರಿ ಬ್ರಹ್ಮಯ್ಯ	ಮಹಾಲಿಂಗ ತ್ರಿಪುರಾಂತಕ ಲಿಂಗ ಕಿರಾತೇಶ್ವರಲಿಂಗ	ವ.ಶಾ.ಸಾ; ಶೂ. ಸಂ
57	ಕಿರಾತಸಂಗಯ್ಯ	ಕಿರಾತೇಶ್ವರಲಿಂಗ	ವ.ಶಾ.ಸಾ; ಕ.ಕ.ಚ.
58	ಕೀಲಾರದ ಭೀಮಣ್ಣ	ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗ	ವ.ಶಾ.ಸಾ; ಕೆ 449 ಬೆಡಗಿನ ವಚನಗಳು
59	ಕುಪ್ಪಸದ ಚಂದಯ್ಯ	ಕುಪ್ಪಸದ ಚಂದೇಶ್ವರಲಿಂಗ (ವ.ಶಾ.ಸ. ಕ.ಕ.ಚ)	ಷ.ಪ್ರ. ಸಂ
60	ಕುಮಾರಸಂಗ		ವ.ಶಾ.ಸಾ; ಕ. ಕ. ಚ.
61	ಕೂಗಿನಮಾರಿತಂದೆ	ಮಹಾಮಹಿಮೆ ಮಾದೇಶ್ವರ	ಸ.ಪು.ವ ಕೆ. 499

62	ಕೆಂಭಾವಿ ಭೋಗಣ್ಣ	ನಿಜಗುರುಭೋಗಸಂಗ	ಕ. ಕ. ಚ. ಪಿ. 361
63	ಕೇದಾರಗುರು	ಕೇದಾರಗುರುದೇವ	ವ. ಶಾ. ಸಾ.
64	ಕೊಟ್ಟಣದ ಸೋಮವ್ವೆ/ ಸೂಳೆ ಸಂಕವ್ವೆ	ನಿರ್ಲಜ್ಜೇಶ್ವರ	ವ. ಶಾ. ಸಾ.
65	ಕೋಟಾರದ ಸೋಮಣ್ಣ	ಬಸವಣ್ಣಪ್ರಿಯ ನಿಃಕಳಂಕ ಸೋಮೇಶ್ವರ	ಸಕಲಪುರತನ ವಚನಗಳು
66	ಕೊಂಡಗುಳಿ ಕೇಶಿರಾಜ	ಸೋಮನಾಥ	ಕ. ಕ. ಚ. ಐ ಪಿ. 198
66ಅ	ಕೊಂಡಯ ಮಂಚಣ್ಣ		
67	ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಕಮ್ಮ	ಅಗಜೇಶ್ವರ ಲಿಂಗ	ಸ. ಪು.ಬ. ಬೆಡಗಿನ ವಚನಗಳ ಷಟ್‌ಪ್ರಕಾರ ಸಂಗ್ರಹ ಶೀಲ ಸಂಪಾದನೆ ವಚನಗಳು
68	ಕೋಲಶಾಂತಯ್ಯ	ಪುಣ್ಯಾರಣ್ಯ ಭೀಮೇಶ್ವರ	ಸ. ಪು. ಪ.
69	ಕೋವುರ ಬ್ರಹ್ಮಯ್ಯ	ಅಂಬುದಾಳ ರಾಮನಾಥ	
70	ಗಜೇಶ ಮಸಣಯ್ಯ	ಮಹಾಲಿಂಗ ಗಜೇಶ್ವರ	ವ. ಶ. ಸಾ. ಶಾ. ಪ್ರ. ಸಂ 757, 758, 955
71	ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ,	ಮಸಣಯ್ಯ ಪ್ರಿಯ ಗಜೇಶ್ವರ	ಶಿವಶರಣೇಯರ ವಚನಗಳು(ಸಮಗ್ರ ಸಂಪುಟ) ಪುಟ 382,383ಶರಣ ಚಾರಿತ್ರ ವಚನಗಳು

			85
72	ಗಣದಾಸೀ ವೀರಣ್ಣ	ಶಾಂತಕೂಡಲ ಸಂಗಮ ದೇವ	ಗಣದಾಸೀ ವೀರಣ್ಣನ ವಚನಗಳು
73	ಗಂಗಮ್ಮ	ಗಂಗೇಶ್ವರಲಿಂಗ/ ಗಾರ್ಗೇಶ್ವರ ಲಿಂಗ	ವ. ಶಾ. ಸಾ; 1367 ಶ. ಚಾ. ವ
74	ಗಂಗಾಬಿಕೆ, ಗಂಗಾದೇವಿ	ಗಂಗಾಪ್ರಿಯ ಕೂಡಲಸಂಗಮದೇವ	ಶಿ. ಶ. ವ. (ಸಮಗ್ರ)
74ಅ	ಗುಂಡಯ್ಯ		
75	ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೇ	ಕುಂಭೇಶ್ವರ	ಶೀ. ಸಂ. ವ 130 ವ 420
76	ಗಾಣದ ಕಣ್ಣಪ್ಪ	ಗುಹೇಶ್ವರನ ಶರಣಅಲ್ಲಮ್ಮ (ಅಲ್ಲಯ್ಯ) ಕನ್ನಯ್ಯಪ್ರಿಯ ಗುಹೇಶ್ವರ ಶರಣಅಲ್ಲಯ್ಯ	ಕೆ. 4 99,
77	ಗಾವುದೀ ಮಾಚಯ್ಯ ಮಂಚಣ್ಣ	ಹಗಾವುದೀ ಮಾಚಯ್ಯ ತ್ರಿಪುರಾಂತಕನ ಲಿಂಗದಲ್ಲಿ ಗಾವುದೀ ಮಾಚಯ್ಯ	ವ. ಶಾ. ಸಾ; ಷ. ಪ್ರ ಸಂ.
78	ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆ	ಕುಂಭೇಶ್ವರ	ಶೀ. ಸಂ. ವ. 130 ವ. 430
79	ಗುಪ್ತ ಮಂಚಣ್ಣ	ನಾರಯಣಪ್ರಿಯ ರಮನಾಥ, ಗೋವಳಪ್ರಿಯ ರಾಮನಾಥ ನಂದಗೋಪಿಯರ ಕಂದನಿಸ್ಸಂಗ (ನಾರಾಯಣಪ[ಊಜಿತ ಪಾದಾಂಬುಜವಿಮಲ ಕಮಲೆ ಸುಲಲಿತ ರಾಮೇಶ್ವರಲಿಂಗ)	ವ. ಶಾ. ಸಾ; ಕೆ. 499 ಬೆಡಗಿನ ವಚನಗಳು ಪು. 310 ಷ. ಪ್ರ. ಸಂ 549
80	ಗುಮ್ಮಾಳಪುರ ಸಿದ್ಧಲಿಂಗದೇವ	ಬೋಳಬಸವೇಶ್ವರ	ಗುಮ್ಮಾಳಪುರ ಸಿದ್ಧಲಿಂಗ ದೇವರ

			ಶೂನ್ಯ ಸಂಪಾದನೆ ಪ್ರಸ್ತಾವನೆ–ಪು. 15,16
81	ಗುರುಬಸವಾರೂಢ	?	ಕ. ಕ. ಚ. ಈ ಪು 513
82	ಗುರುಬಸವೇಶ್ವರ	ಗುರುಬಸವೇಶ್ವರ	ಕೆ. 499
83	ಗುರು ಭಕ್ತಯ್ಯ	ಎನ್ನಸ್ವಾಮಿ ಘಂಟೇಶ್ವರ	ಸ. ಪು. ವ. ಭಾಗ–3
84	ಗೊಗ್ಗವ್ವೆ	ನಾಸ್ತಿನಾಥ	ವ. ಶಾ. ಸಾ; ಸ. ಪ[ಉ. ವ
85	ಗೋರಕ್ಷ	ಗೋರಕ್ಷಪಾಲಕ ಮಹಾಪ್ರಭು, ಸಿದ್ಧಸೋಮನಾಥಲಿಂಗ	ವ. ಶಾ.ಸಾ. 725, 736, 946 ಷ ಪ್ರ ಸಂ
86	ಘಟ್ಟಿವಾಳಯ್ಯ, ಘಟ್ಟಿವಾಳ ಮುದ್ದಣ್ಣ	ಚಿಕ್ಕಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ	ವ. ಶಾ.ಸಾ; ಶೂ (ಗುಮ್ಮಳಾಪುರ) ಶೂನ್ಯಸಂಪಾದನೆ (ಗೂಳೂರು)
87	ಘನಲಿಂಗಿದೇವ	ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನ	ಘನಲಿಂಗಿಯ ವಚನಗಳು, ವ.ಶಾ.ಸಾ; ಷ ಪ್ರ ಸಂ. 945
88	ಚಂದಿಮರಸ, ಸಿಮ್ಮಲಿಗೆಯ ಚೆಂದಯ್ಯ (ಚನ್ನಯ್ಯ)	ಸಿಮ್ಮಲಿಗೆಯ ಚನ್ನರಾಮ	ವೀ. ಚಿಂ. ವ. ಶಾ. ಸಾ.
89	ಚಿಕ್ಕಯ್ಯ, ಚಿಕ್ಕಣ್ಣ	ಉಳಿಯು (ಯ?)ಮೇಶ್ವರ	ಷ. ಪ್ರ. ಸಂ 756, 1064
90	ಚನ್ನಬಸವಣ್ಣ, ಚನ್ನದಣ್ಣಾಯಕ	ಕೂಡಲಚೆನ್ನಸಂಗಮದೇವ	ಚೆನ್ನಬಸವಣ್ಣನವರ ವಚನಗಳು
91	ಜಕ್ಕಣ್ಣಯ್ಯ	ಝೇಂಕಾರ	ನಿರಾಳಮಂತ್ರ ಗೋಪ್ಯ

92	ಜಗಳಗಂಟಿ ಕಾಮವ್ವೆ	ರಾಮೇಶ್ವರ	ಸ. ಪು. ವ.. 93
93	ಜೇಡರ ದಾಸಿಮಯ್ಯ, ದೇವರ ದಾಸಿಮಯ್ಯ	ರಾಮನಾಥ	ಜೇಡರ ದಾಸಿಮಯ್ಯನ ವಚನಗಳು
94	ಜೇಡರ ದಾಸಿಮಯ್ಯನ ಪತ್ನಿ	ದುಗ್ಗಳೆ, ದಾಸಯ್ಯಪ್ರಿಯ ರಾಮನಾಥ	ಶ. ಪ್ರ. ಸಂ. 566
95	ಜೋಧರ ಮಾಯಣ್ಣ	ಶಂಭು ಸೋಮನಾಥ ಲಿಂಗ	ವ. ಶಾ. ಸ; ಕ. ಕ. ಚ.
96	ಡೋಹರ ಕಕ್ಕಯ್ಯ	ಅಭಿನವ ಚನ್ನಮಲ್ಲಿಕರ್ಜುನ ಅಭಿನವ ಮಲ್ಲಿಕಾರ್ಜುನ	ಶು. ಸಂ. (ಗು) 1298, 1237, 1238,1297, ಶ. ಪ್ರ. ಸಂ
97	ಡಕ್ಕಯ್ಯ ಬೊಮ್ಮಣ್ಣ, ಡಕ್ಕಯ್ಯ ಮಾರಯ್ಯ	ಕಾಲಾಂತಕ ಭೀಮೇಶ್ವರ	ವ. ಶ. ಸ; ಸ. ಪ್ರ. ಸಂ
98	ತಳವಾರ ಕಾಮಿದೇವ	ಕಾಮಹರಪ್ರಿಯರಾಮನಾಥ	ವ.ಶ.ಸ. ಕೆ 499
99	ತಂಗಟೂರು ಮಾರಯ್ಯ	–	ಕ. ಕ. ಚ. 3 ಪುಟ 439
100	ತುರುಗಾಯಿ ರಾಮಣ್ಣ	ಗೋಪತಿನಾಥ ವಿಶ್ವೇಶ್ವರ	ತುರುಗಾಯಿ ರಾಮಣ್ಣನ ವಚನಗಳು
101	ತೆಲುಗು ಜಮ್ಮಯ್ಯ	ತೆಲುಗೇಶ್ವರ	ವ. ಶ. ಸ. ಶು. ಸಂ. ಎ. ಚಿ.
102	ತೆಲುಗೇಶ ಮಸಣಯ್ಯ	ಶಂಬುತೆಲುಗೇಶ್ವರ	ಕೆ 499 ಸ. ಪು. ಚ
103	ಭೀಮಯ್ಯ	ಭೀಮೇಶ್ವರ	
104	ತೋಂಟದ ಸಿದ್ಧಲಿಂಗೇರ್ಶವರ	ಮಹಲಿಂಗ ಗುರು, ಶಿವಸಿದ್ಧೇಶ್ವರ ಪ್ರಭುವೇ	ಶ. ಜ್ಞಾ. ಸಾ.

105	ದಶಗಣ ಸಿಂಗಿರೇವಯ್ಯ	ನಾಚಯ್ಯ ಪ್ರಿಯ ಮಲ್ಲಿನಾಥ	ವ. ಶ. ಸಾ; ಕ. ಕ. ಚ.
106	ದಸರಯ್ಯ	ದಸರೇಶ್ವರ ಲಿಂಗ	ವ. ಶಾ. ಸಾ.
107	ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ	ಗುರುಶಾಂತೇಶ್ವರ	ಕ. ಕ. ಚ.
108	ದಾಸೋಹದ ಸಂಗ, (ಕ)ಣ್ಣ	ಮಧುಕೇಶ್ವರಲಿಂಗ ಶಂಭುಗಿರಿದಿತ್ತ ಸ್ವಯಂ ಋಗಿಂದಿತ್ತ ಅತಿಬಳ ನೋಡ ಮಾತುರಂಗ ಮಧುಕೇಶ್ವರ ಲಿಂಗ	ವ. ಶಾ. ಸಾ; ಷ. ಪ್ರ ಸಂ. 846 ಸರ್ವಪುರಾತನ ಬೆಳಗಿನ ವಚನಗಳು 228–236
109	ನಗೆಮಾರಿ ತಂದೆ	ಅತುರವೈರಿ ಮಾರೇಶ್ವರ	ವ. ಶಾ. ಸ; ಷ. ಸಂ
110	ನಾಚಯ್ಯ	ನಾಚಯ್ಯಪ್ರಿಯಮಲ್ಲಿನಾಥ	ಕೆ. 499
111	ನಿಜಗುಣ	ನಿಜಗುಣಯೋಗಿ	ವ. ಶಾ. ಸಾ
112	ನಿಜಗುಣದೇವ/ ನಿಜಗುಣ ಯೋಗೀಶ್ವರ, ನಿಜಗುಣ	ನಿಜಗುಣಯೋಗಾನಂದ; ನಿಜಗುಣಯೋಗ	ಕ. ಕ. ಚ. ಐ ಪು. 196 ಕೆ. 499
112ಅ	ನಿಜಲಿಂಗದೇವ	ನಿರಾಳಶ್ರೀ ಗುರುಲಿಂಗ	ಕೆ 499
113	ನಿವೃತ್ತಿ ಸಂಗಯ್ಯ	ನಿವೃತ್ತಿ ಸಂಗಯ್ಯ	ವ. ಶಾ. ಸಾ; ಕ. ಕ. ಚ.
114	ನಿರಂಜನದೇವ	ನಿರಂಜನಲಿಂಗ	ವ. ಶಾ. ಸಾ; ಕ. ಕ. ಚ.
115	ನಿರಾಳಂಬ ದೇವ	ನಿರಾಳಂಬದೇವ, ನಿರಾಳಂಬಶರಣ	ವ. ಶಾ. ಸಾ; ಕ. ಕ. ಚ.
116	ನೀಲಮ್ಮ	ಸಂಗಯ್ಯ, ಸಂಗಪ್ರಭು	ಶಿ. ಶ. ವ.
117	ನೀಲಾಲೋಚನೆ	ಬಸವಪ್ರಿಯ ಕೂಡಲಸಂಗಮದೇವ	ಷ. ಪ್ರ. ಸಂ. 964, 973, 1059

118	ನುಲಿಯ ಚಂದಯ್ಯ	ಚಂದ್ರೇಶ್ವರಲಿಂಗ, ಚನ್ನಬಸವಣ್ಣ, ಪ್ರಿಯಚಂದ್ರಲಿಂಗೇಶ್ವರಲಿಂಗ, ಬಸವಣ್ಣಪ್ರಿಯ ಚಂದೇಶ್ವರಲಿಂಗ	
119	ಪಡಿಹಾರಿ ಉತ್ತಣ್ಣ		
120	ಪಡಿಹಾರಿ ಬಸವಣ್ಣ	ಪಡಿಹಾರಿ ಪ್ರಿಯ ಕೂಡಲಸಂಗಮದೇವ	ಸಕ. ಕ. ಚ. ಐ.ಪಿ. 514
121	ಪಂಚಾಕ್ಷರ ದೇವ	ಶ್ರೀ ಗುರುಪಂಚಾಕ್ಷರಲಿಂಗ	ಕ. ಕ. ಚ. ಐ ಪಉ. 514
122	ಪಂಡಿತಾರಾಧ್ಯ	ಗುರುಸಿದ್ಧಮಲ್ಲ	
123	ಪರ್ವತನಾಥ	ಪರ್ವತನಾಥಲಿಂಗ	ವ. ಶಾ. ಸಾ; ಕ. ಕ. ಚ.
124	ಪಾಕದ ಭೀಮಯ್ಯ ಬಾಣಸದ ಭೀಮಯ್ಯ/ ಬಾಣಸಿಗೆಯ ಭೀಮಯ್ಯ	ಭೀಮೇಶ್ವರ ಲಿಂಗ	
125	ಪುರದ ನಾಗಣ್ಣ	ಅಮರಗುಂಡದ ಮಲ್ಲಿಕಾರ್ಜುನ	ಕೆ 499
126	ಪುರದ ಮಲ್ಲಯ್ಯ/ ಗುರುಪುರದ ಮಲ್ಲಯ್ಯ	ಪುರದ ಮಲ್ಲ	ವ. ಶ. ಸಾ. ವಿ. ಚಿನ್
127	ಪುಷ್ಪದ ಸೋಮಯ್ಯ	ಸೋಮೇಶ್ವರಲಿಂಗ, ಮಹಾಘನ ಸೋಮೇಶ್ವರ	ಶ. ಪ. ಸಂ. 430
128	ಪರ್ವತನಾಥ	ಪರ್ವತನಾಥಲಿಂಗ	ಕ.ಕ.ಚ. ಐ ಪು 514
129	ಪ್ರಸಾದಿ ಬಂಕಣ್ಣ	ಚನ್ನಬಸವಣ್ಣ ಪ್ರಿಯ ಮಲ್ಲಿಕರ್ಜುನ ಲಿಂಗ	
130	ಪ್ರಸಾದಿ ಬೋಗಣ್ಣ	ಚನ್ನಬಸವಣ್ಣ ಪ್ರಿಯ ಭೋಗ ಮಲ್ಲಿಕರ್ಜುನ ಲಿಂಗ	ಶ. ಪ್ರ. ಸಂ 739, 471, ವ. ಶಾ. ಸಾ
131	ಪ್ರಸಾದಿ ಬಂಕಣ್ಣ	ಚನ್ನಬಸವಣ್ಣಪ್ರಿಯ ಮಲ್ಲಿಕಾರ್ಜುನ ಲಿಂಗ	ಶಿ. ಶಾ. ಬೆ. ವ.

131ಅ	ಪ್ರಸಾದಿ ಬಂಕಣ್ಣ	ಪ್ರಸಾದಿ ಸೋಮಶಿವಲಿಂಗ	ಮು. ಕಂ. ಭ.
132	ಪ್ರಸಾದಿ ಲೆಂಕಬಕ್ಕಣ್ಣ	ದಹನಚಂಡಿಕೇಶ್ವರಲಿಂಗ	ಕೆ. 499 ಶ. ಪ್ರ. ಸಂ .ಮು 199 ವ 414
133	ಪರಾರಿದೇವಯ್ಯ	ಮಹಾದೇವಲಿಂಗ	ವ.ಶ. ಸಾ;
134	ಬತ್ತಲೇಶ್ವರ	ನಿರ್ಮಾಣ ಲಿಂಗ ನಿರ್ವಾಣ ನಾಯಕ	ವ.ಶ. ಸಾ. ಶಿ. ಸಂ
135	ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡ್ ವ್ವೆ	ನಿಂಬೇಶ್ವರ	ವ.ಶ. ಸಾ. ಶಿ. ಸಂ.
136	ಬಂಕಣ್ಣಯ್ಯ	ಸದ್ಗುರು ಪ್ರಿಯಶಿವಸಿದ್ಧ ರಾಮೇಶ್ವರ	ವ. ಶಾ. ಸಾ
137	ಬಸವಣ್ಣ	ಕೂಡಲಸಂಗಮದೇವ	ಬ. ಷ. ವ
138	ಬಳ್ಳೇಶ ಮಲ್ಲಯ್ಯ	ಬಳ್ಳೇಶ್ವರಲಿಂಗ	ಕೆ 499. ವ. ಶಾ. ಸಾ. ಬೆ. ವ267 ಸ.ಬೆ.ವ.418–422
139	ಬಳ್ಳೇಶ ರಾಮಯ್ಯ		ಸ. ಪಉ. ವ. ಭಾಗ–1
140	ಬಹುರೂಪಿ ಚೌಡಯ್ಯ	ರೇಕಣ್ಣಪ್ರಿಯ ನಾಗಿನಾಥ/ ರೇಕನಾಥಯ್ಯ	ಷ. ಪರ. ಸಂ. 800 ವ. ಶಾ. ಸಾ;
141	ಬಾಚಿಕಾಯಕದ ಬಸವಣ್ಣ ಬಸಪ್ಪ	ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗ	ಸ. ಪಉ. ವ ಕೆ 499. ವ. ಶಾ. ಸಾ; ಬೆ. ವ. 286, 789, ಸ ಪು. ಬೆ. ವ. 432, 433
142	ಬಾಚಿಕಾಯಕದ ಬಸ(ವಣ್ಣೆ)ಪ್ಪಯ್ಯಗಳ ಪುಣ್ಯಸ್ತ್ರೀ	ಕರ್ಮಹರ ಕಾಳೇಶ್ವರ	ಶೀ. ಸಂ. 432, 433;

	ಕಾಳವ್ವೆ		ಸ.ಪು.ವ
143	ಬಾಲಬೊಮ್ಮಣ್ಣ	ವೀರಶೂರ ರಾಮೇಶ್ವರಲಿಂಗ ವೀರಶೂರ ರಾಮನಾಥ	ವ. ಶಾ. ಸಾ; ಕೆ 499 ಷ. ಪರ. ಸಂ424–445
144	ಬಾಲಸಂಗಣ್ಣ	ಕಮಠೇಶ್ವರ ಲಿಂಗ	ವ. ಶಾ. ಸಾ; ಕೆ 499; ಕ.ಕ.ಚ. ಈ ಪು. 220
145	ಬಾಲಸಂಗಯ್ಯ	ಅಪ್ರಮಾಣಕೂಡಲಸಂಗಮದೇವ	ವ. ಶಾ. ಸಾ ಅಪ್ರಮಾಣ ಕೂಡಲಸಂಗಮ ದೇವರ ವಚನಗಳು
146	ಬಲಸಂಗಯ್ಯ (ಬಸವಣ್ಣನವರ ಮಗ)	ಬಾಲಸಂಗಯ್ಯಪ್ರಿಯ ಕೂಡಲ ಸಂಗಮದೇವ	ಕ. ಕ. ಚ. ಐ. ಪು. 700
147	ಬಾಹೂರ ಬೊಮ್ಮಣ್ಣ	ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗ	ವ. ಶಾ. ಸಾ; ಕೆ. 468 ಶಿ. ದಾ. ಗೀ. ಪು. 331
148	ಬಿಕಾರಿ ಭೀಮಯ್ಯ	ಬಿಕಾರಿ ಭೀಮಲಿಂಗೇಶ್ವರ	ಸ. ಪಉ. ವ 3
149	ಬಿಜ್ಜಳದೇವ		ಕ. ಕ. ಚ. 1
150	ಬಿಬ್ಬ ಬಾಚಯ್ಯ	ಏಣಾಂಕಧರ ಸೋಮೇಶ್ವರ	ಷ. ಪರ. ಸಂ 945 ವ. ಶಾ. ಸಾ
151	ಬಿಬ್ಬದೇವ	ಕೂಡಲಸಂಗಮದೇವರಲ್ಲಿ ಬಸವಣ್ಣ	ಶ. ಚಾ. ವ
152	ಬೆಡಗಿನ ಸುಂದರಯ್ಯ	ಸುಂದರಲಿಂಗಯ್ಯ	ಕ. ಕ. ಚ. ಐ ಪು. 514

153	ಬೊಂರಾದೇವಿ/ ಬೊಂತಲದೇವಿ	ಬಿಡಾಡಿ	ವ. ಶಾ. ಸಾ. ಕೆ 499; ಕ. ಕ. ಚ. 3
154	ಬೊಕ್ಕಸದ ಸಂಗಣ್ಣ (ಚಿಕ್ಕಣ್ಣ)	ಬಸವಣ್ಣಪ್ರಿಯ ನಾಗೇಶ್ವರಲಿಂಗ ನಾಗೇಶ್ವರ	ವ. ಶಾ. ಸಾ; ಷ. ಪ್ರ ಸಂ. 685
155	ಭರಿತಾರ್ಪಣದ ಚೆನ್ನಬಸವಣ್ಣ	ಚೆನ್ನಕೂಡಲ ರಾಮೇಶ್ವರ ಲಿಂಗ	ಕೆ 499 ಶಿ.ದಾಗೀ.ಪು. 345
156	ಕೆಂಭಾವಿ ಭೋಗಣ್ಣ	ನಿಜಗುರು ಭೋಗಶ್ವರ ನಿಜಗುರುಭೋಗಸಂಗ	ವ. ಶಾ. ಸಾ; ಸ. ಬೆ. ವ. 470, 479
156ಅ	ಭಿಕಾರಿ ಭೀಮಯ್ಯ	ಭಿಕಾರಿ ಭೀಮೇಶ್ವರ ಲಿಂಗ	ಸ. ಪ. ವ .3
157	ಮಧುವರಸ	ಆರ್ಕೇಶ್ವರಲಿಂಗ	ಸ. ಪು. ವ. ಈ; ಮಧುವಯ್ಯಗಳ ವಚನ
158	ಮಡಿವಳ ಮಾಚಿದೇವ	ಕಲಿದೇವಯ್ಯ	ಮಡಿವಾಳ ಮಾಚಿದೇವರ ವಚನಗಳು; ವ. ಶಾ. ಸಾ; ವೀ. ಚಿಂ. ಷ. ಪರ. ಸಂ
158ಅ	ಮಡಿವಾಳ ಮಾಚಯ್ಯಗಳ ಸಮಾಚಾರದ ಮಲ್ಲಿಕಾರ್ಜುನ	ಪರಮಪಂಚಾಕ್ಷರ ಮೂರ್ತಿ ಶಾಂತ ಮಲ್ಲಿಕಾರ್ಜುನ	ಸ. ಪಉ. ವ 3
159	ಮನಸಂದ ಮಾರಿತಂದೆ	ಮನಸಂದಿತ್ತುಮಾರೇಶ್ವರ ಮಾರೇಶ್ವರಯ್ಯ ಮಾರೇಶ್ವರೊಡೆಯ	ವ. ಶಾ. ಸಾ ಕೆ 648 ಸ. ಪು. ವ. 1 ಮತ್ತು 2
160	ಮನುಮುನಿ ಗುಮ್ಮಟದೇವ ಗುಮ್ಮಟಯ್ಯ, ಗೊಮ್ಮಟಯ್ಯ	ಗುಡಿಯ ಗುಮ್ಮಟಡೊಡೆಯ ಅಹಮೇಶ್ವರ(ಆಗಮೇಶ್ವರ)	ವ. ಶಾ. ಸಾ. ಷ. ಪ್ರ. ಸಂ. 311, 472

		ಲಿಂಗಗುಡಿಗುಹೆಯ ಗುಮ್ಮಟನಾಥ, ಗುಮ್ಮಟನಾಥದೊಡೆಯ ಆಗಮೇಶ್ವರ ಲಿಂಗ	
160ಅ	ಭಾವಿಯ ಸೋಮಣ್ಣ	ಮರುಭಾವಿಯ ಸೋಮ	
161	ಮರುಳದೇವ	ಪರಮಪ್ರಭು	
162	ಮರುಳಶಂಕರದೇವ, ಮರುಳದೇವ	ಶುದ್ಧ ಸಿದ್ಧ ಪ್ರಸಿದ್ಧ ಶಾಂತ ಮಲ್ಲಿಕಾರ್ಜುನ ಶುದ್ಧಸಿದ್ಧಪ್ರಸಿದ್ಧ ಪ್ರಸನ್ನ ಪ್ರಭವೆ ಶಾಂತ ಮಲ್ಲಿಕಾರ್ಜುನ ದೇವ; ಲಿಂಗ ರೇವಣಪ್ರಭು	ವ. ಶಾ. ಸಾ; ಶೂ. ಸಂ
163	ಮರಳಸಿದ್ಧೇಶ್ವರ	ಗುರುಕುಲದ ಮಲ್ಲಯ್ಯ	ಕೆ 499
164	ಮಲ್ಲಯ್ಯ	ಅಮರಗುಂಡದ ಮಲ್ಲಿಕಾರ್ಜುನ	ಕ. ಕ. ಚ. ಐ ಪು. 237
165	ಮಲ್ಲಿಕಾರ್ಜುನ ಪಂಡಿತಾರಾಧ್ಯ	ಮಾಗುಂಡದ ಮಲ್ಲಿಕಾರ್ಜುನ ದೇವ	ವಿ. ಷ. ವ. 65, 481.
166	ಮಹಾದೇವಿ	ಮಹಾದೇವ ಜ್ಯೋರ್ತಿಲಿಂಗ	247, 57
167	ಮಾರಪ್ರಭು	ಮಾರೇಶ್ವರ ಲಿಂಗಾತ್ಮ	ವ. ಶಾ. ಸಾ. ಕ. ಕ. ಚ. ಕೆ 499
168	ಮಾರೇಶ್ವರೊಡೆಯ	ಮಾರೇಶ್ವರ	ಕ. ಕ. ಚ. ಐ ಪು. 220
168ಅ	ಮಾರಯ್ಯ	ಮಹಾಲಿಂಗಚೆನ್ನರಾಮಯ್ಯ	ಮುಕ್ತಿ ಕಂಠಾಭರಣ
169	ಮೈದುನರಾಮಯ್ಯ	ಮಹಾಲಿಂಗ ಚೆನ್ನಯ್ಯ ಊರ್ಧ್ವರೇತೋಮೂರ್ತಿ	ಕೆ 499
170	ಮಲಹರ ಕಾಯಕದ ಚಿಕ್ಕದೇವಯ್ಯ	ಶ್ವೇತಸ್ವಯಂಭೂ ಕಪಿಲೇಶ್ವರ ಲಿಂಗ	ಕೆ 499; ಸ.ಬ.ವ. 452–453

171	ಮಾದರ ದೂಳಯ್ಯ (ದುಡಯ್ಯ)	ಕಾಮಧೂಮಧೂಳೇಶ್ವರ ಧೂಳೇಶ್ವರ	ಶ. ಚಾ. ವ. 272; ಸ. ಪು. ಬೆ. ವ. 202–205
172	ಮಾದರ ಚೆನ್ನಯ್ಯ	ಕೈಉಳಿಕತ್ತಿ ಅಡಿಗೂಟಕ್ಕೆಡೆಯಾಗಬೇಡ ಅರಿನಿಜಾತ್ಮ ರಾಮ ರಾಮನ	ಸ. ಪಲು. ವ. ಐ ಕೆ 648 ಷ. ಪ್ರ. ಸಂ. ಕೆ 499 ಸ. ಪು. ವ. 3
173	ಮಾರಡಿಗಿ ನಾಚಯ್ಯ	ನಾಚಯ್ಯ ಪ್ರಿಯ ಮಲ್ಲಿನಾಥ	ಕೆ 499
174	ಮಿಂಡ ಸಂಗಯ್ಯ	ತರುಣ ಸಂಗಮ ಲಿಂಗದೇವ	ವ. ಶಾ. ಸಾ.
175	ಮುಕ್ತಾಯಕ್ಕ	ಅಜಗಣ್ಣ ತಂದೆ	ವ. ಶಾ. ಸಾ; ವೀ ಚಿಂ. ಶಿ. ಶ. ವ(ಸಮಗ್ರ) ಸ. ಪು. ವ. 2.
176	ಮುಗ್ಧ ಸಂಗಯ್ಯ	ಮುಗ್ಧಸಂಗ	
177	ಮುಮ್ಮಡಿ ಕಾರ್ಯೇಂದ್ರ	ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೇ	ವ. ಶಾ. ಸಾ.
178	ಮೂಲಪ್ರಣವದೇವ	ಮೂಲಪ್ರಣವದೇವ	ಕ. ಕ. ಚ. ಐ ಪು. 514
179	ಮೆರೆಮಿಂಡದೇವ	ಐಘಟದೊರೆ ರಾಮೇಶ್ವರಲಿಂಗ	ಸ. ಪಲು. ವ. ಐ ಕ. ಕ. ಚ. 3, ಷ. ಪ್ರ. ಸಂ; ವ. ಶಾ. ಸ.
180	ಮೆರೆಮಿಂಡದೇವ	ರಾಮೇಶ್ವರಲಿಂಗ	ವ. ಶಾ. ಸಾ
181	ಮೇದಾ(ದ) ರ ಕೇತಯ್ಯ	ಗೌರೇಶ್ವರ, ಗೌರೇಶ್ವರಲಿಂಗ ಗವರೇರ್ಶವರ	ವ. ಶಾ. ಸಆ; ಷ. ಪರ. ಸಂ. 705, ಕ. ಕ. ಚ. ಐ ಪು. 228
182	ಮೈದುನ ರಾಮಯ್ಯ	ಮಹಾಲಿಂಗ ಚೆನ್ನರಾಮ;	ಕೆ 499. ವ. ಶಾ. ಸ.

		ಮಹಾಲಿಂಗ ಚೆನ್ನಯ್ಯ	ಕ. ಕ. ಚ.
183	ಮೌಕ್ತಿಕ ಸಂಗಯ್ಯ	ಮುತ್ತಿನಸಂಗಲಿಂಗ	ಕ. ಕ. ಚ. ಈ ಪು. 514
184	ಮೋಳಿಗೆಯಮಾರಯ್ಯ	ನಿಷ್ಕಳಂಕ ಮಲ್ಲಿಕಾರ್ಜುನ	ಮೋಳಿಗೆ ಮಾರಯ್ಯನ ವಚನಗಳು ಶೂ. ಸಂ. ಸ. ಪು. ವ.
185	ಮೋಳಿಗೆ ಮಾರಯ್ಯಗಳ ಪುಣ್ಯಸ್ತ್ರೀ ರಾಣಿ ಮಹಾದೇವಿ	ಎನ್ನಯಪ್ರಿಯ ಇಮ್ಮಡಿ ನಿಃಷ್ಕಳಂಕ ಮಲ್ಲಿಕಾರ್ಜುನ	ವ. ಶಾ. ಸಾ. ರಾಣಿ ಮಹಾದೇವಿಯ ವಚನಗಳು ಸಿ. ಬಂ; ಶ. ಪರ. ಬ ಸಂ
186	ರಕ್ಕಸದ ಬೊಮ್ಮಣ್ಣ ರಕ್ಕಸ ಬೊಮ್ಮಣ್ಣ	ರಕ್ಕಸನೊಡೆಯ ಕೊಟ್ಟಿದ್ದು ಬೇಡ	ಸ. ಪು. ಬೆ. ವ. 390–394, ಶಿವಶರಣರ ಬೆಡಗಿನ ವಚನಗಳು
187	ರತ್ನದ ರಾಚಯ್ಯ	ವೀರ ರಾಚೋಟ ಲಿಂಗ	ಕ. ಕ. ಚ. ಐ. ಪು. 514
187ಅ	ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ರಾಯಣ್ಣ	ಅಮುಗೇಶ್ವರಲಿಂಗ	ಸ. ಪು. ವ. 3
188	ರಾಯಸದ ಮಂಚಣ್ಣ	ಬಾಂಬೇಶ್ವರ	ಶ. ಪ್ರ. ಸಂ. ವ. ಶಾ. ಸಾ.
189	ರಾಯಸದ ಸಂಕಣ್ಣ		
190	ರೆಮ್ಮವ್ವೆ	ಆಚಾರವೇ ಪ್ರಾಣವಾದ	ಕ. ಕ. ಚ. ಪು. 535
190ಅ	ರೇವಣಸಿದ್ಧ	ರಾಮೇಶ್ವರಲಿಂಗ	ಮು. ಕಂ. ಭ
191	ರೇವಣಸಿದ್ಧಯಗಳ ಪತ್ನಿ ರೇಕಮ್ಮ	ತ್ರಿಪುರಾಂತಕ ಸೋಮಲಿಂಗ ಶ್ರೀ ಗುರುಸಿದ್ಧೇಶ್ವರ	ವ. ಶಾ. ಸ.

192	ಲದ್ದೆಯ ಸೋಮಣ್ಣ	ಲದ್ದೆಯ ಸೋಮ	
193	ಲಿಂಗಸತ್ಯಣ್ಣ	ಲಿಂಗಸತ್ಯಣ್ಣ	ಕ. ಕ. ಚ. ಐ. ಪು. 514
193ಅ	ಲಿಂಗವದೂತ		ಕ. ಕ. ಚ. ಐ. 515
194	ಲಿಂಗಾವಜ್ಯೋತಿ		ಕ. ಕ. ಚ. ಐ. 515
195	ವಚನಭಂಢಾರಿ ಶಾಂತರಸ	ಆಲೇಖನದ ಶೂನ್ಯ ಕಲ್ಲಿನೊಳಗಾದ	ವ. ಶಾ. ಸಾ; ಸಾ. ಪು. ಬೆ. ವ ಸ. ಪು. ವ. 1022
196	ವರದ ಸಂಗಣ್ಣ/ ವರದ ಶಂಕರಣ್ಣ	ವರದ ಶಂಕರೇಶ್ವರ	ವ. ಶ. ಸಾ. ಕೆ 499
197	ವೀರ ಗೊಲ್ಲಾಳಯ್ಯ/ ಕಾಟ ಕೂಟಯ್ಯ	ವೀರ ಬೀರ ಲಿಂಗೇಶ್ವರ	ಕ. ಕ. ಚ. ಐ .ಪು 232
198	ವೀರಚಂಡ	ವೀರಚಂಡ ಲಿಂಗ	ಕ. ಕ. ಚ. ಐ. ಪು. 514
199	ವೀರಣ್ಣದೇವ	ಶಾಂತಮಲ್ಲಿಕಾರ್ಜುನ	ವ. ಶಾ. ಸಾ; ಸ. ಪ್ರ ಸಂ.
200	ವೀರದೇವಮ್ಮ		ಶ. ಚ. ವ.
200ಅ	ವೇದ ಕಂಚುಕಿ	ವೇದ ಕಂಚುಕಿ	ಮು. ಕಂ. ಭ
201	ವೇದಮೂರ್ತಿ ಸಂಗಣ್ಣ	ಲಲಾಮಭೀಮಸೋಮೇಶ್ವರ ಲಿಂಗ	ಕ.499 ಕ.ಕ.ಚ
202	ವೈದ್ಯ ಸಂಗಣ್ಣ	ಮರುಳಶಂಕರ ಪ್ರಿಯಸಿದ್ಧ ರಾಮೇಶ್ವರಲಿಂಗ	ವ. ಶಾ. ಸಾ. ಕೆ 499
203	ಶಂಕರದಾಸಿಮಯ್ಯ	ನಿಜಗುರು ಶಂಕರದೇವ	ಶ. ಚಾ. ವ. ಶು. ಸಂ
204	ಶಂಕರಸೋಮಯ್ಯ	ಸಾಂಬ ಸೋಮೇಶ್ವರ ಲಿಂಗ	ಕ. ಕ. ಚ. ಐ ಪು. 514
205	ಶಾರ್ದೂಲ ಸಂಗಯ್ಯ	ಶಾದೂಲ ಲಿಂಗ	ವ. ಶಾ. ಸಾ. ಕ. ಕ.

			ಚ.
206	ಶಾಂತರಾಮ	ಶಾಂತರಾಮಲಿಂಗ	ವ. ಶಾ. ಸಾ. ಕ. ಕ. ಚ. ಐ ಪಿ. 514
207	ಶಾಂತಶೆಟ್ಟಿ	ಶಿವಕಾಂತ ಮಲ್ಲಿಕಾರ್ಜುನ; ಶಾಂತರಾಮ, ಶಾಂತರಾಮಲಿಂಗ	ಕ. ಕ. ಚ. ಐ . ಪು. 514
208	ಶಿವನಾಗಮಯ್ಯ	ನಾಗಪ್ರಿಯ ಚೆನ್ನರಾಮೇಶ್ವರ	ವ. ಶಾ. ಸಾ. ಪ್ರ ಸಂ
209	ಶಿವಪೂಜೆಯ ಭೀಮಯ್ಯ	ಶಿವಪೂಜೆಯ ಭೀಮ	ಕ. ಕ. ಚ. ಐ. ಪು. 514
210	ಶಿವಮಾಯಿದೇವಿ		
210ಅ	ಶಿವಯೋಗಿದೇವ		ಬೈ. ಕಾ. ಕ. ಸೂ. ರ
211	ಶಿವಲಿಂಕಮಂಚನ	ಈಶಾನ್ಯಮೂರ್ತಿ ಮಲ್ಲಿಕಾರ್ಜುನ	ವ. ಶಾ. ಸಾ. ಷು. ಪ್ರ. ಸಂ
212	ಶಿವಾನಂದದೇವ	ಶಿವಾನಂದ ಲಿಂಗ	ಕ. ಕ. ಚ. ಪು. 514
213	ಷಣ್ಮುಕಸ್ವಾಮಿ	ಅಖಂಡೇಶ್ವರ	ಅಖಂಡೇಶ್ವರ ವಚನಗಳು
214	ಸಂಗನ ಬಸವ	ಸಂಗನ ಬಸವೇಶ್ವರ	ಸಂಗನ ಬಸವೇಶ್ವರ ವಚನಗಳು
215	ಸಕಲೇಶ ಮದರಸ	ಸಕಲೇಶ್ವರದೇವ	ಸಕಲೇಶ ಮಾದರಸ ವಚನಗಳು
216	ಸಗರದ ಬೊಮ್ಮಣ್ಣ/	ಸಗರದ ಬೊಮ್ಮನೊಡೆಯ; ತನುಮನ ಸಂಗಮೇಶ್ವರ ಶಂಭುಜಕ್ಕೇಶ್ವರಯ್ಯ	ಸ. ಬೆ. ಸಂ
217	ಸತ್ಯಕ್ಕ	ಶಂಭುಜಕ್ಕೇಶ್ವರಯ್ಯ	ಷ. ಪ್ರ. ಸಂ; ವೀ.

			ಚಿಂ; ವ. ಶಾ. ಸಾ.
218	ಸತ್ತಿಗೆ ಕಾಯಕದ ಮಾರಿ ತಂದೆ	ಐಘಟೇಶ್ವರ ಲಿಂಗ	
219	ಸತ್ತಿಗೆ ಕಾಯಕದ ಇಟ್ಟಪಯ್ಯ		
220	ಸಿದ್ಧದೇವಮ್ಮ		
221	ಸಿದ್ಧಬುದ್ಧಯ್ಯ		
222	ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳಯ್ಯ	ಭೀಮೇಶ್ವರ	ವ. ಶಾ. ಸಾ; 1384
223	ಸಿದ್ಧರಾಮ	1– ಕಪಿಲ ಸಿದ್ಧಮಲ್ಲಿಕಾರ್ಜುನ 2– ಯೋಗೀನಾಥ	ಸಿದ್ಧರಾಮೇಶ್ವರನ ವಚನಗಳು, ಸಿದ್ಧರಾಮ ಸಾಹಿತ್ಯ
224	ಸಿದ್ಧವೀರದೇವ	ತೋಂಟದ ಸಿದ್ಧಲಿಂಗದೇವ	ಕ. ಕ. ಚ. ಐ. ಪು. 514
225	ಸಿದ್ಧಾಂತಿ ವೀರ ಸಂಗಯ್ಯ	ಗೊಳಕಾಕಾರವಿಶ್ವರಹಿತ ಲಿಂಗ	ಕೆ 499
226	ಸಿಮ್ಮಲಿಗೆಯ ಚೆನ್ನಯ್ಯ ಚೆಂದಯ್ಯ, ಚೆನ್ನರಾಮ	ಸಿಮ್ಮಲಿಗೆಯ ಚೆನ್ನರಾಮ	ಕ. ಕ. ಚ. ಐ. ಪು. 197
227	ಸುಂಕದ ಬಂಕಣ್ಣ	ಬಂಕೇಶ್ವರ ಲಿಂಗ, ಚೆನ್ನಬಂಕನಾಥ, ಜಗಸುಂಕದೊಡೆಯ ಬಂಕೇಶ್ವರ ಲಿಂಗ, ವೀರ ಬಂಕೇಶ್ವರ	ವ. ಶಾ. ಸಾ. ಕೆ648 ಎಳಮಲೆಯ ಗುರುಶಾಂತ ದೇವರ ವಚನ ಸಂಕಲನಗಳು ಸ. ಪು. ವ. 2 ಸ. ಪಉ. ಬೆ. ವ
228	ಸುವರ್ಣಾದೇವಿ	ಸುವರ್ಣಲಿಂಗ	ಕ. ಕ. ಚ. ಐ. ಪು 229

229	ಸೂಜಿಕಾಯಕದ ರಾಮಿತಂದೆ	ಪ್ರಸನ್ನಕವಿ ಕಪಿಲಸಿದ್ಧ	ಕೆ 499
230	ಸೊಡ್ಡಳಬಾಚರಸ	ಸೊಡ್ಡಳ ದೇವರಾಯ ಸೊಡ್ಡಳ ಮಹಾದಾನಿ ಸೊಡ್ಡಳ	ವ. ಶ. ಸಾ. ಶಿ. ಸಂ. ವ. ವಿ. ಚಿಂ
231	ಸೌಂದರಿದೇವಿ	ಶ್ರೀ ಗುರು ಸೋಮಲಿಂಗಶರಣೆ	ಮು. ಕಂ. ಭ
232	ಸ್ವತಂತ್ರ ಸಿದ್ಧಲಿಂಗೇಶ್ವರ	ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ	ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳು
233	ಹಡಪದ ಅಪ್ಪಣ್ಣ/ ಸಂಗಮೇಶ್ವರ ಅಪ್ಪಣ್ಣ	ಬಸವಪ್ರಿಯ ಚನ್ನಸಂಗಮದೇವ	ಶೂ. ಸಂ. ವ, ಶಾ. ಸಾ; ಷ ಪ್ರ, ಸಂ
234	ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಣ್ಣ	ಅಪ್ಪಣ್ಣಪ್ರಿಯ ಚೆನ್ನಬಸವಣ್ಣ	ಕ. ಕ. ಚ. ಐ 219
235	ಹಡಪದ ರೇಚಣ್ಣ	ಕೂಡಲಸಂಗಮದೇವ	ಕೆ. 499
235ಅ	ಹಾದರಕಾಯಕದ ಮಾರಯ್ಯ		
236	ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಣ್ಣ	ಗಂಗೇಶ್ವರ ಲಿಂಗ	ಶಿ. ಸಂ. ವ; ಶ. ಚಾ. ವ. ಸ. ಪು. ವ. 3
237	ಹಾವಿನ ಹಾಳ ಕಲ್ಲಯ್ಯ	ಮಹಲಿಂಗ ಕಲ್ಲೇಶ್ವರ	ಹಾವಿನ ಕಾಳ ಕಲ್ಲಯ್ಯನ ವಚನಗಳು
238	ಹುಲಿಗೇರಿಯ ಸೋಮಣ್ಣ	ಹುಲಿಗೇರಿಯ ಸೋಮೇಶ್ವರ	ವ. ಶಾ. ಸ.
238ಅ	ಹುಂಜಿಯ ಕಾಳಗದ ದಾಸಯ್ಯ	ಚಂದ್ರಚೂಡೇಶ್ವರ ಲಿಂಗ	ಸ. ಪು. ವ. ಪು. 2
239	ಹೆಂಡದ ಮಾರಯ್ಯ	ಧರ್ಮೇಶ್ವರಲಿಂಗ	ಕೆ. 499
240	ಒಡೆವುಳ್ಳ ಬಂಕಣ್ಣ	ಕುಂಭೇಶ್ವರ ಲಿಂಗದಲ್ಲಿ ಜಗನ್ನಾಥ ಸಾಕ್ಷಿ	ವ. ಶಾ. ಸಾ. ಕೆ 499 ಕ.ಕ.ಚ.
241	ಕ್ಷೇತ್ರನಾಥ	ಕ್ಷೇತ್ರನಾಥಲಿಂಗ	ಸ. ಪು. ಬೆ. ವ. ವ. ವ. ಶಾ. ಸಾ. ಕ. ಚ. ಚ.

ಹೆಸರು ತಿಳಿಯದೇ ಅಂಕಿತ ಮತ್ತು ವಚನಗಳು ಮಾತ್ರ ದೊರೆತಿವೆ, ಅವುಗಳನ್ನು ಕೆಳಗಿನಂತೆ ವಿವರಿಸಬಹುದು.

	ವಚನಕಾರರ ಹೆಸರು	ಅಂಕಿತ	ಆಕರ
242		ಅಗಮ್ಯೇಶ್ವರಲಿಂಗ	ಷಟ್ಪ್ರಕಾರ ಸಂಗ್ರಹ ಪು. 146 ವ. 511
243		ಅಖಂಡಮಂಡಲೇಶ್ವರ	ಶರಣಚಾರಿತ್ರದ ವಚನಗಳು
244		ಅನುಗಲೇಶ್ವರ	„ „ 226
245		ಅಪ್ರಮಾಣ ಗುಹೇಶ್ವರ	„ „ 17
246		ಅಶ್ವತ್ಥರಾಮ	„ „ 91
247		ಆನಂಧಸಿದ್ಧೇಶ್ವರ	„ „ 42, 234
248		ಆರಾಧ್ಯ ಪ್ರಿಯ ಸಕಳೇಶ್ವರ	„ „ „ 1
249		ಈಶಾನ್ಯ ಸಕಲೇಶ್ವರ	
250		ಈಶ್ವರೀಯ ವರದ ಮಹಾಲಿಂಗ	„ „ 70
251		ಈಶ್ವರೀಯ ವರದ ಚೆನ್ನರಾಮ	ವಿಶೇಷನುಭವಷಟಸ್ಥಲ ಪೂ. 42 ವ 16
251ಅ		ಓಂಕಾರ ನಿಜಲಿಂಗ ಪ್ರಭು	ವ. ಶ. ಸ. 252
252		ಕದಂಬಕಲಶ ಕೂಡಲ ಚೆನ್ನಸಂಗ	ಲಿಂಗಲೀಲಾ ವಿಲಾಸ ಚಾರಿತ್ರ 347
253		ಕಲ್ಲಯ್ಯ	ಕಲ್ಲೇಶ್ವರ ದೇವರು ವಿಶೇಷಾನುಭವ ಷಟ್‌ಸ್ಥಳ 138, ಷಟ್ಪ್ರಕಾರ ಸಂಗ್ರಹ 117, 251,

254		ವ. ಶಾ. ಸಾ. ಕ. ಕ. ಚ.
255	ಕಾಮೇಶ್ವರಲಿಂಗ	ವಚನಶಾಸ್ತ್ರಸಾರ 451
256	ಕಿನ್ನರ ತ್ರಿಪುರಾಂತಕ ಲಿಂಗ	„ 1557
257	ಕಿಟೇಶ್ವರಲಿಂಗ	ಶರಣಚಾರಿತ್ರದ ವಚನಗಳು 139
258	ಕುಮಾರ ಸಂಗ	ವಚನಶಾಸ್ತ್ರಸಾರ. ಪು. 703
259	ಕುರಂಗೇಶ್ವರಲಿಂಗ	ಶೀಲಸಂಪಾದನೆ 129, 428
260	ಕುರಂಗಲಿಂಗ	ಶರಣಚಾರಿತ್ರದ ವಚನಗಳು"–30

ಈ ಮೇಲ್ಕಂಡ ಕಾಯಕ ಜೀವನ ಧಾರೆಯು ಅಂದಿನ ಸಮಾಜದಲ್ಲಿ ಸಾಂಸ್ಕೃತಿಕ ಕ್ರಾಂತಿಯನ್ನು ಉಂಟು ಮಾಡಿತು. ತಮ್ಮ ನಡೆ–ನುಡಿ, ಜೀವನೋಪಾಯಕ್ಕೆ ಕಂಡುಕೊಂಡ ಮಾರ್ಗಗಳು ಪರಿಣಾಮಕಾರಿಯಾಗಿದ್ದವು. ಅವುಗಳಲ್ಲಿ ಸಮಾಜ ಒಗ್ಗೂಡುವಿಕೆಗೆ ಬಹುಮುಖ್ಯ ಪಾತ್ರವಹಿಸುವ ಆಹಾರ ಪದ್ಧತಿ, ಏಕದೇವೋಪಾಸನೆ, ಬೇರೆ ಹೆಸರಿನಿಂದಲೂ ಇಷ್ಟ ದೇವನ ಆಚರಣೆಯಿಂದ ಬಂದಂತಹ ಒಂದು ಸಾಂಪ್ರದಾಯಿಕ ಪರಿಸರದ ಚೌಕಟ್ಟನ್ನು ಮುರಿಯುತ್ತದೆ. ಇವುಗಳನ್ನು ನಿವಾರಿಸಿ ಹೊಸ ಬದಲಾವಣೆ ತರಬೇಕೆಂಬ ಮಹಾದಾಸೆಯಿಂದ ಕಾರ್ಯ ರೂಪಕ್ಕೆ ಬರುತ್ತಾರೆ. ಅಂದಿನ ಹೊಸ ಕಾಲಮಾನದಲ್ಲಿ ಗೃಹಾಧಾರಿತ ಕಸುಬುಗಳು ಬಹುಮುಖ್ಯವಾಗಿದ್ದವು. ಈ ಕಸುಬುಗಳು ಅವರಿಗೆ ಇದ್ದ ಗೌರವ ಘನತೆಗಳನ್ನು ಹೆಚ್ಚಿಸುತ್ತಿದ್ದವಲ್ಲದೆ, ಸಾಮಾಜಿಕ ಸ್ಥಾನಮಾನಗಳನ್ನು ಒದಗಿಸಿದವು. ಈ ಕ್ರಾಂತಿಯಲ್ಲಿ ಭಾಗವಹಿಸಿದ ಎಲ್ಲಾ ವರ್ಗಗಳ ಜನರೂ ಕೂಡ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ಸಮ ಪಾಲುದಾರರಾಗಿ ಭಾಗವಹಿಸುತ್ತಿದ್ದರೆಂಬುದಕ್ಕೆ ವಚನಗಳೆಂದು ತಿಳಿದುಬರುತ್ತದೆ. ಶರಣರು ಆರಂಭಿಸಿದ ಸಂಸ್ಕೃತಿಯನ್ನೊಳಗೊಂಡ ಕುಟುಂಬ ಮತ್ತು ಸಮುದಾಯ ಆಧಾರಿತ ಕಾಯಕ ವೃತ್ತಿಯು ಬಹುಬೇಗ ಜನಪ್ರಿಯವಾಯಿತು. ಪ್ರಸ್ತುತ

ದಿನಗಳಲ್ಲಿ ಶ್ರಮಾಧಾರಿತ ಸಮಾಜ ರೂಪುಗೊಳ್ಳಲು ಅನುವಾದ ಕಾಯಕ ಕ್ರಾಂತಿಯು ಇಂದಿನ ಆಧುನಿಕ ಸಮಾಜಕ್ಕೂ ಪ್ರೇರಣೆ ನೀಡಬಲ್ಲುದು. ಆದ್ದರಿಂದ ಕಾಯವನ್ನು ದಂಡಿಸಿ ಸಮಾಜದ ಏಳಿಗೆಗೆ ದುಡಿಯುವ ಮನಸ್ಸುಗಳು ರೂಪುಗೊಳ್ಳುತ್ತಿದ್ದ ಶರಣ ವ್ಯವಸ್ಥೆ ಕ್ರಾಂತಿಕಾರಿಯಾದ ವಿಚಾರಣಾಧಾರೆಯನ್ನು ಸಮಾಜಕ್ಕೆ ನೀಡುತ್ತಿದ್ದವು. ಇದರ ಪರಿಣಾಮವಾಗಿ ಅಂದಿನ ಅರ್ಥವ್ಯವಸ್ಥೆಯು ವೃತ್ತಿ ಆಧಾರಿತವಾಗಿ ರಚನೆಯಾಗತೊಡಗಿತು ಪ್ರತಿಯಬ್ಬ ಶರಣನು ಒಂದೊಂದು ವೃತ್ತಿಕಾಯಕದಲ್ಲಿ ತೊಡಗಿದರು ವೃತ್ತಿ ದುಡಿಮೆಯಿಂದ ಬಂದ ಸಂಪತ್ತನ್ನು ಸಂಗ್ರಹಿಸದೇ ತಮಗೆ ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿ ಉಳಿದುದ್ದನ್ನು ಸಮಾಜದ ಒಳಿತಿಗೆ ಬಳಸಿದರು. ಶರಣರು ನಡೆದಂತೆ ನುಡಿದು, ನುಡಿದಂತೆ ನಡೆದುದ್ದಕ್ಕೆ ಕಾಯಕ ಸಂಸ್ಕೃತಿ ಜನ್ಮತಾಳಿತು ಇದರ ಪಲಿತವೆಂಬಂತೆ ಸಾಮಾಜಿಕವಾಗಿ ನೊಂದ ಜೀವಿಗಳಿಗೆ ವೃತ್ತಿಆಧಾರಿತ ಬದುಕು ಸಂತೋಷಕೊಟ್ಟಿತ್ತಲ್ಲದೆ, ಹೊಸಬದುಕಿನ ಅನ್ವೇಷಣೆಯ ಹಾದಿಯನ್ನಿಡಿಯುತ್ತದೆ. ತಮ್ಮ ವೈಯಕ್ತಿಕ ಬದುಕಿನಲ್ಲಿ ಹೊಸ ಚಿಂತನೆ ಆರಂಭವಾಗಿ ಪರರ ಊಳಿಗವನ್ನು ಬಿಟ್ಟು ಸ್ವಾಭಿಮಾನದ ಬದುಕನ್ನು ಕಂಡುಕೊಳ್ಳುವಂತೆ ಈ ಕಾಯಕ ಸಂಸ್ಕೃತಿ ಪ್ರೇರಣೆ ನೀಡುತ್ತದೆ. ಈ ಶಿವಶರಣರ ತತ್ವಗಳು ಇಂದಿಗೂ ಸಹ ಪ್ರಸ್ತುತವಾಗಿದ್ದು, ಕಾಯಕ ಪೂರ್ಣ ಸಮಾಜದಿಂದ ಸಾಮಾಜಿಕ, ಆರ್ಥಿಕ ಸಾಮಾಜಿಕ ಅಂತರವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆಂದು ತಿಳಿಸಿದ್ದರು.

3.4 ಧರ್ಮನಿರಾಕರಣೆಯೊಳಗೆ ಒಡಮೂಡಿದ ಧರ್ಮ :

ಜನಸಮುದಾಯಗಳು ಪ್ರಾಚೀನಕಾಲದಿಂದಲೂ ಸಮಾಜದ ಜೊತೆಗೆ ನಿಕಟವಾದ ಸಂಬಂಧಗಳನ್ನು ಇಟ್ಟುಕೊಂಡಿರುತ್ತದೆ. ಧರ್ಮದಿಂದ ಸಮಾಜವು ರೂಪಿತವಾಗುವುದು ಕಷ್ಟ ಸಾಧ್ಯವೆನಿಸುತ್ತದೆ. ಧರ್ಮ-ದೇವರು, ವ್ಯಕ್ತಿ ಪೂಜೆ, ಶಾಸ್ತ್ರ-ಪುರಾಣ, ಮುಂತಾದ ಹೆಸರಿನಲ್ಲಿ ಧರ್ಮದ ಪರಿಕಲ್ಪನೆ ಬಹುಮುಖವಾಗಿ ವ್ಯಾಪಿಸಿರುತ್ತದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕಲ್ಯಾಣ ಕ್ರಾಂತಿಯ ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟಿಕೊಂಡ ಶರಣರ ವಿಚಾರ ಕ್ರಾಂತಿಯ ಫಲವಾಗಿ ಧರ್ಮದ ಪರಿಷ್ಕರಣೆ ಅಥವಾ ಧರ್ಮ ಸುಧಾರಣೆಗಳು ಪ್ರಾರಂಭವಾಗತೊಡಗುತ್ತದೆ. ಹಾಗೇ ಪ್ರಾರಂಭವಾಗಲೂ ಕಾರಣವನ್ನು ಕೂಡ ಸ್ಪಷ್ಟವಾಗಿ ತಿಳಿಯಬಹುದು. "12 ಶತಮಾನದ ಮಧ್ಯ ಭಾಗದ ಹೊತ್ತಿಗೆ ಕರ್ನಾಟಕದಲ್ಲಿ ಅಸ್ಥಿತ್ವದಲ್ಲಿದ್ದ ವೈದಿಕ, ಜೈನ, ಬೌದ್ಧ, ಶೈವ ಧರ್ಮಗಳು

ಸತ್ಯಹೀನವಾಗಿದ್ದವು. ವೈದಿಕ ಧರ್ಮ ಪ್ರಾಣಿ ಹಿಂಸೆಯನ್ನು ಬೋಧಿಸುವ ಶುಷ್ಕ ಯಜ್ಞ ಮಾರ್ಗಗಳಲ್ಲಿ ನಿರತವಾದರೆ ಜೈನ, ಬೌದ್ಧ, ಧರ್ಮಗಳು ತರ್ಕದಲ್ಲಿ ತಾಂಡವವಾಡುತ್ತಾ, ಜನತೆ ಆಶೋತ್ತರಗಳನ್ನು ಈಡೇರಿಸಲು ಅಸಮರ್ಥವಾಗಿದ್ದವು. ಸ್ವಾನುಭಾವಕ್ಕೆ ಪ್ರಾಧಾನ್ಯವಿರದೇ ಕರ್ಮಕ್ಕೆ ಅಗ್ರಸ್ಥಾನವಿದ್ದಿತು." -31 ಅಂದಿನ ಕಾಲದ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಲು ಶರಣರುಗಳಿಗೆ ಅಂದಿನ ಕಾಲದ ಸಾಂಪ್ರದಾಯಿಕ ಧರ್ಮಚೌಕಟ್ಟನ್ನು ಮೀರುವುದು ಅನಿವಾರ್ಯ. ಈ ಪರಿಸ್ಥಿತಿ ನಿಮಿತ್ತವಾಗಿ ಸನಾತನ ಕಾಲದಿಂದ ಬಂದಿದ್ದ ಧಾರ್ಮಿಕ ಮೂಲಭೂತವಾದವನ್ನು ಮುರಿಯಲು ಪ್ರಯತ್ನಿಸಿದರು. ಸಾಮಾಜಿಕ ಸರ್ವತೋಮುಖ ಅಭಿವೃದ್ಧಿ ಹಿನ್ನೆಡೆಗೆ ಕಾರಣವಾಗಿದ್ದ ಶಾಸ್ತ್ರ, ಪುರಾಣ, ದೇವರು, ಧರ್ಮ, ಉಪನಿಷತ್, ದೇವಾಲಯಗಳಲ್ಲಿದ್ದ ಸ್ಥಾವರಗೊಂಡ ವಿಚಾರಗಳನ್ನು ನಿರಾಕರಿಸಿದರು, ಬಹುಮುಖ್ಯವಾಗಿ ಅಂದಿನ ಕಾಲದ ಅಸ್ಪೃಶ್ಯತೆಯಿಂದ ಸಮಾಜದಲ್ಲಿ ವರ್ಗ ತಾರತಮ್ಯಗಳು, ಜಾತಿ ಸಂಕರಗಳು ತಲೆದೋರುತ್ತವೆ, ಈ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಮೇಲು-ಕೀಳು, ಉಚ್ಚ-ನೀಚ, ಕನಿಷ್ಠ-ಉತ್ತಮನೆಂಬ ಭೇದ-ಭಾವ ಬಲವಾಗಿ ಬೇರೂರಿದ್ದ ಸಮಯವಿತ್ತು. ಇಂತಹ ಸಂದರ್ಭದಲ್ಲಿ ಬಸವಣ್ಣನವರು ಕೆಳವರ್ಗದ ಶರಣ 'ಮಾದಾರ ಚನ್ನಯ್ಯನ ಮನೆಯಲ್ಲಿ ಊಟಮಾಡುವುದು' ಅಂದಿನ ಶ್ರೇಣಿಕೃತ ಧಾರ್ಮಿಕ ವಲಯದಲ್ಲಿ ತಳಮಳಗಳನ್ನು ಉಂಟುಮಾಡಿತ್ತು ಇದು ಬಸವಾದಿ ಶರಣರ ವೈಚಾರಿಕ ಕ್ರಾಂತಿಯಿಂದ ಜಡ್ಡುಗಟ್ಟಿದ ಸಾಮಾಜಿಕ ವಲಯಗಳ ಅವ್ಯವಸ್ಥೆಗೆ ಆಘಾತವನ್ನುಂಟುಮಾಡುತ್ತದೆ. ಇದರಿಂದ ಸನಾತನ ಧರ್ಮಗಳ ಬೆಳವಣಿಗೆಗೆ ಕುಂಟಿತವಾಗುತ್ತದೆ.

ಆದಿಕಾಲದಿಂದಲೂ ಸಾಮಾಜಿಕ ಪಿಡುಗಾದ ವೈದಿಕ ವಿಚಾರಗಳಿಗೆ ಹಿನ್ನೆಡೆಯುಂಟಾಗುತ್ತದೆ, ಹಾಗಾಗಿ ಹೊಸ ಧರ್ಮದ ಅನಿವಾರ್ಯತೆಯಿತ್ತು. ಆಗ ಇದ್ದ ಶೈವ ಧರ್ಮವನ್ನು ಸುಧಾರಿಸುತ್ತಾ ವೀರಶೈವ ಧರ್ಮ ಹುಟ್ಟುವಿಕೆಗೆ ಕಾರಣರಾದರು. ಈ ಧರ್ಮವು ಸನಾತನ ಪರಂಪರೆಯಿಂದ ಬಂದಂತಹ ನಿಷ್ಪ್ರಯೋಜಕ ಆಚಾರ-ವಿಚಾರ ಕಟ್ಟು ಕಥೆಗಳನ್ನು ತಿರಸ್ಕರಿಸುತ್ತದೆ. ಹೀಗೆ ತಿರಸ್ಕರಿಸಿದ ನಂತರದಲ್ಲಿ ವಿಭಿನ್ನ ಮಾದರಿಯ ಸಾಂಸ್ಕೃತಿಕ ಪಲ್ಲಟಗಳಾಗುತ್ತವೆ. ಇದಕ್ಕೆ ಪ್ರೇರಣೆಯಂತೆ ಬಸವಣ್ಣನವರ ವಚನ ಸ್ಪಷ್ಟೀಕರಿಸುತ್ತದೆ.

"ವೇದ ನಡನಡುಗಿತ್ತು, ಶಾಸ್ತ್ರವಾಗಲು ನೆಲಕ್ಕೆ ಸಾರಿದಿತ್ತೆಯಾ!
ತರ್ಕ ತರ್ಕಿಸಲರಿಯದೇ ಮೂಗುವಟ್ಟಿದ್ದಿತಯ್ಯಾ

ಆಗಮ ಹೆರತೊಲಗಿ, ಅಗಲಿದಿತ್ತೆಯಾ
ನಮ್ಮ ಕೂಡಲ ಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ" -32

ಜಡ್ಡುಗಟ್ಟಿದ ಧಾರ್ಮಿಕ ವಾತಾವರಣಕ್ಕೆ ಹೊಸ ರೂಪುರೇಷೆಗಳನ್ನು ಜೊತೆಗೆ ಬದಲಿ ವ್ಯವಸ್ಥೆಯನ್ನು ರೂಪಿಸಹೊರಟರು. ಭಕ್ತಿ ಆಧಾರಿತವಾಗಿ ರೂಪುಗೊಳ್ಳುತ್ತಿದ್ದ ಸಮಾಜಕ್ಕೆ ಹಲವು ಧರ್ಮ ಮತ್ತು ಬಹು ದೈವಾಂಗಗಳನ್ನು ನಿರಾಕರಿಸಿದರು. ಶರಣರ ಸ್ವತಂತ್ರ ಆಲೋಚನಾ ಮೂಲವಾದ ಇಷ್ಟಲಿಂಗ ಪ್ರತಿಪಾದನೆಯ ವಿಚಾರದಲ್ಲಿ ಶ್ರಮಿಸಿದರು. ಈ ನಿಟ್ಟಿನಲ್ಲಿ ಶರಣರು ಕಂಡುಕೊಂಡ ಹಾದಿ ಸರಳವಾದದ್ದು "ಶರಣರು ಅಪ್ಪಿಕೊಂಡಿರುವ ಇಷ್ಟಲಿಂಗವು ಭಕ್ತಿ ಧರ್ಮದಲ್ಲಿ ಕಾಣಿಸಿಕೊಂಡಂತಹ ವ್ಯಕ್ತಿಗತ ದೇವರಾಗಿದ್ದರೂ ಅವರ ದೇವರ ಕಲ್ಪನೆ ಹೊಸತಾಗಿದೆ. ಪುರಾಣಗಳು ವರ್ಣಿಸಿದ ನಾಯನ್ಮಾರರು. ಕಾಳಾಮುಖರು ಹಾಡಿ ಹೊಗಳಿದ ಶಿವನಿಗೂ, ಶರಣರ ಇಷ್ಟಲಿಂಗಕ್ಕೂ ಹೋಲಿಸಲಾರದ ಅಂತರವಿದೆ. ಭಕ್ತಿಧರ್ಮದ ಶಿವನು ಸುಗುಣನೂ, ಆಕಾರವನು ಆಗಿದ್ದರೆ, ಶರಣಧರ್ಮವು ಇಷ್ಟಲಿಂಗದ ನಿರ್ಮಾಣವು ನಿರಾಕಾರವುಳ್ಳದ್ದು. ಅದು ನೀತಿ ತತ್ವಗಳನ್ನು ಪ್ರತಿಪಾದಿಸುವ ಸಂಕೇತವೂ ಆಗಿದೆ. ಸೃಷ್ಟಿಯ ಆದಿಗೂ, ಅನಾದಿಗೂ, ಕಾರಣನಾದವನು ಶಿವನು. ಆತನು ಪ್ರತಿನಿಧಿಸುವ ತತ್ವಗಳಿಂದ ಅವುಗಳಲ್ಲಡಕವಾಗಿರುವ ಶಕ್ತಿಯಿಂದ ಸೃಷ್ಟಿಯು ಕ್ರಿಯಾತ್ಮಕವಾಗಿರುವುದರ ಜೊತೆಗೆ ಜಂಗಮ ಸ್ಥಿತಿಯನ್ನು ಅನುಭವಿಸುತ್ತದೆ. ಆದರೆ ಶಿವತತ್ವಗಳನ್ನು ಉಲ್ಲಂಘಿಸಿ ಜನರು ವ್ಯವಹರಿಸಿದ್ದೇ ಆದರೆ ಅವರ ಸಮುದಾಯವು ಶಿವನ ಕ್ರಿಯಾಶೀಲಗುಣಗಳ ಸ್ಥಗಿತ ಸ್ಥಿತಿಗೆ ಪಾತ್ರವಾಗುತ್ತದೆ. ಅಂತಹ ಸಮಾಜವು ಅನಾರೋಗ್ಯಕ್ಕೆ ತುತ್ತಾಗಿ ದುಷ್ಪರಿಣಾಮಗಳನ್ನು ಅನುಭವಿಸುವುದೆಂದು ಶರಣರ ನಂಬುಗೆ. ಸಮತೆಯ ನೆಲಗಟ್ಟಿನ ಮೇಲೆ ರಚಿತವಾದ ಸಮಾಜದ ಸ್ಥೈರ್ಯ ಇಷ್ಟಲಿಂಗವೆಂಬ ಸಾಂಕೇತಿಕ ಶಕ್ತಿಯ ದರ್ಶನವನ್ನು ಕಂಡುಕೊಂಡವರು (ವಿಶನ್) ಶರಣರು". -33 ಜಂಗಮ ಸ್ವರೂಪಿಯಾಗಿರುವ ತತ್ವ ಮತ್ತು ಆದರ್ಶಗಳನ್ನು ಪಾಲಿಸಿಕೊಂಡ, ಬೌತಿಕವಾದ ಆಡಂಬರಗಳನ್ನು ಅಲ್ಲಗಳೆದು ಅದಕ್ಕೆ ಕಾರ್ಯಾರಂಭವೆಂಬಂತೆ ಹೊಸತನವನ್ನು ತಮ್ಮ ದೈನಂದಿನ ಬದುಕಿಗೆ ದೈಹಿಕವಾದ ಕ್ರಿಯೆ ಮತ್ತು ದೇಹದ ಪವಿತ್ರತೆಯನ್ನು ಹೇಳಿ ಮಾನವೀಯತೆಯನ್ನೊಳಗೊಂಡ ಸಹಜವಾಗಿರುವ ಮನುಷ್ಯತ್ವದ ಧರ್ಮವೇ ಮೇಲೆಂದು ಪ್ರತಿಪಾದಿಸುತ್ತಾರೆ. ಪ್ರಾಚೀನದಿಂದ ಆಚರಿಸಿಕೊಂಡು ಬಂದಿದ್ದ ಅತೀ ತೀವ್ರವಾದ ಕೈಲಾಸದ ಶಿವನ ಕಲ್ಪನೆಯನ್ನು ಅಲ್ಲಗಳೆಯುತ್ತಾರೆ.

"ಕೈಲಾಸ ಕೈಲಾಸವೆಂದು ಬಡಿದಾಡುವ
ಅಣ್ಣಗಳಿರಾ ಕೇಳಿರಯ್ಯಾ,
ಕೈಲಾಸವೆಂಬುದೊಂದು,
ಭೂಮಿಯೊಳಗಿರುವ ಹಾಳುಬೆಟ್ಟ,
ಅಲ್ಲಿರುವ ಮುನಿಗಳೆಲ್ಲಾ ಜೀವಗಳ್ಳರು,
ಅಲ್ಲಿರ್ಧ ಚಂದ್ರಶೇಖರನು ಬಹು ಹೆಡ್ಡ :
ಇದರಾಡಂಬರವೇಕಯ್ಯಾ?
ಎಮ್ಮಾ ಪುರಾತನರಿಗೆ ಸದಾಚಾರದಿಂದ
ವರ್ತಿಸಿ,
ಲಿಂಗಾಂಗ ಸಾಮರಸ್ಯವ ತಿಳಿದು,
ನಿಮ್ಮ ಪಾದಪದ್ಮದೊಳು ಬಯಲಾದ,
ಪದವೇ ಕೈಲಾಸವಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನ." –34

ಪರಂಪರಾಗವಾಗಿ ಕೈಲಾಸದಬಗ್ಗೆ ಇದ್ದ ನಂಬಿಕೆಗೆ ಕೊಡಲಿಪೆಟ್ಟು ನೀಡಿತು. ಅಂದಿನ ಕಾಲದಲ್ಲಿದ್ದ ಕೈಲಾಸದ ಕಲ್ಪನೆ, ಅಲ್ಲಿ ವಾಸಿಸುವ ಮುನಿಗಳು ಚಂದ್ರಶೇಖರನು, ಅತಿಯಾದ ದಡ್ಡನೆಂಬ ವಿಚಾರವನ್ನು ಸಾಮಾನ್ಯನಿಗೆ ತಿಳಿಸುತ್ತಾರೆ. ಅಲ್ಲಿ ವಾಸಿಸುವ ಮನುಷ್ಯರನ್ನು ತಿರಸ್ಕರಿಸುತ್ತಾ, ತಮ್ಮ ನೆಲೆಯಲ್ಲಿ ನಡೆ–ನುಡಿ ಒಂದಾಗಿ ವಾಸಿಸುವ ಎಮ್ಮ ಪುರಾತನರಲ್ಲಿಯೇ ಸದಾಚಾರದಿಂದ ವರ್ತಿಸಿ. ಕೈಲಾಸದ ಅರ್ಥವನ್ನು ತಿಳಿಯಿರಿ ಎಂಬ ವಿಚಾರವನ್ನು ಸಮಾಜಕ್ಕೆ ತಿಳಿಸುತ್ತಾರೆ. ಧರ್ಮ ಮೂಲವಾದ ಕೈಲಾಸ ಶಿವ, ಮುನಿ, ಮುಂತಾದ ವಿಚಾರಗಳಿಗೆ ಹೊಸ ಪರ್ಯಾಯವನ್ನು ತಿಳಿಸುತ್ತಾರೆ.

ಧರ್ಮಕ್ಕೆ ಹೊಸ ವ್ಯಾಖ್ಯಾನವನ್ನು ಸೃಷ್ಟಿ ಮಾಡುತ್ತಾರೆ. 12ನೇ ಶತಮಾನದಲ್ಲಿ ಇದ್ದಂತಹ ಧಾರ್ಮಿಕ ಸಂಸ್ಕೃತಿಯು ಸನಾತನ ಪರಂಪರೆಯನ್ನು ಅನುಸರಿಸುತಿತ್ತು. "ದೇವರಲ್ಲಿ

ನಂಬುಗೆಯನ್ನೇ ತಳೆಯದ ಬೌದ್ಧ ಹಾಗೂ ಜೈನ ಧರ್ಮಗಳೆರಡು ಅನುಕ್ರಮವಾಗಿ ಬುದ್ಧನನ್ನು, ಜಿನನನ್ನು ದೈವತ್ವಕ್ಕೇರಿಸಿ ಅವರ ಹೆಸರಿನಲ್ಲಿ ದೇವಸ್ಥಾನಗಳನ್ನು ಕಟ್ಟಿ ವಿಗ್ರಹಗಳನ್ನು ಸ್ಥಾಪಿಸಿ, ಪೂಜಾ ಕ್ರಿಯೆಗಳನ್ನು ನಡೆಸಿಕೊಂಡು ಬಂದುದಕ್ಕೆ ಪ್ರಮಾಣಗಳು ಸಿಗುತ್ತವೆ. ಜೊತೆಗೆ ಭಕ್ತಿ-ಧರ್ಮದಲ್ಲಿ ಜನಪ್ರಿಯವಾಗಿರುವ ರಾಮಕೃಷ್ಣರಿಗೆ ತಮ್ಮ ದೇವಾಲಯಗಳಲ್ಲಿ ಆಶ್ರಯವಿತ್ತಿದ್ದಾರೆ. ಸಂಕ್ಷಿಪ್ತವಾಗಿ ವಿವರಿಸುವುದಾದರೆ, ಮಹಾವೀರನ ಹೆಸರಿನಲ್ಲಿ ದೇವಾಲಯಗಳನ್ನು ಕಟ್ಟಿ, ಆತನನ್ನು ದೇವರೆಂದು ಕರೆದು, ಪೂಜಿಸುವುದರ ಜೊತೆಗೆ ಅನಂತ ಚತುಷ್ಟಯಗಳನ್ನು ಸಾಧಿಸಿದ ಇನ್ನಿತರ ಕೇವಲಿ ದೈವತ್ವಕ್ಕೇರಿಸಿ ಏಕದೈವವಾದದ ಜೊತೆಗೆ ಬಹುದೇವತಾವಾದವನ್ನು ಒಪ್ಪಿಕೊಂಡರು. ಜೈನ ಧರ್ಮೀಯರು ಹಿಂದು ಧರ್ಮಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದಾರೆ."-35 ಅಂದಿನ ಕಾಲದಲ್ಲಿದ್ದ ಜೈನ, ಬೌದ್ಧ ಧರ್ಮಗಳಲ್ಲಿ ಒಂದಕ್ಕೊಂದು ಅನ್ಯೂನ್ಯತೆಯು ಇಲ್ಲದಿರುವುದು ಕಂಡುಬರುತ್ತದೆ. ಇಂಥ ಕಾಲದಲ್ಲಿದ್ದ ಧರ್ಮಗಳು, ಅನೇಕ ಸನಾತನ ಕಟ್ಟುಪಾಡುಗಳ ಆಚರಣೆಯಿಂದ ಸಾಮಾನ್ಯನಿಂದ ದೂರವಾಗತೊಡಗಿದವು. ಹೀಗೆ ಧರ್ಮಗಳು ಕೂಡಾ ವಿಪರೀತ ಆಚರಣೆಯಿಂದ ತಿರಸ್ಕರಿಸಲ್ಪಟ್ಟಿದ್ದವು, ಅಂತಹ ವೇಳೆಯಲ್ಲಿ ಹಲವು ಧರ್ಮಗಳ ನಿರಾಕರಣೆ ಮಾಡುತ್ತಾ, ಹೊಸ ಬಗೆಯ ವಿಚಾರಗಳ ಅನ್ವೇಷಣೆಯತ್ತ ತೊಡಗಿದರು. ಇಂತಹ ವಿಚಾರಗಳಿಂದ ಹೊಸ ಧರ್ಮದ ಉಗಮಕ್ಕೆ ಪ್ರೇರಣೆಯಾದವು. ಬಸವಣ್ಣನವರ ವಚನ ಹೊಸಧರ್ಮದ ಪರಿಕಲ್ಪನೆಯನ್ನು ಮೂಡಿಸುತ್ತದೆ.

"ದಯವಿಲ್ಲದ ಧರ್ಮವದೇವುದಯ್ಯಾ .
ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ" -36

ಧರ್ಮಗಳ ವಿಚಾರಗಳನ್ನು ಪ್ರಸ್ತಾಪಿಸಿದರು ಅವುಗಳ ಮೂಲ ತಿಳಿವನ್ನು ಜನತೆಗೆ ಸಾರುತ್ತಾ ಧರ್ಮಗಳಲ್ಲಿ ಇಲ್ಲದಿರುವುದು, 'ದಯೆ' ಎಂಬ ಗುಣ ಮನುಷ್ಯನ ಬದುಕಿಗೆ ಪೂರಕವಾಗಿರುವುದು ಮನುಷ್ಯನ ಸಾಂಗವಾದ ಬದುಕಿನಲ್ಲಿ ದಯೆಯು ಅನಿವಾರ್ಯವೂ ಹೌದು. ಇಂತಹ ಸನ್ನಿವೇಶದಲ್ಲಿ ಬದುಕಿನ ವಿಭಿನ್ನ ಮೂಲಗಳಲ್ಲಿ ಕೇಂದ್ರಿತವಾಗುವ ವಿಷಯವೇ ದಯೆ ಎಂಬ ಮೂಲ ಅಂಶವನ್ನು ಪ್ರಸ್ತಾಪಿಸುತ್ತಾರೆ. "ಧರ್ಮ ಕೆಲವೊಂದು ಜನರ ಭಾವನೆ ಬೇರೂರಿದ ಸಮಯದಲ್ಲಿ ಅದು ಸಮಸ್ತ ಮಾನವರ ಹಕ್ಕೆಂದು ಸಾರಿದರು. ಜಾತಿ-ಮತಗಳ ಸಂಕೋಲೆಯನ್ನು

ಹರಿದುಹಾಕಿ ವಿಶಾಲವಾದ ಮನೋಧರ್ಮವನ್ನು ಸ್ಥಾಪಿಸಲು ಯತ್ನಿಸಿದರು. ಸಮತೆ, ಸ್ವಾತಂತ್ರ, ವಿಶ್ವ ಬಂಧುತ್ವ ಇವು ಕ್ರಾಂತಿಯ ಸಂದೇಶವಾದವು. ಉದ್ದೇಶವಾದವು. ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧ ಮಲ್ಲಿಕಾರ್ಜುನನೆಂದು ಆಕೆಗೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸ್ಥಾನಮಾನ ಕಲ್ಪಿಸಿದರು. ಕಾಯಕವೇ ಕೈಲಾಸ ಎಂದರು. ಹೀಗೆ ಮಾನವನ ಜೀವನದ ಹೊಸ ಮೌಲ್ಯಗಳು ಈ ಕಾಣಿಕೆಯ ಫಲವಾಗಿ ಉದಯವಾದವು. ಆಗ ಕರ್ಮ ಕ್ರಿಯೆಯಾಯಿತು. ಸೃಷ್ಟಿ ಸತ್ಯವಾಯಿತು. ದೃಷ್ಟಿ ಲಿಂಗವಾಯಿತು. ದೃಷ್ಟಿ ಸಮಷ್ಟಿಯಾಯಿತು. ಈ ಕ್ರಾಂತಿಯ ಫಲವಾಗಿ ವಚನ ವಾಙ್ಮಯ ಉದಯವಾಯಿತು. ಆ ಸಾಹಿತ್ಯವು ಈ ಕ್ರಾಂತಿಗೆ ವಿವಿಧ ಕನ್ನಡಿಯಾಗಿದೆ. ಅಲ್ಲಿ ವಿಶ್ವಧರ್ಮ ವಿಶಾಲತತ್ವ, ದಿವ್ಯ ಮಾನವತೆ ದಟ್ಟವಾಗುತ್ತವೆ. -37 12ನೇ ಶತಮಾನದಲ್ಲಿ ನಡೆದ ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಧರ್ಮ ಸಂಸ್ಕೃತಿಯು, ಸರ್ವರಿಗೂ ಸಮಪಾಲನ್ನು ಕೊಟ್ಟು ಸಾಮಾಜಿಕ ಜೀವನದಲ್ಲಿ ಬದುಕುವ ಹಕ್ಕನ್ನು ಕೊಡುವಂತೆ ಆಗಬೇಕೆಂಬುದು ಶರಣರ ಆಶಯವಾಗಿತ್ತು.

ಶರಣರು ಅಂದಿನ ಕಾಲದ ಮೌಢ್ಯ, ಧರ್ಮಗಳನ್ನು ನಿರಾಕರಿಸಿದರು. ಹೊಸ ಧರ್ಮದ ತಳಹದಿಗೆ ಪ್ರಯತ್ನಿಸಿದ್ದು ಸಹಜವಾಗಿದೆ. ಒಂದೊಂದು ಧರ್ಮಗಳನ್ನು ತಿರಸ್ಕರಿಸಿದರೂ, ಮತ್ತೆ ಧರ್ಮಕೇಂದ್ರಿತವಾಗಿರುವ ಸಮಾಜವನ್ನು ರೂಪಿಸ ಹೊರಟಿದ್ದು, ಒಂದು ಸಾಹಸದ ಕೆಲಸವೆನಿಸಿದರೂ, ಹಳೆಯ ಧರ್ಮಕ್ಕೆ ಹೊಸ ದೃಷ್ಟಿಕೋನವನ್ನು ತುಂಬಿ ಶೈವಧರ್ಮವನ್ನು ಲಿಂಗಾಯತ ಧರ್ಮವನ್ನಾಗಿ ಮಾರ್ಪಡಿಸಿ, ಆಚಾರ-ವಿಚಾರಗಳಲ್ಲಿ ನಡೆ-ನುಡಿಗಳಲ್ಲಿ ಸಂಪೂರ್ಣವಾಗಿ ದಯೆಯಿರಬೇಕೆಂಬ ಆಶಯಗಳನ್ನು ವ್ಯಕ್ತಪಡಿಸಿದರು. ಅಂದವಾಗಿರುವ ದೇವರುಗಳು ಹಾಗೂ ಅತೀತ ಶಕ್ತಿಗಳನ್ನು ನಿರಾಕರಿಸಿದರು. ಇವುಗಳಿಗೆ ತಮ್ಮ ಆಲೋಚನಾ ಶಕ್ತಿಯಿಂದ ಹೊಸ ಬಗೆಯ ಪರ್ಯಾಯ ಶಕ್ತಿಯನ್ನು ತಮ್ಮ ಜೀವನಕ್ರಮದಲ್ಲಿ ಅಳವಡಿಸಿಕೊಂಡರು. ಅಂದರೆ ಮಾನವನ ಶ್ರೇಯಾಭಿವೃದ್ಧಿಗೆ ಹಾಗೂ ಎಲ್ಲಾ ಕ್ಷೇತ್ರಗಳ ವಿಚಾರವಂತಿಕೆಗೆ ನೆರವಾಗುವಂತಹ 'ಕಾಯಕ' ಎಂಬ ಮೂಲ ಮಂತ್ರವನ್ನು ಹೊಸಧರ್ಮದಲ್ಲಿ ಬಿತ್ತಿದರು. ಜೊತೆಗೆ ಪ್ರಸ್ತುತ ಸಮಾಜದಲ್ಲಿಯೂ ಸಹ ಶರಣರ ತತ್ವಗಳು ಚಲನಶೀಲವಾಗುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಿವೆ.

ಅಡಿ ಟಿಪ್ಪಣಿಗಳು

1. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 59 ವ 235.
2. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 34 ವ 124.
3. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 119 ವ 494.
4. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 108 ವ 434.
5. ವಚನ ಸಮಗ್ರ, ಡಾ॥ ಪಿ.ವಿ. ನಾರಾಯಣ, 2005, ಪು232 ವ 234.
6. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ॥ ಚಿದಾನಂದಮೂರ್ತಿ, 1979.
7. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು. 211 ವ 821.
8. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು. 823 ವ 211.
9. ಸಾಲಾವಳಿ (ವಿಮರ್ಶಾಲೇಖನಗಳು), ಎಸ್.ಜಿ. ಸಿದ್ಧರಾಮಯ್ಯ, 1998, ಪು 12.
10. ಸಾಲಾವಳಿ (ವಿಮರ್ಶಾಲೇಖನಗಳು), ಎಸ್.ಜಿ. ಸಿದ್ಧರಾಮಯ್ಯ, 1998, ಪು 12.
11. ವಚನಕಾರರ ಪ್ರಮುಖ ಪರಿಕಲ್ಪನೆಗಳು ಲೇಖನ 'ದೇವಸ್ಥಾನ', ಸಂ.ಷಣ್ಮುಖಯ್ಯ ಅಕ್ಕೂರ ಮಠ, ಡಾ॥ ಶಿವರುದ್ರಪ್ಪ, 1994, ಪು 13.
12. ಅಲ್ಲಮಪ್ರಭುದೇವರ ವಚನಗಳು ಸಂಪುಟ, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 67, ವ 212.
13. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ॥ಚಿದಾನಂದಮೂರ್ತಿ, 1979, ಪು 178 ವ 179.
14. ಶಿವಶರಣೆಯರವಚನ ಸಂಪುಟ, ಸಂ. ಡಾ॥ವೀರಣ್ಣರಾಜೂರ, 1993, ಪು 55 ವ 174.
15. ಅಲ್ಲಮನ ವಚನ ಚಂದ್ರಿಕೆ ಸಂ. ಎಲ್. ಬಸವರಾಜು. 2001 ಪು 46. ವ. 195.
16. ಅಲ್ಲಮಪ್ರಭುದೇವರ ವಚನಗಳು ಸಂಪುಟ, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 57, ವ 176.
17. ಅಲ್ಲಮನ ವಚನ ಚಂದ್ರಿಕೆ ಸಂ. ಎಲ್. ಬಸವರಾಜು. 2001 ಪು 50. ವ. 213.
18. ಶಿವಶರಣೆಯರವಚನ ಸಂಪುಟ, ಸಂ. ಡಾ॥ವೀರಣ್ಣರಾಜೂರ, 1993, ಪು 101 ವ 323.
19. ವಚನಕಾರರ ಪ್ರಮುಖ ಪರಿಕಲ್ಪನೆಗಳು ಲೇಖನ 'ದೇವಸ್ಥಾನ', ಸಂ.ಷಣ್ಮುಖಯ್ಯ ಅಕ್ಕೂರ ಮಠ, ಡಾ॥ ಶಿವರುದ್ರಪ್ಪ, 1994, ಪು 16–17.
20. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 49 ವ 194.
21. ಸಂಕೀರ್ಣ ವಚನಗಳು ಸಂಪುಟ (ಅಂಬಿಗರ ಚೌಡಯ್ಯಗಳ ವಚನ), ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 86 ವ 264.
22. ಸಂಕೀರ್ಣ ವಚನಗಳು ಸಂಪುಟ–4, ಸಂ. ಡಾ॥ ವಿ.ಆರ್.ಹಿರೇಮಠ, 1993.
23. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 148 ವ 560.
24. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 146 ವ 385.
25. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 136 ವ 562.

26. ಭಕ್ತಿ ಪರಂಪರೆ ಮತ್ತು ಅದರ ಸಮಾಜೋ ಧಾರ್ಮಿಕ ಕಾಳಜಿಗಳು, ಸಂ.ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ (ಲೇಖನ: – ಉಪ ಸಂಸ್ಕೃತಿಗಳು ಮತ್ತು ವಚನಕಾರರು) ಡಾ॥ ಬಸವರಾಜಸಬರದ, 1999, ಪು 91–92.

27. ಭಕ್ತಿ ಪರಂಪರೆ ಮತ್ತು ಅದರ ಸಮಾಜೋ ಧಾರ್ಮಿಕ ಕಾಳಜಿಗಳು, ಸಂ.ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ (ಲೇಖನ:– ಉಪ ಸಂಸ್ಕೃತಿಗಳು ಮತ್ತು ವಚನಕಾರರು) ಡಾ॥ ಬಸವರಾಜಸಬರದ, 1999, ಪು 91–92.

28. ಸಂಕೀರ್ಣ ವಚನಗಳು ಸಂಪುಟ–4, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993. ಪು 675. ವ 1748

29. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993 ಪು.ಸಂ 142 ವ.571.

30. ಮಹಾಯಾತ್ರೆ, ಡಾ॥ಆರ್.ಹಿರೇಮಠ, 1997, ಪು 156/178.

31. ಮಹಾಯಾತ್ರೆ, ಡಾ॥ಆರ್.ಹಿರೇಮಠ, 1997, ಪು149.

32. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು188 ವ 750.

33. ಬಸವಣ್ಣ ಹಾಗೂ ಲಿಂಗಾಂಯಿತ ಧರ್ಮ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 174 175.

34. ಸಿದ್ದರಾಮೇಶ್ವರರ ಆಯ್ದ 108 ವಚನಗಳು, ಸಂಗ್ರಹ ಡಾ॥ ಎಸ್.ವಿದ್ಯಾಶಂಕರ, 2006, ಪು 58.

35. ಬಸವಣ್ಣ ಹಾಗೂ ಲಿಂಗಾಯತ ಧರ್ಮ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 173.

36. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1995, ಪು 61 ವ 747.

37. ಮಹಾಯಾತ್ರೆ, ಡಾ॥ಆರ್.ಹಿರೇಮಠ, 1997, ಪು150.

ಅಧ್ಯಾಯ : 4

ಕಲ್ಯಾಣ ಕ್ರಾಂತಿಯ ಸಾಮಾಜೀಕರಣದ ಸಾಂಸ್ಕೃತಿಕ ಇತಿ-ಮಿತಿಗಳು.

4.1 ಸಂಕ್ರಮಣಗೊಂಡ ಫ್ಯೂಡಲ್ ವ್ಯವಸ್ಥೆ.

4.2 ಸಮಾಜದ ಮತ್ತು ಸಮತಾವಾದದ ನೆಲೆಗಳು.

ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಇತಿಹಾಸದಲ್ಲಿ ಕಲ್ಯಾಣದ ಧಾರ್ಮಿಕ ಕ್ರಾಂತಿ ಅಭೂತಪೂರ್ವವೆನಿಸಿದೆ. ಅದರ ಸಾಮಾಜೀಕರಣದ ಸಾಂಸ್ಕೃತಿಕ ಇತಿ–ಮಿತಿಗಳು ವಿಭಿನ್ನವಾಗಿವೆ. ಏಕೆಂದರೆ ಮನುಷ್ಯ ಸಂಘಜೀವಿಯಾಗಿದ್ದು, ಎಲ್ಲ ಪ್ರಾಣಿಗಳಿಗಿಂತ ಬುದ್ಧಿಜೀವಿ ಎನಿಸಿದ್ದಾನೆ. ಮನುಷ್ಯ ಬದುಕಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನ್ಯಾಸಗಳು ಕಾಲದಿಂದ ಕಾಲಕ್ಕೆ ಸ್ಥಳಕ್ಕೆ ಭಿನ್ನವಾಗಿರುತ್ತದೆ. ಮಾನವನ ವಿಶಿಷ್ಟ ಸಾಮರ್ಥ್ಯದಿಂದ ಸ್ಪರ್ಶಗ್ರಾಹ್ಯವಾದ ವಿಚಾರಗಳ ಒಟ್ಟು ಮೊತ್ತವಾಗಿರುವುದಲ್ಲದೆ ಒಂದು ಸೀಮಿತ ಅರ್ಥದಲ್ಲಿ ಸಾಮಾಜಿಕ ಸಾಂಸ್ಕೃತಿಕ ವಿಚಾರಗಳಾದ ಭಾಷೆ, ಜ್ಞಾನ, ನಂಬಿಕೆ, ಪದ್ಧತಿ, ಕಲೆ, ತಂತ್ರಜ್ಞಾನ, ಆದರ್ಶಗಳು, ಮತ್ತು ನಿಯಮಗಳು ಬದುಕಿನೊಳಗೆ ಪ್ರವೇಶಿಸುತ್ತವೆ. ಇಂತಹ ಸನ್ನಿವೇಶದಲ್ಲಿ ಸಾಮೂಹಿಕವಾಗಿ ಅಭಿವ್ಯಕ್ತಿಗೊಂಡ ವಿಚಾರಗಳ ಅನ್ವೇಷಣೆಯೇ ಸಂಸ್ಕೃತಿ. ಅದನ್ನು ಸಮೂಹ ಕೇಂದ್ರಿತವಾಗಿ ಹಂಚಬೇಕಾಗುತ್ತದೆ. ಹೀಗೆ ಉಂಟಾಗುವ ಬದಲಾಣೆಗಳಿಂದ ಹುಟ್ಟುವ ಹೊಸ ಸವಾಲುಗಳು, ಹೊಸ ಬೇಡಿಕೆಗಳ ಕಾರಣದಿಂದ ಹೊಸ ಸಾಂಸ್ಕೃತಿಕ ಅನ್ವೇಷಣೆಗಳು ಅಗತ್ಯವಾಗುತ್ತವೆ.

ಈ ಧಾರ್ಮಿಕ ಕ್ರಾಂತಿಯ ಹಿನ್ನಲೆಯಲ್ಲಿ ಸಾಂಸ್ಕೃತಿಕ ಇತಿ–ಮಿತಿಗಳನ್ನು ತಿಳಿಯಬೇಕಾದರೆ, ಅಲ್ಲಿಯ ವಸ್ತುನಿಷ್ಠವಾದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಏಕೆಂದರೆ ಕ್ರಾಂತಿಯ ವಿಚಾರಗಳು ಸಾಮಾಜೀಕರಣಗೊಳ್ಳುವಾಗ ಸಾಂಸ್ಕೃತಿಕತೆಯನ್ನು ತನ್ನೊಳಗೆ ಅಡಗಿಸಿಕೊಂಡು ಜನ ಸಮುದಾಯಕ್ಕೆ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ಸಿದ್ಧಗೊಳ್ಳುತ್ತದೆ. ಈ ರೀತಿಯಿಂದ ರೂಪಗೊಳ್ಳುವ ಮಾದರಿಯುತ ಕ್ರಾಂತಿಯು ಹಲವಾರು ವಿಶೇಷತೆಗಳೊಂದಿಗೆ ಜನರ ಒಳಗಿನ ಮತ್ತು ಹೊರಗಿನ ವಿಚಾರಗಳನ್ನು ಬಿತ್ತರಿಸುತ್ತಾ ಹೋಗುತ್ತದೆ. ಅನಿರೀಕ್ಷಿತ ಅಥವಾ ನಿರೀಕ್ಷಿತ ಬದಲಾವಣೆ ಘಟಿಸುವಾಗ ವಿಚಾರಗಳು ಸಾಮಾಜೀಕರಣಗೊಂಡು ಸಾಂಸ್ಕೃತಿಕ ಇತಿ–ಮಿತಿಗಳಿಗೆ ದಾರಿ ಮಾಡಿಕೊಡುತ್ತದೆ.

ವಚನಕಾರರ ಎಲ್ಲಾ ಸಾಂಸ್ಕೃತಿಕ ಇತಿ–ಮಿತಿಗಳನ್ನು ಗುರುತಿಸುವುದು ಕಷ್ಟ, ಸಾಧ್ಯ. ಆದರೆ ಅಧ್ಯಯನ ದೃಷ್ಟಿಯಿಂದ ಗುರುತಿಸಬಹುದು. ಶರಣರು ತಾವು ಇದ್ದಂತಹ ಸಮಾಜದೊಳಗಿನ ಅನುಭವಗಳನ್ನು ಕಂಡುಕೊಂಡು, ತಮ್ಮದೇ ಆದ ನೆಲೆಯಲ್ಲಿ ಪರ್ಯಾಯ ಸಮಾಜದತ್ತ ಆಲೋಚಿಸ ಹೊರಟರು. ತಮ್ಮ ಅಲೋಚನಾ ಗ್ರಹಿಕೆಗೆ ಬಂದಂತಹ ಬದಲಿ ವ್ಯವಸ್ಥೆಯನ್ನು ತುರ್ತಾಗಿ ರೂಪಿಸುತ್ತಾರೆ. ಅಂದು ಇದ್ದಂತಹ ಪುರೋಹಿತಶಾಹಿ ಪ್ರಭುತ್ವ ವ್ಯವಸ್ಥೆಯಿಂದಲೂ

ವಚನಕಾರರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗೆ ಅಡ್ಡಿ ಆತಂಕಗಳಿದ್ದವು, ಅಸಂಬದ್ಧ ಸಾಂಸ್ಕೃತಿಕ ಪಲ್ಲಟಗಳಿಂದ ಮನುಷ್ಯನ ಬದುಕು ಸಂಕೀರ್ಣವಾಗುತ್ತಾ ಹೋಗುತ್ತದೆ. ತಮ್ಮ ಬದುಕಿನ ಆಯ್ಕೆ ವಿಚಾರಗಳಲ್ಲಿ ಮಾನಸಿಕವಾಗಿ ಗೊಂದಲಗಳನ್ನು ಎದುರಿಸುತ್ತಾರೆ. 'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ' ಎಂಬ ಬಸವಣ್ಣನವರ ವಚನಗಳ ಸಾಲು ಆಯ್ಕೆ ವಿಚಾರದಲ್ಲಿರುವ ಗೊಂದಲಗಳಿಗೆ ಸಾಕ್ಷಿಯಂತಿದೆ. ಇಂತಹ ಅನೇಕ ಸಂದಿಗ್ಧ ವಿಚಾರಗಳು ಮನುಷ್ಯನ ಮಾನಸಿಕ ಸ್ಥಿತಿಯನ್ನು ಕದಡುತ್ತದೆ. ಆಗ ತಾನು ಬದುಕವ ಸಾಂಸ್ಕೃತಿಕ ಪರಿಸರದಲ್ಲಿ ತಮಗೆ ಯಾವುದು ಬೇಕು, ಯಾವುದು ಬೇಡ ಎಂಬುದರ ಆಯ್ಕೆ ಎದುರಾಗುತ್ತದೆ. ಈ ಗೊಂದಲಗಳ ಸೃಷ್ಟಿಗೆ ಸನಾತನ ಕಾಲದ ಪರಂಪರೆಯಿಂದ ಬಂದಂತಹ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಜಾಡ್ಯಕಾರಣವಿತ್ತು. ಇವುಗಳಿಂದ ಹೊರಬರಲು ತಮ್ಮ ಹೊಸ ಬದುಕಿಗೆ ಪೂರಕವಾಗುವ ದೈವತ್ವದ ಕಡೆಗೆ ಮನಸ್ಸು ಮಾಡಿದರು. ತಾವುಕಂಡುಕೊಂಡಿದ್ದ ಸರಳ ಮಾರ್ಗಗಳನ್ನು ತರುವುದು, ಸಾಮಾಜಿಕ ಧಾರ್ಮಿಕ ವ್ಯವಸ್ಥೆಗೆ ಅಗತ್ಯವೆನಿಸಿತ್ತು. "ವರ್ಣ ಜಾತಿಗಳ ಶ್ರೇಣೀಕೃತ ಸಮಾಜದ ಬದಲಿಗೆ ಸಮಾನತೆಯ ನೆಲೆಗಟ್ಟಿನ ಜಾತಿರಹಿತ ವ್ಯವಸ್ಥೆ, ದೇವಸ್ಥಾನದ ಬದಲಿಗೆ ಇಷ್ಟ ಲಿಂಗ, ಯಜ್ಞಗಳಂತಹ ಆಚರಣೆಗಳ ಬದಲಿಗೆ ಅಸಲಿಯಾದ ಭಕ್ತಿ, ದಾನದ ಬದಲು ದಾಸೋಹ, ಸಂಸ್ಕೃತದ ಬದಲು ಕನ್ನಡ, ಮಂತ್ರಗಳ ಬದಲು ವಚನ, ಸ್ಮೃತಿ ಸಂಹಿತೆಯ ಬದಲು ಪಂಚಾಚಾರ ಈ ಪರಿಕಲ್ಪನೆಯನ್ನು ನೋಡಬಹುದು. ಅದರಿಂದಾಗಿ ಕೆಲವೆಡೆ ಅಸಮರ್ಪಕ ಪರ್ಯಾಯವನ್ನು ಹೇಳಿರಬಹುದು. ಕೆಲವಕ್ಕೆ ಸಮಂಜಸವಾದ ಬದಲಿಯನ್ನು ಹೇಳಿರಬಹುದು."$_{1}$ ಇಷ್ಟಲ್ಲದೇ ಶಿವಶರಣರ ಪರ್ಯಾಯ ಕಲ್ಪನೆಗಳು ಸಾಂಸ್ಕೃತಿಕವಾಗಿ ಅನಾವರಣಗೊಂಡಿದ್ದ ಜನಸಾಮಾನ್ಯರ ಬದುಕಿನ ಹೊಸ ಸವಾಲುಗಳತ್ತ ಮುಖಮಾಡುವಂತೆ ಪ್ರೇರೇಪಿಸುತ್ತವೆ. ಹಾಗಾಗಿ ಜನ ಜೀವನದ ಪರಿಸ್ಥಿತಿಯೂ ಬದಲಾವಣೆಯ ಅನಿವಾರ್ಯತೆಯನ್ನು ಎದುರಿಸುವಂತಾಗುತ್ತದೆ. ಇವುಗಳ ಅಸ್ಥಿತ್ವದಲ್ಲೇ ಹೊಸ ಬೇಡಿಕೆಗಳು, ಸಾಂಸ್ಕೃತಿಕ ಅನ್ವೇಷಣೆಗಳಿಗೆ ದಾರಿಯುಂಟುಮಾಡುತ್ತದೆ. ಇಂತಹ ಸಾಂಸ್ಕೃತಿಕ ಅಂಶಗಳಲ್ಲಿ ಉಂಟಾದ ವಿರೋಧಬಾಸಗಳೇ ಇತಿ-ಮಿತಿಗಳಿರುತ್ತವೆ.

ಸಾಂಸ್ಕೃತಿಕ ಇತಿ-ಮಿತಿಯಲ್ಲಿ ಇವುಗಳನ್ನು ಗುರುತಿಸಬಹುದು.

1. ಸ್ಥಾವರ – ಜಂಗಮ
2. ಸ್ಥಾವರ ಲಿಂಗ – ಇಷ್ಟಲಿಂಗ

3. ದುಡಿಮೆ – ಕಾಯಕ

4. ಜಾತಿಗಳನ್ನು – ಸುಧಾರಿಸುವುದು.

5. ಮಾಯೆಯ ಬದಲು – ಹೆಣ್ಣು ದೈವ ಸ್ವರೂಪಿಯಾಗುವುದು.

6. ದಾನದ ಬದಲು – ದಾಸೋಹವಾಗುವುದು.

7. ಸನ್ಯಾಸದ ಬದಲು – ಸಂಸಾರವನ್ನು ಒಪ್ಪಿರುವುದು.

8. ಪ್ರಭುತ್ವದ ಬದಲು – ಸಾಮೂಹಿಕ ಹೊಣೆಗಾರಿಕೆ ಹಾಗೂ ವೈಯಕ್ತಿಕವಾಗಿ ಒಪ್ಪುವುದು.

ಇನ್ನು ಮುಂತಾದ ಸಾಂಸ್ಕೃತಿಕ ಬದಲೀ ವ್ಯವಸ್ಥೆಯನ್ನು ತಮ್ಮ ಇತಿ–ಮಿತಿಯಲ್ಲೇ ಬದಲಿಸುವ ಪ್ರಯತ್ನ ಪಟ್ಟರು.

" ಉಳ್ಳವರು ಶಿವಾಲಯ ಮಾಡುವರು,
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ."–2

ಆರ್ಥಿಕವಾಗಿ ಕೇಂದ್ರೀಕರಣಗೊಂಡಿರುವ ಸಮಾಜದ ಬಗ್ಗೆ ಬಸವಣ್ಣನವರ ಈ ವಚನವು ದೇವಾಲಯದ ಸಾಂಸ್ಕೃತಿಕ ವ್ಯವಸ್ಥೆಯ ಬಗ್ಗೆ ಹೇಳುತ್ತದೆ. ಸ್ಥಾವರವಾಗಿರುವ ದೇವಾಲಯವನ್ನು ದೇಹಕ್ಕೆ ಸ್ಥಳಾಂತರಿಸುವ ಮೂಲಕ ಸಾಂಸ್ಕೃತಿಕ ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಾರೆ, ಜಡ್ಡುಗಟ್ಟಿದ ಸ್ಥಾವರವಿಚಾರಗಳ ಬದಲಿಗೆ ಪ್ರತಿ ವಿಚಾರಗಳನ್ನು ಸೃಷ್ಟಿಸುತ್ತಾರೆ. ಉಳ್ಳವರು ಮತ್ತು ಬಡವರ ಮಧ್ಯೆ ಇದ್ದ ಅಂತರವನ್ನು ಈ ರೀತಿ ಎದುರಿಸುವಂತೆ ಮಾಡುತ್ತಾರೆ. ಆರ್ಥಿಕವಾಗಿ ದುರ್ಬಲಗೊಂಡಿದ್ದ ತಳಸಮುದಾಯದೊಳಗೆ ಹೊಸ ಉತ್ಸಾಹವನ್ನು ಮೂಡಿಸುತ್ತದೆ. ಇಲ್ಲಿ ಸ್ಥಾವರವವಾಗಿರುವ ದೇವಾಲಯ ಎಲ್ಲೆಯನ್ನು ತೋರಿಸಿದರೆ, ದೇಹವೇ ದೇವಾಲಯವಾಗಿ ಗ್ರಹಿಸಿ ಅದು ಸಾಂಸ್ಕೃತಿಕ ಮಿತಿಯನ್ನು ತೋರಿಸುತ್ತದೆ. ಆದ್ದರಿಂದಲೇ ಅಲ್ಲಮನು ಈ ನಿಲುವಿಗೆ ಪ್ರತಿಯಾಗಿ ಹೀಗೆ ಹೇಳುತ್ತಾನೆ 'ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ? ಎಂದು ಪ್ರಶ್ನಿಸುತ್ತಾನೆ ವಚನಕಾರರು ತಮ್ಮ ನಿಲುವುಗಳನ್ನು ಗಟ್ಟಿಗೊಳಿಸಲು ತಾತ್ವಿಕವಾದ ವಿಚಾರಗಳಿಗೆ ಒತ್ತುಕೊಟ್ಟರು. ದೇಹವೇ ದೇವರು ಎಂಬ ಕಲ್ಪನೆಯನ್ನು ಹಾಗೂ

ಇಷ್ಟಲಿಂಗನಿಷ್ಠೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ವಚನಕಾರರು ದೇವಾಲಯಗಳನ್ನು, ಅದಕ್ಕೆ ಸಂಬಂಧಿಸಿದ ವಿವಿಧ ವಿಧಿಗಳನ್ನು, ಆಚರಣೆಗಳನ್ನು, ಅತ್ಯಂತ ತೀವ್ರವಾಗಿ ನಿರಾಕರಿಸಿದ್ದರು. ಇದರ ಹಿಂದೆ ಇರುವ ಉದ್ದೇಶಗಳು ಹಾಗೂ ಅದರ ಪರಿಣಾಮಗಳು ಬಹುಮುಖಿಗಳಾಗಿವೆ. ಮೊದಲನೆಯದಾಗಿ ಕರ್ನಾಟಕದ ಇಂದಿನ ಪರಿಸರದಲ್ಲಿ ಹಲವು ಧಾರ್ಮಿಕ ಸೆಳೆತಗಳೂ, ಬಹುದೇವರಾಧನೆಯ ಪದ್ಧತಿಗಳು, ಸಾಮಾಜಿಕವಾದ ತಾರತಮ್ಯಗಳು ಜನರ ಬದುಕನ್ನು, ಒಂದು ರೀತಿಯಲ್ಲಿ ವಿಘಟನೆಗೆ ಒಳಗೂಡಿಸಿದ ಸಂಗತಿಗಳಾಗಿದ್ದವು. ಹೀಗೆ ವಿಘಟನೆಗೊಂಡ ಬದುಕನ್ನು ಹಾಗೂ ಮನಃಸ್ಥಿತಿಯನ್ನು ಒಂದು ಸಂಘಟನೆಯ ಕೇಂದ್ರಕ್ಕೆ ತರುವ ಪ್ರಯತ್ನದಲ್ಲಿ ಬಹುದೇವತಾರಾಧನೆಯನ್ನು ಹಾಗೂ ದೇವಸ್ಥಾನಗಳನ್ನು ನಿರಾಕರಿಸುವುದು ಹೊಸ ಶರಣರ ಧರ್ಮದ ಅವಶ್ಯಕತೆಯಾಗಿತ್ತು."-3 ಜಡತ್ವವೆನಿಸುವ ಸಾಂಸ್ಕೃತಿಕ ಅಂಶಗಳನ್ನು ನಿರಾಕರಿಸಿ ಚಲನಶೀಲ ಗುಣಗಳುಳ್ಳ ವಿಚಾರಗಳನ್ನು ಪ್ರತಿಪಾದಿಸುತ್ತಾ ಹೊರಟರು. ಹೀಗೆ ಸಾಮಾಜದಲ್ಲಿದ್ದ ಅನೇಕ ಮೂಡನಂಬಿಕೆಗಳನ್ನು ಆಚಾರ ಪದ್ಧತಿಗಳನ್ನು, ನಿಧಾನವಾಗಿ ಬದಲಾವಣೆಯನ್ನು ಮಾಡುತ್ತಾ, ಆ ಮೂಲಕ ಕಾಯಕದಿಂದಲೇ ಶಿವನನ್ನು ಕಾಣಬಹುದುದೆಂದರು. ಆದುದರಿಂದ ಶಿವಶರಣರ ಮಾತುಗಳಿಗೆ ಹೆಚ್ಚಿನ ಗಟ್ಟಿತನ ಬೆಳೆಯುತ್ತಾಹೋಯಿತು.

ಸ್ಥಾವರ ಲಿಂಗ – ಇಷ್ಟಲಿಂಗ :

ಜೀವನ ಕ್ರಮ ಸ್ಥಾವರವಾಗುವುದನ್ನು ಶರಣರು ತಿರಸ್ಕರಿಸುತ್ತಾರಲ್ಲದೇ ಅದಕ್ಕೆ ಪರ್ಯಾಯ ವಾದವನ್ನು ಸ್ಪಷ್ಟಿಸುತ್ತಾರೆ. ಇಷ್ಟಲಿಂಗದ ಮಹತ್ವವೇನೆಂಬುದನ್ನು ಕಾರ್ಯರೂಪಕ್ಕೆ ತರಲು ಪ್ರಾರಂಭಿಸುತ್ತಾರೆ. ಸ್ಥಾವರಲಿಂಗವನ್ನು ತಿರಸ್ಕರಿಸಿ, ಇಷ್ಟಲಿಂಗವನ್ನು ಪ್ರತಿಪಾದಿಸುತ್ತಾರೆ. ಇದು ಸಾಂಸ್ಕೃತಿಕ ಕ್ರಾಂತಿಯ ಸಾಂಕೇತಿಕವಾದ ಚಿಹ್ನೆಯೆಂದು ಭಾವಿಸುತ್ತಾರೆ. "ಒಂದು ಇಷ್ಟಲಿಂಗದ ತತ್ವ–ಪ್ರತಿಮೆ. ವಾಸ್ತವವಾಗಿ ಇದು ಸೂಚಿಸುತ್ತಿರುವುದು ಸ್ಥಾವರ ದೇವಾಲಯಗಳ ನಿರಾಕರಣೆಯನ್ನು. ವೀರಶೈವ ಧರ್ಮವು ಬಂಡೆದ್ದು ಕ್ರಿಯಾಶೀಲವಾದದ್ದು ಉಳ್ಳವರು ಮಾಡುವ ಶಿವಾಲಯಗಳ ವಿರುದ್ಧ. ಶಿವ ಆಲಯಗಳಲ್ಲಿದ್ದರೆ ಅವನೇ ಬೇಡ. ಆಧ್ಯಾತ್ಮಿಕ ಸಾಹಸ ಶೀಲತೆ ಅದರ ಮೂಲಶಕ್ತಿ. ಆದರೆ, ಪರ್ಯಾಯವಾಗಿ ಅದು ಸೂಚಿಸಿದ್ದು ಇಷ್ಟಲಿಂಗವನ್ನು. ಹೀಗೆ ಇಲ್ಲಿ ವಿಸರ್ಜನೆ ಮತ್ತು ಸ್ವೀಕಾರಗಳ ಪರಿಕಲ್ಪನೆ ಒಟ್ಟೊಟ್ಟಿಗೆ ಸಾಗಿಸುತ್ತಿರುವುದನ್ನು ಗಮನಿಸಬಹುದು. ದೇವಾಲಯಗಳು ತಮ್ಮ ಸಂಕೇತದ ಸ್ಥಿತಿಯನ್ನು ಬಿಟ್ಟುಕೊಟ್ಟು ನಿಜವಾದ ಲೌಕಿಕಾಧಿಕಾರದ ವಾಸ್ತವವಾಗಿದ್ದವು ಎಂಬುದು ಮಧ್ಯಯುಗೀನ ಕರ್ನಾಟಕದ ಪ್ರಮುಖ ಚಾರಿತ್ರಿಕ ಸತ್ಯ. ದೇವಾಲಯ ಎನ್ನುವುದು ದೊರೆತನದ,

ಪ್ರಭುತ್ವದ ಅಡಿಪಾಯ ವೆಂಬ ಮಧ್ಯಯುಗೀನ ನಿರ್ದಿಷ್ಟ ಬೆಳವಣಿಗೆಯು ಆಗಿನ ಕಾಲದ ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ದೇವಾಲಯ ಎಂಬ ಬೃಹತ್ ಬಾಹ್ಯ ವಾಸ್ತವದ ಎದುರು ಶರಣ ಚಳುವಳಿ ಇಷ್ಟಲಿಂಗ ಎಂಬ ಕಿರಿದಾದ, ಆದರೂ ಆಸ್ಫೋಟಕಕಾರಿ ಕುರುಹನ್ನು ಆಯ್ಕೆ ಮಾಡಿಕೊಂಡಿತು".-4 ಇದರ ಪ್ರತಿಭಟನಾತ್ಮಕ ಅಂಶದಂತಯೇ ಇರುವುದನ್ನು ಅಂಬಿಗರ ಚೌಡಯ್ಯನವರ ವಚನದಲ್ಲಿ ಕಾಣಬಹುದು. ಈ ವಚನದಲ್ಲಿ ಸ್ಥಾವರವೆನಿಸುವ ವಿಚಾರಗಳನ್ನು ತಿರಸ್ಕರಿಸುತ್ತಾರೆ. ಜಡತ್ವವಾದವನ್ನು ಪ್ರತಿಪಾದಿಸದೆ, ಕ್ರಿಯಾತ್ಮಕವಾದ ಗುಣಗಳನ್ನು ಸ್ವೀಕರಿಸುವಂತೆ ಧ್ವನಿಸುತ್ತದೆ. ಒಂದು ವೇಳೆ ನಿರಾಕರಿಸಿದರೆ ಮುಂದಿನ ಅನಾಹುತಗಳಿಗೆ ನೀವೇ ಕಾರಣವೆಂದು ತಿಳಿಹೇಳುತ್ತಾರೆ. ಈ ಮಾತುಗಳನ್ನು ವಚನದಲ್ಲಿ ಸ್ಪಷ್ಟಪಡಿಸಿದೆ.

" ಕಟ್ಟಿದ ಲಿಂಗವ ಕಿರಿದು ಮಾಡಿ,
ಬೆಟ್ಟದ ಲಿಂಗವ ಹಿರಿದು ಮಾಡುವ ಪರಿಯ ನೋಡ !
ಇಂತಪ್ಪ ಲೊಟ್ಟೆಮೂಳರ ಕಂಡರೆ
ಗಟ್ಟಿವುಳ್ಳ ಪಾದರಕ್ಷೆಯ ತೆಗೆದುಕೊಂಡು
ಲೊಟಲೊಟನೆ ಹೊಡೆಯಂದಾತ ನಮ್ಮ ಅಂಬಿಗರ ಚೌಡಯ್ಯ."-5

ಶರಣರು ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ತರದೇ ಸ್ಥಿರತೆಯನ್ನು ಕಾಪಾಡಿಕೊಳ್ಳುತ್ತಾರೆ. ಮೂಲ ಸ್ವರೂಪವೆನಿಸಿದ ಅಂದರೆ "ಒಂದೆಡೆ ಪುರಾಣೋಕ್ತವಾದ ಶಿವನ ಮೂರ್ತಿ ಪೂಜೆ ಮತ್ತು ಶಿವನ ಸಂಕೇತವಾದ ಲಿಂಗ (ಸ್ಥಾವರಲಿಂಗ) ಪೂಜೆ ಈ ಎರಡು ರೂಢಿಯಲ್ಲಿ ಇದ್ದವುಗಳು. ಆದರೆ ವಚನಕಾರರು ದೇವಸ್ಥಾನ ಕೇಂದ್ರಿತವಾದ ಈ ಎರಡು 'ರೂಪಗಳನ್ನು ದೇವಸ್ಥಾನ' ದ ಸಮೇತ ನಿರಾಕರಿಸಿ ದೈವತ್ವ ಕಲ್ಪನೆಯ ಸಾಂಕೇತಿಕ ಸ್ವರೂಪವಾದ ಇಷ್ಟಲಿಂಗವನ್ನು ಸ್ವೀಕರಿಸಿ ತಮ್ಮ ಕೊರಳಲ್ಲಿ ಕಟ್ಟಿಕೊಂಡರು. ಈ ಅರ್ಥದಲ್ಲಿ ಇಷ್ಟಲಿಂಗ ರೂಪವೂ ಅಲ್ಲ ಅಪರೂಪವೂ ಅಲ್ಲ. ಆದರೆ ಬದಲು ನಿರಾಕಾರಕ್ಕೆ ಅತ್ಯಂತ ಸಮೀಪವಾದ ಒಂದು ಸಂಕೇತ ಮಾತ್ರ."-6. ದೇವರ ಕಲ್ಪನೆಯನ್ನು ದೇಹಕ್ಕೆ ಸ್ಥಳಾಂತರಗೊಳಿಸಿದ್ದು, ಒಂದು ಸಾಂಸ್ಕೃತಿಕ ಚಲನೆಯನ್ನು ಗುರುತಿಸುತ್ತದೆ. ಒಂದು ಕಾಲದಲ್ಲಿ ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿದ್ದು, ಕಾಲಗತಿಸಿದ ಹಾಗೆ ಸ್ಮಾರಕಗಳಾಗಿರುವುದು ವಿಪರ್ಯಾಸವಾಗಿದೆ. ದೇಹವನ್ನೇ ಪವಿತ್ರಗೊಳಿಸಿ, ದೇವಾಲಯವಾಗಿಸಿದ್ದು ಶರಣರ ಸಾಂಸ್ಕೃತಿಕ ಇತಿ–ಮಿತಿಗಳೆನ್ನಬಹುದು.

ದುಡಿಮೆ – ಕಾಯಕ :

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಹುಟ್ಟಿಕೊಂಡ ಸತ್ಯಶುದ್ಧವಾದ ಸಮಾಜಶ್ರೇಯೋಭಿವೃದ್ಧಿಗೆ ಕಂಡುಕೊಂಡ ಮಾರ್ಗವೆಂದರೆ, ತಾನೇ ಸ್ವತಃ ದೈಹಿಕ ಮತ್ತು ಮಾನಸಿಕವಾದ ಶ್ರಮವಹಿಸಿ ಅದರಿಂದ ಪ್ರತಿಫಲವನ್ನು ನಿರೀಕ್ಷಿಸುವುದು. ಅದರಿಂದ ಬಂದಂತಹ ಪ್ರತಿಫಲವನ್ನು ಸಮಾಜದ ಏಳಿಗೆಗೆ ಮತ್ತು ದಾಸೋಹಕ್ಕೆ ಬಳಸುವುದು ಶರಣರ ಕಾಯಕ ಸಿದ್ಧಾಂತವಾಗಿತ್ತು.

ಕಾಯಕದಲ್ಲಿ ಗುರು, ಲಿಂಗ, ಜಂಗಮ, ಯಾರೇ ಆದರೂ ಕಾಯಕ ಮಾಡದೇ ಬದುಕುವ ಹಕ್ಕಿಲ್ಲ ಎಂಬ ವಾದವನ್ನು ಮಂಡಿಸಿದರು. ಈ ಕೆಳಗಿನ ವಚನ ನಿಲುವನ್ನು ಸ್ಪಷ್ಟಪಡಿಸುತ್ತದೆ.

" ಕಾಯಕದಲ್ಲಿ ನಿರತನಾದೆಡೆ, ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು,
ಜಂಗಮ ಮುಂದೆ ನಿಂತಿದ್ದರೂ ಹಂಗ ಅರಿಯಬೇಕು.
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದರೂ ಕಾಯಕದೊಳಗು".–7

ರಾಜಪ್ರಭುತ್ವದ ಆಶ್ರಯದಲ್ಲಿದ್ದ ಜನರಿಗೆ ಸಾಮಾನ್ಯವಾಗಿ ತಮ್ಮ ಸ್ವಕಾಯಕದಲ್ಲಿನ ಸ್ವಾವಲಂಬಿತನಕ್ಕೆ ಅಡ್ಡಿಆತಂಕಗಳಿದ್ದವು. ಹಾಗಾಗಿ ಸಾಮಾಜಿಕ ಕಾಯಕಕ್ಕೆ ಜನಸಮುದಾಯದಿಂದ ಅಷ್ಟು ಮಹತ್ವ ಪಡೆದಿರಲಿಲ್ಲ. ಇದರಿಂದ ಸಾಮಾನ್ಯನ ಜೀವನದ ಕ್ರಮವು ದಿನೇದಿನೆ ಕೆಳಸ್ಥರ ತಲುಪುತಿತ್ತು. ಏಕೆಂದರೆ ರಾಜಪ್ರಭುತ್ವದ ಆಡಳಿತ ಸಾಮಾನ್ಯನ ಪರವಾಗಿರಲಿಲ್ಲ. ಈ ವ್ಯವಸ್ಥೆಯಿಂದ ಹೊರಬರಲು ಬಸವಾದಿ ಪ್ರಮಥರು ಚಿಂತಿಸಿ ತಾವುನಂಬಿದ ಅಚಲ ನಂಬಿಕೆಗಳ ಕುರುಹಾದ ಗುರು–ಲಿಂಗ–ಜಂಗಮ ಎಂಬ ಪರಂಪರೆಯ ಹಂಗನ್ನು ತೊರೆದು ಕಾಯಕದಲ್ಲಿ ನಿರತರಾಗಬೇಕೆಂದು ಕರೆನೀಡುತ್ತಾರೆ. ಆಗ ಮಾತ್ರ ಸಾಮಾಜಿಕ ಅಭಿವೃದ್ಧಿ ಸಾಧ್ಯವೆಂಬ ಏಕರೂಪಿಯಾದ ಚಿಂತನೆಯನ್ನು ಸಾಮಾಜಿಕ ಕೊಡುಗೆಯಾಗಿ ನೀಡಿದರು. ಈ ಅಂಶಗಳಲ್ಲಿ ಕಾಯಕಕ್ಕೆ ಹೆಚ್ಚಿನ ಮಹತ್ವ ದೊರಕಿತು. ತಮ್ಮ ಕಾಯಕದಲ್ಲಿದ್ದ ಸಾಮಾಜಿಕ ಇತಿ–ಮಿತಿಗಳನ್ನು ಅರಿತು ಕಾರ್ಯಪ್ರೌರುತ್ತಾರೆಂಬುದು ಇಲ್ಲಿನ ಅಭಿಪ್ರಾಯವಾಗಿದೆ.

" ವ್ರತಸ್ಥನಾಗಿ ಭವಿಗಳ ಕೆಳಗೆ ಬೊಕ್ಕಸಭಂಡಾರ ಅಸಿ ಕೃಷಿ ವಾಣಿಜ್ಯ,
ಮುಂತಾದ. ಕಾಯಕವ ಬಿಟ್ಟು,
ತನ್ನ ಸ್ವಕಾಯಕದಿಂದ ಬಂದು ಒದಗಿದ ದ್ರವ್ಯವ ಒಡೆಯನ ಮುಂದಿಟ್ಟು,
ತಾನೊಡಗೂಡಿಕೊಂಡ ಪ್ರಸಾದಿಯ ಪ್ರಸಾದವ
ಎನ್ನೊಡೆಯನ ಮುಂದಿಟ್ಟು ಏಲೇಶ್ವರನ ಲಿಂಗಕ್ಕೆ ಕೊಡುವೆನು. "-8

ತಾನು ಶರಣ ಜನ್ಮದಲ್ಲಿ ಜನಿಸಿದ ಬಳಿಕ ಬೇಡುವ ಪರಿಯನ್ನು ಬಿಟ್ಟು ತಾನೇ ಸ್ವ-ಇಚ್ಛೆಯಿಂದ ದುಡಿದು ಸಮಾಜಕ್ಕೆ ಸೇವೆಗೈಯ್ಯಬೇಕು. ಇಲ್ಲದಿದ್ದರೆ ನಾವು ನಂಬಿದ ಶಿವನು ಮೆಚ್ಚುವುದಿಲ್ಲ ಎನ್ನುತ್ತಾರೆ. ದುಡಿದು ಕೇವಲ ವ್ಯರ್ಥವಾಗದೇ ತನು-ಮನ ಶುದ್ಧಿಯಾಗಿ ದುಡಿಮೆಯನ್ನು ಪರಿವರ್ತಿತಗೊಳಿಸಿ ಕಾಯಕ ವೃತ್ತಿಯನ್ನು ಅವಲಂಬಿಸಬೇಕೆಂದು ಹೇಳುತ್ತಾರೆ. ಈ ದೃಷ್ಟಿಯಲ್ಲಿ ಮೇಲು-ಕೀಳು ಎಂಬ ಭಾವನೆಯಿಲ್ಲದೆ ಕಾಯಕವನ್ನು ಮಾಡಬೇಕು, ಆಗ ಮಾತ್ರ ಸಾಮಾಜಿಕ ಬದುಕು ಉತ್ತಮವಾಗಿ ರೂಪಗೊಳ್ಳುತ್ತದೆಂಬ ಮಹಾದಾಶೆ ಹೊಂದಿದ್ದರು. ಶರಣನಾದವನು ಯಾವ ಕಾಯಕದಲ್ಲೇ ನಿರತನಾಗಿದ್ದರೂ ಕೂಡಾ ಅದರಿಂದ ಬಂದ ಪ್ರತಿಫಲವನ್ನು ಆರಾಧ್ಯ ದೈವನಿಗೂ ನೀಡುವುದು. ಸಂಗ್ರಹ ಪ್ರವೃತ್ತಿಯನ್ನು ಬಿಟ್ಟು ದುಡಿಮೆಯ ಹಂಚಿಕೆಯನ್ನು ಪ್ರತಿಪಾದಿಸುತ್ತಾರೆ.

ಜಾತಿಗಳನ್ನು ಸುಧಾರಿಸುವುದು :

ಸಾವಿರಾರು ವರ್ಷಗಳಿಂದ ಬಂದಂತಹ ವರ್ಣಾಶ್ರಮ ಪದ್ಧತಿ ಸಮಾಜವನ್ನು ವಿಭಜಿಸಿ ನೋಡುವ ಜಾತಿ ಮತ್ತು ಧರ್ಮಗಳು ನಾವು ಮೇಲು, ಕೀಳು ಎನ್ನುವ ಒಂದು ವರ್ಗದವರ ಸ್ವತ್ತಾಗಿತ್ತು. ಶಿವಶರಣರಿಗೆ ಸಮಾಜದಲ್ಲಿ ಕೂಡಿ ಬಾಳುವ ಪದ್ಧತಿಯು ತುಂಬಾ ಇಷ್ಟವಾಗಿದ್ದಿತು. ವರ್ಣದ ಮತ್ತು ವೃತ್ತಿ ಆಧಾರವಾಗಿ ಸಮಾಜ ವಿಂಗಡಣೆಯಾಗುತ್ತಿತ್ತು. ಇದರಿಂದ ಸಮಾಜದಲ್ಲಿ ಅಸಮಾನತೆ ಹೆಚ್ಚಾಗಿ ವರ್ಗ ಸಂಘರ್ಷಗಳು ನಡೆಯುತ್ತಿದ್ದವು, ಅಂತಹ ಸನ್ನಿವೇಶದಲ್ಲಿ ಕಲ್ಯಾಣದ ಕ್ರಾಂತಿ. ಈ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡುತ್ತದೆ. ಸಮಾಜವನ್ನು ಒಗ್ಗೂಡಿಸುವ ಪ್ರಯತ್ನವನ್ನು ತಮ್ಮ ವಚನಗಳಲ್ಲಿ ಈ ರೀತಿ ವ್ಯಕ್ತ ಪಡಿಸುತ್ತಾರೆ.

" ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ
ಇವನಮ್ಮವ, ಇವನಮ್ಮವ ಇವನಮ್ಮವನೆಂದಿನಿಸಯ್ಯಾ

ಕೂಡಲಸಂಗಮದೇವ.

ನಿಮ್ಮ ಮನೆಯ ಮಗನೆಂದಿನಿಸಯ್ಯಾ" -10

ಯಾವುದೇ ಸ್ತರದಲ್ಲಿ ಹುಟ್ಟಿದರೂ ಜಾತಿ, ಮತ ಮತ್ತು ಕುಲಗಳನ್ನು ಪ್ರಶ್ನಿಸದೇ ಮನೆಯ ಮಗನಂತೆ ಕಾಣುವ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಾರೆ. ಸಮಾಜದಲ್ಲಿ ಭೇಧ ಭಾವವೆನಿಸದೇ ಒಂದಾಗಿರಬೇಕೆಂಬ ಆಶಯವನ್ನು ವ್ಯಕ್ತ ಪಡಿಸಿದ್ದಾರೆ, ಸಮಾಜದಲ್ಲಿ ವರ್ಗ ತಾರತಮ್ಯವನ್ನು ಸ್ಪಷ್ಟವಾಗಿ ತಿರಸ್ಕರಿಸುವ ಶೀಲಯಾವುದು ಎಂಬುದರ ಬಗ್ಗೆ ಅರಿವುಂಟು ಮಾಡುವ ವಚನವನ್ನು ಅಂಬಿಗರ ಚೌಡಯ್ಯನವರು ಹೇಳುತ್ತಾರೆ.

" ಶೀಲವಂತರು, ಶೀಲವಂತರು ಎಂದು ಶೀಲದಲ್ಲಿ ಆಚರಿಸುವ ಅಣ್ಣಗಳೇ

ನಿಮ್ಮ ಶೀಲವಾವುದೋ ಹೇಳಿರೋ.

ಅರಿಯದಿದ್ದರೆ ಕೇಳಿರೋ ?

ಶಿರಸ್ಸಿನಲ್ಲಿ ಶಿವನಿಪ್ಪ

ಕಟಿಯಲ್ಲಿ ವಿಷ್ಣುವಿಪ್ಪ

ಆಧಾರದಲ್ಲಿ ಬ್ರಹ್ಮನಿಪ್ಪ

ಲಲಾಟದಲ್ಲಿ ವಿಭೂತಿ ರುದ್ರಾಕ್ಷಿ,

ಜಿಹ್ವೆಯಲ್ಲಿ ಪಂಚಾಕ್ಷರಿಯು

ಇಂತಪ್ಪ ಅಷ್ಟಾವರಣದಲ್ಲಿ ಸವೆಯದೆ

ಸಂಸಾರವೆಂಬ ಶರಧಿಯಲ್ಲಿ ಮುಳುಗೇಳರು ಶೀಲವಂತರಲ್ಲ.

ಬರಿದೆ ನಾವು ಶೀಲವಂತರೆನ್ನುವ ಮನುಜ ಕೇಳು

ಕಣ್ಣೇ ಕುಂಚಗಾರ, ಕರ್ಣವೇ ಬಣಜಿಗ, ಮೂಗೇ ಈಳಿಗ,

ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೇ ಕಲ್ಲುಕುಟಿಗ,

ತಲೆಯೇ ಮೋಪುಗಾರ ಬೆನ್ನೇ ಜೇಡ, ಅಂಗೈಯೇ ಅಕ್ಕಸಾಲಿಗ

ಮುಂಗೈಯೇ ಬಡಿಗ, ಕರವೇ ಕೋಮಟಿಗ,

ಕಣಕಾಲೇ ಕಾಳಿಂಗ, ಕುಂಡಿಯೇ ಕುಡುವೊಕ್ಕಲಿಗ,

ಒಳದೊಡೆಯೇ ಸಮಗಾರ, ಹೊರದೊಡೆಯೇ ಮಚ್ಚುಗ

ಮೇಗಾಲೆ ಹೊಲೆಯ, ಬುದ್ಧಿಯೇ ಬಯಲಗಂಬಾರ

ಇಂತಪ್ಪ ಕುಲ ಹದಿನೆಂಟು ಜಾತಿ
ಎಲು ಮಾಂಸವನು ತಲಬಿಟ್ಟಕೊಂಡು
ನನ್ನಕುಲ ಹೆಚ್ಚು ನಿನ್ನ ಕುಲ ಕಡಿಮೆ ಎಂದು
ಹೊಡೆದಾಡುವಂತಹ ಅಣ್ಣಗಳನ್ನು ಹಿಡಿದಂತು
ಮೂಗನೇ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ
ನಮ್ಮ ಪಡಿಹಾರಿ ಉತ್ತಣ್ಣನ ವಾಮಪಾದುಕೆಯಿಂದ
ಪಡಪಡನೆ ಹೊಡಿ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು."–11

ಅಂಬಿಗರ ಚೌಡಯ್ಯನವರು ಅಂದಿನ ಕಾಲದಲ್ಲಿದ್ದ 18 ಜಾತಿಗಳನ್ನು ಹೆಸರಿಸಿ ಅವುಗಳ ಮೂಲ ಹುಟ್ಟುವಿಕೆಯನ್ನು ದೇಹಕ್ಕೆ ಸ್ಥಳಾಂತರಿಸಿ. ದೇಹದ ಪಾವಿತ್ರತೆಯನ್ನು ಹೆಚ್ಚಿಸಿ ನಮ್ಮ ಅಂಗಾಂಗಗಳಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಎಂಬ ಮಾತನ್ನು ಹೇಳಿ ಇದರಲ್ಲಿ ಯಾವ ಕುಲವು ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ ಎಂಬ ತಿಳಿವನ್ನು ಹೇಳುತ್ತಾರೆ. ಒಂದು ವೇಳೆ ತಿಳಿಯದಿದ್ದರೆ ತಮ್ಮದೇ ಕ್ರಾಂತಿಯ ಪರಿಭಾಷೆಯಲ್ಲಿ ಉಗ್ರವಾಗಿ ಹೇಳುತ್ತಾರೆ.

" ಆವಕುಲವಾದಡೇನು ? ಶಿವಲಿಂಗವಿದ್ದವನೆ ಕುಲಜನು,
ಕುಲವನರಸುವರೆ ಶರಣರಲ್ಲಿ ಜಾತಿ ಸಂಕರನಾದ ಬಳಿಕ.
ಶಿವಧರ್ಮಕುಲೇಜಾತಃ ಪುನರ್ಜನ್ಮ ವಿವರ್ಜಿತಃ
ಉಮಾ ಮಾತಾಪಿತಾ ರುದ್ರ ಐಶ್ವರಂ ಕುಲಮೇವಚ ॥ ಎಂದಾದುದಾಗಿ
ಒಕ್ಕುದ ಕೊಂಬೆನವರಲ್ಲಿ, ಕೂಸಕೊಡುವೆ
ಕೂಡಲಸಂಗಮದೇವ, ನಂಬುವೆ ನಿಮ್ಮ ಶರಣನು."–12

"ಬಸವಣ್ಣನವರ ಕಾಲದಲ್ಲೆ 'ಜಾತಿಸಂಕರ' ವಾದುದಕ್ಕೆ ಈ ವಚನವೇ ಸಾಕ್ಷಿಯಾಗಿದೆ. ಶಿವಲಿಂಗಧಾರಿಗಳಾದವರು ಯಾವ ಜಾತಿಯವರಿದ್ದರೂ ಅದನ್ನು ಗಮನಿಸದೇ ಅವರೊಡನೆ ವ್ಯವಹಾರ, ಹೆಣ್ಣು-ಗಂಡಿನ ಸಂಬಂಧ, ಎಲ್ಲವನ್ನೂ ಮಾಡುವುದಾಗಿ ಘೋಷಿಸಿದ್ದಾರೆ. ಬಸವಣ್ಣನವರು ಜೀವಿಸುವವರೆಗೂ ಇಂಥ ಸಂಬಂಧಗಳು ನಡೆಯುತ್ತಿದ್ದು, ಪುನಃ ನಾಯಿಯ ಬಾಲ ಡೊಂಕು ಎಂಬಂತೆ ಲಿಂಗಾಧಾರಿಗಳಲ್ಲೂ ಮೊದಲಿನ ಜಾತಿ ಕುಲಗಳೇ ಉಳಿದುಕೊಂಡವು."–13

ಅಂದು ಸುಧಾರಿಸಿದ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ಶರಣರೆನಿಸಿಕೊಂಡ ಸಮಾಜ ಮುಂದೆ ನಿರ್ಮಾಣವಾಗಲಿಲ್ಲ. ಇದು ಅಂದು ಇದ್ದಂತಹ ಸಾಮಾಜಿಕ ಇತಿ-ಮಿತಿಯನ್ನು ತೋರಿಸುತ್ತದೆ.

ಸನಾತನವಾಗಿ ಬೆಳೆದುಬಂದಿದ್ದ ವೇದಮೂಲ ಧರ್ಮಕ್ಕೆ ತಿಲಾಂಜಲಿಯಿತ್ತರು. ಅಂದಿನ ಕಾಲದಲ್ಲಿದ್ದ ಕಟ್ಟುಪಾಡುಗಳನ್ನು ಮುರಿದು ಅದಕ್ಕೆ ಬದಲಾಗಿ ವ್ಯವಸ್ಥೆ ರೂಪಿಸ ಹೊರಟರು.

" ವೇದಕ್ಕೆ ಒರೆಯನ್ನು ಕಟ್ಟುವೆ,
ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಭಾರನೆತ್ತುವ,
ಆಗಮದ ಮೂಗ ಕೊಯ್ಯುವೆ ನೋಡೆಯ್ಯಾ 1
ಮಹಾದಾನಿ ಕೂಡಲ ಸಂಗಮದೇವ.
ಮಾದಾರ ಚೆನ್ನಯ್ಯನ ಮನೆಯ ಮಗನಾನಯ್ಯ."-14

ವಚನಕಾರರು ಪೂರ್ವದಲ್ಲಿದ್ದ ವೇದ, ಶಾಸ್ತ್ರ, ಆಗಮ, ಉಪನೀಷತ್, ತರ್ಕ ಮುಂತಾದ ಅನೇಕ ವಿಚಾರಗಳನ್ನು ತಿರಸ್ಕರಿಸಿದರು. ಇದರ ಬದಲಿ ರೂಪದಂತೆ, "ಆ ಧರ್ಮದ ಕ್ರಿಯಾ ರೂಪವೇ 'ದಾಸೋಹ'. ಗುರು-ಲಿಂಗ-ಜಂಗಮರ ಪರಿಚರ್ಯೆ ಅದಕ್ಕೆ ಮುಡುಪಾದ ಚರಿತ್ರಾರ್ಹ ಕಾಯಕ, ಭಗವಂತನಿಗೆ ಸಮರ್ಪಿತನೆಂಬ ಭಾವದಲ್ಲಿ ಪ್ರತಿಯೊಬ್ಬ ತನ್ನ ಉದರ ನಿರ್ವಾಹದ ಕಸುಬು ಸಾಗಿಸುವುದು. ಇದರಿಂದ ಸಮಾಜ ಸೇವೆಗೆ ಆಧ್ಯಾತ್ಮಿಕ ತಳಹದಿ, ಶ್ರಮಕ್ಕೆ ಗೌರವ, ಆ ದುಡಿಮೆಯ ಗಳಿಕೆಯೇ ದಾನಕ್ಕೆ ಯೋಗ್ಯ"-15 ಸಾಮಾಜಿಕ ಸಂಬಂಧಗಳು ಗಟ್ಟಿಗೊಂಡು ಧರ್ಮ ಉದಾರವಾದ ಮಾನವೀಯ ತಳಹದಿಯ ಮೇಲೆ ನಿಲ್ಲಬೇಕೆಂಬುದು ಶರಣರ ಆಶಯವಾಗಿತ್ತು. ದಯೆಯ ಮುಖವಾಡ ತೊಟ್ಟ ಸನಾತನ ಧರ್ಮ ಇವರಿಗೆ ಕ್ರೂರವೆನಿಸಿರಬೇಕು. ಆದ್ದರಿಂದಲೇ ದಯೆಯೇ ಧರ್ಮದ ಮೂಲವೆಂದು ಸಾರಿದರು.

ಈ ನಿಟ್ಟಿನಲ್ಲಿ ಜಾತಿಯನ್ನು ಮೂಲೆಗುಂಪು ಮಾಡಿ ಲಿಂಗವನ್ನು ಧರಿಸಿದವರೆಲ್ಲರೂ ಶಿವನ ಆರಾಧಕರಾದರಲ್ಲದೇ ಶರಣಧರ್ಮದತ್ತ ವಾಲಿದರು. ಲಿಂಗವಂತರದಲ್ಲದವರಿಗೆ ಇಲ್ಲಿ ಅವಕಾಶವಾಗಲಿಲ್ಲ, ಎಷ್ಟೇ ಮಾನವೀಯತೆ ಇದ್ದರೂ ಲಿಂಗ ಧರಿಸದವರಿಗೆ ಈ ಶರಣ ಧರ್ಮದಲ್ಲಿ

ಅವಕಾಶವಿಲ್ಲದ ನಿಯಮ ಮುಂದೆ ವಿಶಾಲವಾಗಿ ಬೆಳೆಯಲು ಮಾರಕವಾಯಿತು. ಇದು ಅಂದಿನ ಸಾಂಸ್ಕೃತಿಕ ಇತಿ–ಮಿತಿಯನ್ನು ತೋರಿಸುತ್ತದೆ.

ಹೆಣ್ಣಿಗೆ ದೈವ ಸ್ವರೂಪ ಪಟ್ಟ, ದಾನದ ಬದಲು ದಾಸೋಹ, ಸನ್ಯಾಸದ ಬದಲು ಸಂಸಾರ ಒಪ್ಪುವುದು ಅನಿವಾರ್ಯವಾಗಿತ್ತು. ಪ್ರಭುತ್ವದಲ್ಲಿ ದೇವರ ಒಡೆತನ ಹಾಗೂ ಸಾಮೂಹಿಕ ಹೊಣೆಗಾರಿಕೆಯನ್ನು ಒಪ್ಪಿದಾಗ ಶರಣ ಸಂಸ್ಕೃತಿಯ ವಿಚಾರವನ್ನು ಗ್ರಹಿಸಬಹುದು. ಹೀಗೆ ಗ್ರಹಿಸುವುದರಿಂದ ಇವುಗಳಲ್ಲಾದಂತಹ ಸ್ಥಾನಪಲ್ಲಟವನ್ನು ಗುರುತಿಸಬಹುದು. ಈ ವಿಷಯವು ಸಾಂಸ್ಕೃತಿಕ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪರಿಣಾಮವಾಗಿ ಸಾಂಸ್ಕೃತಿಕ ವಿಭಿನ್ನತೆ ಹಾಗೂ ಇತಿ–ಮಿತಿಗಳಿಗೆ ದಾರಿ ಮಾಡಿಕೊಡುತ್ತವೆ. ಈ ಎಲ್ಲಾ ಸಂಸ್ಕೃತಿಗೆ ಪ್ರತಿ ಸಂಸ್ಕೃತಿಯು ಅವತರಿಸಲು ಅವಕಾಶವಾಗುತ್ತದೆ.

ಇದರ ಪರಿಣಾಮವಾಗಿ ಸಾಮಾನ್ಯ ಜನಜೀವನದಲ್ಲಿ ಅನೇಕ ಏರು–ಪೇರುಗಳಾಗುತ್ತವೆ. ಆದ ಕಾರಣ ಸಾಮಾನ್ಯ ಮನಃಸ್ಥಿತಿಗಳು ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಅಥವಾ ಮಣಿಯದೆಯೋ ವ್ಯವಸ್ಥೆಯೊಳಗೆ ಬದುಕು ನಡೆಸುವುದು ಅನಿವಾರ್ಯವಾಗುತ್ತದೆ. ಇದರಿಂದಾಗಿ ತನಗಾಗದ ವಿಷಯಗಳಲ್ಲಿ ಬಂಡೇಳಬೇಳಬೇಕಾಗುತ್ತದೆ. ಎಂಬುದು ಈ ಸಂಶೋಧನೆಯ ಅಭಿಪ್ರಾಯವಾಗಿದೆ.

4.1 ಸಂಕ್ರಮಣಗೊಂಡ ಫ್ಯೂಡಲ್ ವ್ಯವಸ್ಥೆ :

ಮಧ್ಯಕಾಲೀನ ಯುಗದ ಸಾಂಸ್ಕೃತಿಕ ಸನ್ನಿವೇಶವನ್ನು ತಿಳಿಯಬೇಕಾದರೆ, ಇಲ್ಲಿ ಸಿಗುವ ಪುರಾತತ್ವ ಆಧಾರಗಳು ಸಾಹಿತ್ಯಾಧಾರಗಳು ಪ್ರಮುಖ ಪಾತ್ರವಹಿಸುತ್ತದೆ. ಅಂದಿನ ಇತಿಹಾಸ ರಾಜಪ್ರಭುತ್ವ, ಧರ್ಮಪ್ರಭುತ್ವಗಳ, ಪ್ರಭಾವದಿಂದ ಕೆಲವೇ ಸ್ವಾರ್ಥ ಬುದ್ಧಿಜೀವಿಗಳು ಮತ್ತು ಜಮೀನುದಾರರ ಸಾಮಾಜಿಕ ಹಿಡಿತವಿತ್ತು. ಸಾಮಾನ್ಯ ಜನರ ಮೇಲೆ ಬಲವಂತವಾಗಿ ಅಥವಾ ಅವರ ಮೌಢ್ಯವನ್ನು ಬಳಸಿಕೊಂಡು ತಮ್ಮ ಭದ್ರ ಕೋಟೆಯನ್ನು ಕಟ್ಟುವಲ್ಲಿ ಯಶಸ್ವಿಯಾಗುತ್ತಾ ಹೋಗುತ್ತಾರೆ.

ಪ್ರಭುತ್ವ ಮತ್ತು ಧರ್ಮರಾಜಕಾರಣದ ವ್ಯಾಪ್ತಿಯಲ್ಲಿ ಬರುವ ಅಕ್ಷರ ಕ್ರಾಂತಿ ಅನೇಕ ಅಂಶಗಳ ಕಲಾತ್ಮಕವಾದ ಪ್ರತಿಭಟನೆಯನ್ನು ಹೇಳುತ್ತದೆ. ಆದರೂ ಸಾಮಾನ್ಯನಿಗೆ ತಲುಪುವಲ್ಲಿ

ಕೆಲವು ಸಮಕಾಲೀನ ಸನ್ನಿವೇಶದಲ್ಲಿದ್ದ ನಿಷೇಧ ನಿಯಮಗಳು ಕಟ್ಟಾಜ್ಞೆಗಳಾಗಿದ್ದವು. ಇಂತಹ ಮಹಿಳಾ ಪ್ರಾತಿನಿಧ್ಯದ ಕೊರತೆ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅವಿತುಕೊಂಡಿತು. ಇಂತಹ ದೌರ್ಬಲ್ಯಗಳ ಕೊರತೆಯನ್ನೇ ಬಂಡವಾಳಗಿಟ್ಟುಕೊಂಡ ಪುರೋಹಿತಶಾಹಿ ಬೆಳೆಯುತ್ತಾ ಹೋಗುತ್ತದೆ. ಇಂತಹ ಆತಂಕಗಳ ಮಧ್ಯೆ ಕಲ್ಯಾಣದಲ್ಲಿ ಪುರೋಹಿತ ಪ್ರಭುತ್ವದಿಂದ ಶೋಷಣೆಗೊಳಪಟ್ಟು ಅದರ ಹಿಡಿತದಿಂದ ತಪ್ಪಿಸಿಕೊಂಡು ಬಂದಂತಹ ವಿಚಾರವಾದಿಗಳು ಒಗ್ಗೂಡಿದರು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಅಂಬಿಗರಚೌಡಯ್ಯ, ಸಿದ್ಧರಾಮ, ಚನ್ನಬಸವಣ್ಣ, ಆದಯ್ಯ, ಮಡಿವಾಳಮಾಚಯ್ಯ, ಜೇಡರದಾಸಿಮಯ್ಯ ಮುಂತಾದ ಶಿವ ಶರಣ-ಶರಣೆಯರು ಸೇರಿ ಅಲ್ಲಿಯವರೆಗಿನ ಸಾಮಾಜಿಕ ವ್ಯವಸ್ಥೆಯನ್ನೇ ಪ್ರಶ್ನೆ ಮಾಡುವಂತಹ ಮಟ್ಟಕ್ಕೆ ಬೆಳೆಯತೊಡಗಿದರು.

ಅಂದಿನ ಕಾಲದ ಸಮಗ್ರಜೀವನ ಸಂಕ್ರಮಣದ ವ್ಯವಸ್ಥೆಯ ಸ್ಥಿತಿಯಲ್ಲಿತ್ತು, ಆದ್ದರಿಂದ ಅಲ್ಲಿಯ ಜನಾಂಗ, ಬದುಕಿನ ಸಂಕಟಗಳ ಸರಪಳಿಯಿಂದ ಮುಕ್ತಿಹೊಂದಲಿ ಎಂದು ಹಾತೊರೆಯುತ್ತಿದ್ದವು. ಇಂತಹ ವ್ಯವಸ್ಥೆಯನ್ನು ವಚನಗಳ ಮೂಲಕ ಗ್ರಹಿಸಬಹುದಾಗಿದೆ. "ಆದ್ದರಿಂದ ಸಾಮಾಜಿಕ ಶ್ರೇಣೀಕರಣಗಳಾದ ಜಾತಿ ಪದ್ಧತಿ, ಅಸ್ಪೃಶ್ಯತೆ, ಊಳಿಗಮಾನ್ಯಪದ್ಧತಿ, ಭೂಸ್ವಾಮ್ಯ ನೀತಿ, ಧರ್ಮಾಧಿಕಾರ, ರಾಜ್ಯತ್ವದ ಶಕ್ತಿಕೇಂದ್ರೀಕರಣ ಮತ್ತು ಪ್ರಭುತ್ವದ ವ್ಯಾಪ್ತಿಗೊಳಪಡುವ ಅಂತರಸಂಬಂಧಿಯಾದ ನೆಲೆಗಳಾಗಿವೆ. ಈ ಎಲ್ಲಾ ನೆಲೆಗಳನ್ನು ಮೊದಲ ಬಾರಿಗೆ ವ್ಯಾಪಕವಾಗಿ ವಿವರಿಸುವ, ಖಂಡಿಸುವ, ಪ್ರತಿಭಟಿಸುವ, ಸಮುದಾಯ ಧ್ವನಿ ವಚನಸಾಹಿತ್ಯದಲ್ಲಿ ಬಂತು. ವಚನ ಚಳವಳಿಯನ್ನು ಕೇವಲ 'ಧಾರ್ಮಿಕ ಪರಿಷ್ಕರಣ ಚಳವಳಿ' ಎಂದು ಭಾವಿಸುವವರು, ಮೇಲೆ ಹೇಳಿದ ಅಂತರಸಂಬಂಧಿ ನೆಲೆಗಳನ್ನೊಳಗೊಂಡ ಪ್ರಭುತ್ವವಿರೋಧಿ ಮತ್ತು ಮೀರುವ ಕ್ರಿಯೆಗಳನ್ನು ದಹಿಸಬಾರದು.–16 ಅಂದಿನಿಂದ ಇಂದಿನವರೆರೂ ಪ್ರಭುತ್ವ ಎಂಬುದು ಎಲ್ಲ ಸಾಮಾಜಿಕ ವಲಯಗಳ ಮೇಲೆ ಹಿಡಿತ ಸಾಧಿಸುಲು ಪ್ರಯತ್ನಿಸುವ ಅಂಶಗಳೇ ಹಿಡುವಳಿಗಳಾಗಿವೆ. ಇದರಿಂದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ವ್ಯವಸ್ಥೆಯ ಮೇಲೆ ಹೆಚ್ಚು ಪ್ರಭಾವ ಬೀರಿವೆ.. ಈ ಬಗೆಯ ಹಿಡುವಳಿಯ ವಿಚಾರಗಳು ಸಮಗ್ರ ಕ್ಷೇತ್ರಗಳಲ್ಲಿ ಹಿಡಿತ ಸಾಧಿಸಲು ಯತ್ನಿಸುತ್ತವೆ. ಇಂತಹ ವಿಚಾರಗಳಿಂದ ಮುಕ್ತಿಹೊಂದಲು ವಚನಕಾರರು ರೂಪಿಸಿದ ಊಳಿಗಮಾನ್ಯದ ನಿರಾಕರಣೆಗಳು ವಚನಗಳಲ್ಲಿ ಬಲವಾಗಿ ನೆಲೆಯೂರಿವೆ, ಇದರಿಂದ ಊಳಿಗಶಾಹಿಗಳ ಅತಿಕ್ರಮಣದ ತಡೆ ; ಪಟ್ಟಭದ್ರ

ಹಿತಾಸಕ್ತಿಗಳಿಂದ ಬಿಡುಗಡೆಗೆ ಬೇಕಾಗುವ ಅಂಶಗಳನ್ನು ವಚನಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಮೇಲೆನ ಹೇಳಿಕೆಗೆ ಪೂರಕವಾಗಿ ಬಸವಣ್ಣನವರ ವಚನವನ್ನು ಗ್ರಹಿಸಬಹುದಾಗಿದೆ.

" ಅರಸು ಮುನಿದೆಡೆ ನಾಡೊಳಗಿರಬಾರದಯ್ಯ,
ಗಂಡ ಮುನಿದರೆ ಮನೆಯೊಳಗಿರಬಾರದಯ್ಯ,
ಕೂಡಲಸಂಗಮದೇವ
ಜಂಗಮ ಮುನಿದರೆ ನಾನೆಂತು ಬದುಕುವೆ?"–17

ಇಲ್ಲಿ ಅರಸು, ಗಂಡ ಎಂಬ ಪದಗಳು ದಬ್ಬಾಳಿಕೆ, ಊಳಿಗಮಾನ್ಯ ಧೋರಣೆಗಳನ್ನು ಸಾಂಕೇತಿಸುವ ಸೂಚಕಗಳಾಗಿವೆ. ಊಳಿಗದವರನ್ನು ಇವರು ದುಡಿಯುವ ಯಂತ್ರದಂತೆ ಕನಿಷ್ಠ ಮಾನವೀಯತೆಯನ್ನೂ ತೋರಿಸದೆ, ನಡೆಸುಕೊಳ್ಳುತ್ತಿದ್ದ ರೀತಿ ಅಮಾನವೀಯವಾದುದು, ಇವರಿಗೆ ಪ್ರಿಯವಾದ ಮತ್ತು ಯೋಗ್ಯವಾದ ಆಚಾರವಿಚಾರಗಳಿಗೆ ಪೂರ್ಣವಾದ ನಡವಳಿಕೆಗಳಲ್ಲಿ ನಡೆದರೆ ಮಾತ್ರ ಅವರ ಸಖ್ಯದಲ್ಲಿರಬೇಕಾಗುತ್ತದೆ. ಅವರಿಷ್ಟದಂತೆ ಇದ್ದರೆ ಮಾತ್ರ, ಉಳಿಸಿಕೊಂಡು ವಿರೋಧಿಸಿದರೆ ಅವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು ಇಂತಹ ವ್ಯವಸ್ಥೆಯಿಂದ ಬಳಲಿದ್ದ ವರ್ಗವು ಪರಿವರ್ತನೆಗಾಗಿ ಹಪ–ಹಪಿಸುತ್ತಿತ್ತು. ಆದ್ದರಿಂದ ಪ್ರಭುತ್ವದ ಹಾಗೂ ಕೌಟುಂಬಿಕ ಸ್ತ್ರೀ ಶೋಷಣೆಯ ಊಳಿಗದ ನೀತಿಯಿಂದ ಆಗುವ ಅನಾಹುತದ ಸ್ಪಷ್ಟ ಚಿತ್ರಣವನ್ನು ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಕಾಣಬಹುದಾಗಿದೆ. ಅಂದಿನ ಕಾಲದಲ್ಲಿ ಬದಲಾವಣೆಯನ್ನು ಬಯಸಿದ ಮನಸ್ಸುಗಳಿಗೆ ಶಿವಶರಣರ ತತ್ವಗಳು ದಾರಿದೀಪವಾದವು. ಎಂದೇ ಹೇಳಬಹುದು.

ಸಾಮಾಜಿಕ ವ್ಯವಸ್ಥೆಯ ಭಾಗವಾಗಿರುವ ಹೆಣ್ಣು–ಮಣ್ಣು–ಹೊನ್ನುಗಳ ಹಿಡಿತಕ್ಕಾಗಿ ತಮ್ಮ ಜೀವಮಾನವನ್ನೇ ಮುಡುಪಾಗಿಸಿದ ಜನರನ್ನು ಕುರಿತು ಅಲ್ಲಮನ ವಚನವು ಪ್ರತಿಧ್ವನಿಸುತ್ತದೆ. ಸಾಮಾಜಿಕ ಹಿಡುವಳಿಗಾಗಿ ಹೋರಾಡಿ ಮಡಿದ ಕೋಟ್ಯಾಂತರ ಜನರನ್ನು ಕುರಿತ ಅಭಿವ್ಯಕ್ತಿಯಾಗಿದೆ. ನಮ್ಮ ನಾಡಿನ ನಂಬಿಕೆಗಳ ಹಿನ್ನೆಲೆಯಲ್ಲಿ ಆಲೋಚಿಸಿದರೆ ಭೂಮಿಯನ್ನು ತಾಯಿಗೂ, ಸಂಪತನ್ನು ಲಕ್ಷ್ಮಿಗೂ ಹೋಲಿಸಲಾಗಿದೆ. ಈ ಅಂಶಗಳ ಮೇಲೆ ಹಿಡಿತ ಸಾದಿಸಲಾಗದೆ ತಮ್ಮ ಜೀವನವನ್ನು ಹಾಳುಗೆಡವಿಕೊಂಡವರಬಗ್ಗೆ ಸಾತ್ವಿಕ ಆಕ್ರೋಶವಿದೆ. ಹೀಗೆ ಊಳಿಗಮಾನ್ಯ ನಿರಾಕರಣೆಯನ್ನು ಆರಾಧ್ಯ ದೈವವನ್ನು ನಡೆಯುವುದರ ಮೂಲಕ ನಿರಾಕರಿಸಬೇಕೆನ್ನುತ್ತಾರೆ.

" ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ,
ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ

ಗುಹೇಶ್ವರ ನಿಮಗಾಗಿ ಸತ್ತವರನಾರನ್ನು ಕಾಣೆ"–18

ಈ ವಚನವು ಊಳಿಗಮಾನ್ಯ ಪದ್ಧತಿಯ ಅನಾಹುತಗಳನ್ನು ಚಿತ್ರಿಸುತ್ತದೆ, ಹೆಣ್ಣು, ಹೊನ್ನು, ಮಣ್ಣು ಈ ವಿಚಾರಗಳನ್ನು ಮನುಷ್ಯ ತಮ್ಮ ಸ್ವಾರ್ಥದ ಹಿತಾಸಕ್ತಿಗೆ ಬಳಸಿ, ಸಾಮಾಜಿಕ ಸ್ವಾಸ್ಥ್ಯವನ್ನ ಕೆಡಿಸ ಹೊರಟಾಗ ಒಬ್ಬನ ಹಿತಕ್ಕೋಸ್ಕರ ಸಮುದಾಯವನ್ನು ಬಲಿಕೊಡುವುದು ಅಂದಿನ ಕಾಲದಲ್ಲಿತ್ತೆಂಬುದಕ್ಕೆ ಮೇಲಿನ ವಚನವೆ ಸಾಕ್ಷಿಯಾಗಿದೆ.

ಶರಣರು ಹೆಣ್ಣು, ಹೊನ್ನು, ಮಣ್ಣಿಗೆ ವಿಶೇಷ ಸ್ಥಾನಮಾನವನ್ನು ಕೊಟ್ಟಿದ್ದಾರೆ. ಫ್ಯೂಡಲ್‌ನ ದಬ್ಬಾಳಿಕೆಯನ್ನು ತಿರಸ್ಕರಿಸಿ, ಅದಕ್ಕೆ ಬದಲೀ ವ್ಯವಸ್ಥೆಯನ್ನು ರೂಪಿಸುತ್ತಾರೆ. ಅಂದರೆ ಸನಾತನ ಕಾಲದಿಂದಲೂ ತುಳಿತಕ್ಕೊಳಗಾದ ಸ್ತ್ರೀಯರಿಗೆ ವಿಶೇಷ ಸ್ಥಾನಮಾನಗಳನ್ನು ವಚನಕಾರರು ನೀಡಿದ್ದಾರೆ.

ಪ್ರಾಚೀನದಿಂದಲು ಶೋಷಿಸಲ್ಪಟ್ಟಿದ್ದ ಹೆಣ್ಣನ್ನು, ಧೈವೀಕರಣದ ನೆಲೆಯಲ್ಲಿ ಹೇಗೆ ಪ್ರಸ್ತಾಪಿಸಲಾಗಿದೆ ಎಂಬ ವಿಚಾರವನ್ನು ವಚನಗಳ ಮೂಲಕ ಚಿಂತಿಸಿದ್ದಾರೆ. ತುಳಿತಕ್ಕೆಕಾರಣವಾದ ಮಡಿ–ಮೈಲಿಗೆ, ಸೂತಕದ ಪದ್ಧತಿಗಳನ್ನು ಸಂಪೂರ್ಣ ನಿರಾಕರಿಸಿದರು. ಸ್ತ್ರೀ ಕೂಡ ಪುರುಷನಂತೆ ಸಮಾನತೆ ಪಡೆಯಲು, ತಮ್ಮ ಆರಾಧ್ಯ ದೈವದ ಪ್ರತಿರೂಪವಾಗಿರುವ, ಜೀವ ಸೃಷ್ಟಿಗೆ ಕಾರಣವಾಗಿರುವ ದೇವರ ಮೂಲದಲ್ಲಿ ಹೆಣ್ಣಿನ ಅಸ್ತಿತ್ವವನ್ನು ಸಾರಿ ಹೇಳುತ್ತಾರೆ.

" ತಾಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾಮಾಡಿದ ಹೆಣ್ಣು ಬ್ರಹ್ಮನಾಲಿಗೆಯನೇರಿತ್ತು
ತಾಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದುಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ !–20

ಒಂದು ಕಾಲದಲ್ಲಿ ಕಡೆಗಣಿಸಲ್ಪಟ್ಟಿದ್ದ ಹೆಣ್ಣನ್ನು ಉನ್ನತೀಕರಿಸಿ ತನ್ನ ಆರಾಧ್ಯ ದೇವರಿಗೆ ಸಮಾನವಾಗಿ ಸ್ವೀಕರಿಸುತ್ತಾರೆ. ಇದರಿಂದ ಅರ್ವಾಚೀನ ಕಾಲದ ಸ್ತ್ರೀಯು ಕುಟುಂಬ ಊಳಿಗವನ್ನು ತಿರಸ್ಕರಿಸಿ ಸಮಾಜದ ಮುಖ್ಯವಾಯಿನಿಗೆ ಬರಲು ಸಹಾಯವಾಯಿತು.

ಫ್ಯೂಡಲ್ ಸಂಸ್ಕೃತಿಗೆ ಪೂರಕವಾಗಿ ಮೇಲ್ವರ್ಗದ ಜನರ ಒಳಿತಿಗಾಗಿಯೇ ಹುಟ್ಟಿಕೊಂಡಿದ್ದ ಅನೇಕ ಕಟ್ಟುಪಾಡು, ಪುರಾಣಗಳನ್ನು ತಿರಸ್ಕರಿಸುತ್ತಾರೆ ಎಂಬುದನ್ನು ಈ ಕೆಳಗಿನ ವಚನ ಸ್ಪಷ್ಟಪಡಿಸುತ್ತದೆ.

"ವೇದವೆಂಬುದು ಓದಿನಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರಗೋಷ್ಠಿ, ತರ್ಕವೆಂಬುದು ತಗರ ಹೋರಟೆ
ಭಕ್ತಿ ಎಂಬುದು ತೋರಿ ಉಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು."–21

ಈ ವಚನಕಾರರು ವೇದ, ಶಾಸ್ತ್ರ, ಪುರಾಣ, ಗೋಷ್ಠಿ, ಭಕ್ತಿ ಮುಂತಾದ ಆಚಾರ-ವಿಚಾರಗಳನ್ನು ತಮ್ಮ ವೈಚಾರಿಕ ನೆಲೆಯಲ್ಲಿ ವಿಶ್ಲೇಷಿಸಿ, ಗಟ್ಟಿಗೊಳಿಸಿ, ಅನುಪಯುಕ್ತ ತತ್ವಗಳನ್ನು ತಿರಸ್ಕರಿಸಿ ತಮ್ಮದೇ ಆದ ಸ್ವಂತ ತತ್ವವಗಳನ್ನು ಪ್ರತಿಪಾದನೆ ಮಾಡುತ್ತ ಊಳಿಗಮಾನ್ಯ ಸಂಸ್ಕೃತಿಯ ಹಾಗೂ ಪುರೋಹಿತಶಾಹಿಯ ಆಚಾರ-ವಿಚಾರಗಳನ್ನು ಖಂಡಿಸುತ್ತ ಸ್ವಂತಿಕೆಯನ್ನು ಕಾಪಾಡಿಕೊಂಡು ಬಂದಿವೆ ಎಂಬುದನ್ನು ಇಲ್ಲಿ ಗಮನಿಸ ಬಹುದಾಗಿದೆ.

ವಚನಕಾರರು ಊಳಿಗಮಾನ್ಯ ಸಂಸ್ಕೃತಿಯ ದೈವಪರಂಪರೆಯನ್ನು ಪ್ರಶ್ನಿಸಿ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ವಾಸ್ತವವಾದಿ ನೆಲೆಯಲ್ಲಿ ಸ್ವೀಕರಿಸುತ್ತಾರೆ. ಅದಲ್ಲದೇ ಕಾರ್ಯರೂಪಕ್ಕೂ ತರುತ್ತಾರೆ.

"ಕೈಲಾಸ, ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ ಕೇಳಿರಯ್ಯಾ
ಕೈಲಾಸವೆಂಬುದು ಭೂಮಿಯೊಳಿರುವ ಹಾಳುಬೆಟ್ಟ
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು
ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ
ಇದರಾಡಂಬರವೇಕಯ್ಯಾ
ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ
ಲಿಂಗಾಂಗ ಸಾಮರಸ್ಯವ ತಿಳಿದು
ನಿಮ್ಮ ಪಾದಪದ್ಮದೊಳು ಬಯಲಾದ ಪದವೇ ಕೈಲಾಸವಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ."–22

ಅಂದಿನಕಾಲದ ಶಿವವಾಸಸ್ಥಾನವನ್ನು ವೈಭವದ ನೆಲೆಯಲ್ಲಿ ಶಾಸ್ತ್ರ ಪುರಾಣಗಳು ವರ್ಣಿಸುತ್ತಿದ್ದವು. ಕೈಲಾಸದ ವರ್ಣನೆ ಅಲ್ಲಿಯ ಬದುಕಿನ ಚಿತ್ರಣವು ಉಳ್ಳವರಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದ್ದರಿಂದ ಕೈಲಾಸದಲ್ಲಿನ ಶಿವನ ಕಲ್ಪನೆಯನ್ನು ತಿರಸ್ಕರಿಸಿ, ಶಿವನ ರೂಪ, ಬದುಕು, ವಾಸ್ತವತೆಯನ್ನು ತಿಳಿದು, ಕೈಲಾಸದಿಂದ "ಕಾಯಕವೇ ಕೈಲಾಸ" ವೆಂಬ ಅರಿವನ್ನುಂಟು ಮಾಡಿದರು. ದೇವಾಲಯ, ವಿಗ್ರಹಪೂಜೆಯನ್ನು ಖಂಡಿಸಿ, ಅದಕ್ಕೆ ಪರ್ಯಾಯವಾದುದನ್ನು ತಿಳಿಸಿದರು. ಅದನ್ನು ಅಲ್ಲಮನ ವಚನಗಳು ಸ್ಪಷ್ಟೀಕರಿಸುತ್ತವೆ.

" ದೇಹದೊಳಗೆ ದೇವಾಲಯವಿದ್ದು, ಮತ್ತೆ ಬೇರೆ ದೇಗುಲವೇಕಯ್ಯಾ ?
ಎರಡಕ್ಕೆ ಹೇಳಲಿಲ್ಲಯ್ಯಾ.
ಏನೆಪ್ಪನು?"-23

"ಗುಹೇಶ್ವರಾ ನೀನು ಕಲ್ಲಾದೆಡೆ ನಾನು
ಕಲ್ಲಮನೆಯ ಮಾಡಿ ಕಲ್ಲದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದಡೆ, ದೇವರೆತ್ತ ಹೋದರೋ ?
ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ ಗುಹೇಶ್ವರಾ."-24

ಜಡತ್ವವಾದ, ನಿಲುವುಗಳು, ಸ್ಥಾವರಗೊಂಡ ಪೂಜೆ, ಪುರಸ್ಕಾರಗಳನ್ನು ತಿರಸ್ಕರಿಸಿ, ತಮ್ಮ ದೇಹವನ್ನೇ ಪವಿತ್ರ ದೇವಾಲಯವನ್ನಾಗಿ ಮಾಡಿ ಆಚರಣೆಗೆ ತಂದರು. ಊಳಿಗಮಾನ್ಯ ಪದ್ಧತಿಯಲ್ಲಿ ಯಾವಾಗಲು ಶೋಷಣೆಗೆ ಒಳಪಡುತ್ತಿದ್ದು, ಕುಲ ಸಮುದಾಯಗಳು ಇವರ ವಿಚಾರದತ್ತ ವಾಲತೊಡಗಿದರು. ಅದರ ಪರಿಣಾವಾಗಿ ಸಾಂಸ್ಕೃತಿಕ ಪಲ್ಲಟವಾಗಿ ವರ್ಗ ಬೇಧವಿಲ್ಲದೆ ಸಂಸ್ಕೃತಿಗಳು ಸಮೀಕರಣಗೊಂಡು ಹೊಸ ಕ್ರಾಂತಿಗೆ ನಾಂದಿ ಮಾಡಿದವು.

ಊಳಿಗಮಾನ್ಯ ಪದ್ಧತಿಯ ಬಿಕ್ಕಟ್ಟಿನಿಂದ ವಿಘಟಿತವಾದ ಜನಾಂಗಗಳನ್ನು ಒಂದೇ ಸೂರಿನಡಿ ತರುವ ಸಲುವಾಗಿ ಅವರು ಆಚರಿಸುತ್ತಿದ್ದ ಹಲವು ದೈವಗಳನ್ನು ನಿರಾಕರಿಸಿ, ಏಕದೇವೋಪಾಸನೆಗೆ ಕರೆ ನೀಡಿದರು. ನಿಜ ದೈವದ ಕಲ್ಪನೆಯನ್ನು ಎಳೆ ಎಳೆಯಾಗಿ ತೆರೆದಿಟ್ಟರು. ಬಸವಣ್ಣನವರ ಈ ವಚನವನ್ನು ಉದಾಹರಿಸಬಹುದು.

" ಅರಗು ತಿಂದರೆ ಕರಗುವ ದೈವವ
ಉರಿಯಕಂಡರೆ ಮುರುಟುವ ದೈವವ

ಎಂತು ಸರಿಯೆಂಬನಯ್ಯಾ ?
ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬನಯ್ಯಾ
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬನಯ್ಯಾ ?
ಸಹಜಭಾವ ನಿತ್ಯಕ್ಕೆ ಕೂಡಲಸಂಗಮ ದೇವನೊಬ್ಬನೇ ದೇವ."–25

ದೈವದ ಸ್ವಭಾವಗಳನ್ನು ಸ್ಮರಿಸುತ್ತಾ " ಅಂಜಿಕೆಯಾದರೆ ಹೂಳುವ ದೈವ" ಎಂಬ ವಿಚಾರ ದೈವವನ್ನೇ ಹೂಳುವ ಸ್ಥಿತಿಯಿತ್ತು ಎಂಬ ಅರಿವು ನಮಗಾಗುತ್ತದೆ. ಅಂದಿನ ಕಾಲದಲ್ಲಿ ಲಿಂಗ ಭಗ್ನಗೊಂಡರೆ ಅದನ್ನು ಹೂಳುವುದು ಆಚರಣೆಯಲ್ಲಿತ್ತೆಂದು ತಿಳಿದು ಬರುತ್ತದೆ. ದೈವವೊಂದು ಮಾರಾಟದ ಸರಕಾಗಿತ್ತೆಂದು ಈ ವಚನದಲ್ಲಿ ಹೇಳಲಾಗಿದೆ. ಅಂದ ಹಾಗೆ ಉಳ್ಳವರ ಪಾಲಾಗಿದ್ದ ದೇವರು ಅವರ ಅಧೀನವಾಗಿತ್ತೆಂದು ಹೇಳುತ್ತಾರೆ.

ಸಾಮಾನ್ಯ ಜನಸಮುದಾಯಗಳನ್ನು ಸಂಕಷ್ಟಗಳಿಂದ ಕಾಪಾಡುವ ಹೊಣೆಗಾರಿಕೆ ಶರಣರಿಗೆ ಒದಗಿಬಂದಿತು. ಏಕೆಂದರೆ ಇಂತಹ ಆಚರಣೆಗಳಿಂದ ಜನ ಬೇಸರಿಸಬಹುದು. ಹಲವು ದೈವಗಳ ನಿರಾಕರಣೆ ಅಂದು ಶರಣರಿಗೆ ಅನಿವಾರ್ಯವಾಗಿತ್ತು ಬಹುದೇವರುಗಳ ಆಚರಣೆಯಿಂದ ಅವರ ಆರ್ಥಿಕ ಸ್ಥಿತಿಗತಿಗಳು ತುಂಬ ದುರ್ಬಲಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಹಾಗಾಗಿ ಬಹುಮುಖಿ ಸಂಸ್ಕೃತಿಯಲ್ಲಿನ ಆರಾಧನೆಯನ್ನು ಊಳಿಗದವರು ತಿರಸ್ಕರಿಸಿದರು, ಬಹುಮುಖಿ ಸಂಸ್ಕೃತಿಯ ಆಚರಣೆಯಲ್ಲಿ ಹಲವು ದೈವಗಳ ಪೂಜೆಗಳಿದ್ದವೆಂಬುದಕ್ಕೆ ಈ ವಚನವು ಸಾಕ್ಷಿಯಾಗಿದೆ.

" ಮಡಕೆದೈವ, ಮೊರದೈವ, ಬೀದಿಯ ಕಲ್ಲುದೈವ,
ಹಣೆಗೆ ದೈವ ಬಲ್ಲನಾರೀ ದೈವ, ಕಾಣಿರೋ !
ಕೊಳಗ ದೈವ, ಬಿಲ್ಲನಾಗಿದೈವ, ಕಾಣಿರೋ !
ಕೊಳಗ ದೈವ, ಗಿಣ್ಣಿಲಿ ದೈವ, ಕಾಣಿರೋ!
ದೈವ ದೈವವೆಂಬುದು ಕಾಲಿಡಲಿಂಬಿಲ್ಲ
ದೈವನೊಬ್ಬನೇ ಕೂಡಲಸಂಗಮದೇವ."–26

ಬಹುಮುಖಿ ಸಂಸ್ಕೃತಿಯ ಸಾಂಸ್ಕೃತಿಕ ರೂಪವನ್ನು ಬದಲಾಯಿಸಿ ಏಕಮುಖವಾದ ಶರಣಸಂಸ್ಕೃತಿ ಬದಲಾಯಿಸುವುದಕ್ಕೆ ಆದ್ಯತೆಯನ್ನು ನೀಡಿದರು. ಹಲವು ದೈವಗಳ ನಿರಾಕರಿಸಿ ಏಕದೇವೋಪಾಸನೆಯನ್ನು ತಂದರು. ಮತ್ತೊಮ್ಮೆ ಊಳಿಗಮಾನ್ಯ ದೈವಪರಂಪರೆಯು

ಪ್ರಾರಂಭವಾದದ್ದು, ಇಲ್ಲಿಯ ಸಾಂಸ್ಕೃತಿಕ ಇತಿ–ಮಿತಿಯನ್ನು ತಿಳಿಸುತ್ತದೆ. ಅಂದು ಪ್ರಬಲವಾಗಿದ್ದ ಊಳಿಗ ದೈವಾಂಶಗಳನ್ನು ಖಂಡಿಸುತ್ತ,. ಸತ್ಯಾಸತ್ಯೆಯನ್ನು ತಿಳಿಯುತ್ತ ವಾಸವಿಕತೆಯ ಅರಿವನ್ನು ಜನಮನಕ್ಕೆ ಮುಟ್ಟಿಸುತ್ತಾರೆ.

" ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ
ಜೀವನಪೂಜಿಸಿ, ಬತ್ತಲೆಯಿಪ್ಪುದ ಕಂಡೆ
ನಮ್ಮ ಕೂಡಲಸಂಗನ ಪೂಜಿಸಿ ದೇವಾ.
ಭಕ್ತರೆನಿಸಿಕೊಂಬುದ ಕಂಡೆ."–27

ಇಲ್ಲಿ ವಿಷ್ಣು, ಜಿನ, ಮೈಲಾರ ಮುಂತಾದ ದೇವರುಗಳನ್ನು ದೈವಿಕ ಪ್ರಜ್ಞೆಯಿಂದ ಪೂಜಿಸಿ ಅದರ ಪ್ರತಿಫಲವಾಗಿ ಕನಿಷ್ಠ ಸೌಕರ್ಯವನ್ನು ಪಡೆದುಕೊಂಡ ಸಮುದಾಯಗಳಿಗೆ ತಿಳಿಹೇಳಿ , ತಮ್ಮ ಆರಾಧ್ಯದೈವವನ್ನು ಪೂಜಿಸಿ ಪ್ರತಿಫಲಗಳ ಆಯ್ಕೆಯನ್ನು ಜನಾಂಗಗಳಿಗೆ ಬಿಡುತ್ತಾರೆ. ಇದು ದೈವಗಳ ಯಜಮಾನಿಕೆಯನ್ನು ತೋರಿಸುತ್ತದೆ. ಯಾರು ಶ್ರೇಷ್ಠ–ಕನಿಷ್ಠ ದೈವಗಳ ವಿಭಜನೆಯನ್ನು ಮಾಡುತ್ತ ಅಂದಿನ ಸಾಂಸ್ಕೃತಿಕ ಇತಿ–ಮಿತಿಗಳನ್ನು ಸಾರುತ್ತವೆ.

ಪುರಾಣ ಮತ್ತು ಪುರೋಹಿತ ಶಾಹಿಗಳನ್ನು ಹಿನ್ನಲೆಯಾಗಿ ಇಟ್ಟುಕೊಂಡು, ಅಂದಿನಿಂದ ಇಂದಿನವರೆವಿಗೂ ಅಮಾಯಕರನ್ನು ಎಷ್ಟರ ಮಟ್ಟಿಗೆ ಶೋಷಿಸಿದರೆಂಬುದನ್ನು ಈ ಕೆಳಕಂಡ ವಚನ ಧ್ವನಿಸುತ್ತದೆ.

" ಬ್ರಾಹ್ಮಣನೇ ದೈವನೆಂದು ನಂಬಿದ ಕಾರಣ
ಗೌತಮಮುನಿಗೆ ಗೋವಧೆಯಾಯಿತ್ತು.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುರಿದಲೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕ್ಕೆ ಗುರಿಯಾದನು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.
ದೈವ ಭಕ್ತನೆಂದು ನಂಬಿದ ಕಾರಣ
ನಮ್ಮ ಕೂಡಲಸಂಗನ ಶರಣರು ಕೈಲಾಸವಾಸಿಗಳಾದರು."-28

ಪೌರಾಣಿಕ ಹಿನ್ನಲೆಯಲ್ಲಿ ಚರ್ಚಿತವಾಗುವ ವಚನ ವಿಷಯವು, ಹಿಂದೆ ಇದ್ದಂತಹ ಕರ್ಣ, ದಕ್ಷ, ಪರಶುರಾಮ, ನಾಗಾರ್ಜುನರಿಗೆ ಆದಂತಹ ಅನ್ಯಾಯವನ್ನು ಈ ವಚನ ತೋರಿಸುತ್ತಾದರೂ ಪುರಾಣಗಳಲ್ಲಿ ಹೇಳಿದ ಶೋಷಣೆಯನ್ನು ಅಭಿವ್ಯಕ್ತಿಸುತ್ತದೆ. ಅಕ್ಷರ ಕಲಿಕೆಯು ಆಳುವ ವರ್ಗದವರನ್ನು ಬಿಟ್ಟು, ಬೇರೆ ಯಾವ ವರ್ಗದವರಿಗು ಕಲಿಸಬಾರದೆಂದು ಪುರೋಹಿತಶಾಹಿಯ ಅಕ್ಷರ ದಬ್ಬಾಳಿಕೆ ಸಿದ್ಧಾಂತದ ಸಂಕೇತವಾದ ಈ ವಚನವು, ಪುರೋಹಿತಶಾಹಿಯ ಅಕ್ಷರದಂಗೆಯಿಂದಾದ ಅನಾಹುತಗಳ ಚಿತ್ರಣವಾಗಿದೆ, ಇದರಿಂದ ವೈಧಿಕಶಾಹಿಯು ಅಕ್ಷರದ ಊಳಿಗ ಎಷ್ಟಿತ್ತು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಹಿನ್ನಲೆಯಲ್ಲಿ ಊಳಿಗಮಾನ್ಯ ಪದ್ಧತಿಯನ್ನೇ ವಿಶಾಲ ದೃಷ್ಟಿಕೋನದಲ್ಲಿ ನೋಡಿದರೆ ಯಾವುದೇ ಒಂದು ವರ್ಗವನ್ನೇ ಪ್ರತಿಪಾಧಿಸುವ ಅಂಧಕಾರದಲ್ಲಿ ಮುಳುಗಿರುವ ಧರ್ಮ, ರಾಜಪ್ರಭುತ್ವ, ಅಧಿಕಾರಶಾಹಿಯ ಮನೋಭಾವನೆಯು ಈ ವ್ಯಾಪ್ತಿಗೆ ಒಳಪಡುತ್ತದೆ. ಈ ದೃಷ್ಟಿಯಿಂದಲೇ ಶರಣರು ಪದವಿಯನ್ನು ನಿರಾಕರಿಸುತ್ತಾರೆ.

" ಬ್ರಹ್ಮ ಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ
ರುದ್ರಪದವಿಯನೊಲ್ಲೆ,
ನಾನು ಮತ್ತಾವ ಪದವಿಯನೊಲ್ಲೆನಯ್ಯಾ.
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ
ಪಾದವನರಿಪ್ಪ ಮಹಾಪದವಿಯ ಕರುಣಿಸಯ್ಯಾ."-29

ಯಾವುದೇ ಪದವಿಗೆ ಅಂಟಿಕೊಳ್ಳದೆ ಕಾರ್ಯನಿರ್ವಹಿಸುವ ಪ್ರವೃತ್ತಿಯನ್ನು ರೂಢಿಸಿಕೊಳ್ಳುತ್ತಾರೆ. ಒಂದು ವೇಳೆ ಪದವಿಯನ್ನು ಕರುಣಿಸುವುದಾದರೆ 'ಮಹಾ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯ ಕರುಣಿಸು' ಎಂದು ತನ್ನ ಆರಾಧ್ಯ ದೇವರಲ್ಲಿ ಬೇಡುತ್ತಾರೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮಡಿವಂತಿಕೆ ಎನಿಸಿದ ಹಾಗೂ ಎಲ್ಲಾ ದೇವರುಗಳಿಗಿಂತ

ವೈಭವಾಡಂಬರದ ಜೀವನಕ್ಕೆ ಹೆಸರುವಾಸಿಗಳಾದ ಬ್ರಹ್ಮ, ವಿಷ್ಣು, ರುದ್ರ ಪದವಿಗಳನ್ನು ತಿರಸ್ಕರಿಸುತ್ತಾರೆ. ಶ್ರೇಣೀಕೃತ ಸಮಾಜವನ್ನೇ ವಿಂಗಡಿಸಿ ಈ ಪರಂಪರೆಯ ನಿಲುವುಗಳನ್ನು ಬಿಟ್ಟು ತಮ್ಮ ಜೀವನಕ್ರಮವನ್ನೇ ಬದಲಾಯಿಸುತ್ತಾರೆ. ಯಾವುದೇ ಒಡೆತನ, ಹಾರೈಕೆಯನ್ನು ನಿರಾಕರಿಸಿ ತಮ್ಮ ಬದುಕನ್ನು ಸಾಮಾಜಿಕ ಬದುಕಿಗೆ, ಸಮರ್ಪಿಸುವ ಭಾವವನ್ನು ಶರಣ ಸಂಸ್ಕೃತಿ ಹೇಳುತ್ತದೆ.

4.2 ಶರಣ ಸಮಾಜವಾದ ಮತ್ತು ಸಮತಾವಾದದ ನೆಲೆಗಳು :

ಸಾಮಾಜಿಕ ಜೀವನವೂ ಅಭಿವೃದ್ಧಿಯ ಪಥದಲ್ಲಿ ಸಾಗಬೇಕಾದರೆ ' ಸರ್ವರಿಗೂ ಸಮಪಾಲು; ಸರ್ವರಿಗೂ ಸಮಬಾಳು ಎಂಬ ಕಲ್ಪನೆಯಡಿಯಲ್ಲಿ ಸಾಮಾಜಿಕ ಬದುಕು ಸಾಗಬೇಕಾಗುತ್ತದೆ. ಹನ್ನೆರಡನೇ ಶತಮಾನದಲ್ಲಿಯೇ ಪ್ರಗತಿಪರವಾದ ದೃಷ್ಟಿಕೋನದಿಂದ ಶರಣರು ಸಮಾಜವಾದ, ಸಮತಾವಾದದ ನೆಲೆಗಳನ್ನು ಕಂಡುಕೊಂಡಿದ್ದರೆಂಬುದಕ್ಕೆ ಇಲ್ಲಿ ದೊರೆತಿರುವ ವಚನಗಳು ಸಾಕ್ಷಿಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಸಮಾಜವಾದವೆಂಬ ಪರಿಕಲ್ಪನೆಯನ್ನು ಹೀಗೆ ವಿಶ್ಲೇಷಿಸ ಬಹುದಾಗಿದೆ.

1. ವರ್ಗ, ವರ್ಣ ಭೇದಗಳಿಲ್ಲದೆ ಸಮಾನತೆಯನ್ನು ಸ್ಥಾಪಿಸುವುದೆ ಸಮಾಜ.
2. ಸಮಾಜದ ಸಂಪತ್ತನ್ನು ಸಮಷ್ಟೀಕರಿಸುವುದು..
3. ಪ್ರಾಕೃತಿಕ ಮತ್ತು ವ್ಯಕ್ತಿ ಸಂಪತ್ತುಗಳನ್ನು ಸಮಾನಾಗಿಸುವುದು.

ಈ ಮೇಲ್ಕಂಡ ಹೇಳಿಕೆಯನ್ನು ಆಧರಿಸಿ ಕೆಲವು ಲಕ್ಷಣಗಳನ್ನು ಗುರುತಿಸಬಹುದು.

ಸಾಮಾನ್ಯ ಲಕ್ಷಣಗಳು :

1. ಆರ್ಥಿಕ ಹಣವನ್ನು ಸಂಗ್ರಹಿಸುವಂತಿಲ್ಲ.
2. ಉತ್ಪತ್ತಿ ಮತ್ತು ವಿನಿಮಯದ ಮೇಲೆ ಸಮಾಜದ ಹತೋಟಿಯಿರಬೇಕು.
3. ತಮ್ಮದೇ ಆದ ಪಾರ್ಲಿಮೆಂಟ್ ವ್ಯವಸ್ಥೆ ಇರಬೇಕು.

ಆಸ್ತಿ ಮತ್ತು ಭೂಮಿಯ ಒಡೆತನಗಳ ಮೇಲೆ ಸಮಾಜದ ಹತೋಟಿಯಿದ್ದರೆ, ಸಮಾಜವಾದ ಆಗುತ್ತದೆ. ಶರಣರು ಬಯಸಿದ್ದು ಇದೇ ವ್ಯವಸ್ಥೆ. ತಮ್ಮ ಜೀವನೋಪಾಯಕ್ಕಾಗಿ ಎಷ್ಟು ಬೇಕೋ ಅಷ್ಟು ಮಾತ್ರ ಉಪಯೋಗಿಸಬೇಕೆಂದು ಇವರ ವಚನಗಳಿಂದ ತಿಳಿದು ಬರುತ್ತದೆ.

" ಆಸೆಯೆಂಬುದು ಅರಸಿಂಗಲ್ಲದೇ
ಶಿವಭಕ್ತರಿಗುಂಟೆ ಅಯ್ಯಾ ?

ರೋಷವೆಂಬುದು ಯಮದೂತರಿಗಲ್ಲದೇ,
ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ." –30

ಸಮಾಜವು ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ, ವೈಯಕ್ತಿಕವಾಗಿ ನಾವು ಶುದ್ಧರಾಗಬೇಕು ಮತ್ತು ನಮ್ಮ ಕುಟುಂಬ ಸುಧಾರಿಸಬೇಕು. ಅದು ಸ್ವಾರ್ಥರಹಿತವಾಗಿರಬೇಕು. ತಮ್ಮ ಮನಃ ಶುದ್ಧಿ ಮಾಡಿಕೊಂಡು, ಶ್ರಮವಹಿಸಿ ದುಡಿದು ತಿನ್ನಬೇಕು. ಶ್ರಮದಿಂದ ಬಂದಂತಹ ಫಲವನ್ನು, ತಮ್ಮ ನಿರ್ವಹಣೆಗೆ ಎಷ್ಟು ಬೇಕೋ ? ಅಷ್ಟನ್ನು ಮಾತ್ರ ಉಪಯೋಗಿಸಬೇಕು, ಉಳಿದ ಸಂಪತ್ತು ಸಮಾಜದ ಹಿತಕ್ಕಾಗಿ ಮಾಡುವ ದಾಸೋಹ ಕಾರ್ಯಗಳಿಗೆ ಬಳಸಬೇಕೆಂಬ ಆಶಯ ಅವರದಾಗಿತ್ತು. ಅಲ್ಲಿ ಶಿವಭಕ್ತರಾದ ನಾವು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಬದುಕು ಸಾಗಿಸಬೇಕೆಂಬುದು ಇವರ ಆಶಯವಾಗಿತ್ತು. ಪ್ರತಿಯೊಬ್ಬ ಮನುಷ್ಯನು ಅದೊಂದಿನ ಜೀವನಕ್ಕೆ ಎಷ್ಟು ಆಹಾರ ಬೇಕು ಅಷ್ಟನ್ನು ಮಾತ್ರ ಪಡೆದುಕೊಳ್ಳಬೇಕು ಹೆಚ್ಚಿಗೆ ಆಸೆ ಪಡಬಾರದು ಆ ರೀತಿ ಬಯಸಿದ್ದೆ ಆದರೆ ಶರಣ ಸಂಸ್ಕೃತಿಗೆ ದಕ್ಕೆಯಾಗುತ್ತದೆ. ಅಂದರೆ ಮಿತ ಆಶೆಹೊಂದಿ ಸುಖಸಂಸಾರ ನೆಡೆಸ ಬೇಕೆಂಬ ತತ್ವಕ್ಕೆ ಎಲ್ಲರು ಬದ್ಧರಾಗಿರ ಬೇಕೆಂಬ ಅಂಶವನ್ನು ಈ ವಚನವು ಪ್ರತಿಪಾದಿಸುತ್ತದೆ. ಇದಕ್ಕೆ ವಿರುದ್ದವಾಗಿ ನೆಡೆದರೆ ನಿರಾಶೆ ಅವನಿಗೆ ಕಟ್ಟಿಟ್ಟಬುತ್ತಿ.

ದೈವದತ್ತವಾದ ಕೊಡುಗೆಗಳಾದ ಇಳೆ-ಬೆಳೆ, ಗಾಳಿ, ಬೆಳಕು ಮುಂತಾದ ನೈಸರ್ಗಿಕ ಸಂಪನ್ಮೂಲಗಳ ವಿಚಾರ ಬಂದಾಗ, ಪ್ರತಿಫಲಾಪೇಕ್ಷೆಯಿಲ್ಲದೆ ಅವಶ್ಯಕ ಸೌಲಭ್ಯಗಳನ್ನು ಕಲ್ಪಿಸಬಹುದಾಗಿದೆ. ಶರಣರು ತಮ್ಮ ಆರಾಧ್ಯ ದೈವದ ಕೊಡುಗೆಗಳಂತೆ ಭಾವಿಸಿ, ಎಲ್ಲಾ ಕೊಡುಗೆಗಳು ಅವನ ಸ್ವತ್ತೆಂದು ಭಾವಿಸಿ ಸ್ವಯಂನಿಯಂತ್ರಣವನ್ನು ತಮಗೆ ಹಾಕಿಕೊಂಡು ಆ ನಿಯಮವನ್ನು ಪಾಲಿಸಿದ್ದಾರೆ. ಇದನ್ನು ಈ ಕೆಳಕಂಡ ವಚನಗಳು ಸ್ಪಷ್ಟಪಡಿಸುತ್ತದೆ.

" ಇಳೆ ನಿಮ್ಮದಾನ, ಬೆಳೆ ನಿಮ್ಮದಾನ
ಸುಳಿದು ಸೂಸುವ ವಾಯು ನಿಮ್ಮದಾನ
ನಿಮ್ಮದಾನವನುಂಡು ಅನ್ಯರ ಹೊಗಳುವ
ಕುನ್ನಿಗಳ ಏನೆಂಬೆ ಹೇ ರಾಮನಾಥ ! –31

ಈ ಭೂಮಿಯಲ್ಲಿ ಸಿಗುವ ಪ್ರತಿಯೊಂದು ವಸ್ತುವು ಪರಮಾತ್ಮನದ್ದು ಆದರೆ ಮನುಷ್ಯ ಅವುಗಳನ್ನೆಲ್ಲ ನಮ್ಮದೆಂದು ಭಾವಿಸಿ ಅನುಭವಿಸುತ್ತ ದೈವತ್ವದ ಕಲ್ಪನೆಗೆ ಚ್ಯುತಿ ತರುತ್ತಾನೆ, ಶರಣ ಸಮಾಜದ ಚಿಂತನೆಗೆ ಅಪಚಾರ ಎಸಗುತ್ತಾನೆ, ಆದುದ್ದರಿಂದ ದೇವರು ದಯಪಾಲಿಸಿರುವ ಸರ್ವ ವಸ್ತುಗಳನ್ನು ಸರ್ವರು ಸಮನಾಗಿ ಸ್ವೀಕರಿಸಿ ಅನುಭೋಗಿಸಿದರೆ ದೈವದ ಅನುಗ್ರಹ ಪಡೆಯಲು ಸಾಧ್ಯ ಎಂಬ ಮಹತ್ವಪೂರ್ಣವಾದ ಸಂಗತಿಗಳನ್ನ ಈ ವಚನದಲ್ಲಿ ಕಾಣಬಹುದು.

" ಭೂಮಿ ನಿನ್ನದಲ್ಲ! ಹೇಮ ನಿನದಲ್ಲ !
ಕಾಮಿನಿ ನಿನ್ನವಳಲ್ಲ !
ಅಹುಜಕ್ಕಿದ ವಿಧಿ.
ನಿನ್ನೊಡವೆಯೆಂಬುದು.
ಗುರುಲಿಂಗ ಜಂಗಮಕ್ಕೆ ದಾಸೋಹ ಮಾಡುವ ಜ್ಞಾನರತ್ನ!
ಅಂತಪ್ಪ ದಿವ್ಯ ರತ್ನವ ಕೆಡಗೊಡದೆ ನೀನಲಂಕರಿಸಿದೆಡೆಯಾದೆಡೆ
ನಮ್ಮ ಗುಹೇಶ್ವರಲಿಂಗದಲ್ಲಿ
ನಿನ್ನಿಂದ ಬಿಟ್ಟು ಸಿರಿವಂತರಾರು ಇಲ್ಲಕಾಣ ಎಲೆಮನವೆ!"–32

ಭೂಮಿ, ಆಕಾಶ, ವಾಯು, ಆಹಾರ ಮುಂತಾದವು ದೇವರು ಮಾನವನಿಗೆ ನೀಡಿದ ಕೊಡುಗೆಗಳಾಗಿವೆ. ಇಡೀ ಪಂಚಭೂತಗಳ ಸೃಷ್ಟಿಯೂ ಮಾನವನಿಗೆ ಅನುಕೂಲ ಉಂಟುಮಾಡಿವೆ ಹಾಗೆ ನೀಡಿರುವ ಕೊಡುಗೆಗಳಲ್ಲಿ 'ಸಮಾನತೆ' ಇದೆ. ಯಾವುದೇ ಭೇದ ಭಾವವಿಲ್ಲದೆ ನೀಡಿದ ಕೊಡುಗೆಗಳಾಗಿವೆ. ಆದರೆ ಮನುಷ್ಯನು ಇಂತಹ ಮನೋಭಾವ ಎಕೆಂದು ಪ್ರಶ್ನಿಸುತ್ತಾರೆ. ಆಧ್ಯಾತ್ಮಿಕ ಸಿರಿವಂತಿಕೆಯ ಮುಂದೆ ಬೇರೆ ಸಿರಿವಂತಿಕೆ ಇಲ್ಲವೆನ್ನುತ್ತಾರೆ. ನಶ್ವರ ಸಂಪತ್ತನ್ನು ನಿರಾಕರಿಸಿ ಶಾಶ್ವತ ಸಂಪತ್ತಾದ ಸುಜ್ಞಾನ ನಿಧಿಯನ್ನು ಸ್ವೀಕರಿಸಿದಂತೆ ಕರೆನೀಡುತ್ತಾರೆ. "ಮೇಲಿನ ವಚನಗಳು ಅಂದಿನ ಊಳಿಗಮಾನ್ಯ ಪದ್ಧತಿಯು ಹುಟ್ಟುಹಾಕಿದ ಭೂಸ್ವಾಮ್ಯನೀತಿಗೊಡ್ಡಿದ್ದ ಪ್ರತಿಭಟನೆಯಾಗಿರುವಂತೆಯೇ ಭೂಮಿಯ ಒಡೆತನಕ್ಕಾಗಿ ಪರಿತಪಿಸುವ, ಹೊರಾಡುವ ರಾಜತ್ವಕ್ಕೆ ಮುಟ್ಟಿಸಿದ ಬಿಸಿಯೇ ಆಗಿದೆ. ಭೂ ಸ್ವಾಮ್ಯವನ್ನು ಪ್ರಶ್ನಿಸುವ ಪ್ರತಿಭಟಿಸುವ ಇಂತಹ ವಚನಗಳಲ್ಲಿ ಖಾಸಗಿ ಆಸ್ತಿಯ ಕಲ್ಪನೆಯನ್ನು ನಿರಾಕರಿಸುವ ಬೀಜಗಳು ಹುದುಗಿಕೊಂಡಿವೆ." –33 ಇದು ಇಷ್ಟಕ್ಕೆ ಸೀಮಿತವಾಗದೆ ಸಕಲಸಂಪನ್ಮೂಲವೂ ಕೂಡ ತಮ್ಮ ಆರಾಧ್ಯ ದೈವದ ಸೃಷ್ಟಿಯಾಗಿದೆ. ಆದ್ದರಿಂದ ಅವರ ಶಕ್ತಿ ಮೀರಿ ಸಾಮಾನ್ಯ ಮಾನವರು ಸಂಪನ್ಮೂಲಗಳನ್ನು ಸಂಗ್ರಹಿಸುವಂತಿಲ್ಲ. ಒಂದು ವೇಳೆ

ನಿಯಮ ಮೀರಿ ಬಳಸಿದೆಡೆ ಅದು ತತ್ವಕ್ಕೆ ವಿರುದ್ಧವಾದುದು. ಸಮಾಜದ ಒಳಿತಿಗಾಗಿ ತನುಮನ ಧನವನ್ನು ಅರ್ಪಿಸಿದಾಗ ಮಾತ್ರ ದೇವನೊಲಿಯುತ್ತನೆಂಬುದನ್ನು ಮನವರಿಕೆ ಮಾಡುತ್ತಾರೆ.

" ಧನಕ್ಕೆ ಮನವ ನೊಡ್ಡಿದಡೇನು ? ಮನಕ್ಕೆ ಧನವನೊಡ್ಡಿದಡೇನು?
ತನು, ಮನ, ಧನವ ಮೀರಿ ಮಾತಾಡಬಲ್ಲಡೆ,
ಆತ ನಿಸ್ಸೀಮನು, ಆತ ನಿಜೈಕ್ಯನು,
ತನು, ಮನ, ಧನವನುವಾದೆಡೆ
ಕೂಡಲಸಂಗಮದೇವನೊಲಿವವ"-34

ಸಕಲ ಸಂಪತ್ತು ಇದ್ದರೂ ಕೂಡ ತ್ಯಾಗಮಯವಾದ ಜೀವನವನ್ನು ನಡೆಸಬೇಕಾಗುತ್ತದೆ. ಸಮಾನತೆ ದೃಷ್ಟಿ ಸಮಾಜದ ಮೇಲೆ ಬೀರಬೇಕಾದರೆ ತಮ್ಮ ವ್ಯಕ್ತಿತ್ವವನ್ನು ವಿಶಾಲದೃಷ್ಟಿಯಲ್ಲಿ ಬೆಳೆಸಿಕೊಳ್ಳಬೇಕೆಂಬುದನ್ನು ಮನವರಿಕೆ ಮಾಡುತ್ತಾರೆ. ಕೇವಲ ಸಂಪತ್ತಿನಿಂದ ಎಲ್ಲವನ್ನ ಮನುಷ್ಯ ಸಾಧಿಸಿ ನೆಮ್ಮದಿಯ ಕಾಣಲಾರ, ಶರಣರ ಜ್ಞಾನಾಮೃತವನ್ನು ಸವಿದು ಅದರ ಹಂಚಿಕೆಗಾಗಿ ಹಣ ವಿನಿಯೋಗಿಸಿ, ತನು-ಮನಗಳನ್ನು ಸಮರ್ಪಿಸಿದರೆ ಸಾರ್ಥಕತೆ ಪಡೆಯಬಹುದು ಇಲ್ಲಾವಾದಲ್ಲಿ ಅವನು ವ್ಯಕ್ತಿತ್ವ ವಿಕಾಸವಾಗಲು ಸಾಧ್ಯವಿಲ್ಲ ಎಂಬ ಗಹನವಾದ ಸಂಗತಿಗಳನ್ನು ಈ ವಚನದಲ್ಲಿ ಕಾಣಬಹುದಾಗಿದೆ.

ಸಾಮಾಜಿಕವಾಗಿ ಸಂಪತ್ತನ್ನು ಸಂಗ್ರಹಿಸುವಾಗ ನ್ಯಾಯ ಮಾರ್ಗದಿಂದ ಇರಬೇಕೆಂಬುದನ್ನು ಈ ಕೆಳಕಂಡ ವಚನ ಸ್ಪಷ್ಟೀಕರಿಸಿದೆ.

" ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದಯ್ಯಾ..
ನಾಯಹಾಲು ನಾಯಿಗಲ್ಲದೇ ಪಂಚಾಮೃತಕ್ಕೆ ಸಲ್ಲದಯ್ಯಾ
ನಮ್ಮಕೂಡಲಸಂಗನ ಶರಣರಿಗಲ್ಲದೇ
ಮಾಡುವ ಅರ್ಥ ವ್ಯರ್ಥಕಂಡಯ್ಯಾ"-35

ಮನುಷ್ಯ ಪ್ರಾಮಾಣಿಕನಾಗಿರ ಬೇಕು ಸಂಪಾದನೆ ಕೂಡ ಅದೇ ಹಾದಿಯಲ್ಲೆ ಆಗಬೇಕು, ಕೆಟ್ಟ ಮಾರ್ಗಗಳಲ್ಲಿ ಸಂಪಾದಿಸಿದ ಸಂಪತ್ತಿನಿಂದ ಮಾನವನ ನೆಮ್ಮದಿ ಹಾಳಾಗಿ ಸಮಾಜದ ದೃಷ್ಟಿಯಲ್ಲಿ ಅವನು ನಿಷ್ಪ್ರಯೋಜಕನಾಗುತ್ತಾನೆ ಎಂಬ ಸತ್ಯ ಸಂಗತಿ ಈ ವಚನದಲ್ಲಿ ಸಿದ್ಧಿಸುತ್ತದೆ.

ಸಮಾಜವಾದ ಮತ್ತು ಸಮತಾವಾದ ಮೂಲವಾಗಿ ಆರ್ಥಿಕಚಿಂತನೆಯ ಬಗ್ಗೆ ಆಲೋಚನೆ ಮಾಡುವುದರಿಂದ, ಆರ್ಥಿಕ ಹಂಚಿಕೆ, ಆರ್ಥಿಕ ಸೋರಿಕೆ, ನಷ್ಟ ಹೊಂದುವ ಅರ್ಥ ವ್ಯವಸ್ಥೆಯನ್ನು ಸರಿಪಡಿಸುವುದು ಹೇಗೆಂಬುದನ್ನು ತಿಳಿಸುತ್ತದೆ. ಅಂದಿನ ಕಾಲದಲ್ಲಿ "ಆರ್ಥಿಕ ಕಾರಣಗಳಿಂದ ತೊತ್ತುಗಳಾಗುತ್ತಿದ್ದೇ ಹೆಚ್ಚು. ಸಂಸಾರದ ನಿರ್ವಹಣೆಗೆ ಹಣ ಬೇಕಾದಾಗ ಸಾಲ ತಂದು ಅದರ ಮೇಲನ ಬಡ್ಡಿಯ ಬದಲಾಗಿ ಮಕ್ಕಳನ್ನು ತೊತ್ತು ಬಿಡುವ ರೂಢಿಯಿತ್ತು. ಇದು ಅರ್ಥಶಾಸ್ತ್ರದಲ್ಲಿಯೇ ಉಕ್ತವಾಗಿದೆ. "ಹರನು ಮೂಲಿಗನಾಗಿ ಪುರಾತನರೊಳಗಾಗಿ, ಬಳಿಯಲಿ ಬಂದ ಮಾದಾರನ ಮಗ ನಾನಯ್ಯ." ಎಂಬ ಬಸವಣ್ಣನ ಮಾತಿನಲ್ಲಿ ಸಾಲವನ್ನು ತೀರಿಸಲಾಗದಿದ್ದಾಗ ಅವನಿಂದ ಪ್ರಾರಂಭವಾಗಿ ಇಡೀ ವಂಶವೇ ತೊತ್ತುಗಳ ವಂಶವಾಗುವುದನ್ನು ಸೂಚಿಸುತ್ತಿರುವಂತಿದೆ. 'ಮೂಲಿಗ' ಎಂಬುದಕ್ಕೆ ಮೂಲಕಾರಣ ಎಂಬ ಸಮಾನಾರ್ಥವಿದ್ದರೂ, ಇಲ್ಲಿ ಪುರಾತಗೊಳಗಾದ ವಂಶದಲ್ಲಿ ಮಾದಾರ ಚನ್ನಯ್ಯನು ಹರನ ತೊತ್ತಾದುದನ್ನು ತಿಳಿಸುವ ಸಂಭವವಿದೆ. ಮಕ್ಕಳನ್ನು ಒತ್ತೆಯಿಟ್ಟು ಸಾಲ ಪಡೆಯುವುದರೊಡನೆ, ಮಾರುವ ಮೂಲಕ ತೊತ್ತನ್ನಾಗಿಸುವ ತಾನೇ ಮಾಡಿಕೊಂಡು ತೊತ್ತಾಗುವ ಪ್ರಸಂಗಗಳಿದ್ದವು.–36 ಈ ವಿಚಾರವನ್ನು ತಿಳಿದಾಗ ಗುಲಾಮ ಪದ್ಧತಿ ಇತ್ತೆಂಬುದು ಖಚಿತವಾಗುತ್ತದೆ. ಈ ವ್ಯವಸ್ಥೆಯನ್ನು ತಿರಸ್ಕರಿಸಲು ಶರಣರು ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದರು.

" ಎನ್ನ ತನುವಿಂಗೆ ನೀನೊಡೆಯ
ಎನ್ನ ಮನಕ್ಕೆಯು ನೀನೊಡೆಯ
ಎನ್ನ ಧನಕ್ಕೆಯೂ ನೀನೊಡೆಯನಾದ ಬಳಿಕ
ಎನ್ನರಿವು ನಿನ್ನದು, ಎನ್ನ ಮರಹೂ ನಿನ್ನದು
ಕೂಡಲಸಂಗಮದೇವ.
ಭೃತ್ಯಾಪರಾಧ ಸಾಮಿನೋ ದಂಡ
ಎಂಬುದು ವಿಚಾರಿಸಿ ನೋಡಾ ಪ್ರಭುವೇ.

ಎಂಬ ವಚನದಲ್ಲಿ ತೊತ್ತಿನ ಸಮರ್ಪಣೆಯನ್ನು ನೋಡಬಹದು. ಅಲ್ಲದೇ ತೊತ್ತಿನ ತಪ್ಪಿಗೆ ಒಡೆಯನೂ ದಂಡ ತೆರಬೇಕಾಗುತ್ತಿದ್ದ ವಿಷಯವೂ ಸೂಚಿತವಾಗಿವೆ." –37

ಈ ಮೇಲ್ಕಂಡ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಡೆಯನಾದರೂ ಕೂಡ ದಂಡ ತರಬೇಕಾದ ಪ್ರಸಂಗ ಇತ್ತೆಂದು ದಾಖಲಾದರೂ ಒಡೆಯನ ಕಲ್ಪನೆ ವಿಶಾಲ ವ್ಯಾಪ್ತಿಯನ್ನು ಪಡೆದುಕೊಂಡಿದೆ. ತಮ್ಮ ಆರಾಧ್ಯ ದೈವವನ್ನು ಒಡೆಯನನ್ನಾಗಿ ಸ್ವೀಕರಿಸುತ್ತಾರೆ, ತಮ್ಮ ಸರ್ವ ವ್ಯಕ್ತಿತ್ವ

ನಿನ್ನ ಕೊಡುಗೆಯೆಂದು ಭಾವಿಸಿ ತನ್ನ ತನು, ಮನ, ಧನಗಳಿಗೆ ನೀ ಒಡೆಯನೆಂದು ಹೇಳುತ್ತಾರೆ. ಅಂದಿನ ಕಾಲದಲ್ಲಿ ಪ್ರಭುಗಳ ಆಜ್ಞೆಯನ್ನು ಮೀರುವಂತಿರಲಿಲ್ಲ, ಆದ ಕಾರಣ ಅವರು ಹೇಳಿದಂತೆ ನಡೆಯುತ್ತಿದ್ದರೂ. ಇದಕ್ಕೆ ಪ್ರತಿಯಾಗಿ ದೇವನೆಸರಿನಲ್ಲಿ ಎಲ್ಲಾ ಸೌಕರ್ಯಗಳು ನಿರ್ಮಿತವಾದ ಕಾರಣ ಸಾಮಾನ್ಯ ಒಡೆಯನ ವ್ಯವಸ್ಥೆಯನ್ನೂ ಪ್ರಭುಮಾನ್ಯ ಪದ್ಧತಿಯನ್ನು ನಿರಾಕರಿಸಿದ್ದರು. ಇದರಿಂದ ಸಮಾಜದಲ್ಲಿ ಮೇಲು ವರ್ಗ ಕೆಳವರ್ಗ ಉಚ್ಚ-ನೀಚ, ಪ್ರಭು-ಸೇವಕ, ಮುಂತಾದ ಪದ್ಧತಿಗಳಲ್ಲಿ ಅನೇಕ ಬದಲಾವಣೆಗಳನ್ನು ತಂದು ನಾವು ಸೇವಕರಾದರೆ ತನ್ನ ಆರಾಧ್ಯ ದೇವರಿಗೆ ಮಾತ್ರ, ನಮಗೆ ಪ್ರಭೂ ಕೂಡ ಅವನೆಂದು ಸಾರಿದರು. ಸಾಮಾಜಿಕ ಆಸ್ತಿ, ಸಂಪತ್ತು, ಅವನಿಗೆ ಸೇರಿದ್ದು ಎಂದು ಸ್ಪಷ್ಟವಾಗಿ ತಿಳಿಸುತ್ತಾರೆ.

" ಎಲೆ ಎಲೆ ಮಾನವ ಅತಿಯಾಸೆ ಬೇಡವೋ
ಕಾಲಬೆಳದಿಂಗಳು ಸಿರಿ ಸ್ಥಿರವಲ್ಲ,
ಕೇಡಿಲ್ಲದ ಪದವಿ,
ಕೂಡಲಸಂಗಮದೇವಯ್ಯನ ಮರೆಯದೇ ಪೂಜಿಸು."-38

" ಸಂಸಾರ ಎಂಬುದೊಂದು ಗಾಳಿಯ ಸೊಡರು.
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡೆಯ್ಯಾ
ಇದನೆಚ್ಚಿ ಕೆಡಬೇಡ,
ಸಿರಿಯೆಂಬುದ ಮರೆದು, ಪೂಜಿಸು, ನಮ್ಮ ಕೂಡಲಸಂಗಮದೇವ."-39

ಸಿರಿ ಸಂಪತ್ತು ಶಾಶ್ವತವಾದುದಲ್ಲ, ಅಶಾಶ್ವತವಾದುದೆಂಬುದನ್ನು ತಿಳಿಸುತ್ತಾರೆ. ಬದುಕನ್ನು ಸಹ್ಯವಾಗಿ ಸಾಗಿಸಬೇಕಾದರೆ, ಯಾವುದೇ ಪದವಿಯನ್ನು ನಿರೀಕ್ಷಿಸದೇ ಎಲ್ಲರ ಏಳಿಗೆಗೆ ತಮ್ಮನ್ನು ತೆರೆದುಕೊಳ್ಳಬೇಕೆಂಬುದು ಇದರ ಆಶಯವಾಗುತ್ತದೆ. ಮೇಲ್ಕಂಡ ವಚನವು ಸಂಪತ್ತು ಶಾಶ್ವತವಾದದ್ದಲ್ಲ ಎಂದು ನಿರಾಕರಿಸಿದರೆ, ಸಂಪತ್ತಿನ ಅವಶ್ಯಕತೆಯಿಂದ ಜೀವನ ಎತ್ತ ಸಾಗುತ್ತದೆಂಬ ಅರಿವನ್ನು ಅಂಬಿಗರ ಚೌಡಯ್ಯನ ವಚನವು ಸ್ಪಷ್ಟೀಕರಿಸುತ್ತದೆ. ಈ ಮೇಲಿನ ಎರಡು ವಚನಗಳಲ್ಲಿ ಕಂಡು ಬರುವ ಅಂಶಗಳೆಂದರೆ ಮಾನವನಿಗೆ ಅತಿಯಾಸೆ ಒಳ್ಳೆಯದಲ್ಲ ಹಾಗು ಸಂಪತ್ತು ಶಾಶ್ವತವಲ್ಲ, ಇವೆರಡನ್ನು ಹದವರಿತು ಬಳಸುತ್ತ ದೇವರನ್ನು ಪೂಜಿಸಿದರೆ ಜೀವನದಲ್ಲಿ ನೆಮ್ಮದಿಯನ್ನು ಕಾಣುತ್ತಾನೆ ಎಂದು ಹೇಳಬಹುದು.

" ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಬದುಕುವ ಚಿಂತೆ;
ಬದುಕಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ;.
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ;
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ;
ಇಂತಿ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು."–40

ಅಂಬಿಗರ ಚೌಡಯ್ಯನ ಈ ವಚನದಲ್ಲಿರುವ 'ಬಡತನ' ದ ಅರ್ಥ ಕೇವಲ ಲೌಕಿಕವಾದುದ್ದು; ನಿಘಂಟುವಿನದು ಎಂದರೆ 'ನಿರ್ಧನ' ಎಂಬ ಸಹಜಾರ್ಥ. ಇಂದಿಗೆಂದು ನಾಳಿಗೆಂದು ಚಿಂತಿಸಬೇಕೆ ? ತಂದಿಕ್ಕುವ ಶಿವನಿಗೆ ಬಡತನವೇ 'ರಾಮನಾಥ'. ಎಂಬ ಜೇಡರ ದಾಸಿಮಯ್ಯನ ನುಡಿಯ ಅರ್ಥವೂ ಅದೇ.

ಈ ವಚನದ ಅರ್ಥ ಕೇವಲ ಲೌಕಿಕವಾದವನ್ನೇ ಮಂಡಿಸುವುದಿಲ್ಲ. ಸಾಮಾನ್ಯವಾಗಿ ಬದುಕುತ್ತಿರುವ ಚಿತ್ರಣವನ್ನು ತಿಳಿಸುತ್ತದೆ. ಮಾನವನ ಆರ್ಥಿಕ ಸ್ಥಿತಿಗತಿಗಳನ್ನು ಚಿತ್ರಿಸುತ್ತದೆ. ಮಾನವ ಬದುಕಿನ ಮೂಲವಾದ ಹಸಿವಿನಿಂದ ಪ್ರಾರಂಭವಾಗಿ, ಹಸಿವನ್ನು ತೃಪ್ತಿ ಪಡಿಸುವ ಸಹಜ ಬಯಕೆಗಳಾದ ಉಡುಪು ವಿನ್ಯಾಸಗಳ ಬಗ್ಗೆ ಆಸಕ್ತಿ ಮೂಡುತ್ತದೆ. ಅದರ ತೃಪ್ತಿ ಸಿಕ್ಕಿದ ನಂತರ ಸಾಂಸಾರಿಕವಾಗಿ ಸುಖವಾಗಿರಬೇಕೆಂಬುದು ಅವನ ಬಯಕೆ. ಇದರಿಂದ ಮಕ್ಕಳ ಸಂತತಿ ಬೆಳೆದು ಬದುಕಿನ ನಿರ್ವಹಣೆಯ ಜವಾಬ್ದಾರಿ ಬರುತ್ತವೆ. ಇವೆಲ್ಲ ಅತಿ ಆಸೆಯಿಂದ ಬದುಕು ಅಡ್ಡದಾರಿಯಾಗುತ್ತದೆಂದು ಹೇಳುತ್ತದೆ. ಮನುಷ್ಯ ಸಾಮಾನ್ಯವಾಗಿ ಆಲೋಚನೆಗಳುಳ್ಳ ಪ್ರಾಣಿಯಾಗಿದ್ದರಿಂದ, ಅವನು ಸದಾ ಒಂದಿಲ್ಲೊಂದು ಚಿಂತೆಯಲ್ಲಿಯೇ ಮುಳುಗಿರುತ್ತಾನೆ. ಆದ್ದರಿಂದ ತನ್ನ ಆರಾಧ್ಯ ದೈವದಲ್ಲಿರುವುದು ತುಂಬಾ ಕಷ್ಟಕರವೆನ್ನಿಸಬಹುದು. ಅಂದರೆ ಇದರಲ್ಲಿ ದೈವವೇ ಬೇರೆಯಾಗಿರುವುದರಿಂದ ಸಾಮಾಜಿಕ ಸೇವೆಯಲ್ಲಿ ತಮ್ಮ ಬದುಕನ್ನು ಸವೆಸಬೇಕೆಂಬುದು ಶಿವಶರಣರ ಆಶಯವಾಗಿತ್ತು. ಈ ದೃಷ್ಟಿಕೋನದಿಂದ ನೋಡಿದರೆ ನಮಗೆ ಸಮಾಜದ ಮೂರು ನೆಲೆಗಳ ಚಿತ್ರಣವಿದೆ.

1. ಶೋಷಿತ ನೆಲೆ

2. ಮಧ್ಯಮ ವರ್ಗದ ನೆಲೆ

3. ಉತ್ತಮ ವರ್ಗದ ನೆಲೆ

ಈ ಮೂರು ನೆಲೆಗಳಲ್ಲಿ ಒಂದೊಂದು ಕೂಡ ಮನುಷ್ಯನ ಆಯಾ ಸ್ಥಿತಿಗತಿಗಳನ್ನು ಹೇಳುತ್ತವೆ. ಮನುಷ್ಯನು ಅಧಿಕ ಸಂಪತ್ತನ್ನು ಗಳಿಸುವ ದುರಾಸೆಯಿಂದ ತಾನು ಬಂದ ನೆಲೆಯನ್ನು ಮರೆತು, ಮತ್ತೆ ಅಧಿಕಾರಕ್ಕಾಗಿಯೋ ಅಥವಾ ಸ್ವ ಹಿತಾಸಕ್ತಿಗೂ ಒಂದಿಲ್ಲೊಂದು ಸಮಾಜಘಾತುಕ ಚಟುವಟಿಕೆಗಳನ್ನು ಆರಂಭಿಸುತ್ತಾನೆ. ಇದರ ಪ್ರತಿಫಲವಾಗಿಯೇ ಸಾಮಾಜಿಕ ಬದುಕಿನಲ್ಲಿ ವರ್ಗ ತಾರತಮ್ಯಗಳು ಪ್ರಾರಂಭವಾಗುತ್ತವೆ. ಶೋಷಣೆಗೊಳಗಾದ ವ್ಯಕ್ತಿ ಅನಿವಾರ್ಯವಾಗಿ ಸಿಡಿದೇಳುತ್ತಾನೆ, ಇದರಿಂದ ವರ್ಗ ಸಂಘರ್ಷಗಳಾಗುತ್ತವೆ. ಜಾತಿ–ಜಾತಿಗಳ ನಡುವೆ, ಧರ್ಮ–ಧರ್ಮಗಳ ನಡುವೆ ವೈಷಮ್ಯಗಳು ಏರ್ಪಡುತ್ತವೆ. ಇವೆಲ್ಲಕ್ಕೆ ಪರಿಹಾರವೆಂಬಂತೆ ಏಕವ್ಯಕ್ತಿಯ ಭೂ ಒಡೆತನವನ್ನು ಬಿಡಬೇಕು. ಸಕಲ ಲೌಕಿಕ ಸುಖಗಳಿಂದ ದೂರವಿರಬೇಕು. ಇಲ್ಲಿರುವ ಸಂಪತ್ತು ಆರಾಧ್ಯ ದೈವನ ಸಂಪತ್ತು ಎಂಬ ಭಾವನೆ ಭಕ್ತನಲ್ಲಿರಬೇಕು ಎಂಬ ವಿಚಾರವನ್ನು ಉರಿಲಿಂಗ ಪೆದ್ದಿಗಳ ವಚನವನ್ನು ಸ್ಪಷ್ಟಪಡಿಸುತ್ತಾರೆ.

"ಗೃಹ ಗ್ರಾಮ ನಾಡು ದೇಶಗಳೆಂಬ ಭೂಮಿಯ
ಆಗು–ಚೇಗೆಯ ರಾಗ–ದ್ವೇಷ
ಮರಳಿ ಭೂಮಿಯ ಆಶೆ, ಅಲ್ಪ ಭೂಮಿಯ ಆಶೆ
– – – – – – – – – – – – – –
ಲಿಂಗವೇ ಪ್ರಾಣವಾಗಿ ಭೂಮಿಯಲ್ಲಿ ನಿಂದ
ಲಿಂಗೈಕ್ಯಂಗೆ ಭೂಮಿಯ ಚಿಂತೆ ಇನ್ನೆಲ್ಲಿಯದೋ? ಕಾಣೆ"–41

ಇವೆಲ್ಲವಕ್ಕೂ ಏಕವ್ಯಕ್ತಿಯ ಭೂಒಡೆತನ ಅಪಾರವಾದ ಸಂಪನ್ಮೂಲದ ಕ್ರೋಡೀಕರಣಕ್ಕೆ ಕಡಿವಾಣ ಹಾಕುತ್ತಾರೆ. ಇದಕ್ಕೆ ಪರಿಹಾರವೆಂಬಂತೆ ಸಮಾಜವಾದ, ಸಮತಾವಾದದ ವಿಚಾರಗಳನ್ನು ಸಾಮಾನ್ಯರಿಗೆ ಅಳವಡಿಸಿಕೊಳ್ಳುವಂತೆ ಕರೆನೀಡಿದ್ದಾರೆ.

ಪರಿಪಕ್ವವಾದ ಸಮಾಜಕ್ಕೆ ಗುಣ ನಡತೆಯುಳ್ಳ ಶುದ್ಧ ಪ್ರಾಮಾಣಿಕನಿಗೆ ಪರಿಪೂರ್ಣವಾದ ದೇವರು ಮತ್ತು ಒಡೆಯ ತಾನೇ ತಾನಾಗಿ ಪರಿಪೂರ್ಣವಾಗಿ ಕಾಣಿಸುತ್ತಾನೆ. ಆದ್ದರಿಂದಲೇ ಶರಣರು ಗುರುಪರಂಪರೆಯ ಶೋಷಣೆಯನ್ನು ತಪ್ಪಿಸಿ, 'ಅರಿವೇ ಗುರುವೆಂಬ' ಮಾತನ್ನು ಹೇಳುತ್ತಾರೆ. ಪೂರ್ಣಜ್ಞಾನಕ್ಕೆ ಮಹತ್ವ ಕೊಟ್ಟು ಸಮತಾವಾದವನ್ನು ಪ್ರತಿಪಾದಿಸುತ್ತಾರೆ.

ಸಮಾಜದ ಒಡೆತನವು ದೇವರಾದರೂ ಪರಿಪಕ್ವವಲ್ಲದ ದೇವರಿಗೆ ಸಮಾಜದ ಒಡೆತನ ಕೊಡಲು ನಿರಾಕರಿಸುತ್ತಾರೆ. ದೇವರಾದರೂ ಕೂಡ ಸತ್ಯಶುದ್ಧವಾದ ಕಾಯಕವನ್ನು ಮಾಡಬೇಕಾಗುತ್ತದೆ. ಸೋಮಾರಿ ಮತ್ತು ತೋರಿಕೆಯ ದೇವರುಗಳನ್ನು ಟೀಕಿಸುತ್ತಾರೆ. ಆಧ್ಯಾತ್ಮದ ಒಡೆತನವನ್ನು ಸಹಜವಾಗಿಯೇ ಊಳಿಗಮಾನ್ಯನಾಗಿ ಬರುವ ದೇವರಿಗೆ ಕೊಡಲು ನಿರಾಕರಿಸಿ, ಸರ್ವರಿಗೂ ಸಕಲ ಲೇಸನೆ ಬಯಸುವ ಪ್ರಿಯವಾದ ದೇವನಿಗೆ ಅರ್ಪಿಸುತ್ತಾರೆ.

ಸಾಮಾನ್ಯ ಮನುಷ್ಯನಾದವನು ತಾನೇ ದೇವನಾಗಬಹುದೆಂಬ ಹೊಸ ಪರಿಕಲ್ಪನೆಗೆ ನಾಂದಿ ಹಾಡುತ್ತಾರೆ. ಈ ಕೆಳಕಂಡ ಅಲಮನ ವಚನಗಳು ಸ್ಪಷ್ಟೀಕರಿಸುತ್ತದೆ.

" ನಾ ದೇವನಲ್ಲದೇ ನೀ ದೇವನೇ ? ನೀ ದೇವನಾದರೆ ಎನ್ನನೇಕೆ ಸಲಹೆ ?
ಆರೈದು ಒಂದು ಕುಡಿಕೆ ಉದಕವನೆರೆವೆ ಹಸಿದಾಗ ಒಂದು ತುತ್ತು
ಒಗರವನಿಕ್ಕುವೆ, ನಾದೇವ ಕಾಣ ಗುಹೇಶ್ವರಾ ."-42

ಈ ವಚನದಲ್ಲಿ ತನ್ನ ಅನ್ನವನ್ನು ತಾನೇ ದುಡಿದು ತಿನ್ನಬೇಕಾದ ವ್ಯವಸ್ಥೆ ಇರಬೇಕು. ವೃತ್ತಿಯಾದಾರಿತ ಬದುಕು ಸಾಧಿಸ ಬೇಕು ಇಲ್ಲವಾದರೆ, ಜೀವನ ಅರ್ಥಪೂರ್ಣವೆನಿಸುವುದಿಲ್ಲ. ಅಸ್ಥಿತ್ವವಿಲ್ಲದ ದೇವರ ಹುಡುಕಾಟ ಬಿಟ್ಟು, ಇರುವ ಮನುಷ್ಯನಲ್ಲಿಯೇ ದೈವತ್ವವನ್ನು ಕಾಣಬೇಕು. ತಮ್ಮನ್ನು ತಾವೇ ರಕ್ಷಿಸಿಕೊಳ್ಳುವುದು, ಹಾಗೂ ಮನುಷ್ಯನಾದವನು ಸಮಾಜದ ಒಳಿತಿಗಾಗಿ ಬದುಕ ಸಾಗಿಸಬೇಕು. ಪರಸ್ಪರ ಕೊಡುಕೊಳ್ಳುವಿಕೆಯ ಪ್ರಕ್ರಿಯೆಗಳು ಸಮಾಜದಲ್ಲಿ ನಿರಂತರ ಕ್ರಿಯೆ ಆಗಬೇಕು. ಆಗ ಮಾತ್ರ ಸಾಮಾಜಿಕ ಅಸಮಾನತೆಯನ್ನು ತೊಲಗಿಸಬೇಕೆಂಬುದು ಅಲ್ಲಮನ ಚಿಂತನೆಯಾಗಿದೆ. ಸನಾತನ ಕಾಲದಿಂದ ನಂಬಿದ ದೈವದ ಅಸ್ಥಿತ್ವವನ್ನು ಅಲ್ಲಗಳೆದು ಪರಿಶುದ್ಧ ಮನುಷ್ಯನಲ್ಲಿ ದೈವತ್ವವನು ಕಾಣಬೇಕು. ಈ ಮೂಲಕ ನಮ್ಮ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದೆನ್ನುತ್ತಾರೆ.

ಸಮಾಜಿಕ ಅಭಿವೃದ್ಧಿಗೆ ಮಾರಕವಾದ ಆಡಂಬರದ ದೈವಪರಂಪರೆಯನ್ನು ನಿರಾಕರಿಸಿ, ಅಂದು ಮತ್ತು ಇಂದಿನ ಅಗತ್ಯತೆಗಳನ್ನು ಚಿಂತಿಸುವಂತೆ ಮಾಡುತ್ತಾರೆ. ಇದು ಸಾಮಾಜಿಕ ಕಳಕಳಿಯಿರುವ ಧರ್ಮದ ಅಗತ್ಯತೆಯ ಬಗ್ಗೆ ಹೇಳುತ್ತಾರೆ.

" ಭೂಮಿಯೊಳಗಿಲ್ಲ ಆಕಾಶದೊಳಗಿಲ್ಲ ಚತುರ್ದಶ ಭುವನದೊಳಗಿಲ್ಲ

ಏನೆಂದರಿಯರು, ಎಂತರೆದರಿಯರು ಹೇಳಿರಯ್ಯಾ
ಕೃತ ಯುಗದಂದಿನ ಮಾತು ಬೇಡ
ಗುಹೇಶ್ವರಾ, ಅಂದು ಇಲ್ಲ, ಇಂದು ಇಲ್ಲ."-43

ಸರ್ವದಲ್ಲೂ ಭಗವಂತನ ಇರುವಿಕೆಯನ್ನು ಪ್ರಶ್ನಿಸಿ ಯುಗದಿಂದ ಯುಗಕ್ಕೆ ಹರಿದುಬರುತ್ತಿದ್ದ ಸಂಪ್ರದಾಯಸ್ತ ನಂಬಿಕೆಗಳನ್ನು ವಿಘಟಿಸುತ್ತಾನೆ. ದೇವನ ಅಸ್ತಿತ್ವವನ್ನು ಅಲ್ಲಗಳೆದು ಸಾಮಾಜಿಕವಾಗಿ ಬದುಕಬೇಕಾದರೆ ತನ್ನ ಇರುವಿಕೆಯಲ್ಲಿಯೇ ಸ್ವತಂತ್ರವಾದ ರೂಪುರೇಷೆಗಳನ್ನು ಕಂಡುಕೊಳ್ಳಬೇಕು. ಏಕೆಂದರೆ ಶಾಸ್ತ್ರ ಪುರಾಣದ ದೇವರು ಇಂದು-ಅಂದು ಎಂದೂ ಕೂಡ ಅಸ್ತಿತ್ವದಲ್ಲಿಲ್ಲ ಎಂದು ಸಂಪೂರ್ಣ ನಿರಾಕರಿಸಿ ಮನುಷ್ಯನ ಬದುಕಿಗೆ ಮುನ್ನುಡಿ ಬರೆಯುತ್ತಾರೆ.

" ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ
ಅಡವಿಯಲ್ಲೊಬ್ಬ ದೇವ, ಮಡಿಲಲೊಬ್ಬ ದೇವ
ನೀರು ನೀರ ಕೂಡಿ ಬಯಲು ಬಯಲ ಕೂಡಿ
ನರನೆಂಬ ದೇವ ತಾನಿರಾಳವೋ! ಲಿಂಗವೆಂಬುದೊಂದು
ಆನಂದ ಹೆಸರು ಗುಹೇಶ್ವರ ನೆಂಬುದೆನೋ."-44

ಅಂದಿನ ಕಾಲದಲ್ಲಿದ್ದ ವಿಪರೀತವಾದ ದೇವರುಗಳ ಆಚರಣೆ ಮೂಢನಂಬಿಕೆಗಳಿಂದ ಸಾಮಾಜಿಕ ಬದುಕು ಸಂಕಟದ ಸ್ಥಿತಿಯಲ್ಲಿ ಇರುವುದನ್ನು ಗಮನಿಸುತ್ತಾರೆ. ಆದ್ದರಿಂದ ಸಾಮಾಜಿಕ ಸಮಸ್ಯೆ ಉದ್ಭವಿಸುವ ಮೂಲವನ್ನು ಕಂಡು ಹಿಡಿದು ಅದರ ನಿವಾರಣೆಗೆ ಬದಲೀ ಮಾರ್ಗವನ್ನು ಸೂಚಿಸುತ್ತಾರೆ. ತಾವು ಆರಾಧಿಸುವ ' ಲಿಂಗ' ಕ್ಕೆ 'ಆನಂದ' ಸಂತೋಷಕರವಾದುದೆಂದು ಹೇಳಿ ಸಹಜ ಬದುಕನ್ನು ಪ್ರೀತಿಸುವ ಸಮಾನವಾದವನ್ನು ಮಂಡಿಸುತ್ತಾರೆ.

ಶರಣರು ಕಂಡುಕೊಂಡ ಜೀವನಕ್ರಮದಲ್ಲಿ ಯಾವುದೇ ರಾಜ್ಯಶಾಹಿ ಮತ್ತು ಪುರೋಹಿತ ಶಾಹಿ ಧೋರಣೆ ತನ್ನ ಬದುಕಿನೊಳಗೆ ಹಸ್ತಕ್ಷೇಪ ಮಾಡಬಾರದೆಂಬ ನಿಲುವನ್ನು ತಾಳಿದ್ದರು. ವ್ಯಕ್ತಿಯ ಸಮಾಜದ ಆಚಾರ-ವಿಚಾರ-ವ್ಯವಹಾರಗಳಲ್ಲಿ ರಾಜ ಹಸ್ತಕ್ಷೇಪ ಮಾಡಬಾರದು ಎಂಬುದು ಶರಣರ ಧೃಢ ನಿಲುವಾಗಿತ್ತು. ಸ್ವಯಂ ನೈಸರ್ಗಿಕ ಶಕ್ತಿ ಅಥವಾ ಯುರೋಪ್‌ನ 'ವ್ಯಕ್ತಿವಾದ' ದ ಪ್ರತಿಪಾದಕರು ಹೇಳುವ 'ಅವ್ಯಕ್ತ ಹಸ್ತ' ಆರ್ಥಿಕ, ಸಾಮಾಜಿಕ ಚಟುವಟಿಕೆಗಳನ್ನು

ನಿಯಂತ್ರಿಸುತ್ತದೆ. ಧೃಢತೆ, ಸಮತೋಲನ, ಚಲನಶೀಲತೆ, ವ್ಯವಸ್ಥೆಯ ಸಹಜ, ಸ್ವಯಂ ಕ್ರಿಯೆಯಲ್ಲಿದೆ ಎಂಬುದು ಶರಣರ ವಿಚಾರವಾಗಿತ್ತು.

'ಸಿರಿಯ ಸಂಗಂ ಶರಣ ಸಂಗಕ್ಕೆ ಪಗೆಯಾಯಿತ್ತು' ಹರಿಹರ ಕೇಶಿರಾಜದಣ್ಣಾಯಕರ ರಗಳೆಯೆಂಬ ಉಕ್ತಿಯಿಂದ ಜೀವನ ಕ್ರಿಯೆಯಲ್ಲಿ ಪ್ರಭುತ್ವದ ಹಸ್ತಕ್ಷೇಪದ ಬಗ್ಗೆ ಶರಣರ ಅಸಹನೆ, ಆಕ್ಷೇಪಣೆ ವ್ಯಕ್ತವಾಗಿರುವುದು ಸ್ಪಷ್ಟವಾಗಿದೆ. ಮುಕ್ತ ಜೀವನಕ್ಕೆ ಸರ್ವತಂತ್ರ ವಿಚಾರಗಳಿಗೆ. ಆಚಾರಗಳಿಗೆ ಪ್ರಭುತ್ವ ಕಂಟಕ ಪ್ರಾಯವಾಗಿದೆ, ಎಂಬ ವಿಚಾರ ಶರಣರ ವಚನಗಳ ಹೆಸರಿನಲ್ಲಿ ಅವರು ಎದುರಿಸಿದ ಹಲವು ಘಟನೆಗಳಿಂದ ತಿಳಿದು ಬರುತ್ತದೆ. ಕಲ್ಯಾಣಕ್ರಾಂತಿಯ ಅಂತಿಮ ಘಟ್ಟದಲ್ಲಿ ನಡೆದ ಬಸವಣ್ಣ- ಬಿಜ್ಜಳರ ನಡುವಿನ ಘರ್ಷಣೆ ಇದಕ್ಕೆ ಒಳ್ಳೆಯ ಉದಾಹರಣೆಯಾಗಿತ್ತು.

ರಾಜ- ಶರಣರ ನಡುವಿನ ಸಂಬಂಧ ಎಂತಹುದು ಎಂಬುದನ್ನು ಒಂದು ವಚನದಲ್ಲಿ ಬಸವಣ್ಣ ಸ್ಪಷ್ಟವಾಗಿ ಹೇಳಿದ್ದಾನೆ. - ಜೋಳವಾಳಿಂಗೆ ಬಿಜ್ಜಳಂಗೆ ಆಳಾದಡೇನು ? ವೇಳೆವಾಳಿಂಗೆ ಕೂಡಿಕೊಂಡಿಪ್ಪ ಕೂಡಲಸಂಗಮ ದೇವ ರಾಜನ ಪ್ರಭುತ್ವದ ಬಗ್ಗೆ ಶರಣರಿಗಿದ್ದ ಧೋರಣೆ ಎಂತಹುದು ಎಂಬುದು ಮೇಲಿನ ವಚನದಿಂದ ಸ್ಪಷ್ಟವಾಗಿದೆ. ಜೋಳವಾಳಿಯೊಳರ್ಪನ ಧರಾನಾಥಂಗೆ ವೇಳೆವಾಳಿಯೊಳರ್ಪನ ಭೀಮನಾಥಂಗೆ (ಕೇಶೀರಾಜ ದಣ್ಣಾಯಕರ ರಗಳೆ) ಎಂಬ ಹರಿಹರನ ಮಾತು ರಾಜ- ಶರಣರ ಸಂಬಂಧ ಎಂತಹುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. " ರಾಜನಿಗೆ ತಾನು ಕೇವಲ ಜೋಳವಾಳಿಗಳು ಆದರೆ ನಾವು ಶಿವನಿಗೆ ಮಾತ್ರ ವೇಳೆವಾಳುಗಳು ಎಂಬುದು ಹನ್ನೆರಡನೆ ಶತಮಾನದ ಕ್ರಾಂತಿಯ MANFESTO ಆಗಿತ್ತು. ಎಂದರೆ ಶರಣರ ನಿಜವಾದ ನಿಷ್ಠೆ ರಾಜನಿಗಲ್ಲ. ದೈವಕ್ಕೆ ಎಂಬ ವಿಚಾರ ಅಂದಿನ ಕ್ರಾಂತಿಯ ಒಂದು ಘೋಷಣೆಯಾಗಿತ್ತು. ರಾಜನಿಷ್ಠೆ ಎಂಬ ವೈದಿಕ ಭಾವನೆಗೆ ಶರಣರು ವಿರೋಧಿಗಳಾಗಿದ್ದರು."-45

ಆ ಕಾರಣದಿಂದ ಮಾತ್ರವಲ್ಲದೆ ಪ್ರಭುತ್ವ ನಿಷ್ಠೆ, ಸಾಮಾನ್ಯ ದೈವ ಭಕ್ತಿ ಸನಾತನ ಸಂಪ್ರದಾಯದ ನಂಬಿಕೆಗಳಿಗೆ ನಿಷ್ಠರಾಗಿರುವದನ್ನು ತಿರಸ್ಕರಿಸುತ್ತಾರೆ ಶಿವಶರಣರಾದವರು ರಾಜನ ಒಡೆತನದಲ್ಲಿದ್ದರೂ ಕೂಡ, ತಮ್ಮ ಅಧಿಕಾರವನ್ನ ಸಾಮಾಜಿಕ ಒಳಲಿತಿಗೋಸ್ಕರ ಕಾರ್ಯನಿರ್ವಹಿಸಿದ್ದಾರೆ. ಇವರು ಪ್ರಭುವನ್ನು ಸಂತೈಸಲು ಕಾರ್ಯನಿರ್ವಹಿಸದವರಲ್ಲ, ಇವರ ದುಡಿತವು ಸ್ವಾರ್ಥರಹಿತವಾಗಿದೆ. 'ನಾವು ಬದುಕಿ ಇತರರನ್ನು ಬದುಕಲು ಬಿಡಿ' ಎಂಬ ವಾಕ್ಯದಂತೆ

ಜನ ಸಮುದಾಯದ ಏಳಿಗೆಯನ್ನ ತಿಳಿಸಿದರು. ಈ ಮಾತುಗಳಲ್ಲಿ ರಾಜನಿಗೂ ಅವನ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವ ಶರಣರಿಗಿರುವ ಸಂಬಂಧವನ್ನು ದೃಢೀಕರಿಸುತ್ತದೆ. ಶರಣರು ಯಾವುದೇ ಕಾರಣದಿಂದ ಪ್ರಭುತ್ವ ನಿಷ್ಠೆ ಇರುವ ದುಡಿತವನ್ನು ತಿರಸ್ಕರಿಸಿ ಸಮಾಜದ ಹಿತಕ್ಕಾಗಿ ದುಡಿಯುತ್ತಾರೆ ಎಂಬುದನ್ನು ವಚನಗಳಲ್ಲಿ ಕಾಣಬಹುದು.

ಸಮಾಜದ ಕಾಯಕಗಳು ಕೀಳು-ಮೇಲು, ಕನಿಷ್ಠ-ಗರಿಷ್ಠ ಎಂಬ ಭೇದ ಭಾವನೆಗಳಿಂದ ವಿಭಜಿತವಾಗಿದ್ದವು. ಇತಂಹ ದ್ವಂದ್ವಗಳ ಬದುಕಿನಿಂದ ಹೊರಬರುವುದು ಅಂದಿನ ಅಗತ್ಯವಾಗಿತ್ತು ಆಕಾರಣದಿಂದ ಊಳಿಗಮಾನ್ಯ ಪದ್ಧತಿಯನ್ನ ಪ್ರತಿನಿಧಿಸುವ ವ್ಯಕ್ತಿಗಳು, ಅದನ್ನು ಪೋಷಿಸುವ, ಆಚಾರ-ವಿಚಾರಗಳನ್ನು ನಿರಾಕರಿಸಿದರು. ಇದರ ಪರಿಣಮವಾಗಿ ಅಂದಿನ ಸಾಮಾಜಿಕ ವ್ಯವಸ್ಥೆಯ ವಿರೋಧಿಸಬೇಕಾಗುತ್ತದೆ. ಇಂತಹ ಗೂಣಗಳುಳ್ಳ ವಚನವನ್ನು ಇಲ್ಲಿ ಪ್ರಸ್ತಾಪಿಸಬಹುದು.

"ಆರು ಮುನಿದು ನಮ್ಮನೇನ ಮಾಡುವರು. ?
ಊರು ಮುನಿದು ನಮ್ಮನೆಂತು ಮಾಡುವರು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ
ನಮ್ಮ ಸೊಣಗಂಗೆ ತಳಿಗೆಯ ಬಿಕ್ಕಬಿಡಬೇಡ
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?"-46

ಸಾಮಾಜಿಕ ಒಳ್ಳೆಯ ಮೌಲ್ಯಗಳನ್ನು ನಿಷ್ಠುರವಾಗಿ ಪಾಲಿಸ ಹೊರಟಾಗ ಸಮಾಜದ ವಿರೋಧವನ್ನು ಎದುರಿಸುವುದು ಅನಿವಾರ್ಯವಾಗುತ್ತದೆ.

"ನ್ಯಾಯನಿಷ್ಠುರಿ :- ದಾಕ್ಷಿಣ್ಯಪರ ನಾನಲ್ಲ
ಲೋಕವಿರೋಧಿ: ಶರಣನಾರಿಗಂಜುವನಲ್ಲ
ಕೂಡಲಸಂಗಮದೇವದೇವರ ರಾಜತೇಜದಲ್ಲಿಪ್ಪನಾಗಿದ್ದ.-47

ತಮ್ಮ ಆರಾಧ್ಯ ದೈವದ ಛಲದಿಂದ ಅನ್ನ ಸನ್ನಡತೆಯ ವಿಧಿ-ವಿಧಾನದಿಂದ ಮನುಷ್ಯ ಸ್ಪಷ್ಟ ಮಾರ್ಗ ತುಳಿದಿದ್ದರೆ, ಯಾರಿಗೂ ಅಂಜುವ -ಅಳುಕುವುದು ಬೇಕಿಲ್ಲವೆಂದು ಪ್ರತಿಪಾದಿಸುತ್ತಾರೆ. ಇದರಲ್ಲಿ ಸಮಾಜವಾದಿ, ಸಮತಾವಾದ ಗುಣಗಳನ್ನು ತೆರೆದಿಡುತ್ತಾರೆ. ಈ ನೆಲೆಯಲ್ಲಿ ಸಮಾಜವನ್ನು ನೋಡಬೇಕು ಎಂಬ ಮಾತನ್ನು ಧೃಢೀಕರಿಸುತ್ತದೆ.

“ ಊರ ಮುಂದೆ ಹಾಲಹಳ್ಳ ಹರಿವುತ್ತಿರಲು
ಒರೆಯಾವಿನ ಬೆನ್ನ ಹರಿಯಲೇದೇಕಯ್ಯಾ ?
ಲಜ್ಜೆಗೆಡಬೇಕೆ ? ನಾಣುಗೆಡಲೇಕೆ?
ಕೂಡಲಸಂಗಮದೇವನುಳ್ಳನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ.”–48

ಸಾಮಾಜಿಕ ಸಂಪತ್ತು ದೇವನ ಅಸ್ತಿತ್ವದಲ್ಲಿರುವುದು ಒಂದೆಡೆಯಾದರೆ ಅವನ ಸೇವಕರಾಗಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಕಾಯಕ ಪ್ರವೃತ್ತಿಯಿಂದ ಇರುವುದು ಇನ್ನೊಂದೆಡೆ. ಹೀಗೆ ವೃತ್ತಿಕಾಯಕ ಚಟುವಟಿಕೆಯನ್ನು ಅವಲಂಬಿಸಿರುವುದರಿಂದ ಹಣದ ದಾರಿದ್ರ್ಯ ಎಂದಿಗೂ ಬರುವುದಿಲ್ಲ ಎಂದು ಸಹಜಾನುಭವ ಹಾಗೂ ಸ್ವಾನುಭವದಿಂದ ಅಭಿವ್ಯಕ್ತಿಸುತ್ತಾರೆ.

ಸಮಾಜವಾದ ಮತ್ತು ಸಮತಾವಾದದ ಕಲ್ಪನೆಗಳು ಶರಣರು ತೋರುವ ಆರ್ಥಿಕತೆ ಮತ್ತು ಅಧಿಕಾರಗಳ ಮೇಲೆ ನಿಂತಿವೆ. ಸಾಮಾಜಿ ಸಂಪತ್ತಿನ ಹಂಚಿಕೆಯ ವಿಚಾರ ಬಂದಾಗ ಸಾಮಾಜಿಕ ಕಟ್ಟುಪಾಡುಗಳನ್ನು ಸಹಿಸುವುದಿಲ್ಲ, ಇಂತ ಅಂಶಗಳನ್ನು ನಿಷ್ಠುರವಾಗಿಯೇ ಖಂಡಿಸುತ್ತಾರೆ. ಆದ್ದರಿಂದ ಆ ಕಾಲದ ಬಿಜ್ಜಳನ ಪ್ರಭುತ್ವವನ್ನು ವಿರೋಧಿಸಿ ಪರ್ಯಾಯವಾದ ಸಮಾನತೆಯ ಬದುಕಿಗೆ ತಳಹದಿ ಹಾಕಿದ್ದಾರೆ. ಸಮಾಜದ ಉದ್ಧಾರದ ನೆಪದಲ್ಲಿ ಮಾಡುವ ಆಷಾಢ ಭೂತಿಗಳನ್ನು ನೇರವಾಗಿ ಖಂಡಿಸಿ ಆದಷ್ಟೂ ತಮ್ಮ ವೈಯಕ್ತಿಕವಾದ ನೆಲೆಯಲ್ಲಿ ಬಗೆಹರಿಸಬೇಕೆಂಬುದು ಆಶಯವಾಗುತ್ತದೆ.

“ ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ
ಕೂಡಲಸಂಗಮದೇವ” –49

ಸಮಾಜವಾದ ಮತ್ತು ಸಮತಾವಾದದ ಆಚಾರ ವಿಚಾರಗಳ ತತ್ವಗಳನ್ನು ವಯಕ್ತಿಕವಾದ ನೆಲೆಯಲ್ಲಿ ತರಬೇಕೆಂಬುದು ಶರಣರ ಆಶಯ. ಬೇರೆಯವರನ್ನು ತಿದ್ದುವುದನ್ನು ಬಿಟ್ಟು ತಮ್ಮನ್ನೇ ತಾವು ತಿದ್ದಿಕೊಂಡಾಗ ಮಾತ್ರ ಸಾಮಾಜಿಕ ಬದುಕು ಪ್ರಗತಿಯತ್ತ ಸಾಗುತ್ತದೆಂಬುದು ಇವರ ನಿಲುವಾಗುತ್ತದೆ. ತಮ್ಮ ವೈಯಕ್ತಿಕ ಅಂಕು–ಡೊಂಕುಗಳನ್ನು ಮನುಷ್ಯನಾದವನು ಮೊದಲು

ತಿದ್ದಿಕೊಂಡು ಪರಿಪೂರ್ಣನಾದ ಮೇಲೆ ಲೋಕದ ಜನರ ತಪ್ಪು-ಒಪ್ಪುಗಳನ್ನ ಸರಿಪಡಿಸಬೇಕಾಗುತ್ತದೆ, ಆಗ ಮಾತ್ರ ಆ ವ್ಯಕ್ತಿಯ ಘನತೆ, ಗೌರವಗಳು ಹೆಚ್ಚಾಗುತ್ತವೆ. ಸಾಮಾಜಿಕ ಮನ್ನಣೆಯು ಅವನಿಗೆ ಸಿಗುತ್ತದೆ.

ಕಲ್ಯಾಣಕ್ರಾಂತಿಯ ಸಮಯದಲ್ಲಿ ಎಲ್ಲಾ ವರ್ಗದ ವಚನಕಾರರು ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಸಾಮಾಜಿಕ ಕಾರ್ಯ ಚಟುವಟಿಕೆಯಲ್ಲಿ ಭಾಗವಹಿಸಿದ್ದು ಈ ಕ್ರಾಂತಿಯ ವಿಶೇಷವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಫ್ಯೂಡಲ್ ಸಂಸ್ಕೃತಿಯ ರಾಜಶಾಹಿ ಪ್ರಭುತ್ವದಿಂದ ಕಳಚಿಕೊಳ್ಳಲು, ಶರಣರು ಹಾಕಿಕೊಟ್ಟ ಸಮಾಜವಾದ ಮತ್ತು ಸಮತಾವಾದದ ನೆಲೆಗಳು ಇಂದಿಗೂ ಪ್ರಸ್ತುತವಾಗುತ್ತವೆ. ಇಂಥ ಬದಲಾದ ಧಾರ್ಮಿಕ ಪರಿಸರದಿಂದ ಅಂದಿನ ಪ್ರಗತಿಪರ ಜನ ಸಮುದಾಯಗಳು ಹೊಸಮಾರ್ಗ ತುಳಿಯತೊಡಗುತ್ತವೆ.

ಈ ಸಾಂಸ್ಕೃತಿಕ ಸಂವರ್ಧನೆಯ ಫಲಿತದಿಂದ ಸಮಾಜದ ಎಲ್ಲಾ ಕ್ಷೇತ್ರಗಳು ಪ್ರೇರಣೆ ಪಡೆಯುತ್ತವೆ. ಆಕಾರಣದಿಂದಲೇ ಹರಿಹರ, ರಾಘವಾಂಕ, ಕುಮಾರವ್ಯಾಸ, ಸರ್ವಜ್ಞ ಹಾಗೂ ಸಾಂಸ್ಕೃತಿಕ ವೀರರಾದ ಮಂಟೇಸ್ವಾಮಿ, ಮಾದೇಶ್ವರ ಜುಂಜಪ್ಪ ಮೊದಲಾದವರ ಸಾಹಿತ್ಯ ಕೃತಿಗಳಲ್ಲಿ ಜನರ ಪ್ರಗತಿಗೆ ಅವಶ್ಯವಿರುವ ಸಾಮಾಜಿಕ ಅಂಶಗಳನ್ನೊಳಗೊಂಡ ಕಾವ್ಯರಚನೆಗೆ ತೊಡಗುತ್ತಾರೆ. ಇಷ್ಟೇ ಅಲ್ಲದೆ ಕಾವ್ಯ ಮತ್ತು ಕೃತಿಗಳು ಸಮಾಜಮುಖಿಯಾಗಬೇಕೆಂದು ಬಯಸುತ್ತಾರೆ, ಶರಣರ ಕ್ರಾಂತಿಯ ಪ್ರಸ್ತುತತೆಗೆ ನಮ್ಮ ನೆಲದ ಸೊಗಡಿರುವ ಸಮಾಜವಾದ ಮತ್ತು ಸಮತಾವಾದಗಳಾಗಿವೆ ಎಂಬುದು ನನ್ನ ವಿಚಾರವಾಗಿದೆ.

ಅಡಿ ಟಿಪ್ಪಣಿಗಳು

1. ವಚನಸಮಗ್ರ, ಡಾ॥ಪಿ.ವಿ. ನಾರಾಯಣ, ಪುಟ 240,241, 2005.
2. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 211, ವ 821, 1993.
3. ವಚನಕಾರರ ಪ್ರಮುಖ ಪರಿಕಲ್ಪನೆಗಳು, ಸಂಪಾದಕರು ಷಣ್ಮುಕಯ್ಯ ಅಕ್ಕೂರಮಠ, ಪುಟ 17, 1994.
4. ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಡಿ.ಆರ್. ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಪುಟ 130 1999.
5. ಅಂಬಿಗರ ಚೌಡಯ್ಯನ ವಚನಗಳು, ಸಂಪಾದಕರು ಡಾ॥ ಎಸ್. ವಿದ್ಯಾಶಂಕರ, ಪುಟ 28 ವ 82, 1998.
6. ವಚನಕಾರರ ಪ್ರಮುಖ ಪರಿಕಲ್ಪನೆಗಳು, ಸಂಪಾದಕರು ಡಾ॥ ಷಣ್ಮುಖಯ್ಯ ಅಕ್ಕೂರ ಮಠ, ಪುಟ 171, 1994.
7. ಸಂಕೀರ್ಣ ವಚನ ಸಂಪುಟ–1, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 378 ವ 1171, 1993.
8. ಸಂಕೀರ್ಣ ವಚನ ಸಂಪುಟ–1, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 381 ವ 1183, 1993.
9. ಅಂಬಿಗರ ಚೌಡಯ್ಯನ ವಚನಗಳು, ಸಂಪಾದಕರು ಡಾ॥ ಎಸ್. ವಿದ್ಯಾಶಂಕರ, ಪುಟ 2 ವ 6, 1998.
10. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 18 ವ 62, 1993.
11. ಅಂಬಿಗರ ಚೌಡಯ್ಯನ ವಚನಗಳು, ಸಂಪಾದಕರು ಡಾ॥ ಎಸ್. ವಿದ್ಯಾಶಂಕರ, ಪುಟ 83 ವ 253, 1998.
12. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 180, 718, 1993.
13. ಕಾಯಕ ಪರಿಣಾಮಿ, ಲೇಖನ (ಜಾತಿಗಳನ್ನಳಿಸಿ ಹಾಕಿದ ಶರಣ ಧರ್ಮ) ಬಸವರಾಜ ಕಟ್ಟೀಮನೆ, ಪುಟ 1009, 1991.
14. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 180, ವ 190, 1993.
15. ಕಾಯಕ ಪರಿಣಾಮಿ, ಲೇಖನ (ವಚನ ಧರ್ಮ, ವಚನ–ನಿರ್ವಚನ), ಸ. ಲಿಂಗಣ್ಣ ಸತ್ಯಂಪೇಟೆ, ಎಂ ಬಂಡಪ್ಪ, ಪುಟ 586, 1991.
16. ಶತಮಾನದ ಸಂಶೋಧನೆ, ಸಂಪಾದಕರು ಎನ್.ಎಸ್. ತಾರಾನಾಥ , (ಲೇಖನ–68, ಮಧ್ಯಕಾಲೀನ ಕಾಲದಲ್ಲಿ ಪ್ರಭುತ್ವ ಮತ್ತು ಮೀರುವ ಪ್ರಕ್ರಿಯೆ)– ವಿ.ಚಂದ್ರಶೇಖರ ನಂಗಲಿ, ಪುಟ 845, 2001.
17. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 212 ವ 825, 1993.
18. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 29 ವ 91, 1993.
19. ನಾನಿಲ್ಲವಳಲ್ಲ, (ಲೇಖನ– ಮಧ್ಯಕಾಲೀನ ಕಾಲದಲ್ಲಿ ಪ್ರಭುತ್ವ ಮತ್ತು ಮೀರುವ ಪ್ರಕ್ರಿಯೆ)– ವಿ.ಚಂದ್ರಶೇಖರ ನಂಗಲಿ, ಪುಟ 161, 1998.
20. ಸಿದ್ಧರಾಮೇಶ್ವರ ವಚನಗಳು, ಸಂಪಾದಕರು ಓ ಲೋಕೇಶ್ವರಪ್ಪ, ಪುಟ 18 ವ 68, 2006.
21. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 128 ವ 465, 1993.
22. ಸಿದ್ಧರಾಮೇಶ್ವರ ವಚನ ಸಂಪುಟ–4, ಡಾ॥ ಎಸ್.ವಿದ್ಯಾಶಂಕರ, ಪುಟ 331 ವ 1169, 1993.
23. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 67 ವ 212, 1993.
24. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 67 ವ 213, 1993.

25. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 138 ವ 557, 1993.

26. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 140 ವ 563, 1993.

27. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 141 ವ 569, 1993.

28. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 142 ವ 570, 1993.

29. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 186 ವ 361, 1993.

30. ಶಿವಶರಣೆಯರ ವಚನ ಸಂಪುಟ, ಡಾ॥ ವೀರಣ್ಣರಾಜೂರ, ಪುಟ 200 ವ 628, 1993.

31. ಸಂಕೀರ್ಣ ವಚನ ಸಂಪುಟ-2, ಸಂಪಾದಕರು ಡಾ॥ ಎಸ್. ವಿದ್ಯಾಶಂಕರ ಪುಟ 245. ವ 742.

32. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 426 ವ 1334, ಪ್ರ 1993.

33. ನಾನಿಲ್ಲವಳಲ್ಲ (ವಿಮರ್ಶ ಸಂಕಲನ), ವಿ. ಚಂದ್ರಶೇಖರನಂಗಲಿ, ಪುಟ 160, 1998.

34. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 54 ವ 216, 1993.

35. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 56 ವ 223, 1993.

36. ವಚನ ಸಮಗ್ರ, ಡಾ॥ ಪಿ ವಿ ನಾರಾಯಣ, ಪುಟ 301, 2005.

37. ವಚನ ಸಮಗ್ರ , ಡಾ॥ ಪಿ ವಿ ನಾರಾಯಣ, ಪುಟ 318, 2005.

38. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 43 ವ 165, 1993.

39. ಬಸವಣ್ಣನವರ ವಚನಗಳು, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 42, ವ 100, 164, 1993.

40. ಅಂಬಿಗರ ಚೌಡಯ್ಯನ ವಚನಗಳು, ಸಂಪಾದಕರು ಡಾ॥ ಎಸ್. ವಿದ್ಯಾಶಂಕರ, 61 ವ 191, 1998.

41. ಸಂಕೀರ್ಣ ವಚನ ಸಂಪುಟ-1, ಸಂಪಾದಕರು ಡಾ॥ ಎಂ ಎಂ ಕಲ್ಬುರ್ಗಿ, ಪುಟ 473 ವ 1379, 1993.

42. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 17 ವ 58, 1993.

43. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 22 ವ 77, 1993.

44. ಅಲ್ಲಮಪ್ರಭುದೇವರ ವಚನಗಳು, ಸಂಪಾದಕರು ಡಾ॥ ಬಿ ವ್ಹಿಮಲ್ಲಾಪುರ, ಪುಟ 40 ವ 41, 1993.

45. ಕಾಯಕ ಪರಿಣಾಮಿ, (ಲೇಖನ- ಶರಣ ಆರ್ಥಿಕ ವಿಚಾರಗಳು) (ಲೇಖಕ-ಟಿ. ಆರ್. ಚಂದ್ರಶೇಖರ) ಸ. ಲಿಂಗಣ್ಣ ಸತ್ಯಂಪೇಟೆ, ಎಂ ಬಂಡಪ್ಪ, ಪುಟ 1165-1166, 1991.

46. ಬಸವಣ್ಣನವರ ವಚನಗಳು, ಡಾ॥ ಎಂ.ಎಂ. ಕಲ್ಬುರ್ಗಿ, ಪುಟ 188 ವ 753, 1993.

47. ಬಸವಣ್ಣನವರ ವಚನಗಳು, ಡಾ॥ ಎಂ.ಎಂ. ಕಲ್ಬುರ್ಗಿ, ಪುಟ 188 ವ 754, 1993.

48. ಬಸವಣ್ಣನವರ ವಚನಗಳು, ಡಾ॥ ಎಂ.ಎಂ. ಕಲ್ಬುರ್ಗಿ, ಪುಟ 189 ವ 755, 1993.

49. ಬಸವಣ್ಣನವರ ವಚನಗಳು, ಡಾ॥ ಎಂ.ಎಂ. ಕಲ್ಬುರ್ಗಿ, ಪುಟ 34 ವ 124, 1993..

ಅಧ್ಯಾಯ – 5

ಕಲ್ಯಾಣ ಕ್ರಾಂತಿಯ ಸಾಮಾಜಿಕ ವೈರುಧ್ಯಗಳು :

5.1 ಸೈದ್ಧಾಂತಿಕ ಚಿಹ್ನೆ, ಸಮೂಹ ಹೋರಾಟ

ಲಿಂಗ – ಶರಣರ ಸಮೂಹ

ಸ್ಥಾವರ – ಜಂಗಮ ಹೋರಾಟ

5.2 ಧಾರ್ಮಿಕ ಮತಪಂಥಗಳ ತಿರಸ್ಕಾರ.(ಶೈವ ಮತ ಪಂಥಗಳು)

ಪ್ರಾಚೀನ ಇತಿಹಾಸವನ್ನು ಅವಲೋಕಿಸಿದರೆ ನಮ್ಮ ಸಾಮಾಜಿಕ ವ್ಯವಸ್ಥೆಗಳಲ್ಲಿ ಅನೇಕ ವಿಧವಾದ ಕ್ರಾಂತಿಕಾರಕ ಸ್ಥಿತ್ಯಂತರಗಳು ಗೋಚರಿಸುತ್ತವೆ. ವೈವಿಧ್ಯತೆಗಳು ವಿಧವಿಧವಾಗಿ ಕಂಡುಬರುತ್ತವೆ. ಆಚಾರ-ವಿಚಾರ, ನಡೆ-ನುಡಿ, ರೀತಿ-ನೀತಿ, ನಂಬಿಕೆ-ಸಂಪ್ರದಾಯಗಳಲ್ಲಿ ಅನೇಕ ರೀತಿಯ ಬದಲಾವಣೆಗಳ ಹಿನ್ನೆಲೆಯಲ್ಲಿ ಸಂಸ್ಕೃತಿಯು ಉಗಮವಾಗಿರುತ್ತದೆ.

ಎಲ್ಲಾ ಧರ್ಮಗಳಲ್ಲಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೌಲ್ಯಗಳು ಸಾಮಾನ್ಯವಾಗಿ ವಿರೋಧಬಾಸದಿಂದ ಕೂಡಿರುತ್ತವೆ. ಇಂತಹ ಸನ್ನಿವೇಶದಲ್ಲಿ ವಿಭಿನ್ನ ಸಂಸ್ಕೃತಿಗಳ ಅನಾವರಣದೊಂದಿಗೆ ಪೈಪೋಟಿಗೆ ಸಜ್ಜಾಗುತ್ತವೆ. ಇದರ ಅಡಿಯಲ್ಲಿ ಅವಲೋಕಿಸಿದರೆ ಜೈನ ಧರ್ಮವು ಅದರ ಸಂಸ್ಕೃತಿಯನ್ನು ಎತ್ತಿಹಿಡಿದರೆ ಶೈವಧರ್ಮವು ಶೈವಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಹೀಗೆ ಎಲ್ಲಾ ಧರ್ಮಗಳ ಸಂಸ್ಕೃತಿಗಳು ತಮ್ಮ-ತಮ್ಮ ಶ್ರೇಷ್ಠತೆಯ ಸ್ಪರ್ಧೆಯಲ್ಲಿ ದಾಪುಗಾಲಿಡಲು ಸಂಘರ್ಷದ ಹಾದಿಗೆ ಅಡಿಯಿಡುತ್ತದೆ. ಇದರಿಂದ ಸಾಮಾಜಿಕ ವೈರುಧ್ಯಕ್ಕೆ ಕಾರಣವಾಗುತ್ತದೆ.

ಈ ಪರಿಣಾಮವಾಗಿ ಸಾಮಾಜಿಕ ವೈರುಧ್ಯಗಳು ಹಲವು ಬಗೆಯಲ್ಲಿ ಸೃಷ್ಟಿ ಪಡೆಯುತ್ತವೆ. ದೇವರು, ಧರ್ಮ, ಆಹಾರ ಪದ್ಧತಿ ವ್ಯವಹಾರಿಕ ರೀತಿ-ನೀತಿಗಳು ಬದಲಾಗುತ್ತವೆ. ಇಂಥ ವೇಳೆಯಲ್ಲಿ ಸಾಮಾಜಿಕ ಬದುಕಿನೊಡನೆ ಹೊಂದಾಣಿಕೆ ಮಾಡಿಕೊಳ್ಳುವಾಗ, ಕೆಲವು ಸಾಮ್ಯತೆ ಬಯಸುವ ಮೌಲ್ಯಗಳು ಅನಿವಾರ್ಯವಾಗುತ್ತವೆ. ಹೀಗೊಂದು ವೇಳೆ ಒಪ್ಪಿತ ಮೌಲ್ಯಗಳೊಂದಿಗೆ ಸಾಂಸ್ಕೃತಿಕ ಒಪ್ಪಂದಗಳು ಆಗದಿದ್ದರೆ. ಅನಿರೀಕ್ಷಿತವಾಗಿ ವೈರುಧ್ಯಗಳು ಸಂಭವಿಸುತ್ತವೆ.

ಸಾಮಾಜಿಕ ಮೌಲ್ಯಗಳು ಎಲ್ಲಾ ಕಾಲಕ್ಕೂ ಎಲ್ಲಾ ಸಂದರ್ಭದಲ್ಲಿಯೂ ಒಂದೇ ತೆರನಾಗಿರುವುದಿಲ್ಲ. ಕೆಲವೊಮ್ಮೆ ಒಪ್ಪಿತ ಮೌಲ್ಯಗಳು ವೈಯಕ್ತಿಕವಾಗಿ ಸರಿಯಿಲ್ಲದಾಗ ತಮ್ಮ ಜೀವನ ಕ್ರಮದಲ್ಲಿದ್ದ ಮೌಲ್ಯಗಳನ್ನು ನಿರಾಕರಿಸಬಹುದು. ಹೀಗಾದ ಮೌಲ್ಯಗಳು ಸಮಾಜಕ್ಕೆ ಒಪ್ಪಿತವಾಗಬಹುದು ಅಥವಾ ಒಪ್ಪಿತವಾಗದೇಯಿರಬಹುದು. ಇವೆರಡರ ಸಂಕ್ರಮಣಾವಸ್ಥೆಯಲ್ಲಿ ಹಲವು ಬದಲಾವಣೆಗಳು ಘಟಿಸಿದಾಗ ಸಾಮಾಜಿಕ ವೈರುಧ್ಯಗಳಿಗೆ ಎಡೆಯಾಗುತ್ತದೆ. ಇಂತಹ ವೈರುಧ್ಯಗಳನ್ನು ಕಲ್ಯಾಣಕ್ರಾಂತಿ ಸಂದರ್ಭದಲ್ಲಿ ವಚನಕಾರರಿಗೆ ಬಂದೊದಗಿದ ಸಾಂಸ್ಕೃತಿಕ ಸನ್ನಿವೇಶದಲ್ಲಿ ಕಾಣಬಹುದು. ಅಂದಿನ ಸಾಮಾಜಿಕ ಪರಿವರ್ತನೆಯ ಸಂಸ್ಕೃತೀಕರಣ ಸಂದರ್ಭದಲ್ಲಿ

ವಚನಕಾರರ ವಿಚಾರಧಾರೆಗಳಿಗೂ ಹಾಗೂ ಮೂಲಭೂತವಾದಿಗಳಿಗೂ ಸಂಭವಿಸಿದ ವಿಚಾರಗಳು ವೈರುಧ್ಯಕ್ಕೆ ನಾಂದಿಯಾಡುತ್ತವೆ.

ವಚನಕಾರರ ವಚನಗಳ ವಿಚಾರಗಳೇ ವೈರುಧ್ಯಗಳ ಕಟ್ಟಾಗಿದೆ. ಅವುಗಳಲ್ಲಿ ಬಹುಮುಖ್ಯವಾಗಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ವೈರುಧ್ಯಗಳೆಂದು ಅಧ್ಯಯನದ ದೃಷ್ಟಿಯಿಂದ ವರ್ಗೀಕರಿಸಬಹುದು. ಇವುಗಳಲ್ಲಿ ಅಧ್ಯಯನದ ದೃಷ್ಟಿಯಿಂದ ಸಾಂಸ್ಕೃತಿಕ ವೈರುಧ್ಯಗಳನ್ನು ಗುರುತಿಸಬಹುದು. ಗುರು, ಲಿಂಗ, ಜಂಗಮ ತತ್ವಗಳಿಗೆ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಶರಣರು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದರು. ಹಾಲಿನಂತೆ ಪರಿಶುದ್ಧವಾದ ಗುರು, ಬೆಂಕಿಯೊಳಗಣ ಲಿಂಗ, ಮರುಜೀವಣಿಯ ಕಡ್ಡಿಯಂತೆ ಜಂಗಮರುಯಿದ್ದರೆಂದು ವಚನಕಾರರು ತಿಳಿಸುತ್ತಾರೆ. ಇವುಗಳ ಶ್ರೇಷ್ಠತೆಯ ಬಗ್ಗೆ ಅಮುಗೆ ರಾಯಮ್ಮನು ತನ್ನ ವಚನವೊಂದರಲ್ಲಿ ತಿಳಿಸಿದ್ದಾರೆ. ವಚನಕಾರರು ಜನಮುಖಿಯಾಗಿ ಚಿಂತನೆ ನಡೆಸಿ ಕಾರ್ಯ ಪ್ರವೃತ್ತರಾಗುವ ಮನೋಭಾವನೆಯನ್ನು ಹಾಗೂ ಸರ್ವ ಸಮರ್ಪಣೆಯ ಭಾವವನ್ನು ಕಲ್ಯಾಣ ಕ್ರಾಂತಿ ಪ್ರೇರೇಪಿಸಿದೆ. ವ್ಯಕ್ತಿಯ ಹಿತಕ್ಕಿಂತ ಸಮಷ್ಠಿಯ ಹೇಳಿಗೆ ಪ್ರಮುಖವಾದುದೆಂದು ನಿರ್ದೇಶಿಸುವ ನೆಲೆಗಟ್ಟಿನಲ್ಲಿ ಕಲ್ಯಾಣ ಕ್ರಾಂತಿಯ ಪ್ರಭಾವ ಈ ಮೂರು ತತ್ವಗಳ ಮೇಲೆ ಆಗಿದೆಯೆಂದೇ ಭಾವಿಸಬಹುದು.

ಈ ಅಂಶಗಳ ದೃಷ್ಟಿಕೋನದಲ್ಲಿ ವಚನಕಾರರು ಯಾವ ಕುಲದಲ್ಲಿ ಹುಟ್ಟಿದರೂ ಕೂಡ, ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಎಲ್ಲಾ ಸಮುದಾಯಗೊಂದಿಗೆ ತಮ್ಮ ಬದುಕನ್ನು ಕಂಡುಕೊಳ್ಳಲು ಇಚ್ಛಿಸುತ್ತಾರೆ. ಅಲ್ಲದೇ ತಳಸಮುದಾಯಗಳೊಂದಿಗೆ ಬಂದಂತಹ ಶಿವಶರಣರು ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ತಮ್ಮ ವೃತ್ತಿಯಲ್ಲಿನ ಮೌಲ್ಯಗಳನ್ನು ಉನ್ನತೀಕರಿಸುತ್ತಾರೆ. ಇದರಿಂದ ವಿಭಿನ್ನ ಕುಲಕಸುಬುಗಳಿಂದ ವೃತ್ತಿಯಾಧಾರಿತ ಸಮಾಜ ರೂಪಗೊಂಡಿತ್ತೆಂದು ಹೇಳಬಹುದು. ಇಂತಹ ಸಂದರ್ಭದಲ್ಲಿ ಜೀವನೋಪಾಯಕ್ಕಾಗಿ ಅಳವಡಿಸಿದ ವೃತ್ತಿಗಳೆ ಜಾತಿಗಳಾಗಿ ರೂಪುಗೊಡಿರುವುದನ್ನು ಇತ್ತೀಚಿನ ದಿನಗಳಲ್ಲಿ ಕಾಣಬಹುದು. ಶರಣರು ವೃತ್ತಿಯ ಜೊತೆ ತಮ್ಮ ಜಾತಿಯ ಉನ್ನತ ಆದರ್ಶಗಳನ್ನು ಕಾಯಕದ ಜೊತೆ ಉನ್ನತೀಕರಿಸಿಕೊಂಡಿದ್ದರು.

ಈ ಸಾಂಸ್ಕೃತಿಕ ಅಂಗಳದಿಂದ ಶರಣರು ಜಾತಿಯನ್ನು ನಿರಾಕರಿಸುವ ಅಂಶಗಳು ಕಂಡರೂ ವೃತ್ತಿಯಾಧಾರಿತವಾಗಿದ್ದ ಕಸುಬುಗಳು ಜಾತಿಯನ್ನು ಪೋಷಿಸಿಕೊಂಡು ಬಂದಿದ್ದು ವಿಪರ್ಯಾಸ.

ಇಂತಹ ಪರಿವರ್ತನೆ ಹಾದಿ ಹಿಡಿದ ಸಮುದಾಯಗಳಲ್ಲಿ ಹಲವು ಸಾಂಸ್ಕೃತಿಕ ಬಿಕ್ಕಟ್ಟುಗಳು ಉಂಟಾಗುತ್ತವೆ. ಇದರ ಪರಿಣಾಮವಾಗಿ ಅಂದಿನ ಕೆಳವರ್ಗ ಮತ್ತು ಮೇಲ್ವರ್ಗಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ವೈರುಧ್ಯಗಳು ಸೃಷ್ಟಿಯಾದವು. ಪ್ರಮುಖವಾಗಿ ಕ್ರಾಂತಿಗೆ ಕಾರಣರಾದ ವಚನಕಾರರಲ್ಲಿ ತಾವು ನಂಬಿಕೊಂಡಿದ್ದ ಧರ್ಮಾಧಾರಿತ ಮೌಲ್ಯಗಳಲ್ಲಿ ವೈರುಧ್ಯಗಳು ಕಂಡುಬರುತ್ತವೆ. ಅವುಗಳೆಂದರೆ, ಅರುವು-ಕುರುವು, ಭಕ್ತ-ಭವಿ, ಸತಿ-ಪತಿ, ಸ್ಥಾವರ-ಜಂಗಮ ಮುಂತಾದ ವೈರುಧ್ಯಗಳನ್ನು ಕಾಣಬಹುದು.

ಭಕ್ತ-ಭವಿ:

ವಚನಚಳುವಳಿಯಲ್ಲಿ ಭಕ್ತ ಮತ್ತು ಭವಿಯ ಸಂಬಂದಗಳು ಏಕಮುಖವಾದುದಲ್ಲ, ಪರಸ್ಪರ ವಿರುದ್ಧವಾದದ್ದು. ಶಿವಭಕ್ತನಾದವನು ಭವಿಯ ಸಂಬಂಧವನ್ನೇ ಮಾಡಬಾರದು ; ಎಂದು ಕೂಡಾ ಭವಿಯೊಂದಿಗೆ ಬೆರೆಯಬಾರದು. ಅಷ್ಟರಮಟ್ಟಿಗೆ ಶಿವಭಕ್ತರಿಂದ ದೂರ ತಳ್ಳಲ್ಪಟ್ಟಿದ್ದ ಭವಿ. ಈ ಕಾರಣದಿಂದಲೇ ಯಾವಾಗಲೂ ಭಕ್ತ ಮತ್ತು ಭವಿಯ ಬಗ್ಗೆ ತಾತ್ವಿಕ ಸಂಘರ್ಷಗಳು ನಡೆಯುತ್ತಲೇ ಇರುತ್ತವೆ. ಆಚರಣ ವಿಧಾನದ ಮೇಲೆ ಭವಿ-ಭಕ್ತ ಸಂಬಂಧ ವರ್ಗೀಕರಣವಾಗುತ್ತಿತ್ತು.

"ಕಾಮವುಳ್ಳಲ್ಲಿ ಭಕ್ತಿಯಿಲ್ಲ, ಕ್ರೋದವುಳ್ಳಲ್ಲಿ ಭಕ್ತಿ ಇಲ್ಲ

....

....

ಅರಿಷಡ್ವರ್ಗವುಳ್ಳಲ್ಲಿ ಭಕ್ತಿ ಇಲ್ಲ, ಭಕ್ತಿವುಳ್ಳಲ್ಲಿ ಅರಿಷಡ್ವರ್ಗವುಳ್ಳಲ್ಲ,
ಈ ಅರಿಷಡ್ವರ್ಗ ಇಲ್ಲದವನೇ ಭಕ್ತ, ಇಂತಹ ಭಕ್ತ ದೇಹಿಕ ದೇವನು
ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರ."-1

ಉರಿಲಿಂಗ ಪೆದ್ದಿಗಳ ಈ ವಚನವು ಭಕ್ತನ ವ್ಯಕ್ತತ್ವ ಅರಿಷಡ್ವರ್ಗಗಳಿಂದ ಮುಕ್ತಿ ಹೊಂದಿದಾಗ ಮಾತ್ರ ಭಕ್ತನಾಗಲು ಅರ್ಹನಾಗಿರುತ್ತಾನೆ. ಇಂತಹ ಕಟ್ಟು ಪಾಡುಗಳನ್ನು ಮೀರಿನಡೆದಾತ ವಚನಕಾರರ ದೃಷ್ಟಿಯಲ್ಲಿ ಭವಿಯಾಗುತ್ತಾನೆ. ಹಾಗೂ ಗುರು, ಲಿಂಗ, ಜಂಗಮ ಸಿದ್ಧಾಂತಕ್ಕೆ ಬದ್ಧರಾದವರನ್ನು ಭಕ್ತರೆಂದು ಕರೆದರು. ಇವರು ಭಕ್ತಿಯಲ್ಲಿ ಏಕ ಮುಖವಾದ ನಿಷ್ಠೆ, ಪ್ರಾಮಾಣಿಕತನ, ಸತ್ಯದ ಪಾಲನೆಯನ್ನು ಮಾಡುವವರಾಗಿ ಇರಬೇಕಾಗಿತ್ತು. ಭವಿಯಾದವರು ಈ ನಿಯಮಗಳನ್ನು ಅನುಸರಿಸದಿದ್ದರೆ ಶರಣ ಸಿದ್ಧಾಂತದಿಂದ ದೂರವಿರಬೇಕಾಗಿತ್ತು. ಆ ಕಾರಣದಿಂದ

ಧಾರ್ಮಿಕ ವಲಯದಲ್ಲಿ ಭವಿ ಮತ್ತು ಭಕ್ತರ ಮಧ್ಯೆ ವೈರುಧ್ಯಗಳು ಕಂಡುಬರುತ್ತಿತ್ತು. ಇದರಿಂದ ಸಮಾಜದಲ್ಲಿ ಎರಡು ವರ್ಗಗಳು ಸೃಷ್ಟಿಯಾಗತೊಡಗಿದವು, ಸದಾಕಾಲ ತಾತ್ವಿಕ ಸಂಘರ್ಷಗಳು ನಡೆಯುತ್ತಿದ್ದ ಕಾರಣ ಧಾರ್ಮಿಕ ಕ್ರಾಂತಿಗೆ ಎಡೆಮಾಡಿಕೊಟ್ಟಿತು.

ಅರುಹು–ಕುರುಹು:

ಈ ಎರಡು ಪದಗಳು ಧಾರ್ಮಿಕ ಕ್ಷೇತ್ರದ ವೈರುಧ್ಯಗಳಾಗಿವೆ. ಏಕೆಂದರೆ ಅಂದಿನ ಕಾಲದಲ್ಲಿ 'ಲಿಂಗ'ದ ಕಲ್ಪನೆಯ ಬಗ್ಗೆ ಇದ್ದಂತಹ ವಚನಕಾರರ ನಿಲುವಾಗಿದೆ. ಅರುಹು ಎಂದರೆ ತಿಳಿವು, ತಿಳಿಸು, ಜ್ಞಾನದ ಸಂಕೇತವಾಗಿ ಬಳಸಲಾಗುತ್ತಿತ್ತು. ಕುರುಹು ಎಂದರೆ ರೂಪ, ಆಕಾರ, ಗುರುತು ಸಂಕೇತ ಎಂದು ಕರೆಯಲಾಗುತ್ತಿತ್ತು. ಈ ಎರಡು ಅಂಶಗಳು 'ಲಿಂಗ'ವನ್ನು ಕುರಿತಾದ ವಿಚಾರವಾಗಿದೆ. ಶರಣರು ಬಳಸಿದ ಲಿಂಗಕ್ಕೆ ವಿಶೇಷ ಅರ್ಥಗಳನ್ನು ಕೊಡಬಹುದಲ್ಲದೆ. ವಚನಕಾರರ ದೃಷ್ಟಿಯಿಂದ ನೋಡಿದರೆ. ಜ್ಞಾನ, ಗುರುತು, ಮುಂತಾಗಿ ಕರೆದಿರುವ ವಚನಗಳು ದೊರಕುತ್ತವೆ. ಈ ಕಳಗಿನ ವಚನ ಅರುಹು ಮತ್ತು ಕುರುಹುವಿನ ವಿಚಾರವನ್ನು ಉರಿಲಿಂಗ ಪೆದ್ದಿಯು ಈ ರೀತಿ ಹೇಳುತ್ತಾರೆ.

"...

ಅಂತರಂಗ ಬಹಿರಂಗ ಸರ್ವಾಂಗವೆಲ್ಲವೂ ಲಿಂಗವಾದ ಬಳಿಕ,
ಇಂತೀ ಶ್ರೀ ಗುರು ಕೊಟ್ಟ ಲಿಂಗವ ಬಿಟ್ಟು
ಬೇರೆ ಮತ್ತೆ ಆತ್ಮ ತತ್ವವ ವಿಚಾರಿಸಿ ನೋಡಬೇಕೆಂದು
ಪರಮಾತ್ಮನಲ್ಲಿ ಯೋಗವ ಮಾಡಿ ಯೋಗಿಗಳಾಗಿ ಮುಕ್ತರಾದೆವೆಂಬಿರಿ,
ಶಿವಶಿವಾ, ಆತ್ಮನು ಪರಮಾತ್ಮನು ಶ್ರೀ ಗುರುಸ್ವಾಮಿ ಒಂದು ಮಾಡಿ
ಇದೇ ನಿನ್ನ ನಿಜತತ್ವವನ್ನು ಅರುಹ ಹೇಳಿ ತೋರಿಸಿಕೊಟ್ಟ ಬಳಿಕ

...."–2

ಈ ವಚನವು ಕುರುಹನ್ನು ನಿರಾಕರಿಸಿ ಶಿವಜ್ಞಾನಿಯಾದವನು ಅನುಸರಿಸಬೇಕಾದ ನಿಜವಾದ ಅರುಹುವಿನಬಗ್ಗೆ ಹೇಳುತ್ತದೆ. ಅಂತರಂಗ–ಬಹಿರಂಗಗಳಲ್ಲಿ ಲಿಂಗದ ಕಲ್ಪನೆಯನ್ನು ಕಾಣುವ ವಿಚಾರವನ್ನು ವಚನ ಪ್ರತಿಪಾದಿಸುತ್ತದೆ. ಲಿಂಗದ ಕಲ್ಪನೆಯೊಳಗೆ ಕುರುಹು ಮತ್ತು ಅರುಹು ಎಂಬ ವಿಚಾರಗಳಲ್ಲಿ ಪರಸ್ಪರ ವೈರುಧ್ಯಗಳಿದ್ದರೂ ಆಧ್ಯಾತ್ಮ ಜ್ಞಾನದಲ್ಲಿ ಗ್ರಹಿಸಿದರೆ ಇವುಗಳ ಭೇದವನ್ನು ತಿಳಿಯಬಹುದು.

ಅಂಬಿಗರ ಚೌಡಯ್ಯನವರು 'ಕುರುಹಿಂಗೆ ಪೂಜೆಯಲ್ಲದೆ ಅರುಹಿಂಗೆ ಪೂಜೆಯುಂಟೆ' ಎಂಬ ಮಾತಿನಲ್ಲಿ ತಮ್ಮ ಗ್ರಹಿಕೆಯ ವಿಚಾರದಲ್ಲಿ ವಿರೋದಾಬಾಸಗಳು ಕಾಣುತ್ತವೆ. ಕುರುಹು ಸ್ಥಾವರ ಪೂಜೆಯ ಸಂಕೇತವಾದರೆ, ಅರುಹು ತ್ರಿಕರಣ ಶುದ್ಧ ಜಂಗಮರನ್ನು ಪ್ರತಿನಿಧಿಸುತ್ತದೆ. ಈ ಅಂಶಗಳಲ್ಲಿ ಆಧ್ಯಾತ್ಮಿಕ ವೈರುಧ್ಯಗಳನ್ನು ಕಾಣಬಹುದು.

ಸತಿ–ಪತಿ ಭಾವ: ಎಂಬ ಪದಗಳು ಕೂಡಾ ಸಾಮಾಜಿಕ ವೈರುಧ್ಯಕ್ಕೆ ಎಡೆಮಾಡಿಕೊಟ್ಟಿದೆ. ಸತಿ–ಪತಿ ಎಂಬ ವಿಚಾರಗಳು ಮನುಷ್ಯನಲ್ಲಿರುವ ಲಿಂಗ–ಭೇದವನ್ನು ಸೂಚಿಸುವ ಪದಗಳಾಗಿವೆ. ಹೆಣ್ಣು–ಗಂಡೆಂಬ ಭೇದ–ಭಾವಗಳು ಸನಾತನ ಕಾಲದಿಂದಲೂ ಕೌಟುಂಬಿಕ ಸಮಾಜದಲ್ಲಿವೆ. ಇದರಿಂದ ಸಾಂಸಾರಿಕ ಜೀವನದಲ್ಲಿ ಗಂಡಿಗೆ ಉನ್ನತ ಸ್ಥಾನ ಹೆಣ್ಣಿಗೆ ಸ್ಥಾನಮಾನಗಳಿದ್ದರೂ ಪುರುಷ ಪ್ರಧಾನದಲ್ಲಿ ಅವು ಜಾರಿಯಾಗಲಿಲ್ಲ. ಇದರಿಂದ ಅಂದಿನ ಸಮಾಜದಲ್ಲಿ ಲಿಂಗ ತಾರತಮ್ಯ ಉಂಟಾಗಿತ್ತು. ಸನಾತನ ಕಾಲದಿಂದಲೂ ಸಮಾಜದ ಮುಖ್ಯವಾಹಿನಿಯಲ್ಲಿ ಸ್ತ್ರೀಯರಿಗೆ ಅವಕಾಶವಿಲ್ಲದ ಕಾರಣ ಶರಣರು ತಮ್ಮ ಸಮಾಜದಲ್ಲಿ ಅವಕಾಶ ಕಲ್ಪಿಸಲು ಮುಂದಾದರು. ಆದ್ದರಿಂದ ತಮ್ಮ ಆರಾಧ್ಯ ದೈವನ ಪ್ರತಿರೂಪದಂತೆ ಅವರನ್ನು ಕಾಣುತ್ತಾರೆ.

ಪ್ರಾರಂಭಿಕ ಹಂತದಲ್ಲಿ ಸತಿ–ಪತಿ ಎಂಬ ಪದಗಳು ವಿವಾಹವಾದ ಸ್ತ್ರೀಯರಿಗೆ ಸತಿಯೆಂಬ ವಾಚಕವಾಗಿ ಕರೆಯಲಾಗುತ್ತಿತ್ತು. ವಿವಾಹವಾದ ಪುರುಷನಿಗೆ ಪತಿ ಎಂದು ಕರೆಯುತ್ತಿದ್ದರು ಶರಣಕ್ರಾಂತಿಯ ಪರಿಣಾಮವಾಗಿ ತಮ್ಮ ಆರಾಧ್ಯದೈವನ ಪ್ರತಿರೂಪವೆಂಬಂತೆ ಸತಿ–ಪತಿಯರನ್ನು ಕಾಣುತ್ತಾರೆ. 'ಸತಿ–ಪತಿಗಳೊಂದಾದ ಭಕ್ತಿ ಶಿವಂಗೆ ಹಿತಮಪ್ಪುದು'... ಎಂಬ ದೇವರ ದಾಸಿಮಯ್ಯನವರ ನುಡಿ ಮೇಲಿನ ವಿಚಾರಗಳಿಗೆ ಸ್ಪೂರ್ತಿಯಾಗಿದೆ. ಈ ಪ್ರೇರಣೆಯಿಂದ ಪುರುಷ ಮತ್ತು ಮಹಿಳೆಯರಲ್ಲಿದ್ದ ತಾರತಮ್ಯ ನೀತಿಯನ್ನು ಹೋಗಲಾಡಿಸಿತು. ಸಾಂಸಾರಿಕ ಬದುಕಿನಲ್ಲಿದ್ದ ಅಸಮಾನತೆಯನ್ನು ಕೂಡ ಹೋಗಲಾಡಿಸಲು ಯತ್ನಿಸಿತು ಎಂಬುದಕ್ಕೆ ಸಾಕ್ಷಿಯಾಗಿ 'ಮೊಲೆ ಮೂಡಿಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು'_ ಎಂಬ ದೈಹಿಕ ಬದಲಾವಣೆಯ ಮೇರೆಗೆ ಗುರುತಿಸುವುದನ್ನು ಬಿಟ್ಟು, ಗಂಡಿನಂತೆ ಹೆಣ್ಣು ಸಮಾನಳು ಎಂದು ತಿಳಿಸಿದರು. ಇಂತಹ ಅಲೋಚನೆಗಳು ಮುಂದಿನ ಸಮಾಜದ ಮೇಲೆ ಸಾಕಷ್ಟು ಪರಿಣಾಮ ಬೀರಿರುವುದನ್ನು ಗಮನಿಸಬಹುದಾಗಿದೆ? ಈ ಬಗೆಯ ಸನ್ನಿವೇಶಗಳು ಸಾಮಾಜಿಕ ವೈರುಧ್ಯಕ್ಕೆ ಕಾರಣವಾಗಿದೆ.

ವಚನಕಾರರಲ್ಲಿದ್ದ ಭಿನ್ನಆಹಾರ ಪದ್ದತಿಯಲ್ಲಿ ವೈರುಧ್ಯಗಳನ್ನು ಕಾಣಬಹುದು. ಇದಕ್ಕೆ ಪರಂಪರಾಗತವಾಗಿ ಬಂದಂತಹ ಅಹಾರ ವಿಭಿನ್ನತೆಯ ಪರಿಣಾಮವಾಗಿ ಸಮಾಜದಲ್ಲಿ ಮೇಲು-ಕೀಳು ಉಚ್ಚ-ನೀಚ, ಎಂಬ ಅಸಮಾನತೆಯು ಬಂದಿರಬಹುದೆಂದು ಊಹಿಸಬಹುದು. 'ಹೊಲಸು ತಿಂಬುವ ಹೊಲಯ'.. ಎಂಬ ಮಾತು ಆಹಾರ ವಿಭಿನ್ನತೆಯನ್ನು ತೋರಿಸುತ್ತದೆ. ಇಷ್ಟಲ್ಲದೇ ಆಹಾರದ ಕನಿಷ್ಟತೆ ಮತ್ತು ಶ್ರೇಷ್ಟತೆಯ ಬಗ್ಗೆ ಅಪವರ್ಗೀಕರಣದ ಕ್ರಿಯೆಗಳು ಪ್ರಾಚೀನ ಕಾಲದಿಂದಲೇ ನಡೆದು ಬರುತ್ತಿದ್ದುದ್ದನ್ನು ಗಮನಿಸಿದ ಶರಣರು ಆಹಾರ ಪದ್ಧತಿಯಲ್ಲಿ ಸಮಾನತೆಯನ್ನು ತರುವ ಪ್ರಯತ್ನ ಪಟ್ಟರು. ಶರಣ ಧರ್ಮದ ದೃಷ್ಠಿಯಿಂದ ಆಲೋಚಿಸ ಹೊರಟರೆ 'ಸಕಲ ಜೀವಿಗಳಿಗೆ ಲೇಸನೇ ಬಯಸುವುದು'..ಎಂಬ ಧರ್ಮದ ತಿರುಳನ್ನು ಆದರ್ಶದ ಹಿನ್ನಲೆಯಲ್ಲಿ ಪಾಲಿಸುತ್ತಾರೆ. ಪ್ರಾಣಿಗಳ ಹತ್ಯೆಯನ್ನು ಧರ್ಮಭಾಹಿರ ಆಚರಣೆಯೆಂದು ತಿರಸ್ಕರಿಸುತ್ತಾರೆ.

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಆಹಾರವೂ ಕೂಡ ಪ್ರಮುಖ ವಿಷಯವಾಗಿತ್ತು. ಕೊಂಡಗುಳಿ ಕೇಶೀರಾಜನ ಕಾಲದಲ್ಲಿ ಮಾಂಸಾಹಾರದ ಬಗ್ಗೆ ಅಷ್ಟೇನು ಕಟ್ಟು ಪಾಡುಗಳು ಇರಲ್ಲಿಲ್ಲ. ಆದರೆ, ಶರಣ ಸಂಸ್ಕೃತಿಯ ಸಂದರ್ಭದಲ್ಲಿ ಮಾಂಸಾಹಾರವು ಅವರವರ ಇಚ್ಚೆಯಂತೆ ನಿಷಿದ್ಧವಾಯಿತು. ಆದರ್ಶದ ನೆಲೆಯಲ್ಲಿ ವಚನಕಾರರು ಪರಿಪಾಲನೆಗೆ ತೊಡಗಿದರೆನ್ನಬಹುದು. "ಮಾಂಸಾಹಾರಕ್ಕೂ ಪರಿಶುದ್ಧತೆಗೂ ಅದು ಹೇಗೋ ವಿರೋಧವಿದೆಯೆಂಬ ಕಲ್ಪನೆ ಭಾರತೀಯರಲ್ಲಿ ನೆಲೆಯೂರಿಬಿಟ್ಟಿದೆ,, ಮಾಂಸಾಹಾರಿಗಳಾದವರು ಈಗಲೂ ವ್ರತ ಉತ್ಸವಗಳ ಕಾಲದಲ್ಲಾದರೂ ಮಾಂಸಾಹಾರವನ್ನು ನಿಷೇಧಿಸುವುದರ ಮೂಲಕ ಈ ಭಾವನೆಗೆ ಇಂಬು ಕೊಡುತ್ತಾರೆ, ಹಾಗೆ ನೋಡಿದರೆ ಪ್ರಾಚೀನಾರ್ಯರ ಕಾಲದಲ್ಲಿಯೇ ಈ ಭಾವನೆಯಿರಲಿಲ್ಲ. ಅತ್ಯಂತ ಶ್ರೇಷ್ಠವರ್ಣವೆನಿಸಿಕೊಂಡಿದ್ದ ಬ್ರಾಹ್ಮಣರು ಮಾಂಸಾಹಾರಿಗಳೇ ಆಗಿದ್ದರು, ಆಗ ಯಜ್ಞದಲ್ಲಿ ಬಲಿಯೂ ಅನಿವಾರ್ಯವಾಗಿದ್ದು, ಸಹಜವೂ ಆಗಿತ್ತು, ಆದರೆ ಬೌದ್ಧ ಮತದ ಪ್ರಾಬಲ್ಯದ ಕಾಲದಲ್ಲಿ ಮಾಂಸಾಹಾರವು ಅಪವಿತ್ರವೆಂಬ ಭಾವನೆ ಬೆಳೆದು ಬಂದಿತು. ಅವರನ್ನನುಸರಿಸಿ ಆವರೆಗೂ ಮಾಂಸಾಹಾರಿಗಳಾಗಿದ್ದ ಬ್ರಾಹ್ಮಣರೂ ಸಸ್ಯಾಹಾರಿಗಳಾಗಿ ಪರಿವರ್ತನೆಯಾದರೆಂಬ ಅಭಿಪ್ರಾಯ ಕೆಲವು ವಿದ್ವಾಂಸರದ್ದು.(ನೋಡಿ Shama shastri evolution of the Indian policy) ಹೀಗೆ ವಚನ ಚಳುವಳಿಯ ಕಾಲದಲ್ಲೂ ಮಾಂಸಾಹಾರವು ಕೀಳೆಂಬ ಭಾವನೆ ಪ್ರಚಲಿತವಾಯಿತು. ಒಟ್ಟಿನಲ್ಲಿ ಮೃದು ಭಾವನೆಗಳನ್ನು ಒತ್ತಲು ಪ್ರಯತ್ನಿಸಿದ ವಚನಕಾರರಿಗೆ ಸಾಮಾನ್ಯ ಜನರಿಂದ ಯಥೇಚ್ಚ ಸ್ವಾಗತ ದೊರಕಿತು." 1 ಆದಾಗ್ಯೂ ಅಂದಿನ ಸಮಾಜದ ನಾಗರೀಕ ಜೀವನದಲ್ಲಿ ಪ್ರಾಣಿ

ಹತ್ಯೆಯನ್ನು ನಿಲ್ಲಿಸಲ್ಲಿಲ್ಲ, ಬದಲಾಗಿ ತಾನು ದೈವವೆಂದು ನಂಬಿರುವ ಪ್ರಾಣಿಗೆ ಹತ್ಯೆಯಲ್ಲಿ ವಿನಾಯಿತಿ ಕೊಟ್ಟು, ಇನ್ನುಳಿದ ಪ್ರಾಣಿಗಳನ್ನು ಕೊಂದು ತಿನ್ನವುದು ಅಪರಾಧವಲ್ಲ ಎನ್ನುವ ಪರಿಸ್ಥಿತಿಯಿತ್ತು ಆದಕಾರಣ ಪ್ರತಿಯೊಂದು ಆಚಾರ–ವಿಚಾರ ಮುಂತಾದವುಗಳನ್ನು ವಾಸ್ತವಿಕ ನೆಲೆಗಟ್ಟಿನ ಮೇಲೆ ಚಿಂತಿಸುವ ಶರಣರು, ಅವರಲ್ಲಿಯೇ ಇದ್ದಂತಹ ಆಹಾರ ಪದ್ಧತಿಯ ಬಗೆಗಿನ ವೈರುಧ್ಯಾಗಳನ್ನು ಕಾಣಬಹುದು. ಈ ದೃಷ್ಟಿಯಲ್ಲಿ ನೋಡುವುದಾದರೆ ಅಂಬಿಗರ ಚೌಡಯ್ಯನವರ ವಚನದಲ್ಲಿ ಆಹಾರ ಪದ್ಧತಿಯ ವೈರುಧ್ಯಗಳನ್ನು ಕಾಣಬಹುದು.

" ಕುರಿ ಕೋಳಿ ಕಿರು ಮೀನ ತಿಂಬರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬರ
ಊರಿಂದ ಹೊರಗಿರು ಎಂಬರು
ಬೊಕ್ಕಣ , ಸಿದಿಕೆ,ಬಾರುಕೋಲು, ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು
ಈ ಬದ್ಧಲಿಕೆಯೊಳಗಣ ತುಪ್ಪವ ಮಾಡಿ
ತಿಂಬ ಗುಜ್ಜ ಹೊಲೆಯರ ಕಂಡನೆ
ಉದ್ದನ ಚಮ್ಮಾಳಿಗೆಯ ತಕ್ಕೊಂಡು
ಬಾಯ ಕೊಯ್ಯುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ"-3

ಗೋವಿನ ಚರ್ಮದಿಂದ ಮಾಡಿದ ಬದ್ದಲಿಕೆಯಲ್ಲಿ ತುಪ್ಪವ ತಿನ್ನುವ ವ್ಯಕ್ತಿ ಗೋವನ್ನು ಕಡಿಯುವವನನ್ನು ಊರ ಹೊರಗಿರು ಎಂದು ಹೇಳುತ್ತಾನೆ. ತನ್ನ ದೇವರಿಗೆ ಆ ಚರ್ಮ ದಿಂದ ಮಾಡಿದ ಬಾರುಕೋಲು ಸಿದಿಕೆಗಳನ್ನು ತಾಯಾರಿಸಿಕೊಂಡು ದೇವರ ಸಂತೃಪ್ತಿಗೊಳಿಸುವ ಈತ, ಕಿರು ಮೀನು ಗಳನ್ನು ತಿನ್ನುವನು ಯಾವುದೇ ಹತ್ಯೆದೋಷ ಇಲ್ಲವೆನ್ನುತ್ತಾನೆ. ಜೊತೆಗೆ ತಮ್ಮವನೆಂದು ಬಗೆಯುತ್ತಾನೆ; ಚರ್ಮವ ಬಳಸುವ ಈತ ಅದೇ ಪ್ರಾಣಿಯ ಮಾಂಸ ತಿಂದರೆ ಮೂಗು ಮುರಿಯುತ್ತಾನೆ ಇಂತಹವರನ್ನು ಅಂಬಿಗರ ಚೌಡಯ್ಯ ತನ್ನ ವಚನದಲ್ಲಿ ಬಾಯನ್ನು ಕುಯ್ಯುತ್ತೇನೆ ಎನ್ನುತ್ತಾನೆ. ಯಾವುದೇ ಆಹಾರದಲ್ಲಿ ಶ್ರೇಷ್ಠ, ಕನಿಷ್ಠ ಇಲ್ಲವೆಂಬುದನ್ನು ಪ್ರತಿಪಾದಿಸುವ ವಚನಕಾರರ ವಚನಗಳಲ್ಲಿಯೇ ಸಮಾಜಿಕ ವೈರುಧ್ಯಗಳನ್ನು ಕಾಣಬಹುದು.

ಹೀಗೆ ಆಹಾರ ಪದ್ಧತಿಯಿಂದ ಉಂಟಾದ ವೈಮನಸ್ಸುಗಳನ್ನು ಬೆಸೆಯುವ ಸಲುವಾಗಿ ಹಾಗೂ ಸಾಮಾಜಿಕ ಜೀವನದಲ್ಲಿ ಬಿರುಕುಂಟಾಗುವುದನ್ನು ತಡೆಯಲು, ಬಸವಣ್ಣನವರು ಸಹಬಾಳ್ವೆಯನ್ನು ತರುವ ನಿಟ್ಟಿನಲ್ಲಿ ಈ ವಚನದೊಂದಿಗೆ ಸ್ಪಷ್ಟೀಕರಿಸುತ್ತಾರೆ.:

"ಇವನಾರವ ಇವನಾರವ ಇವನಾರವನೆಂದಿರಯ್ಯಾ
ಇವ ನಮ್ಮವ, ಇವ ನಮ್ಮವ ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯಾ"–4

ಒಂದು ವಚನ ಆಹಾರ ಭಿನ್ನತೆಯಿಂದ ಜನಸಮುದಾಯವನ್ನು ವರ್ಗೀಕರಿಸಿದರೆ ಇನ್ನೊಂದು ವಚನ ಯಾವುದೇ ಭೇದಕ್ಕೆ ಅವಕಾಶವಿಲ್ಲದೇ ಒಂದುಗೂಡಿಸುವ ಪ್ರಯತ್ನ ಮಾಡಿದೆ. ಇಂತಹ ವಿಚಾರಗಳ ಜೊತೆಯಲ್ಲಿ ಧಾರ್ಮಿಕ ವೈರುಧ್ಯವು ಪ್ರಮುಖವಾದ್ದುದ್ದು. ಅವುಗಳಲ್ಲಿ ಮುಖ್ಯವಾಗಿ ಸ್ಥಾವರಲಿಂಗ–ಇಷ್ಟಲಿಂಗ ಕಲ್ಪನೆಗಳು ಕಲ್ಯಾಣ ಕ್ರಾಂತಿಯ ಸನ್ನಿವೇಶದಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಧ್ಯೇಯ ವಾಕ್ಯದೊಂದಿಗೆ ಸನಾತನ ಕಾಲದ ಪ್ರಗತಿಗೆ ಮಾರಕವಾಗಿದ್ದ ವಿಚಾರಗಳನ್ನ ತಿರಸ್ಕರಿಸುತ್ತಾರೆ. ಜಂಗಮ ಶೀಲಗುಣವುಳ್ಳ ವಿಚಾರಗಳನ್ನು ಪುರಸ್ಕರಿಸುತ್ತಾರೆ.

ಇಂಥ ಸಂದರ್ಭದಲ್ಲಿ ಧರ್ಮದಲ್ಲಾದ ಬದಲಾವಣೆ ಕೆಲವು ವೈರುದ್ಯಗಳನ್ನು ಸೃಷ್ಟಿ ಮಾಡುತ್ತದೆ. ಹಾಗೆಯೇ ಸನಾತನ ಧರ್ಮದಲ್ಲಿದ್ದ ಸ್ಥಾವರ ಲಿಂಗದ ಆರಾಧನೆ, ಶರಣರ ಇಷ್ಟಲಿಂಗ ಪ್ರತಿಪಾದನೆಗಳಲ್ಲಿ ಯಾವುದನ್ನು ಸ್ವೀಕರಿಸಬೇಕು ಎಂಬ ಗೊಂದಲದಲ್ಲಿ ಶ್ರೀ ಸಾಮಾನ್ಯನು ಉಳಿಯುತ್ತಾನೆ. ಈ ಎರಡಂಶಗಳ ಆಯ್ಕೆ ವಿಚಾರ ಎದುರಾದಾಗ ಶರಣರು ಇಷ್ಟಲಿಂಗದ ಮಹತ್ವ ಹೇಳಿ ಲಿಂಗದೀಕ್ಷೆ ನೀಡುತ್ತಾರೆ. ನಂತರದಲ್ಲಿ ಲಿಂಗದೀಕ್ಷೆ ಸ್ವೀಕರಿಸಿದ ಮೂಲ ಸನಾತನವಾದಿಗಳು ತಮ್ಮ ಪೂರ್ವಾಶ್ರಮವನ್ನು ಬಿಡದೆ, ಹೊಸತನ್ನು ಸ್ವೀಕರಿಸಿ ಸರಿಯಾಗಿ ಆಚರಣೆಗೆ ತರದೆ ದ್ವಂದಲ್ಲಿರನ್ನು ಕಂಡು ಹೇಳುವ ವಚನವಿದು.

" ಕರದಲ್ಲಿ ಲಿಂಗವ ಪಿಡಿದುಕೊಂಡು
ಕಣ್ಣುಮುಚ್ಚಿ ಸರಜಪಮಾಲೆಯ
ಬೆರಳಿಂದ ಎಳೆವೆಳೆದು ಎಣಿಸುತ್ತಾ
ಗುರುಮೂರ್ತಿಯ ಧ್ಯಾನಿಸುತ್ತಾ ಕಂಡೆನೆಂಬುತ್ತಾ

ಇರುವರೆ ಮೂಳರಿರಾ. ?
ನಿಮ್ಮಗೆಲ್ಲಿಯದೋ ಗುರು ಧ್ಯಾನ ?
ವರಪರವಸ್ತುವಿಂಗೆ ಸರಿ ಎನಿಸಿಕೊಂಬ ಗುರುಸ್ವಾಮಿ
ನಿಮ್ಮ ನೆರೆಹೊರೆಯ ಸರಿಸಮೂಹ ಗ್ರಾಮದಲ್ಲಿರಲು
ಅವರನ್ನು ಲೆಕ್ಕಿಸದೇ ಉದಾಸೀನವ ಮಾಡಿಕೊಂಡು
ನಿನ್ನ ಉಂಬ ಬರುವ ಸಿರಿ ಸಂಪತ್ತಿನೊಳು ಅವರನು ಸತ್ಕರಿಸದೇ
ಕರದಲ್ಲಿ ನೋಡಿ ಕಂಡಿಹೆನೆಂದು
ಶಿರವಂಬಿಗಿದು, ಕಣ್ಣನೆ ತೆರೆಯದೇ
ಸ್ವರದಲಾಗ ಪಿಟಿ ಪಿಟಿ ಎನ್ನತ್ತಾ ಅರಿತೆವೆಂಬ ಅರಿವಿಂಗೆ ಶಿರಮಾಗಿ, ಬೆರಗಾಗಿ
ನಗುತಿರ್ದ ನಮ್ಮ ಅಂಬಿಗರ ಚೌಡಯ್ಯ" -5

ಇಷ್ಟಲಿಂಗ ಆರಾಧನೆ ರೂಢಿಯಲ್ಲಿತ್ತಾದರೂ ಆ ಪೂಜೆಯ ವಿಧಿ ವಿಧಾನಗಳು ಕ್ರಮಬದ್ಧವಾಗಿ ನಡೆಯದಿದ್ದಾಗ ತೋರಿಕೆಯ ವಿಷಯವಾಗಿಯೇ ಬಂದಾಗ ಅದನ್ನು ಅಂಬಿಗರ ಚೌಡಯ್ಯ ಖಂಡಿಸುತ್ತಾನೆ. ಹೀಗೆ ಢಾಂಬಿಕ ವಿಚಾರಗಳನ್ನು ತಿರಸ್ಕರಿಸಿ ವಾಸ್ತವದ ನೆಲೆಯಲ್ಲಿ ನೋಡಬಯಸುತ್ತಾರೆ. ಇಲ್ಲಿ ಕಂಡು ಬರುವ ಅಂಶವೆಂದರೆ ಸ್ಥಾವರ ಲಿಂಗ ತಿರಸ್ಕರಿಸಿ ಕರಲಿಂಗಕ್ಕೆ ಲಿಂಗದ ಕಲ್ಪನೆ ಬಂದಾಗ ಅಲ್ಲಿ ಮತ್ತೆ ಸ್ಥಾವರವಾಗುವುದನ್ನು ತಡೆಯಲು ಈ ಮಾತನ್ನು ಹೇಳುತ್ತಾರೆ. ಏಕಕಾಲದಲ್ಲಿಯೇ ಸ್ಥಿರ ಮತ್ತು ಚಲನಶೀಲ ಸಂಸ್ಕೃತಿಯ ವೈರುಧ್ಯಗಳು ಕಂಡು ಬರುತ್ತವೆ.

" ತನುವ ಕೊಟ್ಟೆನೆಂದು ನುಡಿದು, ಗುರುವಚನಕ್ಕೆ ದೂರವಾದೆ
ಮನವ ಕೊಟ್ಟೆನೆಂದು ನುಡಿದು ಲಿಂಗ ಮುಖಕ್ಕೆ ದೂರವಾದೆ
ಧನವ ಕೊಟ್ಟೆನೆಂದು ನುಡಿದು ಜಂಗಮ ಮುಖಕ್ಕೆ ದೂರವಾದೆ
ಕೂಡಲಸಂಗಮದೇವಯ್ಯಾ
ನಿಮಗೆ ಮಾಡಿದನೆಂದು ನುಡಿದು ಕೆಟ್ಟ ಕೇಡಿಂಗೆಕಡೆಯಿಲ್ಲ." -6

ಗುರು, ಲಿಂಗ, ಜಂಗಮಕ್ಕೆ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಬಹಳ ಮಹತ್ವದ ಸ್ಥಾನವಿತ್ತು. ಗುರು, ಲಿಂಗ, ಜಂಗಮಕ್ಕೆ ವಿಶೇಷವಾದ ಸ್ಥಾನಮಾನಗಳನ್ನು ಶರಣರು ಕೊಟ್ಟಿದ್ದರು. ಆ ಕಾರಣವಾಗಿಯೇ ತಮ್ಮ ಸಮರ್ಪಣಾ ಭಾವ ದೃಷ್ಟಿಯಿಂದ ತನು, ಮನ, ಧನವ, ತ್ರಿವಿಧಕ್ಕೆ ಸಂಪೂರ್ಣ ಅರ್ಪಿಸಿದ್ದೇನೆಂದು ನುಡಿದು ದೂರವಾಗುತ್ತಿರುವುದನ್ನು ನೋಡಿ ಈ ರೀತಿ ಹೇಳುತ್ತಾರೆ.

ಸಾಮಾಜಿಕ ಕೆಲಸಗಳಲ್ಲಿ ತಮ್ಮನ್ನು ಸಮರ್ಪಕವಾಗಿ ಅರ್ಪಿಸಿಕೊಳ್ಳಬೇಕೆಂಬ ಆಶಯವಾಗಿದೆ. ಕಲ್ಯಾಣ ಕ್ರಾಂತಿ ಸಂಭವಿಸುವುದಕ್ಕಿಂತ ಮುಂಚೆ ಗುರು ಲಿಂಗ ಜಂಗಮವು ಸಮಾಜದ ಏಳಿಗೆಗಿಂತ ವೈಯಕ್ತಿಕ ನೆಲೆಯಲ್ಲಿಯೇ ಬಳಕೆ ಮಾಡುತ್ತಿರುವ ವಿಷಯಗಳಾಗಿದ್ದವು. ನಂತರದಲ್ಲಿ ಇವುಗಳು ಸಾರ್ವತ್ರೀಕರಣಗೊಂಡು ಜನಮುಖಿಯಾಗಿ ಕಾರ್ಯನಿರ್ವಹಿಸುವಂತೆ ಕಲ್ಯಾಣಕ್ರಾಂತಿ ಪ್ರೇರೇಪಿಸುತ್ತದೆ.

ಇಂತಹ ಪ್ರಮುಖವಿಚಾರಗಳನ್ನೊಳಗೊಂಡ ಸಂದರ್ಭದಲ್ಲಿ ಕ್ರಿಯಾಶೀಲ ಸೈಧ್ದಾಂತಿಕ ಚಿಹ್ನೆ ಎಂಬಂತಿರುವ ಲಿಂಗ ಕಲ್ಪನೆಯ ಬಗ್ಗೆ ಹೇಳುವುದು ಸೂಕ್ತವೆನಿಸುತ್ತದೆ.

5:1 ಸೈದ್ಧಾಂತಿಕ ಚಿಹ್ನೆ ಮತ್ತು ಸಮೂಹ ಹೋರಾಟ (ಲಿಂಗ ಮತ್ತು ಶರಣರ ಸಮೂಹ):

ಯಾವುದೇ ಒಂದು ಕ್ರಾಂತಿ ಸಂಭವಿಸಬೇಕಾದರೆ ಸಾಮಾಜಿಕ ಅಸಮಾನತೆಯು ಕಾರಣವಿರುತ್ತದೆ. ಕಾರಣಗಳನೇಕ ಇದ್ದರೂ ಬದಲಾವಣೆಯನ್ನು ತರಬೇಕಾದರೆ ಸಾಮೂಹಿಕವಾಗಿ, ಸಾಮಾಜಿಕವಾಗಿ ಪರಿಣಾಮವನ್ನುಂಟು ಮಾಡಲು ಅಥವಾ ಜನಸಮೂಹವನ್ನು ಪರಿವರ್ತನೆ ಮಾಡಲು ಚಳುವಳಿಗೆ ಒಂದು ಸೈದ್ಧಾಂತಿಕತೆ ಮತ್ತು ಚಿಹ್ನೆಗಳು ಅವಶ್ಯವೆನಿಸುತ್ತದೆ. ಹನ್ನೆರಡನೆಯ ಶತಮಾನದ ಸಂದರ್ಭದಲ್ಲಿ ಕಲ್ಯಾಣದಲ್ಲಿ ನಡೆದ ಕ್ರಾಂತಿಯ ಸನ್ನಿವೇಶದಲ್ಲಿ ಶರಣರು ಬಳಸಿದ ಸೈದ್ಧಾಂತಿಕ ಚಿಹ್ನೆ ಅಂದರೆ ಕ್ರಾಂತಿಯನ್ನು ಪ್ರತಿನಿಧಿಸುವ ಸಾಮೂಹಿಕ ವಿಚಾರವನ್ನು ಕಟ್ಟಿಕೊಡುವ ವಿಚಾರಗಳನ್ನು ಸಾಂಕೇತಿಕವಾಗಿ ಬಳಸುವುದು ಅನಿವಾರ್ಯವಾಗಿತ್ತು. ಆ ಚಿಹ್ನೆಯೇ 'ಇಷ್ಟಲಿಂಗ' ದ ಹೆಸರಿನಲ್ಲಿ ನಿರ್ಧರಿತವಾಗುತ್ತದೆ. ಈ ಕಲ್ಪನೆಯಿಂದಲೇ ಸರ್ವವೂ ನಡೆಯುತ್ತದೆಂಬ ದೈವಿಕ ಭಾವನೆಯನ್ನು ತಾಳುತ್ತಾರೆ.

ಕ್ರಾಂತಿಯನ್ನು ರೂಪಿಸುವಾಗ ಅದರ ವಿಧಿವಿಧಾನಗಳನ್ನು ಸಾಮಾಜಿಕ ಪ್ರಯೋಗಕ್ಕೆ ಒಳಪಡಿಸುವಲ್ಲಿ ಇಂತಹ ತಂತ್ರಗಾರಿಕೆ ಅಗತ್ಯವೆನಿಸುತ್ತದೆ. ಅಂದಿನ ಜನರಲ್ಲಿದ್ದ ಧಾರ್ಮಿಕ ಮನೋಭಾವ ಹೆಚ್ಚು ಇದ್ದುದರಿಂದ ಧರ್ಮವನ್ನು ಸಮಾಜದ ಕೊಳೆ ತೊಳೆಯುವ ಸಾಮಾಜಿಕ ಅಸ್ತ್ರವಾಗಿ ಬಳಸುವುದರಲ್ಲಿ ಸಂದೇಹವಿಲ್ಲ ಎಂದು ಹೇಳಬಹುದು. ಸೈದ್ಧಾಂತಿಕ ಜವಾಬ್ದಾರಿಯ ಹೊತ್ತು ಸಾಮಾಜಿಕ ಆಂದೋಲನ ರೂಪುಗೊಳ್ಳುವ ಹೊತ್ತಿನಲ್ಲಿ 'ಲಿಂಗ' ದ ಚಿಹ್ನೆಯೊಂದು ಸಾಮಾಜಿಕ ತಾರತಮ್ಯ ನೀತಿ ತೋರದಿರುವ ಹಾಗೆ ಮಾಡಬೇಕಿತ್ತು. ಸಮಾಜದಲ್ಲಿ ಹೆಣ್ಣುಗಂಡು

ಭೇದವ ಮಾಡದೇ ಅಭೇದ ರೂಪವಾಗಿ ಕ್ರಿಯಾಶೀಲವಾಗಿರುವ ಜಂಗಮ ಸ್ವರೂಪವನ್ನು ತಮ್ಮ ಸೈದ್ಧಾಂತಿಕ ಚಿಹ್ನೆಯಾಗಿ ಸ್ವೀಕರಿಸಿದರು ಎಂದು ತಿಳಿಯುತ್ತದೆ.

ಆ ಚಿಹ್ನೆಯ ಮೂಲಕ ಕಲ್ಯಾಣ ಕ್ರಾಂತಿಯ ಸಾಂಸ್ಕೃತಿಕ ಇತಿಹಾಸವನ್ನು ನೋಡಹೊರಟರೆ ಚಿಹ್ನೆಯೆಂದು ಕರೆದಿರುವ 'ಲಿಂಗ' ದ ಬಗ್ಗೆ ತಿಳಿಯುವುದು ಮೊದಲಿಗೆ ವಚನಕಾರರ ದೃಷ್ಟಿಯಲ್ಲಿ ತಿಳಿಯುವುದು ಅನಿವಾರ್ಯವಾಗುತ್ತದೆ.

" ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂಧ ಅತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದ ಅತ್ತತ್ತ ನಿಮ್ಮ ಶ್ರೀಮಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ, ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ." -7

ಅಗಮ್ಯ, ಅನಾದಿ, ಆಳ, ನಿರಾಳಗಳನ್ನು ಮೀರಿದ್ದು, ಸರ್ವಮಯವಾದದ್ದು. ಜಗತ್ತಿನ ಆಗು-ಹೋಗುಗಳು ಈ ಸ್ವರೂಪದಿಂದಲೇ ಆಗಿರುವಂತಹದ್ದು ನಂಬಿ ಶರಣ ಇದರ ಮಹತ್ವದ ಬಗ್ಗೆ ತಿಳಿದು ಹೋರಾಟದ ರೂಪರೇಷೆಗಳನ್ನು ತಿಳಿಸಹೊರಟರು. ಹಿಂದಿನ ಕಾಲದಲ್ಲಿ ಲಿಂಗಸ್ವರೂಪದ ಕಲ್ಪನೆ ಹೇಗಿತ್ತೆಂದರೆ, ದೇವರು ಸರ್ವಾಂತರ್ಯಾಮಿ ಆಗಿದ್ದಾನೆಂದು ಅರಿತು ಮೂರು ಲೋಕದೊಳಗಿರುವ ದೇವನಿರುವಿಕೆಯನ್ನು ಗ್ರಹಿಸಿದ್ದಾರೆ. ಅಂದಿನ ಕಾಲದ ಜನರಲ್ಲಿದ್ದ ನಂಬಿಕೆಗಳನ್ನು ತಿಳಿದು ತಮ್ಮ ಆರಾಧ್ಯ ದೈವನ ವ್ಯಾಪ್ತಿಯನ್ನು ವಿಸ್ತೃತವಾಗಿ ಹೇಳುತ್ತಾರೆ. ಪೂರ್ವಿಕರು ಹೇಳುವ ಪ್ರಕಾರ ಶಿವನು ಗುಡ್ಡ-ಕಾಡುಗಳಲ್ಲಿ, ಎತ್ತರವಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾನೆ ಎಂಬ ನಂಬಿಕೆಯಿದೆ. ತಮ್ಮ ಆರಾಧ್ಯ ದೈವನ ಇರುವಿಕೆಯ ಸ್ಥಳವನ್ನೇ ಕೈಲಾಸವೆಂದು ಭಾವಿಸಿರಬೇಕು. ಆ ಕಾರಣದಿಂದ ಅಲ್ಲಲ್ಲಿ ದೇವಾಲಯಗಳ ನಿರ್ಮಾಣ, ಪೂಜೆ-ಪುನಸ್ಕಾರ ಪ್ರಾರಂಭವಾಗಿರಬೇಕು. ಕಲ್ಯಾಣ ಕ್ರಾಂತಿಯ ಹೊತ್ತಿಗೆ ದೇವಾಲಯದ ಪೂಜೆ ಪುನಸ್ಕಾರಗಳು ಪುರೋಹಿತ ಶಾಹಿಯ ಹಿಡಿತದಲ್ಲಿದ್ದವು. ಇವುಗಳ ಪೋಷಣೆಗೆ ಶಾಸ್ತ್ರ, ಪುರಾಣ, ವೇದ-ಉಪನಿಷತ್ತು ಪ್ರೇರಣೆ ನೀಡಿದವು. ಇದರಿಂದ ಧಾರ್ಮಿಕ ವಲಯವು ಉಳ್ಳವರ ಸ್ವತ್ತಾಗುವುದಕ್ಕೆ ಪ್ರಾರಂಭವಾಯಿತು. ಹಾಗಾಗಿ ಶೋಷಿತ ಸಮುದಾಯಗಳು ಧಾರ್ಮಿಕ ಕ್ಷೇತ್ರದಿಂದ

ದೂರ ಉಳಿಯತೊಡಗಿದವು. ಕೆಳ ಸಮುದಾಯಗಳಲ್ಲಿ ಇದ್ದಂತಹ ಜಿಡ್ಡುಗಟ್ಟಿದ ವಾತಾವರಣದಿಂದ ಮುಕ್ತಿಹೊಂದಲು ಹೊಸ ಧರ್ಮದ ಅನಿವಾರ್ಯತೆಯಿತ್ತು.

ಬಸವಾದಿ ಪ್ರಮಥರು ಕಳೆಗುಂದಿದ ಧರ್ಮಕ್ಕೆ ಹೊಸರೂಪವನ್ನು ಕೊಡಲು ಪ್ರಾರಂಭಿಸಿದರು. 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯ' ಎಂಬ ಮಾತಿನೊಂದಿಗೆ ಸನಾತನ ಕಾಲದ ಧಾರ್ಮಿಕ ನಂಬಿಕೆಗಳನ್ನು ತಿರಸ್ಕರಿಸಿ ಇಷ್ಟಲಿಂಗವೆಂಬ ಚಿನ್ಹೆಯ ಮೂಲಕ ಧರ್ಮ ಸುಧಾರಣೆ ಹಾದಿಯನ್ನು ತಿಳಿದರು. ಏಕೆಂದರೆ ಆದಿಕಾಲದಿಂದಲೂ ಜನರ ನಂಬಿಕೆಗಳಲ್ಲಿ ಲಿಂಗದ ಪರಿಕಲ್ಪನೆಯು ಈ ರೀತಿಯಿತ್ತು. ಅಂದರೆ ಲಿಂಗವನ್ನು ಮರಳಿನಲ್ಲಿ, ಜಲ, ಬಂಡೆ ಪ್ರದೇಶಗಳಲ್ಲಿ ಪೂಜಿಸುತ್ತಿದ್ದರೆಂದು ತಿಳಿಯುತ್ತದೆ. ಮರಳಿನಾಕೃತಿಯ ಅಸ್ಪಷ್ಟತೆಯಿಂದ ಕಲ್ಲು ಲಿಂಗಗಳು ಹುಟ್ಟಿರಬೇಕು. ಇದರ ಜೊತೆಗೆ ಅಕಾಶವೆಂಬ ಲಿಂಗ ಕಲ್ಪನೆಯು ಜನರ ಮನಸ್ಸಿನಲ್ಲಿ ಇದ್ದವು. ಆ ಕಾರಣದಿಂದಲೇ ಲಿಂಗದ ಮೇಲೆ ನೀರೆಯುವುದು, ಹಾಲನೆರೆಯುವುದು ನಂತರದ ದಿನಗಳಲ್ಲಿ ರೂಢಿಗೆ ಬಂದವು. ಇದಕ್ಕೆ ಪೂರಕವೆಂಬಂತೆ " ಶಿವನು (ಲಿಂಗ) ಅಭಿಷೇಕಪ್ರಿಯನೆಂಬ ಕಲ್ಪನೆಯಿಂದ ಆಕಾಶ ಮತ್ತು ಮಳೆ. ಇವುಗಳ ಪರಸ್ಪರ ಸಂಕೇತವೆಂದು ಊಹಿಸಬಹುದು. ವೈಶೇಷಿಕ ದರ್ಶನದಲ್ಲಿ ಆಕಾಶಕ್ಕೆ 'ಲಿಂಗ' ಎಂದು ಹೇಳಿದೆ. "ನಿಷ್ಕ್ರಮಣಂ ಪ್ರವಶನಮಿತ್ಯಾಕಾಶಸ್ಯ ಲಿಂಗ".(2–1–10). ಆಕಾಶದ ಗುರುತೇ ಮೊದಲು ಲಿಂಗವಾಗಿ ಪೂಜೆಗೊಂಡಿತು. ಇದು ಭೌತಿಕ ಪೂಜೆ. ಎರಡನೆಯದಾದ ಪಿತೃಪೂಜೆ ಅಥವಾ ವಿಭೂತಿಪೂಜೆಗೆ ಬಂದಾಗ ಶಿವರೂಪವನ್ನು ಹೊಂದಿತು. ವಿಭೂತಿ ಪೂಜೆಯಲ್ಲಿ ಸರ್ವವ್ಯಾಪ್ತಿ ಪರಮಾತ್ಮನ ಪೂಜೆಯಾಯಿತು. "ಲೀನಾರ್ಥಗಮಕಂ ಚಿಹ್ನಂ ಲಿಂಗಮತ್ಯಭಿಧೀಯತೆ" ಅವಶ್ಯಕವಾಗಿರುವ ಜ್ಞಾನವನ್ನುಂಟು ಮಾಡಿಕೊಡುವುದಕ್ಕೆ ಲಿಂಗ ಎಂದೂ ಶಿವಲಿಂಗವೆಂದರೆ ಶಿವನ ಗುರುತು ಎಂದು ಅರ್ಥವೇ ವಿನಾ ಬೇರೆ ಏನೂ ಅಲ್ಲ." -7 ಇಷ್ಟೇ ಆದರೆ ಲಿಂಗದ ಇತಿಹಾಸ ತಿಳಿಯುವ ಗೋಜಿಗೆ ಹೋಗಬೇಕಿರಲಿಲ್ಲ. ಶಿವ, ಲಿಂಗ ಚಿನ್ಹೆಯೊಳಗೆ ಹೇಗೆ ಬಂದನೆಂಬುದು ತಿಳಿಯುವುದು ಕಷ್ಟಸಾಧ್ಯ.

ಆದರೂ ಆಧ್ಯಾತ್ಮಿಕ ಮನೋಭಾವದಿಂದ ಲಿಂಗಕ್ಕೆ ಹೊಸಪರಿಕಲ್ಪನೆ ಕೊಡುವುದಾಗಿತ್ತು. ಹೀಗೆ ಕೊಟ್ಟನಂತರ ಜನಸಾಮಾನ್ಯರಲ್ಲಿದ್ದ ಸನಾತನ ಧಾರ್ಮಿಕ ಭಾವನೆಗಳನ್ನು ಹೋಗಲಾಡಿಸುವುದು ಕಲ್ಯಾಣ ಕ್ರಾಂತಿಗೆ ಅವಶ್ಯಕವಾಗಿತ್ತು. ಆಗಾಗಿ ಲಿಂಗದ ಅಭೇದ ರಹಸ್ಯವನ್ನು ತಿಳಿದು ಜನಸಮುದಾಯವನ್ನು ತಮ್ಮೊಡನೆ ಕರೆದೊಯ್ಯಲು ಲಿಂಗದ ಹಿನ್ನಲೆಯನ್ನು ತಿಳಿಯುವುದು

ಅನಿವಾರ್ಯವಾಗಿತ್ತು. ಅದರ ಜೊತೆಯಲ್ಲಿ ಲಿಂಗ ಆಚಾರ-ವಿಚಾರಗಳ ಜೊತೆಗೆ ಸಾಮೂಹಿಕ ಹೋರಾಟದ ಸ್ಪಷ್ಟ ಕಲ್ಪನೆ ಶರಣರಲ್ಲಿತ್ತು ಎಂಬುದನ್ನು ಮನಗಾಣಬಹುದು. ಶೈವಧರ್ಮದಲ್ಲಿ 'ಲಿಂಗ' ದ ಮಹತ್ವವನ್ನು "ಶೈವಸಾಹಿತ್ಯದಲ್ಲಿ ಲಿಂಗವನ್ನು ಬೆಳಕಿನ ಕಂಬವೆಂದು ವರ್ಣಿಸಿದ ಬ್ರಹ್ಮ, ವಿಷ್ಣುಗಳಿಬ್ಬರೂ ಜ್ಯೋತಿರ್ಲಿಂಗದ ತುದಿಬುಡಗಳನ್ನು ಕಾಣಹೊರಟು ಪ್ರಯತ್ನ ಮಾಡಿ ಕಾಣಬಾರದೇ ಸೋತು ಹೋದರೆಂಬ ಪುರಾಣಕಥೆ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ವೀರಶೈವ ಶರಣರು ಅದನ್ನು ಈ ಅರ್ಥದಲ್ಲಿ ತಿಳಿದು ಕೊಂಡಿದ್ದರು. ಅವರಿಗೆ ಲಿಂಗವು ಪರಶಿವನ ಪ್ರತ್ಯಕ್ಷರೂಪ, ಪರಬ್ರಹ್ಮ ಜ್ಯೋತಿಗೇ ಜ್ಯೋತಿಯಾದ ಪರಂಜ್ಯೋತಿ, ನಿರಂತರವಾದ ಪರಮಾನಂದ ಇತ್ಯಾದಿ. ಹೃದಯಾಂತರಾಳದಲ್ಲಿ ನೆಲೆಸಿರುವ ಪರಂಜ್ಯೋತಿಯನ್ನು ಗುರು ಹೊರದೆಗೆದು ರೂಪಕೊಟ್ಟಿದ್ದು ವರ್ಣಿತವಾಗಿದೆ. ಲಿಂಗವು ಜಗಜಗಿಸುತ್ತಿರುವ ಬೆಳಕಿನ ರಾಶಿಯೆಂದೂ, ಪರಬ್ರಹ್ಮವೆಂದೂ, ವಿಶ್ವವೆಲ್ಲವೂ ಯಾವುದರಿಂದ ಮೂಡಿಬಂದಿದೆಯೋ ಯಾವುದರಲ್ಲಿ ಅದು ಹೋಗಿ ಐಕ್ಯವಾಗುವುದೋ ಆ ಪರಾತ್ಪರ ವಸ್ತುವೆಂದೂ ಅಲ್ಲಿ ವಿವರಿಸಲ್ಪಟ್ಟಿದೆ." -8 ಇಲ್ಲಿನ ಚರಾಚರ ವಸ್ತುವೂ ಕೂಡ ಲಿಂಗಮಯವಾದದ್ದು, ಆ ಲಿಂಗ ಕೃಪೆಯಿಂದಲೇ ನಡೆಯುವುದು ಎಂದು ಭಾವಿಸಿ ತಮ್ಮ ಹೋರಾಟದ ಹಾದಿಯಲ್ಲಿ ಲಿಂಗದ ಮಹತ್ವವನ್ನು ಬಳಸತೊಡಗಿದರು. ಲಿಂಗಪೂಜೆ, ಲಿಂಗದ ಪರಿಕಲ್ಪನೆ, ಅದರಿಂದಾಗುವ ಪ್ರಯೋಜನಗಳು, ತಮ್ಮ ಬದುಕಿಗೆ ಪೂರಕವಾದ ಮಾರ್ಗ ಸಂಬಂಧಗಳನ್ನು ತಿಳಿಹೇಳುವುದು ಹೋರಾಟದ ಪ್ರಮುಖ ಅಂಶವಾಗಿತ್ತು.

ಅಂದಿನ ಕಾಲದಲ್ಲಿದ್ದ ಭಕ್ತ, ಧರ್ಮ, ದೇವರು ಹಾಗು ಗುರು, ಲಿಂಗ-ಜಂಗಮದ ಮಹತ್ವವನ್ನು ತಮ್ಮ ಧರ್ಮ ಸಾಂಕೇತಿಕ ಕುರುಹಾದ 'ಲಿಂಗ' ಚಿಹ್ನೆಯನ್ನು 'ಇಷ್ಟಲಿಂಗ' ಎಂಬ ಹೆಸರಿನಿಂದ ತಮ್ಮ ಕಾಯಕದಲ್ಲಿ ಕಾಣುವಂತೆ ಮಾಡಿ 'ಕಾಯಕಕ್ರಾಂತಿ' ಯನ್ನೇ ಉಂಟುಮಾಡಿದ್ದು ಇವರ ಸಾಧನೆಯಾಗಿದೆ. ಲಿಂಗದ ಸ್ವತಂತ್ರ ಹುಟ್ಟುವಿನ ಬಗ್ಗೆ, ಈ ಅಲ್ಲಮನ ವಚನ ಸ್ಪಷ್ಟೀಕರಿಸುತ್ತದೆ.

" ತಾಯಿ-ತಂದೆಯಿಲ್ಲದ ಕಂದಾ.
ನಿನಗೆ ನೀನೆ ಹುಟ್ಟಿ ಬೆಳೆದೆಯಲ್ಲಾ!
ನಿನ್ನ ಪರಿಣಾಮವೆ ನಿನಗೆ ಪ್ರಾಣ ತೃಪ್ತಿಯಾಗಿರ್ದೆಯಲ್ಲಾ!
ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೇ ಬೆಳಗುತ್ತಿದೆಯಲ್ಲಾ!
ನಿನ್ನ ಚರಿತ್ರೆ ಸಹಜ ಗುಹೇಶ್ವರಾ." -9

'ಲಿಂಗ' ದ ಹುಟ್ಟುವಿಕೆಯನ್ನು ಹೇಳುತ್ತಾ ಅದರ ಪ್ರಕಾಶಮಾನ ಹಾಗೂ ಅಭೇದ ರಹಸ್ಯದ ಬಗ್ಗೆ ತಿಳಿವು ಮೂಡಿಸುವ ವಚನವಾಗಿದೆ. ವ್ಯಕ್ತಿಗತವಾದ ಹಾದಿಯಲ್ಲಿ ಲಿಂಗ ನಿಲ್ಲುವ ಸ್ಥಾನ-ಮಾನ ಮತ್ತು ಅದರ ಆಳ-ನಿರಾಳಗಳನ್ನು ಬಲ್ಲ ಅಲ್ಲಮಪ್ರಭು, ಲಿಂಗದ ಚರಿತ್ರೆಯನ್ನು ತಿಳಿದು, ಸಾಮಾನ್ಯರು ಬದುಕಿನಲ್ಲಿ ಹೇಗೆ ಲಿಂಗದ ಮೊರೆ ಹೋದರೆ ಮುಕ್ತಿ ಹೇಗೆ ದೊರಕುತ್ತದೆಯೆಂಬುದನ್ನು ವಚನಕಾರರು ಸ್ಪಷ್ಟಪಡಿಸುತ್ತಾರೆ. ಇಷ್ಟಲ್ಲದೇ ಪುರಾಣಗಳಲ್ಲಿ ಬರುವ ಲಿಂಗ ಸ್ವರೂಪದ 'ಶಿವ' ಪ್ರಿಯವಾದವನ್ನು ಅಲ್ಲಗಳೆದು ಭಕ್ತಿ ಪ್ರಿಯತೆಯನ್ನು ಬಸವಣ್ಣನವರ ವಚನ ಪ್ರತಿಪಾದಿಸುತ್ತದೆ.

" ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನೆಲ್ಲಯ್ಯಾ.
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನೆಲ್ಲಯ್ಯಾ.
ನಾದವ ನುಡಿಸಿದ ರಾವಳಂಗೆ ಅರೆ ಆಯುಷ್ಯವಾಗಿತ್ತು
ವೇದನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ." -10

ಪುರಾಣಗಳಲ್ಲಿ ಬರುವ ಬಹುರೂಪಿ ಶಿವಪ್ರಿಯವಾದ ವಿಷಯಗಳನ್ನು ಅಲ್ಲಗಳೆದು ಏಕರೂಪಿಯಾದ ಭಕ್ತ ಪ್ರಿಯನಾದ ಶಿವನನ್ನು ಕಟ್ಟಿಕೊಡುತ್ತಾರೆ. ಅಂದಿನ ಸಾಮಾನ್ಯ ಜನರಲ್ಲಿದ್ದ ಹಲವು ಮೂಢ ನಂಬಿಕೆಗಳನ್ನು ಸಾಮೂಹಿಕವಾದ ಚಿಂತನಾ ಹಾದಿ ಬೆಳೆಸುವಂತದ್ದನ್ನು ಮಾಡುತ್ತಾರೆ. ಇಲ್ಲಿ ಸನಾತನ ಸಂಪ್ರದಾಯ ಹಾಗೂ ರೂಢಿಗತವಾಗಿ ಬಂದಿದ್ದ ಸಂಸ್ಕೃತಿ ಹಾಗೂ ಬಹುಮುಖಿಯಾದ ಆಚಾರ-ವಿಚಾರಗಳಿಗೆ 'ಲಿಂಗ' ಸ್ವರೂಪದ ಹೋರಾಟದ ಕಲ್ಪನೆಯನ್ನು ಕೊಡುತ್ತಾರೆ.

ಪ್ರತಿಯೊಬ್ಬನೂ ಸಮಾಜದ ಸಂಘಜೀವಿಯಾಗಿರುವ ಕಾರಣ ತಮ್ಮ ವೈಯಕ್ತಿಕ ಬದುಕಿನಲ್ಲಿ ನಿಷ್ಠೆಯಿಂದ ಬದುಕಬೇಕು. ತಮ್ಮ ಬದುಕನ್ನು ಇನ್ನೊಬ್ಬರ ಕೈಯಲ್ಲಿ ಮಾಡಿಸಬಾರದು, ಏಕೆಂದರೆ ಶಿವಸ್ವರೂಪಿಯಾಗಿರುವ 'ಲಿಂಗ' ವೂ ಕೂಡ ಈ ನಿಯಮಕ್ಕೆ ಬದ್ಧವಾಗಿದೆಯೆಂದು ತಿಳಿಸುತ್ತಾರೆ.

" ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?

ತನ್ನ ಲಿಂಗಕ್ಕೆ ಮಾಡುವ ನಿತ್ಯನೇ ನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೇ.
ನಿಮ್ಮನ್ನೆತ್ತ ಬಲ್ಲರು, ಕೂಡಲಸಂಗಮದೇವಾ." -11

ಈ ವಚನವು ತೀರ ವೈಯಕ್ತಿಕ ನೆಲೆಯಲ್ಲಿಯೇ ಆಲೋಚಿಸುವಂತೆ ಮಾಡುತ್ತದೆ, ಆದ್ದರಿಂದ ಮನುಷ್ಯನ ಬಯಕೆಗಳಾದ ಲೈಂಗಿಕತೆಯನ್ನು ಪೂರೈಸಿಕೊಳ್ಳಲು ತನ್ನ ಪಾಲಿನ ರತಿ ಸುಖವನ್ನು ಇನ್ನೊಬ್ಬರು ಬಳಸಿಕೊಂಡರೆ ಸಹಜವಾದ ತೃಪ್ತಿಗಳು ತಮಗೆ ಸಿಗುವುದಿಲ್ಲ. ವ್ಯಕ್ತಿನಿಷ್ಠವಾದ ಕೆಲಸಗಳನ್ನು ತಾವೇ ಸವಿಯಬೇಕು ಆಗ ಮಾತ್ರ ಅದರಲ್ಲಿನ ಗುಣಾತ್ಮಕ ಅಂಶಗಳು ನಮ್ಮ ಜೀವನದ ಮೇಲೆ ಪರಿಣಾಮವನ್ನು ಬೀರುತ್ತವೆ.

ವ್ಯಕ್ತಿಯ ವೈಯಕ್ತಿಕ ನೆಲೆಯಿಂದ ಪ್ರಾರಂಭವಾಗುವ ಕ್ರಿಯೆಯೊಂದಿಗೆ ತನ್ನ ಬದುಕನ್ನು ಕಟ್ಟಿಕೊಳ್ಳಬೇಕು. ಒಂದು ವೇಳೆ ತನ್ನ ಬದುಕಿಗೆ ಬೇರೆಯವರನ್ನು ಆಶ್ರಯದ ಕೂಡದು, ಏಕೆಂದರೆ 'ಲಿಂಗ' ಮುಟ್ಟಿ ಪೂಜಿಸುವೊಡೆ ತನ್ನ ವೈಯಕ್ತಿಕವಾದ ಬದುಕು ಹತ್ತಿರವಾಗುತ್ತದೆ. ಸಾಂಸಾರಿಕ ನೆಲೆಯಲ್ಲಿ ರತಿ ಸುಖವನ್ನು ಹಾಗೂ ತನ್ನ ಹಸಿವನ್ನು ಹಿಂಗಿಸುವಾಗ ನಾವೇ ಊಟ ಮಾಡುವ ಪರಿಯ ಬಗೆಯನ್ನು ಈ ವಚನ ದೃಢೀಕರಿಸುತ್ತದೆ. ಬೇರೆಯವರು ಇಂತಹ ಕಾರ್ಯಗಳನ್ನು ಕೈಗೊಂಡರೆ ನಮಗೆ ಹೇಗೆ ಪ್ರತಿಫಲಗಳು ದೊರೆಯುವುದಿಲ್ಲವೋ, ಲಿಂಗದ ಪೂಜೆಯನ್ನು ಕೂಡ ನಾನೇ ಮಾಡಬೇಕೆಂದು ತಿಳಿಸುತ್ತದೆ. ಇಂತಹ ವೈಯಕ್ತಿಕ ನೆಲೆಯಿಂದ ಪ್ರಾರಂಭವಾಗುವ ಹೋರಾಟವು ಸಾರ್ವತ್ರಿಕವಾಗುವ ಕ್ರಿಯೆಯನ್ನು ಪ್ರತಿಪಾದಿಸುತ್ತದೆ. 'ಲಿಂಗ'ದ ಮುಖಾಂತರ ಹೋರಾಟದ ನಿಲುವುಗಳನ್ನು ಅಲ್ಲಮಪ್ರಭುಗಳ ಈ ವಚನವು ಸ್ಪಷ್ಟೀಕರಿಸುತ್ತದೆ.

" ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿದ ಮಿಂಚಿನಂತೆ
ಬಯಲ ಮರೆಯಲಡಗಿದ ಮರೀಚಿನಂತೆ
ಕಂಗಳ ಮರೆಯಲಡಗಿದ ಬೆಳಗಿನಂತೆ-ಗುಹೇಶ್ವರಾ ನಿಮ್ಮ ನಿಲುವು!" -12

'ಲಿಂಗ'ದ ನಿಲುವುಗಳು ಎಷ್ಟು ಪ್ರಕರವಾಗಿವೆಯೆಂದು ತಿಳಿಯಬಹುದಾಗಿದೆ. 'ಲಿಂಗ'ದ ನಿಲುವುಗಳನ್ನು ಸಾಧಾರಣವಾಗಿ ನೋಡಬಾರದೆಂಬ ಸ್ಪಷ್ಟಮಾತನ್ನು ಒತ್ತಿ ಹೇಳುತ್ತದೆ. ಒಂದು ವೇಳೆ ತಿರಸ್ಕರಿಸಿದರೆ ಮುಂದೆ ಬರುವ ಆತಂಕಗಳನ್ನು ಎದುರಿಸಬೇಕಾಗುತ್ತದೆಂಬ ವಿಚಾರವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಲಿಂಗವನ್ನು ತನ್ನ ಹೋರಾಟದ ಹಾದಿಯಲ್ಲಿ ಬಳಸಿದ್ದು, ಅಚ್ಚರಿ ಮೂಡಿಸುತ್ತದೆ.

"ಅಂಗ ಕಳೆಯಲೊಂದು ಲಿಂಗವ ಕಂಡೆ,
ಲಿಂಗವ ಕಳೆಯಲೊಂದು ಅಂಗವ ಕಂಡೆ,
ಅಂಗ ಲಿಂಗ(ದ) ಸಂದಣಿಯನರಿಸಿ ಕಂಡೆ, ನೋಡಿದೆ.
ಇಲ್ಲಿಯೇ ಇದಾನೆ ಶಿವನು! ಬಲ್ಲದೆ ಇರಿಸಿಕೊಳ್ಳರೆ
ಕಾಯವಳಿಯದ ಮುನ್ನ ನೋಡಬಲ್ಲದೆ
ಗುಹೇಶ್ವರ ಲಿಂಗಕ್ಕೆ ಬೇರೆ ಕಾವುಂಟೆ ಹೇಳರೇ?" -13

ಶರಣರು ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಹೋರಾಟವನ್ನು ಆಧ್ಯಾತ್ಮಿಕವಾದ ನೆಲೆಯಲ್ಲಿ ಕೊಂಡೊಯ್ಯುತ್ತಾರೆ. ತೀವ್ರತರನಾದ ಹಿಂಸೆಗಳಿಂದ ಎಲ್ಲರನ್ನು ಪ್ರೀತಿಸುವ ನೆಲೆಯಲ್ಲಿ ಸಾಗುತ್ತದಾದರೂ, ತಮ್ಮ ಆರಾಧ್ಯ ದೈವನಿಗೆ ಎದುರಾಗಿ ನಡೆಯಕೂಡದೆಂಬ ವಾತಾವರಣವನ್ನು ಕೂಡ ಉಂಟುಮಾಡುತ್ತಾರೆ. ಇದು ಆಧ್ಯಾತ್ಮದ ಹೋರಾಟದ ನೆಲೆಯಲ್ಲಿ 'ಲಿಂಗ' ದ ಹುಟ್ಟುವಿಕೆಯನ್ನು ಸೃಷ್ಟೀಕರಿಸುತ್ತದೆ.

"ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭಾವ ಅನುವಿನಲ್ಲಿ ಗುಹೇಶ್ವರಲಿಂಗವನುಪಮ ಸುಖಿ." -14

ಶರಣರ 'ಲಿಂಗ' ಚಿಹ್ನೆ ಸೈದ್ಧಾಂತಿಕ ಹೋರಾಟದ ಪರಿಣಾಮವಾಗಿ ಆಧ್ಯಾತ್ಮಿಕ ಕ್ರಾಂತಿಗೆ ಹೊಸ ವಾತಾವರಣ ಸೃಷ್ಟಿ ಮಾಡಿತು. ಇದರಿಂದ ಅನುಭಾವ ಜಗತ್ತಿಗೆ ಸಾಮಾನ್ಯನು ಭಕ್ತಪಥಕ್ಕೆ ಏರುವ ಕ್ರಮವನ್ನು ಸೂಚಿಸಿತು. ಈ ಸೈದ್ಧಾಂತಿಕ ಸಾಮೂಹಿಕ ಹೋರಾಟವು ಸಶಸ್ತ್ರಗಳಲ್ಲದಿದ್ದರೂ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹೊಸವಾತಾವರಣ ಸೃಷ್ಟಿಸಿ, ಭೌತಿಕ ಕ್ರಾಂತಿಯನ್ನುಂಟುಮಾಡಿತು. ವ್ಯಕ್ತಿಯ ಬದುಕಿನ ಜೊತೆಯಲ್ಲಿ ನನ್ನದಲ್ಲದ ಜಗತ್ತಿನ ಬಗ್ಗೆ ಇದ್ದ ಅತೀತವಾದ ಕಲ್ಪನೆಗಳನ್ನು ವಾಸ್ತವದ ನೆಲೆಯಲ್ಲಿ ನೋಡುವ ದೃಷ್ಟಿಯನ್ನು ಪ್ರತಿಪಾದಿಸಿತು. ಹೋರಾಟದ ಹಾದಿಯು ದಿಕ್ಕು ತಪ್ಪಿಸುವ ಹಂತಕ್ಕೆ ಹೋದಾಗ 'ಲಿಂಗ' ದ ಬಗ್ಗೆ ಸ್ವರೂಪಗಳನ್ನು ಶರಣರು ಕೊಡುತ್ತಾರೆ.

" ಕೃತಯುಗದೊಳು ಸುವರ್ಣದ ಲಿಂಗವಾದಲ್ಲಿ
ನಿನ್ನ ಹೆಸರೇನು ?
ತ್ರೇತಾಯುಗದಲ್ಲಿ ಬೆಳ್ಳಿಯ ಲಿಂಗವಾದಲ್ಲಿ

ನಿನ್ನ ತಂದೆ ತಾಯಿಯು ಯಾರು ?
ದ್ವಾಪರದೊಳು ತಾಮ್ರದ ಲಿಂಗವಾದಲ್ಲಿ
ಹದಿನೆಂಟು ಜಾತಿಯ ಕೈಲಿ ಕಿಲಿಬು ಹೋಯಿತ್ತು.
ಕಲಿಯುಗದೊಳು ಕಲ್ಲ ಲಿಂಗವಾದಡೆ
ಇಕ್ಕಿದ ಓಗರವನುಣ್ಣದೇಕೋ." -15

ಚೆನ್ನಬಸವಣ್ಣನವರ ಈ ವಚನವು 'ಲಿಂಗ'ವು ಯುಗಯುಗದಿಂದ ನಡೆದುಬಂದ ಚರಿತ್ರೆಯನ್ನು ಸ್ಪಷ್ಟಪಡಿಸುತ್ತಾದರೂ, ಅಂತಿಮವಾಗಿ 'ಲಿಂಗ'ವನ್ನು ಮೊದಲು ನಂಬಿಕೊಂಡು ಬಂದಿದ್ದ ಸ್ಪಷ್ಟರೂಪವನ್ನು ಬದಲಿಸಿಕೊಟ್ಟು ಆ ಲಿಂಗಕ್ಕೆ ಕ್ರಿಯಾಶೀಲತೆ ಮತ್ತು ನಿರಾಕಾರ, ನಿರಾಳಗಳ ಮಹತ್ವವನ್ನು ಕೊಟ್ಟು ಹೊಸ ಬದುಕಿನ ಅನ್ವೇಷಣೆಗಾರರಾಗಿ, ಈ ಸೈದ್ಧಾಂತಿಕ ಚಿಹ್ನೆಯನ್ನು ಅವರು ಬಳಸುವಾಗ ಶರಣರು ವಿಶೇಷವಾಗಿ ನಿಲ್ಲುತ್ತಾರೆ. ಮಾನವ ಸೃಷ್ಟಿಕೃತ ಲಿಂಗದ ಕ್ರಿಯೆಯನ್ನು ಅಲ್ಲಗಳೆಯುತ್ತಾರೆ. ಇದನ್ನು ಈ ವಚನಗಳು ಸ್ಪಷ್ಟೀಕರಿಸುತ್ತದೆ.

"ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗವಾಯಿತು.
ಹೋಯಿತಲ್ಲ ಭಕ್ತಿ ಜಲವ ಕೂಡಿ
ಉಳಿ ಮುಟ್ಟದ ಲಿಂಗವ, ಮನಮುಟ್ಟಬಲ್ಲುದು ಗುಹೇಶ್ವರಾ."-16

"ಪ್ರಥ್ವಿಗೆ ಹುಟ್ಟಿದ ಶಿಲೆ, ಕಲ್ಲುಕುಟಿಗಂಗೆ ಹುಟ್ಟಿದ ಮಾರುತಿ
ಮಂತ್ರಕ್ಕೆ ಲಿಂಗವಾಯಿತ್ತಲ್ಲ,
ಈ ಮೂವರಿಗೆ ಹುಟ್ಟಿದ ಮಗನ (ಮಗುವ) ಲಿಂಗವೆಂದು ಕೈಪಿಡಿವ
ಅಚ್ಚವ್ರತಗೇಡಿಗಳನೇನೆಂಬಂತೆ ಗುಹೇಶ್ವರಾ."-17

ಪ್ರಗತಿಪರ ಧೋರಣೆಗಳೊಂದಿಗೆ ಆರಂಭಗೊಂಡು ಕಲ್ಯಾಣಕ್ರಾಂತಿಯು ಸಾಂಸ್ಕೃತಿಕ ಸನ್ನಿವೇಶದಲ್ಲಿ ಲಿಂಗವನ್ನು ಸಮವಸ್ತ್ರದಂತೆಧರಿಸ ಹೊರಟಮೇಲೆ, ಅದರ ಆಚಾರ-ವಿಚಾರ ಮೂಲತತ್ವಗಳನ್ನು ಅರಿಯದೆ ಮಾಡುವ ತೋರಿಕೆ ಜನಗಳನ್ನು ಖಂಡಿಸುತ್ತಾರೆ. ಲಿಂಗದ ಬಗ್ಗೆಯಿದ್ದ ಹಲವು ರೀತಿಯ ಮೂಢನಂಬಿಕೆಗಳನ್ನು ಅಲ್ಲಗಳೆಯುತ್ತಾರೆ. ಅಂದಿನ ಕಾಲಮಾನದಲ್ಲಿ ಕೊರಳ ಲಿಂಗ ಆಕಸ್ಮಿಕವಾಗಿ ಜಾರಿಬಿದ್ದರೆ ಅದನ್ನು ತೆಗೆದುಕೊಂಡು ಸಮಾಧಿ ಮಾಡುವ ಪರಿಕಾರ ವೃತ್ತಿ,

ಅದಕ್ಕೆ ಶರಣರು ವಿರೋಧ ವ್ಯಕ್ತಪಡಿಸಿದರು. ಇದಕ್ಕೆ ಸ್ಪಷ್ಟ ಉದಾಹರಣೆಯಾಗಿ ಈ ವಚನವನ್ನು ಉದಾಹರಿಸಬಹುದಾಗಿದೆ.

"ಲಿಂಗಬಿದ್ದಿತು, ಲಿಂಗಬಿದ್ದಿತೆಂಬರಯ್ಯಾ
ಲಿಂಗಬೀಳಲು ಬಲ್ಲದೇ? ಭೂಮಿ ತಾಳಲು ಬಲ್ಲುದೇ?
ಕಮ್ಮಾರ ಕಡೆದು ಮಾಡಿದ, ಬೋಗಾರ ತಂದು ಮಾಡಿದ
ಗುರುಕೊಂಡು ಮಾರಿದ ಈ ಲಿಂಗ ಬಿದ್ದಡೆ ಸಮಾಧಿಯುಂಟೆ?
ಲಿಂಗಕಟ್ಟಿದ ಗುರುಸತ್ತಡೆ ಸಮಾಧಿಯನ್ನೇಕೆ
ಕೊಳ್ಳರೋ, ಕೂಡಲಚೆನ್ನಸಂಗಮದೇವಾ.?" –18

ಮಾನವನಿರ್ಮಿತ ಲಿಂಗವನ್ನು ಅಲ್ಲಗಳೆಯುತ್ತಾರೆ. 'ಲಿಂಗ' ವೆನ್ನುವುದು ಕಲ್ಲಿನಿಂದ ಕಡೆಯುವುದಲ್ಲ. ಮಾರಾಟದ ವಸ್ತುವಲ್ಲವೆಂದು ಹೇಳುತ್ತಾರೆ, ಆದ್ದರಿಂದ ಅನಿವಾರ್ಯವಾಗಿ ಬಿದ್ದಡೆ ಅದಕ್ಕೆ ಸಮಾಧಿಯ ಅನಿವಾರ್ಯತೆಯೇ ಇಲ್ಲ. ಲಿಂಗ ಮೂಲವೇ ಬೇರೆ ಎಂಬ ತಮ್ಮ ಹೋರಾಟದ ಸೈದ್ಧಾಂತಿಕ ನಿಲುವುಗಳನ್ನು ಹೇಳಬಯಸುತ್ತಾರೆ.

ಶರಣರ ಹೋರಾಟದ ನಿಲುವುಗಳನ್ನು ಹೆಣ್ಣು, ಹೊನ್ನು, ಮಣ್ಣೆಂಬ ವಿಷಯಗಳಲ್ಲಿ ಭೇದವ ತರದೆ ಸರ್ವದಲ್ಲೂ ಲಿಂಗತ್ವವನ್ನು ಕಾಣುವ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯ ವಚನಗಳಲ್ಲಿ ಕಾಣಬಹುದು.:

"ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೊನ್ನಿಂಗೆಯೂ ಲಿಂಗಕ್ಕೆ ವಿರುದ್ಧವೆ ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯೂ ಲಿಂಗಕ್ಕೆ ವಿರುದ್ಧವೇ?
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು,
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೇ?
ಇಂದ್ರಿಯಂಗಳ ಬಿಟ್ಟು ಲಿಂಗವನೊಲಿಸಬೇಕೆಂಬರು,
ಇಂದ್ರಿಯಂಗಳಿಗೆಯೂ ಲಿಂಗಕ್ಕೆ ವಿರುದ್ಧವೇ?

...."–19

ಈ ವಚನದಲ್ಲಿ ಲಿಂಗದ ಅರುಹಿನ ಬಗ್ಗೆ ಆಳವಾದ ಜ್ಞಾನವಿದ್ದರೆ ಮಾತ್ರ ಲಿಂಗದ ಮಹತ್ವವನ್ನು ತಿಳಿಯಬಹುದೆಂದ ಪ್ರತಿಪಾದಿಸುತ್ತದೆ. ಹೆಣ್ಣು, ಮಣ್ಣು, ಹೊನ್ನು ಎಲ್ಲಾ ವಿಷಯಗಳಲ್ಲೂ ಲಿಂಗ ಸಂಬಂಧವನ್ನು ಕಾಣಲು ಆತ್ಮಜ್ಞಾನ ಬೇಕೆಂದು ತಿಳಿಸುತ್ತಾಳೆ. ಇದು ಲಿಂಗ ಚಿನ್ಹೆಯುಳ್ಳ ಹೋರಾಟಕ್ಕೆ ಪ್ರೇರಣ ಒದಗಿಸುತ್ತದೆ. ಲಿಂಗಭೇದ–ಭಾವವಿಲ್ಲದೆ ಸಮಾಜದಲ್ಲಿ ಇಬ್ಬರೂ ಒಂದೇ ಎಂಬ ಭಾವನೆಯನ್ನು ಲಿಂಗ ಸೈದ್ಧಾಂತಿಕ ನಿಲುವುಗಳು ಸ್ಪಷ್ಟಪಡಿಸುತ್ತವೆ.

ಸಾಮೂಹಿಕ ಹೋರಾಟ ಕ್ರಿಯೆಯಲ್ಲಿ ಯಾವುದೇ ಭೇದ ಭಾವವಿಲ್ಲದೆ ಅಂದರೆ ನನ್ನದು ಮೇಲು–ಕೀಳು, ಶ್ರೇಷ್ಠ–ಕನಿಷ್ಠ, ಗಂಡು–ಹೆಣ್ಣು, ಎಂಬ ಅಸ್ಪೃಶ್ಯ ಭಾವನೆಗಳಲ್ಲದೆ ಏಕರೂಪಿಯಾಗಿ ಹೋರಾಟವನ್ನು ರೂಪಿಸಿದ್ದು ಕಲ್ಯಾಣಕ್ರಾಂತಿಯ ಒಂದು ಸಾಧನೆಯಾಗಿದೆ. ಲಿಂಗದ ಸಿದ್ಧಾಂತದೊಳಗೆ ನಾವು ಬೆರೆತಾಗ ನಮಗೆ ಬೇರೆ ಯಾವುದರ ಚಿಂತೆಯು ಇಲ್ಲವೆಂದು ಈ ವಚನ ಸ್ಪಷ್ಟವಾಗಿ ತಿಳಿಸುತ್ತದೆ.

"ಅಮೃತಸಾಗರದೊಳಗಿದ್ದು, ಆಕಳಚಿಂತೆಯೇಕೆ?
ಮೇರುಮಧ್ಯದೊಳಗಿದ್ದು, ಜರಗತೊಳೆವ ಚಿಂತೆಯೇಕೆ?
ಗುರುವಿನೊಳಗಿರ್ದು ತತ್ವ ವಿದ್ಯೆಯ ಚಿಂತೆಯೇಕೆ?
ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆಯೇಕೆ?
ಕರಸ್ಥಲದೊಳಗೆ ಲಿಂಗವಿರ್ದ ಬಳಿಕ
ಮತ್ತಾವ ಚಿಂತೆಯೇಕೆ ಹೇಳಾ ಗುಹೇಶ್ವರಾ?" –20

ಸೈದ್ಧಾಂತಿಕ ಹೋರಾಟದೊಳಗೆ 'ಲಿಂಗ' ಮಹತ್ವವನ್ನು ತಿಳಿದು ಮುನ್ನಡೆಯುವವರೆಗೆ ಯಾವುದೇ ಭಯವೆಂಬುದು ಇರುವುದಿಲ್ಲ. ಯಾವುದೇ ತಾತ್ಕಾಲಿಕವಾಗಿ ಬಯಕೆ ಈಡೇರಿಸುವ ವಸ್ತುಗಳು ಅನಿವಾರ್ಯವಲ್ಲವೆಂಬ ಅಭಿಪ್ರಾಯವನ್ನು ಹೇಳುತ್ತಾರೆ. ಸಾಂಕೇತಿಕವಾಗಿ ಲಿಂಗ ಸ್ವರೂಪವನ್ನು ತನ್ನೊಳಗೆ ಅರಿತುಕೊಂಡಾಗ ತಮ್ಮ ಜೀವನದ ದಿಕ್ಕು ಬದಲಿಸಬಹುದೆಂಬುದನ್ನು ಬಸವಣ್ಣನವರ ಈ ವಚನ ತಿಳಿಸುತ್ತದೆ. ಇದರಿಂದ ಸಮಾಜದಲ್ಲಿ ಲಿಂಗಭೇದವಿಲ್ಲದೆ ಎಲ್ಲರೂ ಸಮಾನರೆಂಬ ಪರಿಕಲ್ಪನೆಗೆ ದಾರಿ ಮಾಡಿಕೊಟ್ಟಿತು.

....

"ನೀನೊಲಿದಡೆ ಕೊರಡು ಕೊನರುವುದಯ್ಯಾ
ನೀನೊಲಿದಡೆ ಬರಡು ಹಯನಾವುದಯ್ಯಾ.

ನೀನೊಲಿದಡೆ ಸಕಲ ಪಡಿಪದಾರ್ಥ
ಇದಿರಲ್ಲಿರ್ಪುವು ಕೂಡಲಸಂಗಮದೇವಾ." -21

ಸಾಮೂಹಿಕವಾಗಿ ಪ್ರಗತಿಪರ ಧೋರಣೆಗಳೊಂದಿಗೆ ಪ್ರಾರಂಭಗೊಂಡ ಕ್ರಾಂತಿಗೆ 'ಲಿಂಗ' ಚಿಹ್ನೆಯ ಮೂಲಕ ದೇವನೊಲಿವ ಪರಿಯನ್ನು ವಿವರಿಸುವುದಲ್ಲದೆ. ನಮ್ಮ ಗೆಲುವು ಖಚಿತವಾಗಬೇಕಾದರೆ ನಿಮ್ಮ ಮೇಲೆ ನಿಷ್ಠೆ, ಪ್ರಾಮಾಣಿಕತನ, ಏಕದೇವೋಪಾಸನೆ ಅನಿವಾರ್ಯವಾಗಬೇಕು. ಆಗ ಮಾತ್ರ ನಮ್ಮ ಆರಾಧ್ಯದೈವ ಒಲಿಯುತ್ತಾನೆ. 'ಕೊರಡು', 'ಬರಡು' ಎಂಬ ಪದಗಳು ಜೀವನದ ಕನಿಷ್ಠ ಸ್ಥಿತಿಯನ್ನು ತೋರಿದರೆ, ಅಂದರೆ 'ಲಿಂಗ' ಒಡನಾಟವಿಲ್ಲದೆ ಸ್ಥಿತಿ ಹೇಳಿದರೆ, ನಂತರದಲ್ಲಿ ಲಿಂಗಸಂಗದಲ್ಲಿದ್ದರೆ, ಬರಡು ಭೂಮಿ ಹಸನಾಗುತ್ತದೆಂದು ಸಕಲ ಪಡಿಪದಾರ್ಥವು ದೊರಕುವುದೆಂದು ಹೇಳುತ್ತಾರೆ. ಶರಣರು ತಮ್ಮ ಹೋರಾಟದ ಹಾದಿಯನ್ನು ವಾಸ್ತವಿಕ ತಳಹದಿಯ ಮೇಲೆ ಕಟ್ಟುವುದರಿಂದ ಬದುಕಿನ ಆಗು-ಹೋಗುಗಳ ಬಗ್ಗೆ ಈ ಹೋರಾಟವು ಸೂಕ್ಷ್ಮವಾಗಿ ತಿಳಿಸುತ್ತದೆ. ಒಟ್ಟಾರೆ 'ಲಿಂಗ' ಚಿಹ್ನೆಯು ಸೃಷ್ಟಿಯ ಸಾಂಕೇತಿಕಾರ್ಥವಾಗಿ ನಿರೂಪಿತವಾಗಿದೆ. ಆದ್ದರಿಂದ ಹೋರಾಟದ ಹಾದಿಯಲ್ಲಿ, ಈ ಚಿಹ್ನೆಯ ಮೂಲಕ ಸಾಮಾಜಿಕವಾಗಿ ಪರಿಣಾಮ ಬೀರಿ, ತಮ್ಮ ಹೋರಾಟಕ್ಕೆ ಒಗ್ಗೂಡುವಂತೆ ಪ್ರೇರೇಪಿಸುವಂತೆ ಈ ಕ್ರಾಂತಿ ಅನುವು ಮಾಡಿಕೊಟ್ಟಿತು.

ಸ್ಥಾವರ-ಜಂಗಮ ಹೋರಾಟ : ಸ್ಥಾವರ ಮತ್ತು ಜಂಗಮ ಎನ್ನುವ ಪರಿಕಲ್ಪನೆ ಅತ್ಯಂತ ಪುರಾತನವಾದುದು ಈ ಪರಿಕಲ್ಪನೆಗಳಿಗೆ ಒಂದು ಸ್ಪಷ್ಟರೂಪ ತೊಟ್ಟು ಅದನ್ನ ಕಾರ್ಯರೂಪಕ್ಕೆ ತಂದವರು ವಚನಕಾರರು. ಜಿಡ್ಡುಗಟ್ಟಿದ ಸಮಾಜ ಸಂಸ್ಕೃತಿಯ ಅಲೋಚನೆಗಳೇ ಸ್ಥಾವರ. ಮೂಢನಂಬಿಕೆ, ಅತ್ಯಾಚಾರ, ಅಕ್ರಮ ಸ್ಥಾವರದ ಕೂಸುಗಳು. ಈ ಸ್ಥಾವರ ತತ್ವ ಸಮಾಜದ ಚಲನ ಶೀಲತೆಗೆ ತಡೆಯನ್ನುಂಟು ಮಾಡಿತು. ಆ ಕಾರಣದಿಂದ ಅತ್ಯಂತ ಶ್ರೀಮಂತವಾದ ಭಾರತೀಯ ಸಮಾಜ ದಾರಿದ್ರ್ಯದ ಸ್ಥಿತಿಗೆ ತಳ್ಳಿತು. ಆ ಮೂಲಕ ಸಮಾಜದಲ್ಲಿ ಶೋಷಣೆ, ಬಡತನ ವರ್ಗ ತಾರತಮ್ಯದ ಬೇರುಗಳು ಆಳವಾಗುವಂತಾಯಿತು ಇದರಿಂದ ಎಚ್ಚರಗೊಂಡ 12 ನೇ ಶತಮಾನದ ವಚನಕಾರರು ಸ್ಥಾವರ ತತ್ವವನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ. ವೇದ ಉಪನಿಷತ್ತು ರಾಮಾಯಣ ಮಹಾಭಾರತ ಗುರುತಿಸುತ್ತಾರೆ. ಬಸವಣ್ಣನವರ ಈ ವಚನ ಮೇಲಿನ ಹೇಳಿಕೆಯನ್ನು ಪ್ರತಿಪಾಧಿಸುತ್ತದೆ; 'ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳನಿಕ್ಕುವೆ' ತರ್ಕದ ಬೆನ್ನ ಬಾರನ್ನೆತ್ತುವ, ಆಗಮದ ಮೂಗ ಕುಯ್ಯುವೆ ನೋಡಯ್ಯ' ಚಿಂತನಾ ಶೀಲ, ವೈಚಾರಿಕ, ವೈಜ್ಞಾನಿಕ ಹಾಗೂ

ಸಮಾಜದ ಸಮಾನತೆಯಿಂದ ಕೂಡಿದ ಯಾವುದೇ ಸಮಾಜ ಶ್ರೀಮಂತವಾಗಬಲ್ಲದು ಇಲ್ಲಿ ಶ್ರೀಮಂತಿಕೆ ಎಂದರೆ ಆರ್ಥಿಕವಾಗಿ ಅಲ್ಲ ಅದು ಮನುಷ್ಯತ್ವದ ಶ್ರೀಮಂತಿಕೆಯಾಗಿದೆ.

ಮನಷ್ಯ ಮನುಷ್ಯನನ್ನೆ ಕೀಲಾಗಿ ಕಾಣುವ ಸ್ಥಾವರ ಸಮಾಜದ ಬಂಡಾಯವೇ ಜಂಗಮ ಸಮಾಜವಾಗಿದೆ. ಜಂಗಮವಂಬ ಪದ ಕೇವಲ ಕಾವಿದಾರಿಯಲ್ಲ, ವಿಭೂತಿ ಪುರುಷನಲ್ಲ, ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು ವೈಜ್ಞಾನಿಕವಾಗಿ ವಿವೇಚಿಸುವ ಚಿಕಿತ್ಸಕ ಬುದ್ಧಿ ಎಂದರ್ಥ. ಹನ್ನೆರಡನೆ ಶತಮಾನದಲ್ಲಿ ಸ್ಥಾವರಗಳ ನಿರ್ಮಾಣ ಹೇರಳವಾಗಿತ್ತು. ಭಕ್ತಿ ದೇವರು ಧರ್ಮ ಶಾಸ್ತ್ರ ಪುರಾಣ ವೇದ ಉಪನಿಷತ್ತುಗಳ ಹೆಸರಿನಲ್ಲಿ ಸಮಾಜವನ್ನ ಒಡೆದು ಆಳುತ್ತಿದ್ದ ವೈದಿಕರ ವ್ಯಾಗ್ರತನವನ್ನು ಮೊದಲಬಾರಿಗೆ ಬಯಲಿಗೆಳೆದರು. ವಚನಕಾರರು ಜಂಗಮತ್ವವನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡ ವಚನಕಾರರು ಸಮಾಜ ಸುಧಾರಣೆಗೆ ಮುಂದಾದರು. ಇದಕ್ಕೆ ಪೂರಕವಂಬಂತೆ

"ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡನೋಡಿರೆ!
ಭರ್ಗೋದೇವಸ್ಯ ದೀಮಹಿ ಎಂಬರು
ಒಬ್ಬರಿಗಾಗಿ ವಿಚಾರವಿಲ್ಲ ನೋಡಿರೆ ಕೊಡಲಸಂಗಮದೇವ"..

ಬಸವಣ್ಣನವರ ವಚನ ಸ್ಥಾವರಗೊಂಡಿದ್ದ ವೈದಿಕ ಜನರ ಮನಸ್ಥಿತಿಯನ್ನ ತಿರಸ್ಕರಿಸುತ್ತಾರೆ. ಕಲ್ಯಾಣದಲ್ಲಿ ಪ್ರಬಲವಾಗಿ ಆರಂಭವಾದ 'ಸ್ಥಾವರ-ಜಂಗಮ' ಕ್ರಾಂತಿ ಮನುಷ್ಯನ ಬದುಕಿನಲ್ಲಿ ಹೊಸ ಬದಲಾವಣೆಗೆ ಕಾರಣವಾಗುತ್ತದೆ. ಶರಣರು ವೈಯಕ್ತಿಕ ಮತ್ತು ಸಾರ್ವತ್ರಿಕವಾದ ಜೀವನ ವಿಧಾನವನ್ನು ಜಂಗಮ ತತ್ವದ ಹಾದಿಯಲ್ಲಿ ಕಂಡುಕೊಳ್ಳುತ್ತಾರೆ. ಅದರಿಂದ ಉತ್ಪನ್ನವಾದಂತಹ ಹೊಸಬಗೆಯ ಚಿಂತನೆಗಳನ್ನು ಸಾಮೂಹಿಕವಾಗಿ ಚರ್ಚಿಸಿ ತಮ್ಮ ಬದುಕಿನೊಂದಿಗೆ ಅಳವಡಿಸಿಕೊಳ್ಳುತ್ತಾರೆ.

ಸ್ಥಾವರವೆಂದರೆ ಯಾವುದೇ ವಸ್ತುವಿಷಯಗಳು ಕ್ರಿಯಾಶೀಲಗುಣ ಇಲ್ಲದಿರುವುದನ್ನು ಸ್ಥಾವರವೆನ್ನುತ್ತೇವೆ. ಅಂದರೆ ಜಡತ್ವವಸ್ತುಗಳಿಗೆ ಮಾತ್ರ ಅನ್ವಯಿಸುವುದಷ್ಟೇ ಅಲ್ಲ. ಮಾನಸಿಕವಾಗಿ ಮನಸ್ಸುಗಳು ಕೂಡ ಪ್ರಗತಿಪರ ವಿಚಾರಗಳಿಲ್ಲದೆ ಸನಾತನ ಸಂಪ್ರದಾಯಗಳನ್ನೇ ಮಾತ್ರ ಆಲೋಚಿಸಿ, ಅದನ್ನೇ ಜಾರಿಗೆ ತಂದರೆ ಅದೂ ಕೂಡ ಸ್ಥಾವರ ವಿಚಾರಗಳಾಗುತ್ತವೆ. ಈ ಕೆಳಕಂಡ ಅಂಶಗಳು ಸ್ಪಷ್ಟೀಕರಿಸುತ್ತದೆ.

1) ದೇವಾಲಯಗಳನ್ನು ನಿರ್ಮಿಸುವುದು.

2) ವಿಗ್ರಹ ಸ್ಥಾಪನೆ ಮಾಡುವುದು.

3) ವ್ಯಕ್ತಿ ಪೂಜೆಯನ್ನು ಮಾಡುವುದು.

4) ಮೂಢನಂಬಿಕೆಗಳನ್ನು ಒಪ್ಪಿಕೊಳ್ಳುವುದು

5) ಜಡಸಂಸ್ಕೃತಿಯನ್ನು ಒಪ್ಪುವುದು

ಈ ಎಲ್ಲಾ ಅಂಶಗಳು ಸ್ಥಾವರಗೊಂಡ ಸಂಕೇತಗಳನ್ನು ಪ್ರತಿನಿಧಿಸುತ್ತದೆ. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಶಿವಶರಣರಲ್ಲೇ ಮೇಲಿನ ಎಲ್ಲಾ ವಿಷಯಗಳ ಆಯ್ಕೆಯಲ್ಲಿ ವಿರೋಧಬಾಸಗಳನ್ನು ಹೊಂದಿದ್ದರು. ಅದಕ್ಕೆ ಪರ್ಯಾಯವಾಗಿ ಜಂಗಮ ತತ್ವದ ಹಾದಿಯನ್ನು ಕಂಡುಕೊಂಡರು.

ಸದಾಕಾಲ ಕ್ರಿಯಾಶೀಲ ಗುಣ ಹೊಂದಿರುವುದೇ ಜಂಗಮವೆನಿಸುತ್ತದೆ. ಅಂದರೆ ಜಡವಸ್ತುಗಳಿಗೆ ಪರ್ಯಾಯವನ್ನು ಸೂಚಿಸಿ ಸೃಷ್ಟಿಯ ಗುಣ ಹೊಂದಿರುವ, ಯಾವಾಗಲೂ ಕಾರ್ಯಚಟುವಟಿಕೆಯನ್ನು ಸೂಚಿಸುವಂತದ್ದಾಗಿರಬೇಕು. ಜಂಗಮ ತತ್ವವನ್ನು ಪಾಲಿಸ ಹೊರಟ ಮನಸ್ಸುಗಳು ಯಾವಾಗಲೂ ಪ್ರಗತಿಪರ ಬದುಕಿಗೆ ಪೂರಕವಾಗಿರುವ ಸಮಾನತೆಯ ಕಲ್ಪನೆಯನ್ನು ಒಳಗೊಂಡಿರುತ್ತದೆ. ಜಡ್ಡುಗಟ್ಟಿದ ಬದುಕನ್ನೇ ಕ್ರಿಯಾಶೀಲವಾದ ಬದುಕಿಗೆ ಸಾಗುವಂತೆ ಪ್ರೇರೇಪಿಸುವುದಾಗುತ್ತದೆ. ಇಂತಹ ಗುಣಗಳುಳ್ಳ ತತ್ವಗಳೇ ಜಂಗಮದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಸನಾತನಕಾಲದಿಂದಲೂ ತಿಳಿದೋ ಅಥವಾ ತಿಳಿಯದೆಯೋ ನಂಬಿಕೊಂಡ ಬಂದ ಅಸಾಂಪ್ರದಾಯಕ ಮೌಲ್ಯಗಳನ್ನು ತಿರಸ್ಕರಿಸಿದರು. ಆ ಮೌಲ್ಯಗಳ ವಿಧಿ ವಿಧಾನಗಳನ್ನೆ ಪ್ರಶ್ನಿಸಿ, ಅದಕ್ಕೆ ಬದಲೀ ರೂಪಗಳನ್ನು ಮಾಡಿಕೊಂಡು ತಮ್ಮ ಬದುಕಿನ ವಿಧಾನವನ್ನೇ ಬದಲಿಸುತ್ತಾರೆ. ಇದನ್ನು ಕೆಳಕಂಡ ಅಂಶಗಳೊಂದಿಗೆ ಸ್ಪಷ್ಟಪಡಿಸಬಹುದು.

1) ದೇಹವನ್ನೇ ದೇವಾಲಯವನ್ನಾಗಿಸುವುದು.

2) ವಿಗ್ರಹ ಸ್ಥಾಪನೆ ತಿರಸ್ಕರಿಸುವುದು

3) ವ್ಯಕ್ತಿಪೂಜೆಯನ್ನು ನಿರಾಕರಿಸುವುದು.

4) ಮೂಢನಂಬಿಕೆಗಳನ್ನು ತಿರಸ್ಕರಿಸುವುದು

5) ಚಲನಶೀಲ ಸಂಸ್ಕೃತಿಯನ್ನು ಜಾರಿಗೊಳಿಸುವುದು.

6) ಭಾಷೆಯನ್ನು ಸರಳೀಕರಣಗೊಳಿಸುವುದು.

7) ವಂಶವಾಹಿನಿ ಹಾಗೂ ದರ್ಪದ ರಾಜಪ್ರಭುತ್ವಗಳನ್ನು ನಿರಾಕರಿಸುವುದು.

8) ಜನಮುಖಿ ಸಂಸ್ಕೃತಿಯನ್ನು ಜಾರಿಗೊಳಿಸುವುದು.

ಈ ಮೇಲೆ ಹೇಳಿದ ಎಲ್ಲಾ ವಿಚಾರಗಳು ಜಂಗಮತತ್ವವನ್ನು ಪ್ರತಿಪಾದಿಸಲು ಶರಣರು ಬಳಸಿಕೊಳ್ಳುತ್ತಾರೆ. ಸ್ಥಾವರ ಮತ್ತು ಜಂಗಮ ವಿಚಾರಗಳು ಪರಸ್ಪರ ಮುಖಾಮುಖಿಯಾಗುವ ದ್ವನಿಗಳನ್ನು ಬಸವಣ್ಣನವರ ಈ ವಚನ ಪ್ರತಿಪಾದಿಸುತ್ತದೆ.

" ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯಾ,
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೆ ಹೊನ್ನ ಕಳಸವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ." -22

ಬಸವಣ್ಣನವರ ಈ ವಚನ ಸ್ಥಾವರದ ಪ್ರತಿಮೆಯಾಗಿರದೆ ದೇಹವನು ದೇವಾಲಯಕ್ಕೆ ಹೋಲಿಸಿರುವ ನೀತಿ ಸ್ಥಾವರದ ಸಿಷ್ಕ್ರಿಯತೆಯನ್ನು ಜಂಗಮ ತತ್ವದ ಸೃಜನ ಶೀಲತೆಯನ್ನು ಪ್ರತಿಪಾಧಿಸುತ್ತದೆ. ಬುದ್ಧಿಪ್ರಧಾನವಾದ ಸಮಾಜದ ವೈಭವವನ್ನು ಹೇಳುತ್ತಲೇ ಮೂಡತೆ ಪ್ರಧಾನವಾದ ಆದಃಪತನವನ್ನು ಈ ವಚನ ಹೇಳುತ್ತದೆ.

ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾದ ಪ್ರಬಲಗೊಂಡುದರ ವಿಷಯವನ್ನು 'ಉಳ್ಳವರು' ಎಂಬ ಪದವು ಪ್ರತಿನಿಧಿಸುತ್ತದೆ. ಅಂದರೆ ಸಿರಿವಂತಿಕೆಯಲ್ಲಿ ಸಮೃದ್ಧವಾಗಿದ್ದವರು. ಅಂದಿನ ಕಾಲದಲ್ಲಿ ಸ್ಥಾನ-ಮಾನಗಳಿಸಿದವರು ಶಿವಾಲಯವನ್ನು ನಿರ್ಮಿಸುವ ಕಾಲವಿತ್ತು. ಆ ಕಾಲದಲ್ಲಿ ದೇವಾಲಯಗಳನ್ನು ನಿರ್ಮಿಸಿದರೆ ಅವನಿಗೆ ಎಲ್ಲಿಲ್ಲದ ಮಾನ್ಯತೆ ದೊರಕುವ ವಿಷಯವಾಗಿತ್ತು. ಆದ್ದರಿಂದ ದೇವಾಲಯವು ಸಮಾಜದ ಸಾಂಸ್ಕೃತಿಕ ಆಸ್ತಿಗಳಾಗುವ ಬದಲು, ಕೆಲವು ಸಮುದಾಯಗಳ ಆಸ್ತಿಯಾಗಿರುವ ವಾತಾವರಣವಿರುವುದನ್ನು ಈ ವಚನ ಸ್ಪಷ್ಟಪಡಿಸುತ್ತದೆ. ಆರ್ಥಿಕವಾಗಿ ಪ್ರಬಲರಾಗಿದ್ದು ಜನರ ಹಿತಾಸಕ್ತಿಗಳಿಗಿರುವ ಸೌಕರ್ಯಗಳಿಗೆ ಸಮನಾಗಿ ಇರುವ ಹಾಗೂ ದೈಹಿಕವಾಗಿರುವ ಮಾನವ ಸಂಪನ್ಮೂಲಗಳನ್ನೇ ಪರ್ಯಾಯವಾಗಿ ಬಳಸಬೇಕು. ಸಾಮಾನ್ಯನ ಬಯಕೆಗಳನ್ನು ಈಡೇರಿಸುವ ಕೃತಕ ಸಂಪನ್ಮೂಲಗಳನ್ನಲ್ಲೆಂಬುದು ಇಲ್ಲಿಯ ತಿಳುವಾಗಿದೆ.

ಇದಕ್ಕೆ ಪರ್ಯಾಯವೆಂಬಂತೆ ತಮ್ಮ ದೇಹವನ್ನೇ ಪವಿತ್ರ ಆಸ್ತಿಯಾಗಿಸಿದರು. ಸರ್ವರನ್ನು ಸಮಚಿತ್ತದಿಂದ ಭಾವಿಸಿರುವ ಕ್ರಿಯಾಶೀಲವೆನಿಸುವ, ಯಂತ್ರದಂತಿರುವ ಮನುಷ್ಯನ ದೇಹವನ್ನೇ ದೇವಾಲಯವನ್ನಾಗಿಸಿದರು. ಶತಮಾನಗಳಿಂದ ಉಳ್ಳವರ ಹಿತಾಸಕ್ತಿಗೆ ಬಲಿಪಶುವಾಗಿದ್ದ ಶೋಷಿತ ಸಮುದಾಯಗಳು ಕ್ರಿಯಾಶೀಲಗೊಂಡು ಸ್ವಾಭಿಮಾನಿಯಾದ ಬದುಕನ್ನು ಕಂಡುಕೊಳ್ಳುವಲ್ಲಿ ಕ್ರಿಯಾಶೀಲವಾಗುತ್ತದೆ.

ಮಾನಸಿಕವಾಗಿ ಗಟ್ಟಿಯಾಗುವಂತೆ ಅವರ ದೇಹವನ್ನೇ ದೇವಾಲಯವಾಗಿಸುವ ಪ್ರಕ್ರಿಯೆ ವಿಭಿನ್ನಮಯವಾಗಿದೆ. ಬಸವಣ್ಣನವರ ಈ ವಚನವು ಸಾಂಸ್ಕೃತೀಕರಣದ ಒಳ್ಳೆಯ ಉದಾಹರಣೆಯೂ ಆಗುತ್ತದೆ. 'ಸ್ಥಾವರ ಜಂಗಮವೆಂಬ ಉಭಯ ಪಕ್ಷವೊಂದೇ ಆವ ಮುಖದಲಿ ಬಂದರೂ ತೃಪ್ತಿ ಒಂದೇ'... ಬಸವಣ್ಣನವರ ಈ ಸಾಲು ಸ್ಥಾವರ ಜಂಗಮದ ಮೂಲ ನೆಲೆಯನ್ನು ತಿಳಿಸುತ್ತಾರೆ. "ಸ್ಥೂಲವಾಗಿ ಹೇಳುವುದಾದರೆ 'ಸ್ಥಾವರ' ವು ಎಲ್ಲಾ ಬಗೆಯ ಜನವಿರೋಧಿ ಮನೋಭಾವಕ್ಕೆ ಸಂಕೇತವಾಗಿಯೂ 'ಜಂಗಮ' ವು ಬಸವಣ್ಣನು ಕಂಡರಿಸಿಕೊಂಡ ಜೀವಪರವಾದ ಧೋರಣೆಗೆ ಸಾಂಕೇತಿಕವಾಗಿಯೂ ನಿಲ್ಲುತ್ತದೆ. ಈ ಶಬ್ಧಗಳಿಗೆ ಬಸವಣ್ಣ ನಾನಾರ್ಥಗಳನ್ನಿತ್ತಿದ್ದಾನೆ ಎಂಬುದು ನಮ್ಮ ಅರ್ಥವಲ್ಲ. ಆದರೆ ಬಸವಣ್ಣನ ಮಾತುಗಳ ಹಿನ್ನಲೆ ಅರ್ಥವೆಲ್ಲವೂ ಎಷ್ಟೋ ಸಂದರ್ಭಗಳಲ್ಲಿ ಸ್ಥಾವರ, ಜಂಗಮಗಳ ಅರ್ಥ ವ್ಯತ್ಯಾಸದ ಮೂಲಕವೇ ನಡೆಯುತ್ತದೆ. 'ಸ್ಥಾವರ' ಎಂಬುದು ಕಲ್ಲು ಲಿಂಗವನ್ನು ಹೇಗೆ ಸೂಚಿಸುತ್ತದೆಯೋ, ಹಾಗೆಯೇ ಎಲ್ಲಾ ಜಡವಾದ ಸಂವೇದನಾ ರಹಿತವಾದ ಜನವಿರೋಧಿಯಾದ ವಸ್ತು-ಆಲೋಚನೆಗಳಿಗೆ ಸಂಕೇತ. 'ಜಂಗಮ' ತದ್ವಿರುದ್ದವಾಗಿ ಜೀವಪರವಾದ ಅಂಶಗಳಿಗೆ ಸಂಕೇತವಾಗಿದೆ. ಪರಸ್ಪರ ವಿರುದ್ಧವಾಗಿ ಎರಡು ವಿಷಯಗಳನ್ನು ಮುಖಾ-ಮುಖಿಯಾಗಿಸಿ ಅದರಲ್ಲಿ ಜನಪರವಾದದ್ದರ ಪರವಾಗಿ ವಾದಿಸುವ ವೈಖರಿಯು ಆತನ ಹಲವಾರು ವಚನಗಳಲ್ಲಿ ಅಭಿವ್ಯಕ್ತಿತಂತ್ರವಾಗುತ್ತದೆ."-23 ಎಲ್ಲಾ ವಚನಕಾರರು ಒಂದೊಂದು ಬಗೆಯ ಜಂಗಮಸ್ವರೂಪಿಯಾದ ಗುಣವನ್ನು ಹೇಳುತ್ತಾರೆ, ಇದು ಗಮನಾರ್ಹ, ಜಂಗಮ-ಜಂಗಮವು ಒಂದೆಡೆ ನಿಲ್ಲದೇ ಸದಾ ಚರಿಸುವವನು 'ಅಯ್ಯ' 'ವೀರಮಹೇಶ್ವರ' 'ಶಿವಮಹೇಶ್ವರ' 'ಹಿರಿಯ ಹರಿಕಾರ' ಎಂದೆಲ್ಲಾ ಕರೆಯಲ್ಪಡುವ ಜಂಗಮವೇ ಲಿಂಗ, ಲಿಂಗವೇ ಜಂಗಮ, ಜಂಗಮಕ್ಕೆ ಜಾತಿಯಿಲ್ಲ. ಜಂಗಮದಲ್ಲಿ ಜಾತಿ ಕುಲವನ್ನು ಅರಸುವನು ಗುರು ದ್ರೋಹಿಯಾಗುತ್ತಾನೆ ಎಂದು ವಚನಕಾರರು ಕರೆಯುತ್ತಾರೆ.

'ಕುಲವುಂಟೆ ಜಂಗಮನಿದ್ದೆಡೆಯಲ್ಲಿ', 'ಜಂಗಮದಲ್ಲಿ ಕುಲವುಂಟೇ.'?', ಎಂದು ಬಸವಣ್ಣನು ಕೇಳಿರುವನು. ಹನ್ನೆರಡನೆಯ ಶತಮಾನದ ಜಂಗಮರು ಹುಟ್ಟಿನಿಂದ ಯಾವುದೇ ಜಾತಿಗೆ ಸೇರಿದವರಾಗಬಹುದಿತ್ತು. ಭವಿಯೊಬ್ಬನು ಗುರುವಿನಿಂದ ದೀಕ್ಷೆ ಸ್ವೀಕರಿಸಿದ ಮೇಲೆ ತನ್ನ ವೈಯಕ್ತಿಕ ಸಾಧನೆ ಸಿರಿಗಳ ಮೂಲಕ ಜಂಗಮನಾಗುವ ಅರ್ಹತೆ ಪಡೆಯುತ್ತಿದ್ದನು. (ಇದಕ್ಕೆ ಉರಿಲಿಂಗಪೆದ್ದಿ ಒಂದು ಒಳ್ಳೆಯ ನಿದರ್ಶನ. ಉತ್ತಮರೇ, ಜಂಗಮರಾಗಬೇಕೆಂಬ ನಿಯಮವೇನಿರಲಿಲ್ಲ. ಬಹುತೇಕ ವಚನಕಾರರು ಜಂಗಮನಲ್ಲಿ ಜಾತಿ ಕುಲವನ್ನರಸುವವರನ್ನು ಆಕ್ಷೇಪಿಸಿದರು. ಭವಿಯು ಗುರುವಿನಿಂದ ಧೀಕ್ಷೆ ಪಡೆದು, ಭಕ್ತನಾದ ಬಳಿಕ ದೇಶ ಸಂಚಾರ ಮಾಡಿ ಜಂಗಮನಾದ ಮೇಲೆ ಅವನು ತನಗೆ ಧೀಕ್ಷೆ ಕೊಟ್ಟು ಗುರುವಿನ ಮಠಕ್ಕೆ ಬಂದಾಗ, ಗುರುವು ಅವನು ತನ್ನ ಶಿಷ್ಯನೆಂದು. ಅಹಂಕರಿಸದೆ ಇರಬೇಕು. ಜಂಗಮವು ಎನ್ನ ಗುರುವೆಂದು ಭಾವಿಸಿ ಅವರ ಪಾದಾರ್ಚನೆಯನ್ನು ಮಾಡುವುದು ಆಚಾರ, ಪಾದಾರ್ಚನೆ ಮಾಡದಿದ್ದರೆ ನಾಮಕ, ನರಕ, ಆ ಜಂಗಮವು ಶಂಕೆಯಿಲ್ಲದೇ ಪಾದಾರ್ಚನೆಯ ಮಾಡಿಕೊಳ್ಳುವುದೇ ಕರ್ತವ್ಯ. ಶಂಕೆಗೊಂಡಿದ್ದೇ ಆದರೆ ಪಂಚಮಹಾಘಾತಕ ಗುರುವೆಂಬ ಹಮ್ಮು, ಶಿಷ್ಯನೆಂಬ ಶಂಕೆ, ಈರ್ವರಲ್ಲಿ ಇದ್ದದ್ದೇ ಆದರೆ ಕೂಡಲ ಚನ್ನಸಂಗಮದೇವನು ಅವರನ್ನು ಗೌರವ ನರಕದಲ್ಲಿಡುವನು ಎಂದು ಚನ್ನಬಸವಣ್ಣ ಅಭಿಪ್ರಾಯ ಪಡುವನು. ಅವನ ಪ್ರಕಾರ ಗುರುವಿಗಿಂತ ಜಂಗಮ ಶ್ರೇಷ್ಠ 'ಗುರುವಿನ ಗುರು ಪರಮ ಗುರು ಜಂಗಮ'-24 ಎಂಬ ವಿಚಾರಗಳನ್ನು ಬೆಳಕಿಗೆ ತರುತ್ತಾರೆ. ಸಾಮಾನ್ಯವಾಗಿ ಕಲ್ಯಾಣದಲ್ಲಿ ನಡೆದ ಕ್ರಾಂತಿ ಸಂದರ್ಭದಲ್ಲಿ ಶರಣರಲ್ಲಿ ಸದಾ ಕ್ರಿಯಾಶೀಲವಾಗಿ ಇರುವಂತೆ ಪ್ರೇರೇಪಿಸುತ್ತಿದ್ದುದು, ಜಂಗಮತ್ವದ ಗುಣವಾಗಿದೆ.

ಸ್ಥಾವರ ಜಂಗಮದ ಹೋರಾಟ ನಿರಂತರವಾಗಿ ಇರುವಂತಹುದು ಒಂದು ವೇಳೆ ಸಮಾಜದಲ್ಲಿ ಹಾಗಿಲ್ಲದಿದ್ದರೆ ಹೊಸದೇನು ಹುಟ್ಟುವುದಿಲ್ಲ. ಒಮ್ಮೊಮ್ಮೆ ತಾಂತ್ರಿಕ ಸಂಘರ್ಷಗಳು ನಡೆಯುತ್ತಿದ್ದರು. ಹೊಸ ಸಾಂಸ್ಕೃತಿಕ ಸಂಬಂಧಗಳು ಉತ್ಪತ್ತಿಯಾಗುತ್ತದೆ. ಶಿವಶರಣರು ಯಾವಾಗಲೂ ಚಲನಶೀಲವಾದುದನ್ನು ಬಯಸಿ ಸ್ಥಿರ ವಾದವನ್ನು ತಿರಸ್ಕರಿಸುತ್ತಿದ್ದರು, ಇವರು ನಂಬುವ ವಿಚಾರದಲ್ಲಿ ಆರಾಧ್ಯ ದೈವವು ಸ್ಥಿರವಾಗಿದ್ದರೆ, ಆ ದೇವನನ್ನು ಕೂಡ ತಿರಸ್ಕರಿಸುತ್ತಾರೆ. ಅಂದರೆ ಸರ್ವವೂ ಚಲನಶೀಲ ಗುಣಸ್ವರೂಪಿಯಾಗಿರಬೇಕೆಂಬುದು ಈ ಹೋರಾಟದ ವಿಷಯವಸ್ತುವಾಗಿದೆ.

ಕಲ್ಯಾಣ ಕ್ರಾಂತಿಯ ಸಾಂಸ್ಕೃತಿಕ ಸನ್ನಿವೇಶದಲ್ಲಿ 'ಜಂಗಮ ಮತ್ತು ಸ್ಥಾವರ' ಹೋರಾಟವು ಗಮನಿಸಬೇಕಾದುದು. ಈ ಹೋರಾಟದ ಫಲಿತಾಂಶವೆಂಬಂತೆ 'ಇಷ್ಟಲಿಂಗ' ಪ್ರತಿಪಾದನೆ, ದಾಸೋಹ, ಕಾಯಕ ಮುಂತಾದ ಸಾಮಾಜಿಕ ಕಾರ್ಯಗಳನ್ನು ಜಾರಿಗೆ ತಂದರು. ಈ ಯೋಜನೆಗಳಿಗೆ ವಿಶೇಷ ಅರ್ಥಗಳನ್ನು ಕಲ್ಪಿಸಿ ಸಾಮಾಜಿಕವಾಗಿ ಅವುಗಳನ್ನು ಬಹು ಉಪಯೋಗವಾಗುವಂತೆ ಮಾಡಿದರು. ಅಂತಿಮವಾಗಿ ಸ್ಥಾವರ ಹಿನ್ನಡೆಯಾಗಿ ಜಂಗಮ ತತ್ವ ಪ್ರಧಾನವಾಯಿತು. ಇದು ಶರಣರ ಹೋರಾಟಕ್ಕೆ ಸಂದ ಪ್ರತಿಫಲವಾಗಿದೆ.

ಅರಿವು ಪ್ರಧಾನವಾದ ವೈಚಾರಿಕತೆ ಹಿನ್ನಲೆಯುಳ್ಳ ಸಮಾಜವೇ ಜಂಗಮ ಸಮಾಜ ಇಂತಹ ಸಮಾಜ ಯಾವುದೇ ಕಾರಣಕ್ಕೂ ನಾಶವಾಗದು ಅದಕ್ಕೆ ಬಸವಣ್ಣ ನವರು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ'... ಎಂದು ನೇರವಾಗಿ ಸ್ಥಾವರ ಸ್ವರೂಪಿ ಸಮಾಜದಿಂದ ಆಗುವ ಕೇಡುಗಳನ್ನು ಮನಗಾಣಿಸುತ್ತಾರೆ.

5.2. ಧಾರ್ಮಿಕ ಮತಪಂಥಗಳ ತಿರಸ್ಕಾರ (ಶೈವ ಮತಪಂಥಗಳು):

ಕಲ್ಯಾಣಕ್ರಾಂತಿ ಸಂಭವಿಸುವ ವೇಳೆಗಾಗಲೇ ಜೈನ ಮತ್ತು ಬೌದ್ಧ ಧರ್ಮವು ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ. ಶೈವ ಧರ್ಮ ತನ್ನ ಅತಿಯಾದ ಆಚರಣೆಗಳಿಂದ ಜಡ್ಡು ಗಟ್ಟಿತ್ತು. ಇವೆಲ್ಲದರ ನಡುವಿನಲ್ಲಿ ರಾಜಕೀಯ ಅಸ್ಥಿರತೆಯಿಂದ 'ಧರ್ಮ' ಎಂಬುದು ಕೆಲವರಿಗೆ ಸೀಮಿತವಾಗಿದ್ದ ಕಾಲದಲ್ಲಿ ಧರ್ಮವನ್ನು ನಿರಾಕರಿಸುತ್ತಾ ಧರ್ಮವನ್ನೇ ಸಮಾಜ ಸುಧಾರಿಸುವ ಒಂದು ಅಸ್ತ್ರವಾಗಿ ಶರಣರು ಬಳಸತೊಡಗಿದರು. ಮುಂದೆ ರಾಜಕೀಯ ಮತ್ತು ಧರ್ಮ ಇವೆರಡೂ ಬಲಶಾಲಿಗಳಾಗಿ ತಾಕಲಾಟ ನಡೆಸಿ ಮೂಲ ಅರ್ಥಗಳನ್ನು ಕಳೆದುಕೊಂಡು ಬರೀ ಜಡ ಪಳಯುಳಿಕೆಗಳಂತೆ ವರ್ತಿಸುತ್ತಿದ್ದವು.

ಶೈವ ಧರ್ಮದ ಮುಂದುವರೆದ ರೂಪವೆನ್ನುವಂತೆ ವೀರಶೈವ ಧರ್ಮ ತಮ್ಮ ಹೋರಾಟದಲ್ಲಿ ಶೈವಧರ್ಮದಲ್ಲಿ ತಿರಸ್ಕರಿಸಿತು. ಶೈವ ಧರ್ಮದಲ್ಲಿ ಪಂಥಗಳಿದ್ದವೆಂದು "ಮಾಧವಾಚಾರ್ಯರು ತಮ್ಮ ಸರ್ವದರ್ಶನ ಸಂಗ್ರಹದಲ್ಲಿ ಪಾಶುಪತ, ಶೈವ, ಮಾದೇಶ್ವರ, ಪ್ರತ್ಯಭಜ್ಞಾ ಮತ್ತು ರಸೇಶ್ವರ ಪಂಗಡಗಳನ್ನು ಉಲ್ಲೇಖಿಸುವರು. ಬ್ರಹ್ಮದೇವನು ಕಾಳಾಮುಖ, ಕಾಪಾಲ, ಪಾಶುಪತ, ಶೈವಪಂಥಗಳನ್ನು ಕುರಿತು ಹೇಳುವನು. ಹರಿಭದ್ರಾಸುರಿಯು ತನ್ನ ಷಡ್ದರ್ಶನ

ಸಮುಚ್ಚಯದಲ್ಲಿ ಶೈವ, ಪಾಶುಪತ, ಮಹಾವ್ರತಧಾರಿ ಮತ್ತು ಕಲಾಮುಖರನ್ನು ಉಲ್ಲೇಖಿಸುವವನು. ಇದರಿಂದ ಶೈವಧರ್ಮವು ವಿವಿಧ ಶಾಖೆಗಳನ್ನು ಒಳಗೊಂಡಿದ್ದುದಾಗಿ ನಿರ್ಣಯಿಸಬಹುದಾಗಿದೆ.

ಈ ಶೈವ ಪಂಥಗಳಿಗೆಲ್ಲಾ ಶಿವನೇ ಆರಾಧ್ಯ ದೈವವಾದರೂ ಆ ದೈವದ ಸ್ವರೂಪಗಳನ್ನು ಪೂಜಿಸುವಲ್ಲಿ ಅವು ಭಿನ್ನ ಮಾರ್ಗಗಳನ್ನು ಹಿಡಿದಿವೆ. ಶೈವರು ತಾಂಡವ ಮೂರ್ತಿಯನ್ನು, ಪಾಶುಪತರು ಜಟಾಧರನನ್ನೂ, ಕಪಾಲಿಕರು ಮತ್ತು ಕಲಾಮುಖರು ಕಂಕಾಲಮಾಲಾಂಕೃತ ಭೈರವ ರೂಪವನ್ನು ಪೂಜಿಸುತ್ತಿದ್ದರು. ಈ ಪಂಥಗಳು ಪ್ರಮಥರ ಪೂರ್ವದಲ್ಲಿ ಪ್ರಬಲವಾಗಿದ್ದುದರಿಂದ ಅವುಗಳ ಸ್ಥಿತಿಗತಿಯನ್ನರಿಯುವುದು ಅವಶ್ಯವೆನಿಸಿದೆ."-25 ಧಾರ್ಮಿಕ ಮತಪಂಥಗಳು ಅಂದಿನಕಾಲದಲ್ಲಿ ತೀವ್ರ ತೆರನಾದ ವಿಧಿ-ವಿಧಾನಗಳು, ಆಚಾರ-ವಿಚಾರಗಳು, ಕಟ್ಟುಪಾಡುಗಳನ್ನು ಅನುಸರಿಸುತ್ತಿವು. ಈ ನಾಲ್ಕು ಪಂಥಗಳಲ್ಲಿಯೂ ವಿಭಿನ್ನವಾದ ಆಚರಣೆಗಳಿದ್ದವು.

ಈ ಕೆಳಕಂಡ ಉಲ್ಲೇಖಗಳು ಮೇಲಿನವುಗಳನ್ನು ಸ್ಪಷ್ಟಪಡಿಸುತ್ತದೆ. ನಾಲ್ಕು ಪಂಥಗಳಲ್ಲಿ ಲಕುಲೀಕ ಪಂಥದ, ಆಚಾರ-ವಿಚಾರಗಳನ್ನು ಈ ಗ್ರಂಥದಲ್ಲಿ ಹೀಗೆ ಹೇಳಿದೆ, 'ಲಕುಲೀಕರ ತತ್ವ ಉದಾತ್ತವಾಗಿದ್ದರೂ ಅವರ ಆಚಾರ-ವಿಚಾರಗಳು ಉನ್ನತಾವಸ್ಥೆಯಲ್ಲಿ ಕಂಡುಬರುವುದಿಲ್ಲ. ಉಚ್ಚಸ್ಥರದಲ್ಲಿ ತಮ್ಮ ಆರಾಧ್ಯ ದೇವತೆಯ ನಾಮಸ್ಮರಣೆ ಮಾಡುವುದು, ಹಾಹಾಹುಹು ಎಂದು ಕೂಗುವುದು, ಮನಬಂದಂತೆ ಕುಣಿಯುವುದು, ಹೋರಿಗಳಂತೆ ಡುರುಕೆ ಹೊಡೆಯುವುದು, ಹುಚ್ಚನಂತೆ ನಟಿಸುವುದು, ನಿದ್ರೆ ಬಂದವರಂತೆ ವರ್ತಿಸುವುದು. ಪಾರ್ಶ್ವವಾಯು ಹೊಡೆದವರಂತೆ ನಡೆಯುವುದು, ಕುಂಟುವುದು, ಇದೇ ಮೊದಲಾದ ಬಾಹ್ಯಾಚಾರಗಳು ಬಲಿತು ಮೂಲತತ್ವ ಬಿಟ್ಟುಹೋಗಿತ್ತು. ಈ ಅಂಗ ಚೇಷ್ಟೆಗಳೊಡನೆ ಬಿಕ್ಕೆ ಬೇಡುವುದು. ಉಚ್ಚೇಷ್ಟ ಸೇವನೆ ಮಾಡುವುದು., ಮುಂತಾದವು ನಡೆದು ಜನತೆಯಲ್ಲಿ ಈ ಮತದ ಬಗ್ಗೆ ಅಸಹ್ಯ ಭಾವನೆಯನ್ನು ಹುಟ್ಟಿಸಿದ್ದವು."-26. ಇಂತಹ ದೂರಾಚಾರಗಳಿಂದ ಸಾಮಾನ್ಯರಿಂದ ದೂರಸರಿಯ ಹತ್ತಿತ್ತು. ನಿರಾಕರಣೆಗೊಳ್ಳುವ ಪಂಥಗಳಲ್ಲಿ ಕಾಳಾಮುಖ ಪಂಥವು ಬಹುಮುಖ್ಯ 'ರಾಜ್ಯಪೂಜಿತರಾಗಿದ್ದ ಕಾಳಾಮುಖರು ಶಿವಪೂಜಕರೂ, ವ್ರತ ನಿಯಮ ನಿರತರು ಆಗಿದ್ದರು, 12ನೇ ಶತಮಾನದ ಹೊತ್ತಿಗೆ ಆ ಮತದ ಒಂದು ಪಂಥವು ಉಗ್ರಸ್ವರೂಪದಲ್ಲಿರುವಂತೆ ಕಂಡುಬರುತ್ತದೆ. ರಾಮಾನುಜರ ಶ್ರೀಭಾಷ್ಯರಲ್ಲಿ ಕಾಳಮುಖರ ಬಗೆಗೆ ಹೀಗೆ ಹೇಳಿರುವರು. "ತಥಾ ಕಾಲಾಮುಖಾ ಅಪಕಪಾಲಪತ್ರ ಭೋಜನ ಶವಭಸ್ಮಸ್ನಾತ ತತ್ಪ್ರಕಾಶನ ಬಗುಡಧಾರಣ ಸುರಾಕುಂಬಸ್ಥಾಪನಾ ತದಾಧಾರ ದೇವಪೂಜಾದಿಕಂ,

ಐಹಿಕ ಅಮುಷ್ಮಿಕ ಸಕಲಫಲ ಸಾಧನಂ ಅಭಾದಧತಿ, ರುದ್ರಾಕ್ಷಕಣಂ ಹಸ್ತೇ ಜಟಾಜೈಕಾ ಚಮಸ್ತಕೇ ಕಪಾಲಂ ಭಸ್ಮನಾಸ್ನಾನಂ ಇತ್ಯಾದಿ ಚಪ್ರಸಿದ್ಧಂ ಶೈವಾನಮೇಷು. "ಕಾಲಾಮುಖ ಗುರುಗಳಿಗೆ ಮೇಲಿನ ವರ್ಣನೆ ಅನ್ವಯವಾಗದಾದರೂ ಅವರ ಒಂದು ಶಾಖೆಯಲ್ಲಿ ದುರಾಚಾರಗಳು ಆರಂಭವಾದ್ದುವೆಂಬುದನ್ನು ಇದರಿಂದ ನಿರ್ಣಯಿಸಬಹುದಾಗಿದೆ. ಇದರಿಂದ 'ಕಾಳಾಮುಖ' ಎಂಬ ಹೆಸರು ಬಂದಿತೆಂದು ಊಹಿಸುತ್ತಾರೆ." -27 ಈ ಪಂಥವು ಕ್ಲಿಷ್ಟಕರವಾದ ಆಚರಣೆಗಳಿಂದ ಈ ಪಂಥವು ಸಾಮಾನ್ಯನ ಮನಃಸ್ಥಿತಿಯಿಂದ ದೂರ ಸರಿಯುತ್ತಿತ್ತು. ಆ ವೇಳೆಗಾಗಲೇ ಹೊಸ ಧರ್ಮದ ಉದಯವೂ ಪ್ರಾರಂಭವಾಗುತ್ತಿತ್ತು. ಆದ್ದರಿಂದ ಈ ಪಂಥ ಶಿವಶರಣರಿಂದ ನಿರಾಕರಿಸಲ್ಪಡುತ್ತಿತ್ತು.

ಶೈವ ಧರ್ಮದ ಇನ್ನೊಂದು ಪಂಥವಾದ ಕಾಪಾಲಿಕವು ಮೇಲಿನವುಗಳಿಗಿಂತ ಭಿನ್ನ ಸ್ವರೂಪದ್ದಾಗಿದ್ದು, "ಇದೂ ಒಂದು ಭೀಕರಸ್ವರೂಪದ ಶೈವಪಂಥ. ಕಪಾಲಧಾರಿಗಳಾಗಿರುತ್ತಿದ್ದುದರಿಂದ ಇವರಿಗೆ ಈ ಹೆಸರು ಬಂದಂತೆ ತಿಳಿಯಬಹುದು. ಇವರನ್ನು ಸೋಮಸಿದ್ಧಾಂತಿಗಳೆಂದೂ, ಮಹಾವ್ರತಧಾರಿಗಳೆಂದೂ ಕರೆಯುವರು. ಶಿವನು ಕೈಲಾಸದಲ್ಲಿ ಉಮಾಸಹಿತನಾಗಿ ಸುಖದಿಂದಿರುವಂತೆ, ಉಮಾಸ್ವರೂಪದ ಸ್ತ್ರೀರೊಡನೆ ಈ ಲೋಕದಲ್ಲಿ ಸುಖದಿಂದಿರಬೇಕೆಂಬುದು ಇವರ ಮತ, ಸ್ತ್ರೀ ಭೋಗ, ತಪಸಿದ್ಧಿ, ಸದಾಶಿವ ಪ್ರಸಾದಗಳೇ ದುಃಖಾಂತರೂಪದ ಮೋಕ್ಷವೆಂಬುದು ಇವರ ಸಿದ್ಧಾಂತ. ಕಾಪಾಲಿಕ ಪಂಥವು ಬಹಳ ಪ್ರಾಚೀನವಾದುದು. ಇವರ ಉಲ್ಲೇಖ-ಮೈತ್ರಿ ಉಪನಿಷತ್ತಿನಲ್ಲಿ ಬರುತ್ತದೆ ಎಂದು ಉಕ್ತವಾಗಿದೆ. ರಾಮಾನುಜರು ಇವರನ್ನು ಹೀಗೆ ಸಂಭೋಧಿಸುವರು.

" ಮುದ್ರಿಕಾಷವ್ಯಕ್ತಿತ್ವಜ್ಞ ; ಪರಮುದ್ರಾವಿರ್ಶಾದ,
ಭಗಾಸನಸ್ಥ ಮಾತ್ಸಾನಂ ನಿರ್ವಾಣಮ್ಯಬೌತಿ
ಕಂಠಿಕಾ ರುಚಕಂ ಚೈವ ಕುಂಡಲಂ ಚ ಶಿಖಾಮಣಿ
ಭಸ್ಮ ಯಜ್ಞೋಪವಿಚಂ ಚ ಮುದ್ರಾಷಟ್ಕಂ ಪ್ರಚಕ್ಷತೇ
ಅಭಿಮುದ್ರಿತ ದೇಹಸ್ತ ನಭೂಯ ಇಹಜಾಯತೇ.".

ಕುಂಠಿಕೆ, ರುಚುಕ, ಕುಂಡಲ ಶಿಖಾಮಣಿ, ಭಸ್ಮ, ಯಜ್ಞೋಪವೀತ, ಇವು ಆರು ಇವರ ಮುದ್ರಿಕೆಗಳು. ಭಗಾಸನಸ್ಥನಾದ ಆತ್ಮನನ್ನು ಧ್ಯಾನಿಸಿ ನಿರ್ಮಾಣ ಪಡೆಯಬೇಕೆಂಬುದೇ ಇವರ ಅಂತಿಮ ಧ್ಯೇಯ. ಅಲ್ಲದೇ ಇವರು ಎಲುಬಿನ ಹಾರಗಳನ್ನು ಮಾಡಿ ಶ್ಮಶಾನದಲ್ಲಿ ವಾಸಿಸುತ್ತಿದ್ದರು. ಮನುಷ್ಯರ ತಲೆಬುರುಡೆಯಲ್ಲಿ ಊಟ ಮಾಡುತ್ತಿದ್ದರು. ಮೆದುಳು, ಕರುಳು, ಶ್ವಾಸಕೋಶ, ಮಾಂಸ,

ಮಜ್ಜಾದಿಗಳನ್ನು ಅಗ್ನಿಗೆ ಆಹುತಿ ಕೊಡುವುದು ಮೋಕ್ಷದ ಮಾರ್ಗವೆಂದು ತಿಳಿದಿದ್ದರು. ಆಗತಾನೇ ಕೊಂದ ಪ್ರಾಣಿಗಳ ಬಿಸಿ ನೆತ್ತರನ್ನು ದೇವರಿಗೆ ಅರ್ಪಿಸಿದರೆ ಆತನು ಪೂರ್ಣ ಸಂತೋಷಭರಿತನಾಗುತ್ತಾನೆಂದು ತಿಳಿಯುತ್ತಿದ್ದರು. ಕೃಷ್ಣಮಿಶ್ರನ ಚಂದ್ರೋದಯದಲ್ಲಿ ಬರುವ ಕಾಪಾಲಿಕ ವರ್ಣನೆಯನ್ನು ನೋಡಬೇಕು.

"ನರಾಸ್ಥಿಮಾಬಾಕೃತಿಚಾರು ಭೂಷಣ; ಶ್ಮಶಾನವಾಸಿ, ನೃಕಪಾಲಭೋಜನ; ಪಶ್ಯಾಮಿ ಯೋಗಾಂಜನ ಶುದ್ಧ ಶೂಕ್ಷುರ್ಜನಸ್ಮಿಥೋ ಭಿನ್ನಮಭಿನ್ನಮಿಶ್ರರಾತ." ಭವಭೂತಿಯಮೂಲವೇ ಮಾಧವದಲ್ಲಿ ಅಘೋಚಘಂಟನೆಂಬ ಭೈರವನು ಮಾಲತಿಯನ್ನು ಬಲಿಕೊಡುತ್ತಿರುವ ಚಿತ್ರವನ್ನು ಕಾಣಬಹುದು. ಇದರಿಂದ ಕಾಪಾಲಿಕರ ಭೀಕರ ಸ್ವರೂಪದ ಅರಿವಾಗದಿರದು." -28 ಇವರ ಆಚರಣೆಗಳಿಂದ ಸಾಮಾನ್ಯರು ಸಾಮಾಜಿಕ ಜೀವನದಿಂದ ಇವರನ್ನು ದೂರವಿಟ್ಟರು. ಹಾಗಾಗಿ ಕಾಪಾಲಿಕ ಪಂಥವು ಜನಸಾಮಾನ್ಯರು ಹಾಗು ಶರಣರಿಂದ ನಿರಾಕರಿಸಲ್ಪಟ್ಟಿರಬೇಕು.

ಶೈವ ಧರ್ಮದ ಇನ್ನೊಂಧು ಪಂಥವಾದ ಶಾಕ್ತಧರ್ಮ ಕರ್ನಾಟಕದಲ್ಲಿ ಅಂದಿನ ಕಾಲಕ್ಕಾಗಲೇ ಪ್ರಬಲವಾಗಿದ್ದಿತು. "ಶಕ್ತಿಗೆ ಪ್ರಧಾನ ಸ್ಥಾನವನ್ನಿತ್ತುದರಿಂದ ಇವರನ್ನು ಶಾಕ್ತರೆಂದು ಅಭಿದಾನ ಪ್ರಾಪ್ತವಾಯಿತು. ಇವರೂ ಶಿವೋಪಾಸಕರೇ, ಇದಕ್ಕೆ ನಾಥ ಅಥವಾ ಸಿದ್ಧ ಪಂಥವೆಂದು, ಕೌಶಲಮತವೆಂದೂ ಬೇರೆ ಬೇರೆ ಹೆಸರುಗಳುಂಟು. ಮಚ್ಚೇಂದ್ರನಾಥನೆಂಬುವನು ಕ್ರಿ.ಶ. 9 ನೆಯ ಶತಮಾನದಲ್ಲಿ 'ಕಾಲಜ್ಞಾನಸುಧೀಯ' ವೆಂಬ ಗ್ರಂಥವನ್ನು ಬರೆದು ಈ ಪಂಥವನ್ನು ಸ್ಥಾಪಿಸಿದನು. ಆ ಕಾಲದಿಂದ ಈ ಪಂಥವು ಹಬ್ಬಿ, ಕರ್ನಾಟಕದಲ್ಲಿ ಪ್ರಬಲವಾಗಿತ್ತೆಂದು ಊಹಿಸಬಹುದು. ಈಗಿನ ಶಾಕ್ತ ಕೇಂದ್ರಗಳಾದ ಎಲ್ಲಮ್ಮನ ಗುಡ್ಡದಂತಹ ಸ್ಥಳಗಳನ್ನೂ, ಅಲ್ಲಿ ನಡೆವ ಆಚಾರ-ವಿಚಾರಗಳನ್ನು ನೋಡಿದರೆ ಈ ಪಂಥದ ಪ್ರಾಚೀನ ಸ್ವರೂಪದ ಕಲ್ಪನೆಯಾಗುವುದು. ಈ ಪಂಥವು ಹಲವು ರಾಜರ; ಮಾಂಡಲಿಕರ ಮನ್ನಣೆಯನ್ನು ಪಡೆದಿದೆ."-29 ಈ ಮೇಲೆ ಹೇಳಿದ ಎಲ್ಲಾ ಪಂಥಗಳನ್ನು ಸಾರಾಸಗಟಾಗಿ ತಿರಸ್ಕರಿಸುವ ಶರಣರು, ಒಂದೊಂದು ಪಂಥದ ವಿಚಾರಗಳನ್ನು ತಾತ್ವಿಕವಾಗಿ ತಿರಸ್ಕರಿಸುತ್ತಾರೆ. ತಾವು ಕಂಡು ಕೊಂಡ ಸೈದ್ಧಾಂತಿಕ ವಿಚಾರಗಳೊಂದಿಗೆ ಮುನ್ನಡೆಯುತ್ತಾರೆ. ಈ ದೃಷ್ಟಿಯಲ್ಲಿ ನೋಡುವುದಾದರೆ ಚೆನ್ನಬಸವಣ್ಣನವರ ವಚನವು ಈ ಮಾತನ್ನು ಸ್ಪಷ್ಟೀಕರಿಸುತ್ತದೆ.

" ಶೈವ ಸೈವೆರಗಾದ , ಪಾಶುಪತಿ ಪಥನನರಿಯ
ಕಾಳಾಮುಖಿ ಕಂಗೆಟ್ಟ, ಮಹಾವ್ರತಿ, ಮದವೇರಿದ

ಸನ್ಯಾಸಿ ಪಾಷಂಡಿಯಾದ, ಕಾಪಾಲಿ ಮರುಳಾಗಿ ತಿರುಗಿದ.
ಈ ಆರು ಭಕ್ತಿ ಸ್ಥಳಕ್ಕೆ ಸ್ವಲ್ಪವೂ ಕೇಳಿರಣ್ಣಾ.
ಏಳೇಳು ಭವದಲ್ಲಿ ಭವಿಯಾಗಿ ಬಂದು ಶ್ರೀ ಗುರು ಕಟಾಕ್ಷ
ನಿರೀಕ್ಷಣೆಯಿಂದ
ಪ್ರಾಣದ ಮೇಲೆ ಲಿಂಗ ಪ್ರತಿಷ್ಠೆಯಂ ಮಾಡಿಕೊಂಡು
ಅದರಿಂದ ಮೀರಿದ ಸ್ಥಲವಿಟ್ಟು ವೀರ ಮಹೇಶ್ವರಸ್ವಯಂ ಪಡೆದು
ಮರಳಿ ತನ್ನ ಕುಲವನರಸಿದರೆ
ಒಡೆದ ಮಡಕಿಯ ಓದಿನಂತಹನು ಕೇಳಿರಣ್ಣಾ." -30

ಶೈವ ಧರ್ಮದ ಎಲ್ಲಾ ಪಂಥಗಳ ಆಚಾರ-ವಿಚಾರಗಳನ್ನು ತಿರಸ್ಕರಿಸುತ್ತಾರೆ. ಅವುಗಳಿಂದ ಸಾಮಾಜಿಕವಾಗಿ ಆಗುವ ಪರಿಣಾಮವನ್ನು ಸೂಕ್ಷ್ಮವಾಗಿ ವಿವರಿಸುತ್ತಾರೆ. ಆದ್ದರಿಂದ ಪಂಥಗಳಲ್ಲಿ ಇದ್ದಂತಹ ಕಠೋರತೆಗಳನ್ನು, ಆ ಧರ್ಮದಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿದ್ದ ಧರ್ಮಗುರುವನ್ನು ಕೂಡ ತಿರಸ್ಕರಿಸುತ್ತಾರೆ. ಚೆನ್ನಬಸವಣ್ಣನವರ ಈ ವಚನವು ಅದನ್ನು ತಿಳಿಸುತ್ತದೆ.

" ಗುರುಭಕ್ತಿಗುರುಭಜನೆಯಿಲ್ಲದವನ ಕೈಯಲಿ
ಕರುಣವ ಪಡೆವ ನರಕಿಯ ನೆರೆಯಲ್ಲಿರವಾಗದಯ್ಯಾ.
ಶಿವಭಕ್ತಿ ಶಿವಭಜನೆಯಿಲ್ಲದವನ ಕೈಯಲ್ಲಿ ಕರುಣವ ಪಡೆದ
ಪಾಪಿಯ ಸಂಘವ ಮಾಡಬಾರದು.
ಶೈವ ಸನ್ಯಾಸಿ, ಕಾಳಮುಖಿಯ ಗುರುವೆಂಬ
ಅನಾಮಿಕನ ನೋಡಲಾಗದು, ಮಾತಾಡಿಸಲಾಗದು,
ತಟ್ಟು ಮುಟ್ಟಿಯನಿಟ್ಟ ಭ್ರಷ್ಟಂಗೆ ಶಿಶುವಾದ
ಕಷ್ಟಭ್ರಷ್ಟನವನ ಮುಟ್ಟಲಾಗದು.
ವಿಭೂತಿ ರುದ್ರಾಕ್ಷಿಗಳಲ್ಲಿ ಪ್ರೀತಿಯಿಲ್ಲದ ನರನ
ಗುರುವೆಂಬ ಪಾತಕನ ಮಾತುಬೇಡ.
ಭಕ್ತರಲ್ಲದವರಲ್ಲಿ, ಭಕ್ತಿಯಿಲ್ಲದವರಲ್ಲಿ ಭಕ್ತನಾದರೆ ಅವನ ಯುಕ್ತಿ ಬೇಡ.

ಇವೆಲ್ಲವು ಇಲ್ಲದವರಲ್ಲಿ ಕರುಣನ ಹಡೆದು
ಬಲುಹಿಂದ ನಡೆವವನ ಸೊಲ್ಲುಬೇಡ
ಇದುಕಾರಣ ಕೂಡಲಚೆನ್ನಸಂಗಮನಲ್ಲಿ
ಸಮಯಕ್ಕೆ ಸಮನಿಸದವನು ನಮಗೆ ಬೇಡಯ್ಯಾ" -31

ಭಕ್ತಿಕೇಂದ್ರಿತವಾದ ಸಮಾಜದ ನವನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಶರಣರು ತಮ್ಮ ಸಮಕಾಲೀನವಾಗಿ ಬೆಳೆಯುತ್ತಿದ್ದ ಧಾರ್ಮಿಕ ಪಂಥಗಳನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ಆ ಧರ್ಮಗಳಲ್ಲಿದ್ದ ಗುರುವಿನ ಉಪದೇಶಗಳು, ಆಚರಣೆಗಳು ಕಾರ್ಯರೂಪದಲ್ಲಿ ಇಲ್ಲದಿರುವುದರಿಂದ ಅವುಗಳು ವ್ಯವಸ್ಥಿತ ಸಮಾಜಕ್ಕೆ ದೂರವಾಗಿ ಕಾಣುತ್ತಿದ್ದವು. ಆದ್ದರಿಂದ ಆ ಧರ್ಮ ಪಂಥಗಳಲ್ಲಿನ ಅನಾಚಾರಗಳನ್ನೆಲ್ಲಾ ಬಯಲಿಗೆಳೆದು ನಿರಾಕರಿಸುತ್ತಾರೆ. ಈ ವಚನ ಅಂದಿನ ಕಾಲದಲ್ಲಿ ಅನೈತಿಕ ಸಾಮಾಜಿಕ ಸ್ಥಿತಿ-ಗತಿಗಳ ಚಿತ್ರಣ ನೀಡುತ್ತದೆ.

" ಸೂಳೆಯ ಮಗ ಮಾಳವ ಪಾಳದೊಳಗೆಲ್ಲಾ
ತಮ್ಮಪ್ಪನ ಕಾಣದೆ ಅರಸುತೈದಾನೆ,
ಆಳೆಂದರಿಯ, ಅರಸೆಂದರಿಯ
ಬಹುಲಿಂಗ ಪೂಜಿಕ ಶೈವ ಬಹುಭಾವಗುರುಸ್ತಥಾ!
ಬಹು ಪ್ರಸಾದಂ ಭುಜಂತೇ ವೇಶ್ಯಾಪುತ್ರಸ್ತಥೈವಚ ಎಂದುದಾಗಿ
ಮತಿಹೀನ ಕಾಳಮೂಳರಿಗೆ ಶಿವಭಕ್ತಿ ದೊರೆಯದು
ಆಣೆ ನಿಮ್ಮಾಣೆ ಕೂಡಲಚನ್ನಸಂಗಮದೇವಾ." -32

ಕಲ್ಯಾಣ ಕ್ರಾಂತಿಯ ಸಮಕಾಲೀನ ಸಂದರ್ಭದಲ್ಲಿ ಶೈವಪಂಥಗಳು ಬಹುಲಿಂಗ ಪೂಜೆಯ ವಿಧಿವಿಧಾನಗಳನ್ನು ಕ್ರಮಬದ್ಧವಾಗಿ ಮಾಡುತ್ತಿರಲಿಲ್ಲ, ಸಮಾಜದಿಂದ ಬಹಿಷ್ಕೃತಗೊಂಡಿದ್ದ ವೇಶ್ಯಾವಾಟಿಕೆ ಕ್ರಮದ ಪದ್ಧತಿಯನ್ನು ತಿರಸ್ಕರಿಸುತ್ತಾರೆ. ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುಣಾತ್ಮಕ ವಿಚಾರಗಳನ್ನು ಮಂಡಿಸುತ್ತಾರೆ. ಯಾವುದೇ ಪಂಥವಿರಲಿ ಅದರ ನಕಾರಾತ್ಮಕ ವಿಚಾರಗಳನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಕೇವಲ ಧಾರ್ಮಿಕ ಮತಪಂಥಗಳ ನಿರಾಕರಣೆ ಮಾತ್ರವೇ ನಡೆಯದೇ, ಅನ್ಯಧರ್ಮಗಳ ನಿರಾಕರಣೆ ನಡೆಯುತ್ತದೆ. ಈ ಸನ್ನಿವೇಶಕ್ಕೆ ಅನುಗುಣವಾಗಿ ಬಸವಣ್ಣನವರ ಈ ವಚನ ಸ್ಪಷ್ಟಪಡಿಸುತ್ತದೆ.

" ಹರಿಯ ಬೇಡುವಡೆ ಅವಗೆ ಬಲಿಂದ್ರದಾನವನಿಕ್ಕಿದನು,
ಬ್ರಹ್ಮನ ಬೇಡುವಡೆ ಅವಗೆ ಶಿರವಿಲ್ಲ

ಬೌದ್ಧನ ಬೇಡುವಡೆ ಅವಗೆ ಬುದ್ಧಿ ಸಮನಿಸದು.

ಜಿನನ ಬೇಡುವಡೆ ಅವಗೆ ಒಡಲಿಲ್ಲ

ಬೆನಕನ ಬೇಡುವಡೆ ಅವಗೆ ಕೋಡು ಮುರಿಯಿತ್ತು,

ಭೈರವನ ಬೇಡುವಡೆ ಅವ ಒಟ್ಟುದನಿಕ್ಕಿ ಆಡುತಿರ್ದನು

ಅಭಯಂಕರ ಜಗಕ್ಕೆಲ್ಲಾ! ಜಗದಾನಿಯ ಬೇಡುವೆನು ಕೂಡಲಸಂಗಯ್ಯನ." -33

ಈ ಮೇಲ್ಕಂಡ ವಚನದಲ್ಲಿ ಬೌದ್ಧ, ಜೈನ, ವೈದಿಕ ಧರ್ಮಗಳ ದೇವರು, ವ್ಯಕ್ತಿ ಪೂಜೆಯನ್ನು ಹಾಗೂ ಅದರಲ್ಲಿ ಬರುವ ಸಾಂಸ್ಕೃತಿಕ ಆಚಾರ-ವಿಚಾರ, ರೂಢಿ, ಸಂಪ್ರದಾಯಗಳನ್ನು ತಿರಸ್ಕರಿಸಿ. ತಮ್ಮ ಆರಾಧ್ಯ ದೈವನನ್ನು ಪುರಸ್ಕರಿಸಲು ಹೇಳುತ್ತಾರೆ. ಇಲ್ಲಿ ಅನ್ಯ ಧರ್ಮಗಳ ನಿರಾಕರಣೆ ಬರುತ್ತದೆ. ಅಂಥ ಒಂದೊಂದು ಧರ್ಮದ ನಿಲುವುಗಳನ್ನು ಪ್ರಸ್ತಾಪಿಸಿ, ಅವು ಸಾಮಾಜಿಕವಾಗಿ ಉಪಯೋಗಕ್ಕೆ ಬಾರದ ಸ್ವತ್ತುಗಳಾಗಿವೆ ಎಂದು ತಿರಸ್ಕರಿಸುತ್ತಾರೆ. ಆದ್ದರಿಂದ ಅಂದಿನ ಕಾಲದಲ್ಲಿ ಧರ್ಮ-ಧರ್ಮಗಳ ನಡುವೆ ಅನ್ಯೋನ್ಯತೆಗಿಂತ ತಾತ್ವಿಕ ಸಂಘರ್ಷಗಳಿದ್ದವೆಂಬುದನ್ನು ಈ ಮೂಲಕ ತಿಳಿಯಬಹುದು. ಆದ್ದರಿಂದಲೇ ಇವುಗಳಿಗೆ ಪರ್ಯಾಯವಾಗಿ ಹೊಸ ಧರ್ಮದ ಉದಯವಾಯಿತೆನ್ನಬಹುದು.

ಧರ್ಮಗಳ ನಿರಾಕರಣೆಯ ಜೊತೆಯಲ್ಲಿಯೇ ಪುರಾಣ, ಶಾಸ್ತ್ರ ಆಗಮ, ಯಜ್ಞ, ಯಾಗ ಮುಂತಾದ ವೈದಿಕ ಮತಪಂಥಗಳ ಆಚರಣೆಯನ್ನು ತಿರಸ್ಕರಿಸಿದರು. ಬಸವಣ್ಣನವರ ವಚನ ಈ ಮಾತನ್ನು ಸ್ಪಷ್ಟೀಕರಿಸುತ್ತದೆ.

" ಶಾಸ್ತ್ರ ಘನವೆಂಬನೇ, ಕರ್ಮವ ಭಜಿಸುತ್ತದೆ.

ವೇದ ಘನವೆಂಬನೇ, ಪ್ರಾಣ ವಧೆಯ ಹೇಳುತ್ತದೆ,

ಶೃತಿ ಘನವೆಂಬನೇ? ಮುಂದಿಟ್ಟು ಅರಸುತ್ತಿದೆ.

ಅಲ್ಲೆಲ್ಲಿಯೂ ನೀವಿಲ್ಲದ ಕಾರಣ

ತ್ರಿವಿಧ ದಾಸೋಹದಲಲ್ಲದೆ ಕಾಣಬಾರದು ಕೂಡಲ ಸಂಗಮದೇವ." -34

ವೈದಿಕ ಮತಪಂಥಗಳಿಗೆ ಸಂಬಂಧಿಸಿದ ಶಾಸ್ತ್ರ, ವೇದ, ಶೃತಿಗಳ ನಿಯಮಾವಳಿಗಳನ್ನು ಉದಾಹರಿಸಿ ಅವುಗಳಿಂದಾಗುವ ಹಾನಿಗಳನ್ನು ಪಟ್ಟಿಮಾಡಿ ಅಲ್ಲಗಳೆಯುತ್ತಾರೆ. ಇಷ್ಟೇ ಅಲ್ಲದೇ ಮತ್ತೊಬ್ಬ ಶರಣರಾದ ಅಲ್ಲಮಪ್ರಭುಗಳು ತಮ್ಮ ವಚನದಲ್ಲಿ ವೇದ, ಪುರಾಣಗಳ ಅರ್ಥವಂತಿಕೆಯನ್ನು ತೆರೆದಿಡುತ್ತಾರೆ.

" ವೇದವೆಂಬುದು ಓದಿನ ಮಾತು; ಶಾಸ್ತ್ರವೆಂಬುದು ಸಂತೆಯ ಸುದ್ಧಿ,
ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹರಟೆ,
ಭಕ್ತಿ ಎಂಬುದು ತೋರಿ ಉಂಬಲಾಭ
ಗುಹೇಶ್ವರನೆಂಬುದು ಮೀರಿದ ಘನವು." -34

" ವೇದ ಭೇದಿಸಬರಿಯದೆ ಕೆಟ್ಟವು, ಶಾಸ್ತ್ರ ಸಾಧಿಸಲರಿಯದೇ ಕೆಟ್ಟವು
ಪುರಾಣ ಪೂರೈಸಲರಿಯದೇ ಕೆಟ್ಟವು
ಹಿರಿಯರು ತಮ್ಮ ತಮ್ಮ (ತಾವು) ಅರಿಯದೇ ಕೆಟ್ಟರು
ತಮ್ಮ ಬುದ್ಧಿ ತಮ್ಮನ್ನೇ ತಿಂದಿತ್ತು.
ನಿಮ್ಮನೆತ್ತ ಬಲ್ಲರೋ ಗುಹೇಶ್ವರಾ." -35

ಶರಣರು ಬದುಕಿದ್ದ ಸಮಕಾಲೀನ ಸಂದರ್ಭದಲ್ಲಿ ವೇದ ಪುರಾಣ, ಶಾಸ್ತ್ರಗಳು, ಸಾಮಾಜಿಕ ಒಳಿತಿಗೆ ಏನು ಕೊಡುಗೆಯನ್ನು ಕೊಡಲಾಗದಿದ್ದನ್ನು ಹೇಳುತ್ತಾ ಇವುಗಳನ್ನು ನಂಬಿದ್ದ ನಮ್ಮ ಪೂರ್ವಜರು ಕೆಟ್ಟು ಹೋದ ರೀತಿಯನ್ನು ಹೇಳುತ್ತಾರೆ. ಒಳಿತು ಸಾಧಿಸಲಾಗದ, ಇವುಗಳು ವ್ಯಕ್ತಿತ್ವವನ್ನು ಕಳೆದುಕೊಂಡಿವೆ. ಆದ್ದರಿಂದ ಇವುಗಳನ್ನು ಸಮಗ್ರವಾಗಿ ನಿರಾಕರಿಸುತ್ತಾರೆ. ಬಸವಣ್ಣನವರು ವೈದಿಕ ಒಪ್ಪಂದಗಳನ್ನು ನಿರಾಕರಿಸಿದರು, ವೈದಿಕ ಶಾಹಿ ಇವರನ್ನು ವಿರೋಧಿಸಿತು, ಯಾಕೆಂಬುದನ್ನು ಸೂಕ್ಷ್ಮವಾಗಿ ಹೇಳುತ್ತಾರೆ.

" ವೇದ ನಡುಗಿತ್ತು, ಶಾಸ್ತ್ರವಾಗಲಿ ಕೆಲಕ್ಕೆ ಸಾರಿದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗೊಟ್ಟಿದ್ದಿತ್ತಯ್ಯಾ!.
ಆಗಮ ಹೊರತೊಲಗಿ ಆಗಲಿದ್ದಿತ್ತಯ್ಯಾ!
ನಮ್ಮ ಕೂಡಲಸಂಗಯ್ಯನು
ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ" -36

ಶ್ರೇಷ್ಠ-ಕನಿಷ್ಠ ವರ್ಗಗಳ ತಾರತಮ್ಯ ಸಮಾಜವಾಗಿದ್ದ ಕಾರಣ,ವೇದಗಳ ಕಾಲದಿಂದ ಶ್ರೇಷ್ಠ ಮತ್ತು ಕನಿಷ್ಠವೆಂದು ವರ್ಗಗಳನ್ನು ಪ್ರಾಥಮಿಕ ಹಂತದಲ್ಲಿ ವಿಭಾಗಿಸಿ ಹೇಳುತ್ತಾರೆ. ದಿಢೀರನೇ ಉಂಟಾದ ಕಲ್ಯಾಣದ ಕ್ರಾಂತಿಯ ಪ್ರಭಾವದಿಂದ ಶರಣರ ನುಡಿಗಳಿಂದ ಸನಾತನ ಪರಂಪರೆಗೆ ಬಲವಾದ ಪೆಟ್ಟು ಬಿದ್ದಿತು. ಆ ಕಾರಣದಿಂದಲೇ ಶರಣರು ಉತ್ತಮ ಜಾತಿಯನ್ನು ಅಂತ್ಯ ಜಾತಿಯ ಮಟ್ಟಕ್ಕಿಳಿಸಿ ಅವರ ಜೊತೆಯಲ್ಲಿ ಕುಳಿತು ಊಟ ಸವಿದು ಬಹುಕಾಲದಿಂದ ಬಂದ

ಕಟ್ಟುಪಾಡುಗಳನ್ನು ಮುರಿಯುತ್ತಾರೆ. ಕಲ್ಯಾಣಕ್ರಾಂತಿಯ ಸಮಾಜದಲ್ಲಿ ಶರಣರು ಧಾರ್ಮಿಕ ಮತಪಂಥಗಳಾದ ಶೈವಪಂಥಗಳು ವೈದಿಕ ಮತಪಂಥಗಳು ಜೈನ, ಬೌದ್ಧ ಧರ್ಮಗಳ ಆಚರಣೆಗಳನ್ನು ನಿರಾಕರಿಸಿದರಲ್ಲದೇ ತಮ್ಮದೇ ತಾತ್ವಿಕ ನಿಲುವುಗಳನ್ನೊಳಗೊಂಡ ಸಮಾನತೆಯ ಧರ್ಮಕ್ಕೆ ಅಡಿಗಲ್ಲು ಹಾಕಿದರು. ವಚನ ಧರ್ಮಕ್ಕೆ ಒಂದು ಮಹತ್ವದ ಸ್ಥಾನವನ್ನು ಒದಗಿಸಿಕೊಟ್ಟವರಲ್ಲಿ ಎಲ್ಲಾ ವರ್ಗಗಳ ಶರಣರಿದ್ದಾರೆ. ಸ್ತ್ರೀ ಪುರುಷರೆಂಬ ಭೇದ ಭಾವವಿಲ್ಲದೆ ತನು ಮನ ಧನವನ್ನು ಅರ್ಪಿಸಿದ್ದಾರೆ. ಎಲ್ಲಾ ಶರಣ ಪ್ರತಿಪಾದನೆಯಿಂದ ಸನಾತನ ಕಾಲದಿಂದ ಬೇರು ಬಿಟ್ಟಿದ್ದ ಅತಿರೇಕದಿಂದ ಕೂಡಿದ ಧರ್ಮ ಪಂಥಗಳ ಬದಲಿಗೆ ಹೊಸ ಧರ್ಮದ ಉಗಮವಾಯಿತು ಜಡ್ಡು ಗಟ್ಟಿದ ಧರ್ಮ ಸಂಸ್ಕೃತಿಗಳು ಪುನರ್ ಮೌಲ್ಯೀಕರಣಗಳ ಬದಲಾಗಿ, ಪರ್ಯಾಯ ಸೃಷ್ಟಿಯಂತೆ ' ಕಲ್ಯಾಣ ಕ್ರಾಂತಿಗೆ ದಾರಿ ಮಾಡಿಕೊಟ್ಟಿತು ಅದರ ಫಲಿತವೇ ಈ ಧಾರ್ಮಿಕ ಮತಪಂಥಗಳ ತಿರಸ್ಕಾರವೆನ್ನಬಹುದು.

ಪ್ರಸ್ತುತ ಅಧ್ಯಾಯದಲ್ಲಿ ಸಾಮಾಜಿಕ ವ್ಯರುಧ್ಯಗಳೆಂಬ ವಿಷಯದಡಿಯಲ್ಲಿ ವೈರುಧ್ಯಗಳ ಬಗೆಗಳು ಹಾಗೂ ಅವುಗಳ ವಿವರಣೆ ಗುರು ಭಕ್ತಿಯ ಸಂಕೇತವಾದ ಲಿಂಗ ಮತ್ತು ಭಕ್ತಿಯಿಂದ ಆರಾಧಿಸುವ ಶರಣ ಸಂಕುಲದ ಶ್ರೇಷ್ಟತೆಯನ್ನು ಹೇಳುತ್ತದೆ. ಸ್ಥಾವರ ಜಂಗಮ ಪರಿಕಲ್ಪನೆಯ ಮಹತ್ವವನ್ನು ಹಾಗೂ ಸಾಂಸ್ಕೃತಿಕ ವೈರುಧ್ಯಗಳ ಸಂಕೇತವಾದ ಗುರು–ಲಿಂಗ ಜಂಗಮದ ಬಗ್ಗೆ ತಿಳಿಸುತ್ತದೆ, ಹಾಗೂ ಅರುಹು–ಕುರುಹು, ಸತಿ–ಪತಿ, ಭಕ್ತ–ಭವಿ ಮುಂತಾದ ವೈರುಧ್ಯಗಳ ಕುರಿತು ಹೇಳಲಾಗಿದೆ. ವೀರಶೈವ ಧರ್ಮವು ಶೈವಧರ್ಮದಲ್ಲಿದ್ದ ಮತಪಂಥಗಳನ್ನ ತಿರಸ್ಕರಿಸಿಸಿ ಹೊಸಧರ್ಮ ಉದಯವಾದುದರ ಬಗ್ಗೆ ತಿಳಿಸಲಾಗಿದೆ. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ವೈರುದ್ಯಗಳಿಗಿಂತಲೂ, ಸಾಂಸ್ಕೃತಿಕ ವೈರುದ್ಯಗಳೇ ಚರ್ಚೆಗೆ ಗ್ರಾಸವಾಗಿದ್ದ ವಿಷಯವಾಗಿವೆ ಎಂಬುದು ನನ್ನ ಅಭಿಪ್ರಾಯ.

ಅಡಿ ಟಿಪ್ಪಣಿಗಳು

1. ಸಂಕೀರ್ಣ ವಚನ ಸಂಪುಟ 1. ಡಾ. ಎಂ.ಎಂ ಕಲ್ಬುರ್ಗಿ 1993 ಪು 456. ವ 1362
2. ಸಂಕೀರ್ಣ ವಚನ ಸಂಪುಟ 1. ಡಾ. ಎಂ.ಎಂ ಕಲ್ಬುರ್ಗಿ 1993 ಪು 414 ವ 1281
3. ಅಂಬಿಗರ ಚೌಡಯ್ಯಗಳ ವಚನಗಳು, ಡಾ॥ವಿದ್ಯಾಶಂಕರ, 1998, ಪು 35 ವ 106.
4. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 18 ವ 62.
5. ಅಂಬಿಗರ ಚೌಡಯ್ಯನ ವಚನಗಳು, ಡಾ॥ವಿದ್ಯಾಶಂಕರ, 1998, ಪು 28–29, ವ 85.
6. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 334 ವ 1207.
7. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 186 ವ 744.
8. ಶೈವ ದರ್ಶನ, ಡಾ॥ಜೆ. ರುದ್ರಪ್ಪ, 1973, ಪು 304–305.
9. ಡಾ॥ ಎಸ್.ಸಿ.ನಂದಿಮಠರ ಲೇಖನಗಳು , ಸಂ. ಡಾ॥ಬಿ.ವ್ಹಿ.ಶಿರೂರ, 2007, ಪು304.
10. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ. ಮಲ್ಲಾಪುರ, 1993, ಪು 370 ವ 1251.
11. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 86 ವ 181.
12. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 87 ವ 182.
13. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 4 ವ 4.
14. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 59 ವ 183.
15. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 53 ವ 170.
16. ಚೆನ್ನಬಸವಣ್ಣನವರ ವಚನ ಸಂಪುಟ–3, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 402 ವ 1165.
17. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 85 ವ 207.
18. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 77 ವ 209.
19. ಚೆನ್ನಬಸವಣ್ಣನವರ ಸಂಪುಟ–3 , ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 587 ವ 1596.
20. ವಚನಪರಿಭಾಷಿಕ ಕೋಶ , ಸಂ. ಡಾ॥ಎಸ್.ವಿದ್ಯಾಶಂಕರ, 1993, ಪು 186–187.
21. ಅಲ್ಲಮ ಪ್ರಭುದೇವರ ವಚನಗಳು, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 32 ವ 103.
22. ಬಸವಣ್ಣನವರ ವಚನ ಸಂ–1, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 19 ವ 66.

23. ಬಸವಣ್ಣನವರ ವಚನ ಸಂ–1, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 211 ವ 821.

24. ವಚನ ಸಮಗ್ರ , ಡಾ॥ಪಿ.ವಿ.ನಾರಾಯಣ, 2005, ಪು 457.

25. ವಚನಪರಿಭಾಷಿಕ ಕೋಶ , ಸಂ. ಡಾ॥ಎಸ್.ವಿದ್ಯಾಶಂಕರ, 1993, ಪು 69.

26. ಚೆನ್ನಬಸವಣ್ಣನವರು (ಚರಿತ್ರೆ,ತತ್ವ ,ಸಾಹಿತ್ಯಾದಿ ವಿವೇಚನೆ), ಡಾ॥ ಆರ್.ಸಿ.ಹಿರೇಮಠ, 1965, ಪು 18.

27. ಚೆನ್ನಬಸವಣ್ಣನವರು (ಚರಿತ್ರೆ,ತತ್ವ ,ಸಾಹಿತ್ಯಾದಿ ವಿವೇಚನೆ), ಡಾ॥ ಆರ್.ಸಿ.ಹಿರೇಮಠ, 1965, ಪು 19.

28. ಚೆನ್ನಬಸವಣ್ಣನವರು (ಚರಿತ್ರೆ,ತತ್ವ ,ಸಾಹಿತ್ಯಾದಿ ವಿವೇಚನೆ), ಡಾ॥ ಆರ್.ಸಿ.ಹಿರೇಮಠ, 1965, ಪು 20.

29. ಚೆನ್ನಬಸವಣ್ಣನವರು (ಚರಿತ್ರೆ,ತತ್ವ ,ಸಾಹಿತ್ಯಾದಿ ವಿವೇಚನೆ), ಡಾ॥ ಆರ್.ಸಿ.ಹಿರೇಮಠ, 1965, ಪು 20,21.

30. ಚೆನ್ನಬಸವಣ್ಣನವರು (ಚರಿತ್ರೆ,ತತ್ವ ,ಸಾಹಿತ್ಯಾದಿ ವಿವೇಚನೆ), ಡಾ॥ ಆರ್.ಸಿ.ಹಿರೇಮಠ, 1965, ಪು 21–23.

31. ಚೆನ್ನಬಸವಣ್ಣನವರ ವಚನ ಸಂ–3, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 630 ವ 1688.

32. ಚೆನ್ನಬಸವಣ್ಣನವರ ವಚನ ಸಂಪುಟ, ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 60 ವ 197.

33. ಚೆನ್ನಬಸವಣ್ಣನವರ ವಚನ ಸಂಪುಟ–3, ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 643 ವ 1743.

34. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 392 ವ1108.

35. ಅಲ್ಲಮ ಪ್ರಭುದೇವರ ವಚನ ಸಂಪುಟ, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 128 ವ 465.

36. ಅಲ್ಲಮ ಪ್ರಭುದೇವರ ವಚನ ಸಂಪುಟ, ಸಂ. ಡಾ॥ಬಿ.ವ್ಹಿ.ಮಲ್ಲಾಪುರ, 1993, ಪು 90 ವ 324.

37. ಬಸವಣ್ಣನವರ ವಚನಗಳು, ಡಾ॥ಎಂ.ಎಂ.ಕಲ್ಬುರ್ಗಿ, 1993, ಪು 187–188 ವ750.

ಅಧ್ಯಾಯ – 6

ಕಲ್ಯಾಣಕ್ರಾಂತಿಯ ಭಾಷಾಸ್ವರೂಪ

ಸಂವಹನ ಮಾಧ್ಯಮಗಳಲ್ಲಿ ಅತ್ಯಂತ ಪ್ರಭಾವವಾದ ಸಂವಹನ ಮಾಧ್ಯಮ ಭಾಷೆ. ಭಾಷೆಯ ಎಲ್ಲಾ ಸಾಧ್ಯತೆಗಳನ್ನು ಸಂಪೂರ್ಣವಾಗಿ ಬಳಸಿಕೊಂಡವರು ವಚನಕಾರರು. ಭಾಷೆಯ ಬಳಕೆಯ ಎಲ್ಲಾ ಸಾಧ್ಯತೆಯನ್ನು ತೋರಿಸಿಕೊಟ್ಟವರು ವಚನಕಾರರು.

ವಚನಕಾರರಿಗೆ ಎಲ್ಲವೂ ಅನಿವಾರ್ಯವಾಗಿತ್ತು ಏಕೆಂದರೆ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಕ್ರಾಂತಿಯನ್ನು ತರುವಾಗ ಜನಸಾಮಾನ್ಯರಿಗೆ ಅರಿವು ಮೂಡಿಸಲು ಭಾಷೆಯನ್ನು ಪ್ರಮುಖ ಅಸ್ತ್ರವಾಗಿ ಬಳಸುವ ಅನಿವಾರ್ಯತೆ ಇತ್ತು. ತಮಗಿಂತ ಪೂರ್ವಕಾಲದಲ್ಲಿ ಅಸ್ಥಿತ್ವದಲ್ಲಿದ್ದ ಧರ್ಮಗಳು ತಮ್ಮ ಧರ್ಮಪ್ರಚಾರದಲ್ಲಿ ಬಳಸಿದ ಭಾಷೆ ಶ್ರೀಮಂತವರ್ಗಕ್ಕೆ ಸೀಮಿತವಾಗಿತ್ತು. ಜೈನ, ಭೌದ್ದ ದರ್ಮಗಳ ಪ್ರಚಾರದ ಭಾಷೆಗಿಂತ ಹರಿತವಾದ ಸರಳವಾದ ಭಾಷೆಯನ್ನು ಬಳಸಿ ಜನಸಾಮಾನ್ಯರನ್ನು ವೈಚಾರಿಕ ನೆಲೆಗೆ ಕೊಂಡೊಯ್ಯಬೇಕಾಗಿತ್ತು. ವಚನಕಾರರು ತಮಗಿಂತ ಹಿಂದೆ ಇದ್ದ ಭಾಷೆ ಪಂಡಿತರಿಂದ ಪಂಡಿತರಿಗಾಗಿ, ಪಂಡಿತರಿಗಾಗಿ ಬರೆದ ಭಾಷೆಯಾಗಿತ್ತು. ಇಂತಹ ಭಾಷೆಯನ್ನು ತಿರಸ್ಕರಿಸಿ ಶ್ರೀಸಾಮಾನ್ಯರನ್ನು ಮುಟ್ಟಲೆಂದೇ ಆಡುನುಡಿ ತಮ್ಮ ವಚನಗಳಲ್ಲಿ ಬಳಸಿದರು. ಇವುಗಳ ಮುಖಾಂತರ ಸರಳವಾದ ಭಾಷೆಯು ಪ್ರಯೋಗವಾಯಿತು. ಜೊತೆಗೆ ಧಾರ್ಮಿಕ ಪ್ರಚಾರಕ್ಕೆ ಅನುಕೂಲವಾಯಿತು.

ಧೀರ್ಘ ಸಮಾಸಯುಕ್ತ ಪದ ಹಾಗೂ ಸಂಸ್ಕೃತ ಭೂಯಿಷ್ಠ ಪದ ಪ್ರಯೋಗಗಳಿಂದ ಕೂಡಿದ ಭಾಷೆ ಜನಸಾಮಾನ್ಯರಿಗೆ ಎಟುಕಲು ಸಾಧ್ಯವೇ ಇರಲಿಲ್ಲ. ಅಂತಹ ಸಂದರ್ಭದಲ್ಲಿ ದೇವಗಣ, ಬ್ರಹ್ಮಗಣ ಅರಿಯದೆ ನಿಯಮ ನಿಬಂದನೆಗಳನ್ನು ಮೀರಿ 'ಒಲಿದಂತೆ' ಬರೆದವರು ಭಾಷೆ ಬಳಿಸದವರು ವಚನಕಾರರು. ಅಂದಿನ ಸಮಾಜದಲ್ಲಿ ಇದ್ದಂತಹ ಅನೇಕ ಶೂದ್ರ ಸಮುದಾಯ ಅನೇಕ ರೀತಿಯ ಅಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಮೂಡನಂಬಿಕೆಯಲ್ಲಿ ಅನೇಕ ರೀತಿಯ ಕೆಟ್ಟ ಸಂಪ್ರದಾಯದಲ್ಲಿ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಉಳ್ಳವರು ಉಳ್ಳದವರ ಮೇಲೆ ಸವಾರಿಯನ್ನು ಮಾಡುತ್ತಿದ್ದರು. ಅಂತಹ ಸಂಧರ್ಭದಲ್ಲಿ ಅನೇಕ ರೀತಿಯ ಸಾಮಾಜಿಕ

ಅವ್ಯವಸ್ಥೆಗಳಿಗೆ ಹಾಗೂ ಅನೇಕ ರೀತಿಯ ಸಾಮಾಜಿಕ ಪ್ರಗತಿಗೆ ಅಡ್ಡಿಯುಂಟು ಮಾಡಿದ್ದನ್ನು ಗಮನಿಸುತ್ತಿದ್ದ ಶರಣರು ಇದಕ್ಕೊಂದು ಪರಿಹಾರ ಕಂಡುಕೊಳ್ಳಲು ಅನೇಕ ರೀತಿಯಲ್ಲಿ ಭಾಷಾ ಮಾಧ್ಯಮಗಳನ್ನು ಜನರಿಗೆ ಪರಿಚಿತವಾಗುವಂತೆ ಮಾಡುವಲ್ಲಿ ಶ್ರಮಿಸಿದರು. ಅದರ ಜೊತೆಗೆ ಸಾಮಾಜಿಕ ಕಲ್ಯಾಣಕ್ಕೆ ಭದ್ರ ಬುನಾದಿ ಹಾಕಿದರು.

ಭಾಷೆಯು ಕೇವಲ ಸಂವಹನ ಮಾಧ್ಯಮವಾಗಿರದೆ ಅದು ಜನರ ಅಂದರೆ ಸಮುದಾಯದ ಅನೇಕ ರೀತಿಯಿಂದ ಸಾಮರಸ್ಯ ಸಮನ್ವಯವನ್ನು ಸಾದಿಸಿ ಅದರ ಮೂಲಕ ಸಾಮಾಜಿಕ ಕಲ್ಯಾಣಕ್ಕೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುವ ಸಾಧನವಾಗಿ ಮಾರ್ಪಾಟುಗೊಂಡಿತು. ಅಂದರೆ ಸಮಾಜದಲ್ಲಿ ಇದ್ದಂತಹ ಅನೇಕ ಸಮಸ್ಯೆಗಳಿಗೆ ಭಾಷೆಯ ಮೂಲಕ ನೋವು ನಲಿವು ಆಕಾಂಕ್ಷೆಗಳನ್ನು ಪರಸ್ಪರ ಹಂಚಿಕೊಳ್ಳಲು ಸಹಾಯವಾಯಿತು. ಶರಣರ ಸಾಹಿತ್ಯ ಭಾಷೆಯು ಒಂದು ವರ್ಗದ ಹಿಡಿತದಲ್ಲಿದ್ದ ಭಾಷೆಯು ಪಂಡಿತ ಮಂಡಲಿಯಿಂದ, ರಾಜಾಶ್ರಯದಿಂದ ಉಸಿರುಗಟ್ಟಿದ ವಾತಾವರಣದಿಂದ ವಿಮುಕ್ತಿ ಗಳಿಸಿ ಅದೇ ಆಡುಭಾಷೆಯನ್ನು, ವ್ಯವಹಾರ ಭಾಷೆಯನ್ನು, ಜನಸಾಮಾನ್ಯರ ಭಾಷೆಯನ್ನು ಸಾಹಿತ್ಯ ಸಿಂಹಾಸನಕ್ಕೇರಿಸಿದರು. ಆ ಮೂಲಕ ಮೌಢ್ಯತೆಯನ್ನು ಅಳಿಸಿ ಸಮಾಜದಲ್ಲಿ ಉತ್ತಮ ವಾತಾವರಣವನ್ನು ನಿರ್ಮಿಸಲು ಕಾರಣ ಕರ್ತರಾದರು. ಅಂದರೆ ಶೂದ್ರ ವರ್ಗದ ಜನರು ಮಾತಿನ ಮೇಲೆ ಹಿಡಿತವಿಲ್ಲದವರು ಭಾಷೆಯ ಬಳಕೆ ಗೊತ್ತಿಲ್ಲದವರು ಅನೇಕ ಸಾಮಾಜಿಕ ಸುಳಿಯಲ್ಲಿ ಸಿಲುಕುತ್ತಿದ್ದರು ಅಂತಹ ಸಂದರ್ಭದಲ್ಲಿ ಶರಣರು ಭಾಷಾ ಕೌಶಲ್ಯತೆಯನ್ನು ಮೆರೆದು ಸಮಾಜದ ಪ್ರತಿಯೊಂದು ವರ್ಗವೂ ಅದರ ಮಹತ್ವವನ್ನು ತಿಳಿದು ಹೇಗೆ ಸಮಾಜದೊಂದಿಗೆ ವ್ಯವಹರಿಸಬೇಕೆಂಬುದನ್ನು ಅರಿತರು. ಅಂದರೆ ಸಮಾಜದ ಮುಖ್ಯವಾಹಿನಿಯಲ್ಲಿ ಮುಂದೆ ಇದ್ದವರು ಶೂದ್ರರ ಹೀಯಾಳಿಕೆಗೆ ಭಾಷಾ ಪ್ರಜ್ಞೆ ಇಲ್ಲದ ಜನರೊಂದಿಗೆ ದಬ್ಬಾಳಿಕೆಯ ಸಂದರ್ಭದಲ್ಲಿ ಶರಣರು ಭಾಷಾ ಕೌಶಲ್ಯತೆಯ ಮೆರೆದರು.

ಭಾಷಾ ದೃಷ್ಟಿಯಿಂದ 'ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶ' ದ ವೇಳೆಯಲ್ಲಿ ವಿಶಿಷ್ಟತೆಯನ್ನು ಗುರುತಿಸಬಹುದಾಗಿದೆ. ಏಕೆಂದರೆ ಭಾಷೆಯು ನಿಂತ ನೀರಾಗುವುದಿಲ್ಲ. ಅದಕ್ಕೆ ಯಾವಾಗಲು ಹರಿಯುವ ನೀರಿನ ಗುಣವಿರುತ್ತದೆ. ಭಾಷೆಯು ಸಮುದಾಯದೊಂದಿಗೆ ಸಂಪರ್ಕ ಏರ್ಪಡಿಸುವಾಗ ಸಾಂಸ್ಕೃತಿಕ ಚಲನೆ ಇದ್ದೇ ಇರುತ್ತದೆ. ಈ ಸಂಚಲನೆಯಲ್ಲಿ ಭಾಷೆಯು ಬಹುರೂಪವನ್ನು ಸೃಷ್ಟಿಸಿಕೊಂಡು ತನ್ನ ಅಸ್ತಿತ್ವವನ್ನು ವಿಭಿನ್ನ ರೂಪದಲ್ಲಿ ಸ್ಥಾಪಿಸಿಕೊಳ್ಳುತ್ತದೆ. ಈ

ಸಂದರ್ಭದಲ್ಲಿ ಹುಟ್ಟಿಕೊಂಡ ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಒಂದು ರೀತಿಯ ಅಕ್ಷರ ರೂಪಿಯಾದ ಮಾತಿನ ವಿಚಾರ ರೂಪಗೊಳ್ಳುತ್ತದೆ. ಮುಂಬರುವ ಸಾಹಿತ್ಯ ಮತ್ತು ಜನಾಂಗೀಯ ಬದುಕಿನ ಸಾಂಸ್ಕೃತಿಕ ಘಟ್ಟಗಳ ಮೇಲೆ ಪರಿಣಾಮ ಬೀರುತ್ತದೆ. ಮುಂದಿನ ಚಳುವಳಿಗೆ ಈ ಕ್ರಾಂತಿ ಎಲ್ಲಾ ಭಾಷಾ ಸ್ವರೂಪ ಆಯಾಮಗಳ ದೃಷ್ಟಿಯಿಂದ ಮಹತ್ವವೆನಿಸಿದೆ.

ಮಧ್ಯಕಾಲೀನ ಕನ್ನಡ ಭಾಷಾ ಇತಿಹಾಸದಲ್ಲಿ ಹನ್ನೆರಡನೆ ಶತಮಾನವು ಮಹತ್ವ ಎನಿಸಿದೆ. ಏಕೆಂದರೆ ದೇಶೀಯ ಭಾಷೆಗಳಿಗೆ ಕುಂದುಂಟಾದ ಕಾಲದಲ್ಲಿ ಕಲ್ಯಾಣಕ್ರಾಂತಿಯ ಸಾಂಸ್ಕೃತಿಕ ಪರಿಸರ ಸ್ಥಳೀಯ ಭಾಷೆಗಳಿಗೆ ಪ್ರಾಬಲ್ಯ ಬರುವಂತೆ ಮಾಡಿತು. ಆ ಸಮಕಾಲೀನ ಸಂದರ್ಭದಲ್ಲಿ ಧರ್ಮಗಳ ಪ್ರಭಾವವು ಜನಾಂಗಗಳ ಮೇಲೆ ಇದ್ದುದರಿಂದ ಧಾರ್ಮಿಕ ಪರಿಭಾಷೆ ಅನಿವಾರ್ಯವಾಗಿತ್ತು. ಈ ಹಿನ್ನಲೆಯಲ್ಲಿ ಸರಳ ಮಾರ್ಗವನ್ನು ಅನುಸರಿಸಲು ಬಂದ ಧರ್ಮಗಳು ತನ್ನದೇ ಆದ ಹಾದಿಯನ್ನು ಹಿಡಿಯತ್ತವೆ. ಜೈನ, ಶೈವಧರ್ಮಗಳು, ವಿಭಿನ್ನ ಮಾರ್ಗ ತಳೆದು ಅವುಗಳ ವಿಶಿಷ್ಟತೆ ಮೆರೆದಿವೆ. ಶೈವ ಧರ್ಮದಿಂದ ಉಗಮವಾದ ವೀರಶೈವ ಧರ್ಮ ಜನಸಾಮಾನ್ಯರ ಭಾಷೆಯನ್ನು ಬಳಸಿ, ತಮ್ಮ ಬದುಕನ್ನೇ ಶ್ರೇಷ್ಠವಾಗಿಸುವಲ್ಲಿ ದಿಟ್ಟ ಹೆಜ್ಜೆಗಳನ್ನು ಇಡುತ್ತದೆ. ಈ ಕ್ರಾಂತಿಯು ತನ್ನ ಭಾಷೆಯನ್ನು ಸರಳೀಕರಿಸಿ ಸಮುದಾಯ ಪ್ರಜ್ಞೆಯೊಂದಿಗೆ ಭಾಷೆ ಉದಾರೀಕರಣಗೊಳಿಸುವಲ್ಲಿ ನಿರ್ಧಾರವನ್ನು ಕೈಗೊಳ್ಳುತ್ತದೆ. ಹೀಗೆ ತಳ ಸಮುದಾಯದಿಂದ ಬಂದಂತಹ ಪ್ರಜ್ಞಾವಂತ ಶರಣರು, ಮೇಲ್ವರ್ಗದಿಂದ ಬಂದಂತಹ ವಚನಕಾರರು ಬಳಸುವ ಭಾಷಾ ಸೂಕ್ಷ್ಮತೆಯನ್ನು ಗಮನಿಸಿದರೆ, ಅವರ ಬಹುರೂಪ ವ್ಯಕ್ತಿತ್ವ ಮತ್ತು ಸಾಂಸ್ಕೃತಿಕ ಭಾಷಾ ಸ್ವರೂಪ ತಿಳಿಯುತ್ತದೆ.

ವಚನಕಾರರಲ್ಲಿ ಭಾಷಾ ಚಿಂತಕರಾಗಿ ಬರುವ ಬಸವಣ್ಣ, ಅಲ್ಲಮ, ಸಿದ್ಧರಾಮ, ಚೆನ್ನಬಸವಣ್ಣ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಮುಂತಾದದ ಶರಣ, ಶರಣೆಯರು ಬಳಸುವ ಭಾಷೆ ವಿಭಿನ್ನ ಸ್ವರೂಪದ್ದಾಗಿದೆ. ಇವರು ಬಂದ ಕುಲಮೂಲವನ್ನು ಗ್ರಹಿಸಿ ಅನಂತರದಲ್ಲಿ ಆದಂತಹ ಬದಲಾವಣೆಯಲ್ಲಿ ಸ್ವೀಕೃತಗೊಂಡ ಸಂಸ್ಕೃತಿಯು ಅವರ ಭಾಷಾ ಪರಿಸರವನ್ನು ಬದಲಾಯಿಸುತ್ತದೆ. ಎಲ್ಲಾ ಕುಲ ಸಮುದಾಯಗಳು ಅವುಗಳ ಮೂಲ ರೂಪವನ್ನು ಪರಿಷ್ಕರಿಸಿ ತಮ್ಮ ಬದುಕಿಗೆ ಹೊಸ ರೂಪ ಕೊಟ್ಟ ಭಾಷಾ ನಾವಿನ್ಯತೆಯನ್ನು ಕೊಟ್ಟಿರುವುದು ಮುಂದಿನ ವಚನಗಳು ಸಾಕ್ಷೀಕರಿಸುತ್ತದೆ. ಶರಣರು ಭಾಷಾ ಕೌಶಲ್ಯತೆಯನ್ನು ಮೆರೆದು ಸಮಾಜದ ಪ್ರತಿಯೊಂದು ವರ್ಗವೂ ಅದರ ಮಹತ್ವವನ್ನು ತಿಳಿದು ಹೇಗೆ ಸಮಾಜದೊಂದಿಗೆ ವ್ಯವಹರಿಸಬೇಕೆಂಬುದನ್ನು ಅರಿತರು. ಅಂದರೆ ಸಮಾಜದ ಮುಖ್ಯವಾಹಿನಿಯಲ್ಲಿ ಮುಂದೆ ಇದ್ದವರು ಶೂದ್ರರ ಹೀಯಾಳಿಕೆಗೆ ಭಾಷಾ ಪ್ರಜ್ಞೆ ಇಲ್ಲದ

ಜನರೊಂದಿಗೆ ದಬ್ಬಾಳಿಕೆಯ ಸಂದರ್ಭದಲ್ಲಿ ಶರಣರು ಭಾಷಾ ಕೌಶಲ್ಯತೆಯ ಜಾಣತನವನ್ನು ಮೆರೆದರು..

'ಲೋಕದ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿರಿ'...

ಶರಣರು ಲೋಕ ಸುಧಾರಣೆಯನ್ನು ಮಾಡಹೊರಟವರಲ್ಲ ತಮ್ಮನ್ನು ತಾವೇ ತಿದ್ದಿಕೊಂಡು ಇತರರಿಗೆ ಮಾದರಿಯಾದರು, ಈ ವಚನಗಳನ್ನು ಜನಸಮುದಾಯದೊಳಗೆ ಪದೇ ಪದೇ ಹೇಳಿದಾಗ ಜನರ ಮನಃಪರಿವರ್ತನೆಗೆ ಕಾರಣವಾಗುತ್ತದೆಂದು ತಿಳಿಸಿದರು. ಇಂಥ ಗುರುತರವಾದ ಬದಲಾವಣೆಯನ್ನು ಶಿವಶರಣರು ಕಲ್ಯಾಣದ ಸಮಯದಲ್ಲಿ ಹುಟ್ಟು ಹಾಕಿದರು.

ಭಾಷೆಯು ಭವಿಷ್ಯದ ಸಂವೇದನೆಗಳನ್ನು ಹುಡುಕುವ ಸಾಧನವಾಗುತ್ತದೆ. ಅಲ್ಲದೆ ಸಮಕಾಲೀನ ಸಾಂಸ್ಕೃತಿಕ ಬದುಕನ್ನು ಸುಧಾರಿಸುವ ತಂತ್ರಾಂಶವಾಗಿ ಹೊರಹೊಮ್ಮಿಸಬೇಕೆಂಬುದು ಯಾವುದೇ ಒಂದು ಕ್ರಾಂತಿಯ ಆಶಯವಾಗುತ್ತದೆ.

" ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ
ಕೂಡಲಸಂಗಮದೇವನೊಂತೊಲಿವನಯ್ಯಾ."–1

ಮೇಲೆ ಹೇಳಿದ ವಚನವು ಮನುಷ್ಯನ ಭಾಷಾ ಮಾಧ್ಯಮವು ಹೇಗೆ ಇರಬೇಕೆಂಬುದನ್ನು ಹೇಳುತ್ತದೆ. ಆಡುವ ಮಾತು ಬಳಸುವ ಭಾಷೆ ಮುತ್ತಿನಂತೆ ಅದರ ಹಾರದ ಆಕರ್ಷಣೆಯಂತೆ ಹಾಗೂ ಸ್ವಯಂ ದೀಪ್ತಿಯಂತೆ ಪ್ರಕಾಶಿಸಬೇಕು. ಸ್ಪಟಿಕ ಸಲಾಕೆಯಂತೆ ನೇರ ಹಾಗೂ ವೃದುವಾಗಿರಬೇಕು. ಈ ವಚನದ ಕೊನೆಯಲ್ಲಿ ಸ್ಪಷ್ಟವಾಗಿ ಭಾಷಾ ಸ್ವರೂಪದ ಪರಿಕಲ್ಪನೆ ನೀಡಿದ್ದಾರೆ. ' ಲಿಂಗಮೆಚ್ಚಿ ಅಹುದು ಅಹುದು' ಎನ್ನುವಂತೆ ಇರಬೇಕು ಅಂದರೆ ಉಳ್ಳವರ ಜಡ್ಡುಗಟ್ಟಿದ ಸಮಾಜದ ಪರಿವರ್ತಿತ ಭಾಷೆ ಬಳಸಬೇಕು ಎನ್ನುತ್ತಾರೆ ಬಸವಣ್ಣ. ಅಂದಿನ ಕಾಲದಲ್ಲಿ ಭಾಷಾ ಕಲಿಕೆಯು ಉಳ್ಳವರಿಗೆ ಮಾತ್ರ ಸೀಮಿತವಾಗಿತ್ತು. ರಾಜಾಶ್ರಯದಲ್ಲಿದ್ದ ವ್ಯಕ್ತಿಗಳಿಗೆ ಹಾಗೂ

ಮನೆತನಗಳಿಗೆ ಈ ಸೌಲಭ್ಯ ಸಿಗುತ್ತಿತ್ತು. ಆದ್ದರಿಂದ ಬೇರೆ ಯಾವುದೇ ಕುಲ ಸಮುದಾಯದವರಿಗೆ ಶೈಕ್ಷಣಿಕ ಸೌಲಭ್ಯಗಳು ದೊರೆಯುತ್ತಿರಲಿಲ್ಲ. ಅಂದಿನ ಕಾಲದ ಬುದ್ಧಿವಂತವರ್ಗವು ಅಕ್ಷರ ಕಲಿತು ಶಾಸ್ತ್ರ, ಪುರಾಣ ಮುಂತಾದ ವಿಚಾರಗಳನ್ನು ತಿಳಿದು ಅಹಂಕಾರದಿಂದ ಬೀಗುತ್ತಿದ್ದರೆಂಬುದನ್ನು ಈ ಕೆಳಕಂಡ ಅಲ್ಲಮನ ವಚನವು ಸ್ಪಷ್ಟೀಕರಿಸುತ್ತದೆ.

" ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು
ಲೆಕ್ಕಗೊಳ್ಳರಯ್ಯಾ.
ಗುರುಹಿರಿಯರು ತೋರಿದ ಉಪದೇಶದಿಂದ
ವಾಗದ್ವೈತವ ಕಲಿತು ವಾದಿಫರಲ್ಲದೆ.
ಆಗು-ಹೋಗೆಂಬುದನರಿಯರು, ಭಕ್ತಿಯನರಿಯರು
ಮುಕ್ತಿಯನರಿಯರು, ಯುಕ್ತಿಯನರಿಯರು
ಮತ್ತು ವಾದಿಗೆಳೆಸುವರು ಹೋದರು,
ಗುಹೇಶ್ವರಾ! ಸಲೆಗೊಂಡ ಯಾರಿಂಗೆ."-2

ಅಂದಿನ ಕಾಲದಲ್ಲಿ ಗುರು ಹಿರಿಯರಿಗೆ ಎಲ್ಲಿಲ್ಲದ ಗೌರವ ದೊರಕುತ್ತಿತ್ತು. ಆದ್ದರಿಂದ ಅವರನ್ನು ಪೂಜ್ಯರಿಗೆ ಸಮಾನವಾಗಿ ಕಾಣಲಾಗುತ್ತಿತ್ತು. ಇದರಿಂದ ಈ 'ಗೌರವ ಸಮಾಜ' ದ ವಿಧೇಯತೆಯನ್ನು ಗುರು-ಹಿರಿಯರು ತಮ್ಮ ಸ್ವಾರ್ಥದ ಉಪಯೋಗಕ್ಕಾಗಿ ಮುಗ್ಧ ಮನುಷ್ಯನ ಮೇಲೆ ಪ್ರಯೋಗಿಸುತ್ತಿದ್ದರು. ಆದ್ದರಿಂದ ಅಂದಿನ ಕಾಲದ ಸಾಮಾಜಿಕ ಸ್ಥಿತಿ-ಗತಿಗಳು ಕಲಹದ ಹಾದಿ ಹಿಡಿದವು. ಮೇಲ್ವರ್ಗದ ಪಂಡಿತ ಮತ್ತು ಪಾಮರರಿಗೆ ಸೀಮಿತವಾಗಿದ್ದ ಭಾಷೆ, ಕಲ್ಯಾಣದ ಕ್ರಾಂತಿಯ ಪ್ರಭಾವದಿಂದ ಜನಸಾಮಾನ್ಯರ ಆಡು ನುಡಿಯ ಸಾಹಿತ್ಯಿಕ ಪರಿಭಾಷೆಯಾಗಿ ಪರಿಣಮಿಸಿತು. ಇದರ ಪ್ರತಿಫಲಿತ ರೂಪವೇ 'ವಚನ' ಪ್ರಕಾರವಾಗಿದೆ. 'ವಚನ' ವೆಂದರೆ 'ಮಾತು' ಎಂದು ಅರ್ಥ ಕೊಡುತ್ತದೆ. "ಮಾತು ಆದ್ಯರ ಅಥವಾ ಪುರಾತನ ಮಾತು, 'ಆದ್ಯರ ವಚನ ಪುರುಷ' ಅಧರಕ್ಕೆ ಸಿಹಿ ಕೂಡಲಸಂಗನ ಶರಣರ ವಚನ ಜೀವಿಸುವಂತೆ. 'ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳೆಲು ತವರಾಜದ ನೊರೆ ತೊರೆಯಂತೆ ಆದ್ಯರ ವಚನವಿರಲಿ. ಬೇರೆ ಬಾವಿಯ ತೋಡಿ ಉಪ್ಪು ನೀರನುಂಬುವವನ ವಿಧಿಯಂತೆ.' ಎಂದಿರುವನು ಬಸವಣ್ಣ. ಅಶ್ವಮೇಧಯಾಗ, ಉಪದೇಶ, ಸಮಾಧಿ, ಹೋಮ, ನೇಮ, ಗಾಯಿತ್ರಿಯ ಜಪ, ಜನಮೋಹನ ಮಂತ್ರ -

ಇವುಗಳೆಲ್ಲಕ್ಕೂ ಅಧಿಕ ಕೂಡಲಸಂಗದ ಶರಣರ ನುಡಿಗಡಣವೆಂದು ಅವನು ಹೇಳುವನು. ಪಾತಾಳದ ಅಗ್ಘವಣಿಯನ್ನು ಅಗ್ಗದ ನೆರವಿಲ್ಲದೆ ತೆಗೆಯಲು ಸಾಧ್ಯವೇ? ಅದಕ್ಕೆ ಸೋಪಾನದ ಸಹಾಯ ಬೇಕೆ ಬೇಕು. ಚನ್ನಬಸವಣ್ಣ ಹೇಳುವಂತೆ 'ಶಬ್ಧ ಸೋಪಾನದ ಬಲದಿಂದ ನಿಶಬ್ಧ ಸೋಪಾನ ಕಟ್ಟಿ ನಡೆಸಿದವರು ನಮ್ಮ ಪುರಾತನರು'. ಶಿವಶರಣರ ಅನುಭವದ ನುಡಿ ದೇವಲೋಕಕ್ಕೆ ದಾರಿಯೆಂದು ಭಕ್ತರ ಮನದ ಮೈಲಿಗೆಯ ಕಳೆಯನೆಂದು ಗೀತಾ ಮಾತೆಂಬ ಜ್ಯೋತಿಯ ಬೆಳಗಿಟ್ಟರೆಂದು ಅವನು ಹೇಳುವನು. ಜ್ಞಾನದೀಪ್ತಿಯನ್ನು ಬೆಳಗುವ ತೈಲವಾಗುವುದೆಂದರೆ ಶಿವಶರಣರ ನುಡಿಗಡಣದ ಒಸರಿಂಗಲ್ಲದೆ ಜ್ಞಾನಪ್ರಕಾರವಿಲ್ಲ. ಅದು ತಾನೆಂಬ ನಿಶ್ಚಯವ ತೋರುವುದು. ಹೀನ ಜಡತೆಯ ಗ್ರಂಥಿಯನ್ನೆಳೆದು ಮುಸುಕಿನ ಭಾನು ಬಂದೆಡೆ ಕತ್ತಲೆ ಹರಿವಂತೆ ಬುಧರೊಳು ನೀನಿರಲು ಕರ್ಮ ಹರಿಯುವುದು ಎಂದು ಅವನು ಹೇಳುವನು.
ಭಾಷೆಯೊಂದಿಗೆ ಯಾವಾಗಲು ತನ್ನದೇ ಆದಂತಹ ಸ್ವಂತಿಕೆ ಇದೆ ಸಮಾಜದ ಜನರ ಭಾವನೆಗಳಿಗೆ ಸ್ಪಂಧಿಸುವ ಗುಣವಿದೆ ಆದ್ದರಿಂದಲೇ ಸಮಾಜದ ಕಲ್ಯಾಣಕ್ಕೆ ಭಾಷೆಯ ಕೊಡುಗೆ ಅಪಾರ ಅದರ ಜೊತೆಗೆ ಚಲನ ಶೀಲತೆಯಿಂದ ಕೂಡಿರುವ ಭಾಷೆಯ ಸಾಮಾಜಿಕ ಸ್ವಾರ್ಥವನ್ನು ಕಾಪಾಡುತ್ತದೆ ಎಂಬ ಅರಿವಿದ್ದ ಶರಣ ನಂಬಿಕೆಗಳು 12 ನೇ ಶತಮಾನದಲ್ಲಿ ಸಮಾಜದ ಜನರ ಮಹತ್ವದ ಬದಲಾವಣೆಗೆ ಕಾರಣವಾಗಿರುವದನ್ನು ನಾವುಗಳು ಗಮನಿಸಬಹುದು. ಭಾಷೆಯ ಸಮಾಜದ ಜನರ ಮೌಲ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಮಾನವೀಯ ಸಂಬಂದಗಳನ್ನು ಬೆಳೆಸುವುದು. ಆ ಮೂಲಕ ಮೇಲು ಕೀಳು ಅಂತರವನ್ನು ಕಡಿಮೆ ಮಾಡಿ ಸಮಾಜಪರ ಚಿಂತನೆಗೆ ಕಾರಣವಾಯಿತು. ಭಾಷೆಯ ಮೂಲಕ ಶರಣರು ಸಮಾಜದ ಓರೆಕೋರೆಗಳನ್ನು ತಿದ್ದಿದರು. ಸಮಾಜದ ಉನ್ನತ ಮಾನವೀಯ ಮೌಲ್ಯಗಳನ್ನು ಬೆಳೆಸಿದ ಕೀರ್ತಿ ಶರಣ ಸಂಸ್ಕೃತಿಗೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟವು.

ಹನ್ನೆರಡನೇ ಶತಮಾನದಲ್ಲಿ ಅನೇಕ ರೀತಿಯ ಸಾಮಾಜಿಕ ಅನಿಷ್ಟಪದ್ದತಿಗಳಿದ್ದವು ಅಂದರೆ ಜೀತಪದ್ಧತಿ, ಉಳಿಗಮಾನ್ಯ ಪದ್ಧತಿ, ಬಾಲ್ಯವಿವಾಹ ಮುಂತಾದ ವ್ಯವಸ್ಥೆಗಳು ಅಂದಿನ ಕಾಲದಲ್ಲಿ ಪದ್ಧತಿಗಳಾಗಿ ಆಚರಣೆಯಲ್ಲಿದ್ದವು, ಅಂದರೆ ಕೆಳವರ್ಗದ ಜನ ಇವುಗಳು ತಮ್ಮ ಕರ್ತವ್ಯಗಳೆಂದು ನಂಬಿದ್ದರು ಆದರೆ ಶಿವಶರಣರು ಇಂತಹ ಅನಿಷ್ಟ ವ್ಯವಸ್ಥೆಗಳನ್ನು ಕಣ್ಣಾರೆ ಕಂಡು ಅಂದಿನ ವ್ಯವಸ್ಥೆಯ ಬಗ್ಗೆ ಬಂಡೇಳಲು ಭಾಷೆಯನ್ನು ಬಳಸಿಕೊಂಡರು ಅಂದರೆ ಜನ ಸಾಮಾನ್ಯರಿಗೆ ಅರ್ಥವಾಗುವಂತಹ ಸರಳೀಕಣ ಮಾಡಿ ಅನೇಕ ಭಾಷಾ ವೈವಿದ್ಯತೆಗಳನ್ನು ಬಳಸಿ ಶರಣರು

ಚಳುವಳಿಯನ್ನು ಅಥವಾ ಕ್ರಾಂತಿಯನ್ನುಂಟುಮಾಡಿದರು. ಈ ಮೂಲಕ ಅಂದಿನ ಸ್ಥಾವರ ವ್ಯವಸ್ಥೆಗೆ ಅಂಟಿಕೊಂಡಿದ್ದ ಅನೇಕ ಮೌಡ್ಯಗಳನ್ನು ಬಗೆಹರಿಸುವ ಜೊತೆಗೆ ಸಾಮಾಜಿಕ ಸಾಮರಸ್ಯವನ್ನು ಬಗೆಹರಿಸಲು ಕಾರಣವಾಯಿತು.

ಅಂದರೆ ಮೇಲ್ವರ್ಗದವರು ಉಪಯೋಗಿಸುತ್ತಿದ್ದ ಉನ್ನತಮಟ್ಟದ ಭಾಷೆಯನ್ನು ಜನಸಾಮಾನ್ಯರಿಗೆ ತಿಳಿಯಪಡಿಸಿದರು ಆ ಮೂಲಕ ಸಾಮಾನ್ಯ ವಿಚಾರಗಳಲ್ಲಿ ಪ್ರೌಢಿಮೆ ಬೆಳೆಯಲು ಶರಣರ ಭಾಷೆಯು ಪ್ರೇರೇಪಿಸಿತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕನ್ನಡ ಭಾಷೆಯ ಲಿಪಿಯು ಗದ್ಯರೂಪದ ಕಡೆ ವಾಲುತ್ತಿತ್ತು ಅಲ್ಲಿ ಹೆಚ್ಚಾಗಿ ಸಂಸ್ಕೃತ ಭಾಷೆಯು ಚಾಲ್ತಿಯಲ್ಲಿತ್ತು, ಭಾಷೆಯು ಗದ್ಯರೂಪಕ್ಕೆ ಬದಲಾಗಿದ್ದರಿಂದ ಭಾಷೆಯು ಆಧುನಿಕತೆಯ ದಾರಿಯನ್ನಿಡಿಯಿತೆನ್ನಬಹುದು. ಚಾಳುಕ್ಯರ ತಾಮ್ರ ಮತ್ತು ಶಿಲಾಶಾಸನಗಳ ಮೂಲಕ ಸಾಮಂತ ರಾಜ ಮನೆತನಗಳ ಚಿತ್ರಣವನ್ನು ರಚಿಸಿದ್ದಾರೆ ಅಂದರೆ ಆಗಿನ ಲಿಪಿಗಳು ಹೆಚ್ಚಿನದಾಗಿ ಸಂಸ್ಕೃತ ಭಾಷೆಯಲ್ಲಿ ಇದ್ದದರಿಂದ ಹಾಗೂ ಸಾಮಾನ್ಯ ಜನಿರಿಗೆ ಲಿಪಿ ಮತ್ತು ಸಂಸ್ಕೃತಗಳು ಪರಿಚಯವಿಲ್ಲದಕಾರಣ ಶಾಸಗಳನ್ನು ತಿಳಿಯಲು ಸಾದ್ಯವಾಗುತ್ತಿರಲಿಲ್ಲ ಆದರೆ ಶರಣರು ಅಂತಹ ಜಟಿಲ ಸಮಸ್ಯೆಗಳನ್ನು ಅರಿತು ಸಾಮಾನ್ಯ ಭಾಷೆಯ ತಕ್ಕಂತೆ ಸರಳೀಕರಿಸಿ ಭಾಷೆಯನ್ನು ಬಿತ್ತುವಲ್ಲಿ ಯಶಸ್ವಿಯಾದರು, ಆಮೂಲಕ ಕಲ್ಯಾಣದ ಕ್ರಾಂತಿಗೆ ಪ್ರೇರೇಪಣೆಯನ್ನು ನೀಡಿತು ಅಂದಿನ ಕಾಲದ ಭಾಷೆಯು ರಾಜರಿಗೆ ಅಧಿಕಾರಿಗಳಿಗೆ ಬ್ರಾಹ್ಮಣ ಕ್ಷತ್ರಿಯರಿಗೆ ಮಾತ್ರ ಸೀಮಿತವಾಗಿದ್ದ ಅಕ್ಷರ ಜ್ಞಾನದ ಭಾಷೆ ಶಿವಶರಣರು ಅದನ್ನು ಜನಸಾಮಾನ್ಯರ ಬಳಿಗೆ ತಂದರು ಆ ಮೂಲಕ ಭಾಷೆಗೆ ಜೀವವನ್ನು ತುಂಬಿ ಸಾಮಾಜಿಕ ನ್ಯಾಯವನ್ನು ತಂದುಕೊಡುವಲ್ಲಿ ಯಶಸ್ವಿಯಾದರು. "ಜೊತೆಗೆ ಅಂದಿನ ಕನ್ನಡ ಶಾಸನಗಳ ಪಾಠಗಳು ಹೆಚ್ಚಿನ ಅಂಶ, ಗದ್ಯ–ಪದ್ಯ ಮಿಶ್ರಿತವಾಗಿದೆ, ಚಂಪೂ ರೂಪವಾಗಿದ್ದ ಕನ್ನಡ ಸಾಹಿತ್ಯದ ಬೆಳವಣಿಗೆಯ ಅಧ್ಯಯನಕ್ಕೂ ಸಹಾಯಕ ವಾಗಿದೆ",3 ಇಂತ ಸಂದರ್ಭದಲ್ಲಿ ಮೂಡಿಬಂದಂತಹ ಭಾಷಾ ಪ್ರಕಾರವೇ ವಚನ ಗದ್ಯ–ಪದ್ಯಕ್ಕಿಂತ ವಿಭಿನ್ನ, ಆಡುಮಾತಿಗೆ ಹತ್ತಿರವಾದ ಸಾಹಿತ್ಯವಾಗಿದೆ. ಕನ್ನಡ ಭಾಷಿಕ ಚರಿತ್ರೆಯಲ್ಲಿ ವಚನ ಪ್ರಕಾರವು ವಿಶಿಷ್ಟವಾಗಿದೆ.

ಅಂದಿನ ಕಾಲ ಘಟ್ಟದಲ್ಲಿ ಜನಸಾಮಾನ್ಯರ ಭಾಷಾ ಮಾಧ್ಯಮವಾಗಿ ಬಳಕೆಯಾಗಿದ್ದು, ನಂತರದ ದಿನಗಳಲ್ಲಿ ಆ ಅನುಭವವೇ ವಚನ ಸಾಹಿತ್ಯವಾಗಿ ಪರಿಣಮಿಸಿತು. ತಮ್ಮ ಜೀವನದಲ್ಲಿ ಕಂಡುಕೊಂಡ ಅನುಭವ ಮತ್ತು ಅನುಭಾವಿಕ ನೆಲೆಯಲ್ಲಿನ ಸತ್ಯಾಸತ್ಯತೆಗಳನ್ನು ಅವರ

ಬದುಕಿನ ಅಂತ್ಯದುದ್ದಕ್ಕೂ ಅನುಭವಿಸಿದ ರಸಾನುಭವ ಪರಿಪಾಕವನ್ನು ವಚನಗಳಲ್ಲಿ ಕಟ್ಟಿ ಹಾಡಿದರು. ಶರಣರಿಗಿಂತ ಪೂರ್ವ ಕಾಲದಲ್ಲಿದ್ದ ಭಾಷೆಯು ಹಳಗನ್ನಡವಾಗಿದ್ದು, ಈ ಭಾಷೆಯು ಪಂಡಿತರು, ರಾಜರ ಆಸ್ಥಾನದ ಕವಿಗಳು ಮುಂತಾದ ಸೀಮಿತ ವರ್ಗಗಳ ಸ್ತೋತ್ರವಾಗಿದ್ದ ಭಾಷಿಕ ಸಂಪತ್ತು, ನಂತರದ ದಿನಗಳಲ್ಲಿ ಅಂದರೆ ಕಲ್ಯಾಣ ಕ್ರಾಂತಿಯ ಸನ್ನಿವೇಶದಲ್ಲಿ ಜನಸಾಮಾನ್ಯರ ಸ್ವತ್ತಾಗಿರಬೇಕೆಂದು ಕ್ರಾಂತಿಯು ಪ್ರೇರೇಪಿಸಿತು. ಆ ಕ್ರಾಂತಿಯ ಫಲಿತ ರೂಪವೇ ಈ ಭಾಷಾ ಸ್ವರೂಪ, ಇದಕ್ಕೆ ತನ್ನದೇ ಆದ ವಿಶಿಷ್ಟ ಗುಣಗಳಿವೆ. ಅವುಗಳನ್ನು ಈ ರೀತಿ ಪಟ್ಟಿ ಮಾಡಬಹುದು.

1. ಭಾಷೆಯು ತುಂಬಾ ಸರಳವಾಗಿರುತ್ತದೆ.
2. ವ್ಯಕ್ತಿಗೆ ಅರಿವಾಗುವಂತೆ ಹೇಳುವ ಭಾಷೆ
3. ಭಾಷೆಯು ಅನುಭವದ ಅಭಿವ್ಯಕ್ತಿಯಲ್ಲಿರುತ್ತದೆ.
4. ಕೆಲವು ವೇಳೆ ವಚನವು ಬೆಡಗಿನಿಂದ ಕೂಡಿರುತ್ತವೆ.
5. ಈ ಭಾಷೆಯು ಸಾಹಿತ್ಯಿಕ ಗುಣಗಳಿಂದ ಕೂಡಿರುತ್ತದೆ.
6. ಗದ್ಯ ಮತ್ತು ಪದ್ಯ ರೀತಿಗಿಂತ ವಿಭಿನ್ನ ಪ್ರಕಾರವಾಗಿದೆ.
7. ಸಹಜವಾಗಿ ಮೂಡಿ ಬಂದ ಅಲಂಕಾರಿಕ ಅಭಿವ್ಯಕ್ತಿ ಮಾಧ್ಯಮವಾಗಿದೆ.
8. ಧರ್ಮ ಮತ್ತು ದೇವ ಕೇಂದ್ರಿತ ಭಾಷಾ ಮಾದರಿಯಲ್ಲಿ ನಿರೂಪಿತವಾಗಿದೆ.

ಮೇಲ್ಕಂಡ ಗುಣಗಳುಳ್ಳ ಭಾಷಾ ಸ್ವರೂಪವು ವಿಶಿಷ್ಟ ತೆರನಾಗಿದ್ದು, ಮುಂದೆ ಕ್ರಾಂತಿಯ ಸಂದರ್ಭದಲ್ಲಿ ಜನರನ್ನು ಪ್ರೇರೇಪಿಸಲು ಭಾಷೆಯನ್ನು ಸರಳೀಕರಿಸಲು ಶರಣರು ಮುಂದಾಗಿದ್ದುದರಿಂದ ವಚನದ ಭಾಷೆ ಉದಾರೀಕರಣಗೊಳ್ಳುವ ಸ್ಥಿತಿಗೆ ತಲುಪುತ್ತದೆ. ಮುಂದಿನ ವಿಚಾರಗಳಲ್ಲಿ ಭಾಷೆ ಉದಾರೀಕರಣವನ್ನು ಕಾಣಬಹುದು. ಭಾಷೆಗೆ ಸಾಹಿತ್ದ ಜೀವವನ್ನು ತುಂಬಿದರು ಈ ಸಾಹಿತ್ಯದಿಂದ ಅವರು ಜೀವನಾನುಭದಿಂದ ಸಾಮಾಜಿಕ ತೃಪ್ತಿಯನ್ನು ಹೊಂದಲು ಕಾರಣವಾದರು ಇಂತಹ ಭಾಷೆಯು ಆ ಶತಮಾನದಲ್ಲಿ ಜೀವಂತಿಕೆಯನ್ನು ಹೊಂದಿ ಎಲ್ಲಾವರ್ಗದ ಜನರೊಂದಿಗೆ ಸಾಮಾನ್ಯ ವಿಚಾರಗಳು ಸಾಹಿತ್ಯಿಕ ಪ್ರಕಾರಗಳು ಚಿಗುರೊಡೆಯುವ ಮೂಲಕ ಸಾಮಾನ್ಯ ಜನರಲ್ಲಿ ಸ್ವಂತಿಕೆ ವಿಚಾರ ಹಾಗೂ ವಾಸ್ತವ ನೆಲೆಗಟ್ಟಿನಲ್ಲಿ ವ್ಯವಹರಿಸಲು ಶರಣರ ಭಾಷೆಯು ಸಹಾಯವನ್ನುಂಟುಮಾಡಿತು ಇದರ ಜೊತೆಗೆ ಭಾಷೆಯು ಮುಂದಿನ ಜನಾಂಗದ ಮೇಲೆ ಧನಾತ್ಮಕ ಪರಿಣಾಮಗಳನ್ನು ಬೀರಿತು, ಸಾಮಾಜಿಕ ಚಟುಚಟಿಕೆಗಳನ್ನು ಹಾಗೂ

ಸಾಮಾಜಿಕ ನ್ಯಾಯಪರ ಚಿಂತನೆಗಳನ್ನಾರಂಬಿಸಲು ಶರಣ ಭಾಷೆಯು ಮಹತ್ವದ ಬದಲಾವಣೆಯನ್ನು ತಂದಿತು ಶರಣರ ಭಾಷೆ ಬಹುಸಂಖ್ಯಾತ ಶೋಷಿತ ವರ್ಗದವರಿಗೆ ವರದಾನವಾಯಿತು ಕಾಯಕದ ಮೂಲಕ ಮುಕ್ತಿ ನೋಡಯ್ಯ ಎಂಬ ಕಾಯಕ ಯೋಗಿಗಳ ಮನಸ್ಸನ್ನು ನಾಟಲು ಶಿವಶರಣರು ಯಶಸ್ವಿಯಾದರು. ಅಂತಹ ಸಂದರ್ಭದಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿಹಾಡಲು ಕಾರಣವಾಯಿತು. ಅನಂತರ ಮೂಡನಂಬಿಕೆಗಳು, ಅನಿಷ್ಟ ಆಚರಣೆಗಳು, ಕ್ರಮೇಣ ಸಾಮಾನ್ಯ ಜನರಲ್ಲಿ ಕಡಿಮೆಯಾಗುತ್ತಾ ಬಂದವು. ಶರಣರು ಬಳಸಿದ ಆಡು ಭಾಷೆ ಮಹತ್ವದ ಬದಲಾವಣೆಗೆ ಕಾರಣವಾಯಿತು.

6.1 ಭಾಷಾ ಉದಾರೀಕರಣಗೊಂಡ ಚಳುವಳಿ :

ಭಾಷೆಗಳೊಡನೆ ಪರಿವರ್ತನಗೊಳ್ಳುವಿಕೆಯೇ ಭಾಷಾ ಉದಾರೀಕರಣ ಎನ್ನಬಹುದು. ಈ ಭಾಷಾ ಉದಾರೀಕರಣ ಕಲ್ಯಾಣಕ್ರಾಂತಿಯ ಸಮಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅಂದಿನ ಕಾಲದ ಜನಾಂಗಗಳ ಮೇಲೆ, ರಾಜಪ್ರಭುತ್ವದ ಮೇಲೆ, ಅಗಾಧವಾದ ಪರಿಣಾಮವನ್ನುಂಟು ಮಾಡುತ್ತದೆ. ಏಕೆಂದರೆ ಭಾಷೆಯು ಸಂಪರ್ಕ ಮಾಧ್ಯಮ ಎಲ್ಲಾ ವರ್ಗಗಳ ಸಂವಹನಕ್ಕೆ ಸಾಧನವಾಗಿದೆ.

ಈ ಮೇಲ್ಕಂಡ ಉನ್ನತವಾದ ಅನುಭವದ ಸಾರದ ಸಾರಥ್ಯದಿಂದ ಜನಸಮುದಾಯವನ್ನು ಮುನ್ನಡೆಸಬೇಕಾದ ಅನಿವಾರ್ಯತೆ ಅಂದು ಸೃಷ್ಟಿಯಾಗಬೇಕಿತ್ತು. "ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ವಚನವೆಂಬ ಅನುಭಾವಿಕ ಗದ್ಯ, ಕಾವ್ಯ ರೂಪವು ಹೊಸತಾಗಿ ತಲೆ ಎತ್ತಿತು, ಇದೊಂದು ಪ್ರಭಾವಶಾಲಿ ಆತ್ಮಾಭಿವ್ಯಕ್ತಿಯ ಮಾಧ್ಯಮವಾಗಿ ಬಸವೇಶ್ವರರಿಂದ ಬಳಕೆಗೆ ಬಂದಿತು. ಸಾಮಾಜಿಕ ಹಾಗು ಧಾರ್ಮಿಕ ಕ್ರಾಂತಿಯ ಆಂದೋಲನದ ಮುಂದಾಳು ಆಗಿದ್ದ ಬಸವೇಶ್ವರರ ಪ್ರೇರಣೆಯಿಂದ ಸಾವಿರಾರು ಶರಣರು ತಂಡ ತಂಡವಾಗಿ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡವರು ಇವರ ಅನುಯಾಯಿಗಳಾದರು. ಇದರ ಪರಿಣಾಮದಿಂದಾಗಿ ಸಾಹಿತ್ಯ ಕ್ರಾಂತಿಯು ಹೊಸ ಗಾಳಿ ಬೀಸತೊಡಗಿತು. ಹಳಗನ್ನಡ ಸಾಹಿತ್ಯದ ನಡೆಗೆ ಒಂದು ಬಗೆಯ ತಾಕಲಾಟ ಉಂಟಾಯಿತು. ಕ್ರಮೇಣ ನಡುಗನ್ನಡ ಅಥವಾ ಹೊಸಗನ್ನಡವು ಹಳಗನ್ನಡದ

ಸ್ಥಾನವನ್ನು ಕ್ರಮಿಸತೊಡಗಿತು. ಜನಪ್ರಿಯ ಛಂದಸ್ಸುಗಳಾದ ರಗಳೆ, ಷಟ್ಪದಿಗಳಲ್ಲಿ ಕಾವ್ಯ ರಚನೆ ಮಾಡಲು ಬಹುಜನ ಕವಿಗಳು ಮುಂದಾದರು."-4 ವ್ಯಕ್ತಿ ಪರಿಭಾಷೆಯಿಂದ ಪ್ರಾರಂಭಗೊಂಡು ಸಾಮೂಹಿಕವಾಗಿ ಪರಿವರ್ತನೆಯಾಗಲು ಬಳಸುವ ಏಕೈಕ ಮಾದರಿಯಾಗಿ ಭಾಷಾ ಮಾಧ್ಯಮ ಪ್ರಾರಂಭವಾಯಿತು.

ಅಂದಿನ ಕಾಲದಲ್ಲಿ ವಚನ ಭಾಷೆಯ ಹುಟ್ಟು ಆಧುನಿಕವಾದುದ್ದಾಗಿದೆ. ಶರಣರ ಭಾಷಾ ಉದಾರಿತನದಿಂದ ಕಲ್ಯಾಣ ಕ್ರಾಂತಿಯ ಮೇಲೆ ಅನೇಕ ಪರಿಣಾಮಗಳಾದವು. ಈ ಭಾಷಿಕ ಸನ್ನಿವೇಶದಿಂದ ಉಪಭಾಷೆ ಮತ್ತು ಪ್ರಧಾನ ಭಾಷೆಗಳ ಮಿಶ್ರಬಳಕೆಯಿಂದ ಉಪಭಾಷೆಯ ಬಳಕೆ ಕಡಿಮೆಯಾಗಿರುವುದನ್ನು ಕಾಣಬಹುದು. ಒಂದು ಭಾಷೆಯನ್ನು ಕ್ರಾಂತಿ ರೂಪಕವಾಗಿ ಬಳಸಿದಾಗ ಸಾಮಾಜಿಕ ಬದುಕಿನ ಮೇಲೆ ಆಗುವ ಪರಿಣಾಮಗಳನ್ನು ಅಂದಿನ ವಚನಗಳು ಸ್ಪಷ್ಟಪಡಿಸುತ್ತದೆ. ವಚನಭಾಷಾ ರೂಪತೆಯು ಸಾಮಾನ್ಯರ ಬದುಕಿನ ಕಾಯಕತನವನ್ನು ಜೀವ ರೂಪಗೊಳಿಸಿ ಕ್ರಿಯಾಶೀಲವಾಗುವಂತೆ ಮಾಡುತ್ತದೆ. ಇದರ ಜೊತೆಯಲ್ಲಿ ಧರ್ಮದ ಪರಿಷ್ಕರಣೆಗೂ ತೊಡಗಿತು. ಸಾಮಾಜಿಕ ಬಹುಮುಖಿತ್ವವನ್ನು ಸಾಮಾನ್ಯನ ಹಿತ ದೃಷ್ಟಿ ಹಾಗೂ ಸಂಘಟನಾ ವ್ಯಾಪ್ತಿಯೊಳಗೆ ಸ್ಪಷ್ಟೀಕರಿಸುವ ಹೊಸ ಚಿಂತನೆ ಪ್ರಾರಂಭವಾಯಿತು. ಭಾಷಾ ಚಿಂತಕರಾಗಿ ಮೇಲ್ವರ್ಗದ ವಚನಕಾರರು, ವಚನಗಾರ್ತಿಯರು ಕೆಳ ವರ್ಗದ ವಚನಕಾರರು, ವಚನಕಾರ್ತಿಯರು ಯಾವುದೇ ಭೇದ ಭಾವವಿಲ್ಲದೆ ಒಗ್ಗೂಡಿ ಕ್ರಾಂತಿಗೆ ಹೊಸ ರೂಪು ರೇಷೆಗಳನ್ನು ನೀಡಿದರು. ಶರಣ ಭಾಷೆಯು ಮಹತ್ವದ ಬದಲಾವಣೆಯನ್ನು ತಂದಿತು ಶರಣರ ಭಾಷೆ ಬಹುಸಂಖ್ಯಾತ ಶೋಷಿತ ವರ್ಗದವರಿಗೆ ವರದಾನವಾಯಿತು ಕಾಯಕದ ಮೂಲಕ ಮುಕ್ತಿ ನೋಡಯ್ಯ ಎಂಬ ಕಾಯಕ ಯೋಗಿಗಳ ಮನಸ್ಸನ್ನು ನಾಟಲು ಶಿವಶರಣರು ಯಶಸ್ವಿಯಾದರು. ಅಂತಹ ಸಂದರ್ಭದಲ್ಲಿ ಸಾಮಾಜಿಕ ಪರಿವರ್ತನೆಗೆ ನಾಂದಿಹಾಡಲು ಕಾರಣವಾಯಿತು. ಅನಂತರ ಮೂಡನಂಬಿಕೆಗಳು ಅನಿಷ್ಟ ಆಚರಣೆಗಳು ಕ್ರಮೇಣ ಸಾಮನ್ಯ ಜನರಲ್ಲಿ ಕಡಿಮೆಯಾಗುತ್ತಾ ಬಂದಿತು. ಶರಣರು ಬಳಸಿದ ಆಡು ಭಾಷೆ ಮಹತ್ವದ ಬದಲಾವಣೆಗೆ ಕಾರಣವಾಯಿತು.

ಬಹುಮುಖಿ ಸಂಸ್ಕೃತಿಯಲ್ಲಿ ಹುಟ್ಟಿದ ಭಾಷೆಯು ಏಕಮುಖಿ ಸಂಸ್ಕೃತಿಯಿಂದ ಬಂದಂತಹ ಪ್ರಜ್ಞಾವಂತ ಕಾಯಕ ಯೋಗಿಗಳನ್ನು ಆಶ್ರಯಿಸಿತು. ನಂತರ ಅವರ ಭಾಷೆಯು ಪರಿವರ್ತನೆಗೊಂಡು ಹೊಸ ರೂಪು ಪಡೆಯಿತು. ಕೆಳವರ್ಗ ಮತ್ತು ಮೇಲ್ವರ್ಗದ ವಚನಕಾರರು

ಒಟ್ಟಿಗೆ ಸೇರಿ ನಡೆಸಿದಂತಹ ಕಲ್ಯಾಣಕ್ರಾಂತಿಯ ಭಾಷೆ ವಿಶಿಷ್ಟವೆನಿಸುತ್ತದೆ. ಅಂದರೆ ಒಂದು ಕಾಲದಲ್ಲಿ ಸಾಮಾನ್ಯನಿಗೆ ಸಿಗದ ಪಂಡಿತ ಸಾಹಿತ್ಯ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಜನಸಾಮಾನ್ಯರ ಭಾಷೆಯಲ್ಲಿ ಪರಿಣಾಮಕಾರಿಯಾಗಿ ಸಿಕ್ಕಿತು. ಅಂದಿನ ಸಾಂಸ್ಕೃತಿಕ ಸನ್ನಿವೇಶದಲ್ಲಿ ಸಾಮಾನ್ಯನ ಭಾಷೆ ಧರ್ಮದಿಂದ ಒಡಮೂಡಿದ ಧಾರ್ಮಿಕ ಜೀವನದ ಭಾಷೆಯಾಗಿತ್ತು. ಕ್ರಾಂತಿಯ ಸಂದರ್ಭದಲ್ಲಿ ಬಳಕೆಯಾಗುತ್ತಿದ್ದ ಭಾಷೆಗಳನ್ನು ಗಮನಿಸಿದಾಗ ಎರಡು ವಿಭಾಗಗಳಾಗಿ ಮಾಡಬಹುದು (ಅಧ್ಯಯನ ದೃಷ್ಟಿಯಿಂದ ಮಾತ್ರ ವಿಭಾಗಿಸಲಾಗಿದೆ).

1. ಮೃದು ಭಾಷೆ
2. ಒರಟು ಭಾಷೆ

ಎಲ್ಲಾ ಶಿವಶರಣರು ಆಯಾಯ ಸಂದರ್ಭಕ್ಕೆ ತಕ್ಕಂತೆ ಈ ಭಾಷಾ ರೂಪಗಳನ್ನು ಬಳಸಿದ್ದಾರೆ. ಆ ಕ್ರಾಂತಿಯ ಸಂದರ್ಭದಲ್ಲಿ ಅನೇಕ ಕುಲಸಮುದಾಯಗಳ ಬುಡಕಟ್ಟು ವರ್ಗದಿಂದ ಬಂದಂತಹ ಜನ ಆಯಾ ವರ್ಗದ ಭಾಷಿಕ ಮಾದರಿಯಲ್ಲಿ ಜಾಗೃತಗೊಳ್ಳಲು ಪ್ರಾರಂಭಿಸಿದರು. ಪ್ರಜ್ಞಾಪ್ರವಾಹ ಹೆಚ್ಚಿದಂತೆ ಭಾಷೆಯು ಶಿಷ್ಟರೂಪ ಪಡೆಯುತ್ತಾ ಹೋಗುವುದು ಕ್ರಾಂತಿಯ ಯಶಸ್ಸನ್ನು ಸೂಚಿಸುತ್ತದೆ. ಈ ಅನೇಕ ವರ್ಗಗಳ ಭಾಷೆಯು ಕ್ರಾಂತಿಗೆ ಪೂರಕವಾಗುವಂತೆ ಏಕೈಕ ಮಾದರಿಯುತ ಭಾಷೆಯನ್ನು ಬಳಸಲು ಪ್ರಾರಂಭಿಸಿತು. ಆ ಭಾಷಾ ಬಳಕೆಯ ಪರಿಣಾಮವೇ 'ಭಾಷಿಕಕ್ರಾಂತಿ' ಎನ್ನಬಹುದು. ಈ ಮೂಲಕ ಸಾಮಾಜಿಕ ಬದಲಾವಣೆ ತರಲು ರೂಪಿಸಿದ ವಚನಭಾಷೆಯು ಕಲ್ಯಾಣಕ್ರಾಂತಿಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ.

"ವಚನಕಾರರಿಗೆ ಸಾಹಿತ್ಯ ಕಲೆಗಿಂತ ಮುಖ್ಯವಾದದ್ದು ಪ್ರಮಾಣೀಕತೆ. ಮಾತಿಗೂ, ನಡವಳಿಕೆಗೂ ಮನಸ್ಸಿನಲ್ಲಿ ಇದ್ದುದ್ದಕ್ಕೂ, ಹೇಳಿದಕ್ಕೂ ಅಂತರವಿರದ ಹಾಗೆ ನೋಡಿಕೊಳ್ಳುವುದೇ ಅವರ ಉದ್ದೇಶವಾಗಿತ್ತು. ಈ ಉದ್ದೇಶ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲ ಉದ್ದೇಶಕ್ಕೆ ಅಧೀನವಾಗಿತ್ತು. ಶಿವನ ಸಾಕ್ಷಾತ್ಕಾರ ಭಕ್ತಿಯ ಮೂಲಕ ಮೊರೆಯಿಟ್ಟು ಒಲಿಸುವುದರ ಮೂಲಕ, ಆತ್ಮಶುದ್ಧಿ, ಪ್ರಾಮಾಣಿಕತೆಯ ಮೂಲಕ ಮಾತ್ರ ಗಳಿಸಬಹುದಾದ್ದರಿಂದ ಭಾಷೆಯ ಬಗ್ಗೆ ವಚನಕಾರರ ದೃಷ್ಟಿ, ಪ್ರಾಮಾಣಿಕತೆ ಇರುವ ದೃಷ್ಟಿಯೇ ಆಗಿದೆ."-5 ತಾವು ಬಳಸುವ ಭಾಷೆಯು ಯಾವಾಗಲು ಸತ್ಯಶುದ್ಧವಾಗಿರಬೇಕೆಂದು ಶರಣರ ನಿಲುವಾಗಿತ್ತು. ಬಸವಣ್ಣನವರ ಈ ವಚನವು ಸ್ಪಷ್ಟೀಕರಿಸುತ್ತದೆ.

"ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ
ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯಾ.
ನುಡಿಗೆ ತಕ್ಕ ನಡೆಯ ಕಂಡಂತೆ ಕೂಡಲಸಂಗಮದೇವನೊಳಗಿಪ್ಪಯ್ಯಾ."–6

ನಡೆದಂತೆ ನುಡಿಯುವ, ನುಡಿದಂತೆ ನಡೆಯುವ ತತ್ವವಾಗಿ ಶಿವಶರಣರು ಬದುಕಿನಲ್ಲಿ ಅಳವಡಿಸಿಕೊಂಡರು, ಹಾಗೆಯೇ ಬದುಕಿ ತೋರಿಸಿದರು. ಇಂತಹ ಸ್ಪಷ್ಟ ಸಂದೇಶವನ್ನು 'ನಡೆ–ನುಡಿ' ಸಮರೂಪಿಯಾಗಿ ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ಆರಾಧ್ಯ ದೈವವು ಮೆಚ್ಚುವುದಿಲ್ಲ ಈಗಾಗಿ ಸಾಮಾನ್ಯ ಜನ ಶರಣರ ಮಾತಿನ ಕಡೆ ಆಕರ್ಷಿತರಾದರು, ಆಗಾಗಿ ಸಾಮಾನ್ಯನಲ್ಲಿ ಭಾಷಿಕ ಪ್ರಜ್ಞೆ ಹೆಚ್ಚುತ್ತಾ ಹೋದಂತೆ ಪೂರ್ವಾಗ್ರಹಿತ ವಿಚಾರಗಳು ಹೇಗೆ ದೂರವಾಗುತ್ತವೆ ಎಂಬುದನ್ನ ಬಸವಣ್ಣನವರ ಮುಂದಿನ ವಚನ ಸ್ಪಷ್ಟೀಕರಿಸುತ್ತದೆ.

"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲಸಂಗನ ಶರಣರ ಅನುಭವದ ಬಲದಿಂದ
ಎನ್ನಭವದ ಕೇಡು ನೋಡಯ್ಯಾ."–7

ಜ್ಞಾನ ಯಾವಾಗಲೂ ಪ್ರಕಾಶಮಾನವಾದುದು, ನಮ್ಮ ಜೀವನದ ಕತ್ತಲೆಯನ್ನು ತೊಲಗಿಸುತ್ತದೆ. ಸತ್ಯದ ಅರಿವನ್ನು ಕೊಂಡುಕೊಳ್ಳಬೇಕಾದರೆ ತನ್ನೊಳಗಿನ ಭಾಷೆ ಬೆಳಗಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಈ ಭಾಷಾ ಬೆಳವಣಿಗೆ ಅಂದಿನ ಆಧುನಿಕತೆಯನ್ನು ಸೂಚಿಸುತ್ತದೆ. ಅಲ್ಲದೆ ಶರಣರು ತಮ್ಮ ಹಿತ ಮಿತವಾದ ಭಾಷೆಯಲ್ಲಿಯೇ ಜನಸಮುದಾಯವನ್ನು ಎಚ್ಚರಗೊಳಿಸುತ್ತಾರೆ. ಈ ಕೆಳಕಂಡ ವಚನವು ಅದಕ್ಕೆ ಸಾಕ್ಷಿಯಾಗುತ್ತದೆ.

" ಕಂಡ ಭಕ್ತರಿಗೆ ಕೈಮುಗಿಯುವಾತನೇ ಭಕ್ತ
ಮೃದುವಚನವೇ ಸಕಲ ತಪಂಗಳಯ್ಯಾ
ಸದುವಿನಯವೆ ಸದಾಶಿವನ ಒಲುಮೆಯಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ."–8

ಮೇಲೆ ಹೇಳಿದ ವಚನಗಳ ಸಾಲಾದ "ಮೃದುವಚನವೇ ಸಕಲ ತಪಂಗಳಿಗೆ" ಎಂಬ ಸಾಲಿನಲ್ಲಿ 'ಮೃದು ವಚನ' ಎಂಬ ಮಾತು ಸಾಮಾನ್ಯ ಜನಜೀವನದಲ್ಲಿ ಅನ್ಯೋನ್ಯತೆಯಿಂದಿರಬೇಕಾದರೆ 'ಮೃದುಮಾತು' ಇರಬೇಕು. ಅಂದರೆ ಶರಣರು ಹೇಳಿದ ರೀತಿ ಯಾವುದೇ ವಂಚನೆಯಿಲ್ಲದೆ ಪರಿಶುದ್ಧವಾದ ನಡೆ-ನುಡಿಯು ಒಂದಾದ ಜೀವನವನ್ನು ನಡೆಸಿದರೆ ಮಾತ್ರ ಅದು ಶಿವನಿಗೆ ಅರ್ಪಿತವಾಗುತ್ತದೆಂದು ಹೇಳುತ್ತಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕಾದರೆ ಸರ್ವ ಜಾತಿ, ಜನಾಂಗ ಸಮುದಾಯದವರು ಶಿವನ ಆರಾಧಕರಾದರೆ ಅವರ ನಡೆ ನುಡಿ ಎಲ್ಲವೂ ಸಮವಾಗಿರಬೇಕೆಂಬುದು ಇವರ ಆಶಯ. ಆದ್ದರಿಂದ ಮೊದಲೇ ಪ್ರಾರಂಭಿಕ ಹಂತದಲ್ಲಿ ಸಂಕುಚಿತ ಮನೋಭಾವದ ಭಾಷೆ ಇದ್ದುದರಿಂದ ಸಾಮಾಜಿಕ ವಿಘಟನೆಗೆ ದಾರಿಯಾಗಿತ್ತೆಂಬುದನ್ನು ಮನಗಾಣುತ್ತಾರೆ. ಆದ ಕಾರಣ ಭಾಷಾ ಉದಾರೀಕರಣದಿಂದ ಎಲ್ಲಾ ಭಾಷಿಕ ವರ್ಗಗಳು ಒಮ್ಮುಖಾತ್ಮಕವಾಗಿ ಚಲಿಸುವಂತೆ ಹೇಳುತ್ತಾರೆ. ಭಾಷಿಕ ಉದಾರೀಕರಣದ ನೆಲೆಯೊಳಗೆ ಮನುಷ್ಯನ ವ್ಯಕ್ತಿತ್ವ ಭಾಷಿಕ ಜನಾಂಗದೊಂದಿಗೆ ಹೇಗಿರಬೇಕೆಂದನ್ನು ಸ್ಪಷ್ಟಪಡಿಸುತ್ತದೆ.

" ವೀರ ವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಕೇಳಿರಯ್ಯಾ .
ವೀರನಾದೆಡೆ ವೈರಿಗಳು ಮೆಚ್ಚಬೇಕು,
ವ್ರತಿಯಾದೆಡೆ ಅಂಗನೆಯರು ಮೆಚ್ಚಬೇಕು
ಭಕ್ತನಾದೆಡೆ ಜಂಗಮವೆ ಮೆಚ್ಚಬೇಕು.
ಈ ನುಡಿಯೊಳಗೆ ತನ್ನ ಬಗೆ ಯಿರೆ
ಬೇಡಿದ ಪದವಿಯನೀವ ಕೂಡಲಸಂಗಮದೇವ."-೨

ನಾವು ನುಡಿಯುವ ಭಾಷೆಯು ಇನ್ನೊಬ್ಬರ ಜೀವನಕ್ಕೆ ಮಾರಕವಾಗದಂತೆ ಹಾಗೂ ಸಾಮಾಜಿಕವಾಗಿ ಯಾವುದೇ ಕ್ಷೇತ್ರಕ್ಕೆ ಹಾನಿಯುಂಟು ಮಾಡದ ರೀತಿಯಲ್ಲಿ ಇರಬೇಕೆಂಬುದನ್ನು ಬಸವಣ್ಣನವರ ಸ್ಪಷ್ಟ ಅಭಿಪ್ರಾಯವಾಗಿದೆ. ಭಾಷಾ ಉದಾರೀಕರಣದ ನೆಲೆಯಲ್ಲಿ ಸಾಮಾನ್ಯ ಭಾಷೆಯನ್ನು ಹೇಗೆ ಬೇಕೋ ಹಾಗೆ ಬಳಸುವ ಸ್ವಾತಂತ್ರವಿತ್ತಾದರೂ, ಅದನ್ನು ದುರುಪಯೋಗ ಪಡಿಸುವಂತಿರಲಿಲ್ಲ.

ಶರಣರು ಭಾಷೆಯನ್ನು ಅಭಿವ್ಯಕ್ತಗೊಳಿಸುವಾಗ ಸಾಮಾಜಿಕ ಸಂದರ್ಭಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ ಆದ್ದರಿಂದ ತಮ್ಮ ಭಾಷೆಯನ್ನು ಆಡುಭಾಷೆಯನ್ನಾಗಿ ಮಾಡಿಕೊಂಡು ತಳಸಮುದಾಯಗಳನ್ನು ಒಗ್ಗೂಡಿಸುವಿಕೆಯಲ್ಲಿ ಶರಣರಿಗಿದ್ದ ಪಾಂಡಿತ್ಯ ಗವನಾರ್ಹವಾಗಿದೆ.

ಭಾಷಿಕ ಜಗತ್ತಿನೊಳಗೆ ಶರಣ ಕ್ರಾಂತಿಯು ಜ್ಞಾನಾಧಾರಿತವಾದ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸುತ್ತದೆ. ಏಕೆಂದರೆ ಸ್ಥಾವರವಾದ ವಸ್ತು ವಿಷಯಗಳ ಬಗ್ಗೆ ಹೆಚ್ಚು ಗಮನ ಹರಿಸುವುದನ್ನು ಹೇಗೆ ನಿರಾಕರಿಸುತ್ತದೆ ಎಂಬುದನ್ನ ಅಲ್ಲಮನ ವಚನವು ಧ್ವನಿಸುತ್ತದೆ.

"ಭೂಮಿನಿನ್ನದಲ್ಲ, ಹೇಮ ನಿನ್ನದಲ್ಲ ಕಾಮಿನಿ ನಿನ್ನವಳಲ್ಲ
ಅವು ಜಗಕಿಕ್ಕಿದ ವಿಧಿ,
ನಿನ್ನ ಒಡವೆ ಎಂಬುದು ಜ್ಞಾನರತ್ನ
ಅಂತಪ್ಪ ದಿವ್ಯ ರತ್ನವ ಕೆಡಗುಡದೆ,
ಆ ರತ್ನವ ನೀನು ಅಲಂಕರಿಸಿದೆಯಾದೆಡೆ
ನಮ್ಮ ಗುಹೇಶ್ವರ ಲಿಂಗದಲ್ಲಿ
ನಿಮ್ಮಿಂದ ಬಿಟ್ಟು ಸಿರಿವಂತರಿಲ್ಲ ಕಾಣ ಎಲೆ ಮನವೆ."–10

ಸಾಮಾನ್ಯ ಮೌಲ್ಯವಾಗಿರುವ ಭೂಮಿ, ಹೇಮ, ಮುಂತಾದ ವಿಷಯ ವಸ್ತುಗಳು ಅಸ್ಥಿರವಾದವುಗಳು. ಅದರಿಂದ ಸಾಮಾನ್ಯ ಜನತೆ ಸ್ಪರ್ಧಾತ್ಮಕವಾಗಿರುವ ಈ ಜಗತ್ತಿನೊಳಗೆ ನಶ್ವರವಾದವುಗಳನ್ನು ತಿರಸ್ಕರಿಸಬೇಕೆಂದು ಹೇಳುತ್ತಾರೆ. ಈ ಹಂತದಲ್ಲಿ ಹೇಳುವಾಗ ಎಲ್ಲಕ್ಕಿಂತ ಮಿಗಿಲಾಗಿರುವ 'ಜ್ಞಾನರತ್ನ' ವನ್ನು ನೀನು ಅಲಂಕರಿಸಬೇಕೆಂಬ ಆಶಯವನ್ನು ವ್ಯಕ್ತ ಪಡಿಸುತ್ತಾರೆ. ಸಾಮಾನ್ಯ ನೆಲೆಯಿಂದ ವ್ಯಾಪಕವಾದ ನೆಲೆಗೆ ಹೋಗುವ ಮನಃಸ್ಥಿತಿಯನ್ನು ಹೇಳುತ್ತಾರೆ. ಹೀಗೆ ಪರಿವರ್ತಿತವಾಗಿರುವ ಭಾಷೆಯನ್ನು ಹಲವು ಭಾಷಿಕ ಪ್ರಕಾರಗಳಲ್ಲಿ ಗುರುತಿಸಬಹುದು.

1. ಬೆಡಗಿನ ಭಾಷೆ.
2. ವಿಡಂಬನ ಭಾಷೆ

3. ವೃತ್ತಿಪರಿಭಾಷೆ

4. ಧಾರ್ಮಿಕ ಪರಿಭಾಷೆ

5. ಅನುಭಾವಿಕ ಭಾಷೆ.

6. ಸರಳ ಭಾಷೆ.

ಶರಣರ ಈ ಎಲ್ಲಾ ಬಗೆಯ ಭಾಷೆಗಳನ್ನು ಗಮನಿಸಿದಾಗ ಅದರಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವ್ಯಕ್ತಪಡಿಸಲು ಅನುವುಮಾಡಿಕೊಟ್ಟಿರುವುದು ಕಂಡುಬರುತ್ತದೆ. ತಮ್ಮ ಜೀವನಾನುಭವವನ್ನು ಎಲ್ಲರಿಗೂ ಸಲ್ಲುವ ವಿಚಾರದಾರೆಗಳನ್ನು ಹಿತನುಡಿಗಳನ್ನು ಸಮಾಜದ ಉಪಯೋಗಕ್ಕೆ ಬಳಸಲು ಉತ್ತವ ವೇದಿಕೆಯನ್ನು ಕಲ್ಪಸಿಕೊಡುವ ವ್ಯವಸ್ಥೆಯೂ ಇತ್ತು. ಮಹಾಮನೆಎಂಬ ವಿಚಾರಮಂಟಪದಲ್ಲಿ ಪ್ರತಿಯೊಂದು ಜನಾಂಗಕ್ಕೂ ವಿಶೇಷವಾದ ಪ್ರಾತಿನಿಧ್ಯವನ್ನು ಕೊಟ್ಟು ಆ ಜನಾಂಗದ ವಿಚಾರಧಾರೆಗಳನ್ನು ಎಲ್ಲರಿಗೂ ತಿಳಿಸಿಕೊಡುವ ಕೆಲಸವನ್ನು ಕಲ್ಪಿಸಲಾಗಿತ್ತು. ಈ ವಿಚಾರಧಾರೆಯ ಮೂಲ ಉದ್ದೇಶ ಎಲ್ಲರಿಗೂ ಶೂನ್ಯ ಸಂಪಾದನೆಯನ್ನು ಮಾಡಿ ಅವರ ಮೂಲಕ ಲೋಕಕಲ್ಯಾಣವನ್ನು ಸಾರುವ ಕಾಯಕ ಯೋಗಿಗಳಾಗಲಿ ಎಂಬ ಆಶಯ ಆ ವಿಚಾರಮಂಟಪದ್ದಾಗಿತ್ತು.

ಹೀಗೆ ವಿಭಿನ್ನ ಪ್ರಕಾರಗಳನ್ನು ಬಳಸಿಕೊಂಡು ಭಾಷಾ ಏಕತೆ ಸಾಧಿಸಲು ಪ್ರಯತ್ನಿಸಿದರು. ಏಕೆಂದರೆ 'ಅದುವರೆಗೆ ಸಾಹಿತ್ಯವೆಲ್ಲವು ಒಂದು ಸಾಂಪ್ರದಾಯಿಕ ಸೃಷ್ಟಿಯಾಗಿತ್ತು.' ಅದು ಕೆಲವೇ ಪಂಡಿತರ ತುತ್ತಾಗಿತ್ತು. ಜನಸಾಮಾನ್ಯರು ಅವರಿಂದ ವಂಚಿತರಾಗಿದ್ದರು. ಶಿವಶರಣರಿಗೆ, ತಮ್ಮ ಅನಿಸಿಕೆ ಅನುಭವಗಳು ಎಲ್ಲರಿಗೂ ತಿಳಿಯಬೇಕು ಹಾಗೂ ಮೆಚ್ಚಿಗೆ ಗಳಿಸಬೇಕೆಂಬ ಕಾಳಜಿ ಇತ್ತು. ಅಷ್ಟೇ ಅಲ್ಲ, ತಮ್ಮ ವಿಚಾರಗಳು ಆಚರಣಾ ಸಾಧ್ಯವಾಗಿರಬೇಕೆಂದು ಅವರು ನಿರ್ಧರಿಸಿದರು. ಏಕೆಂದರೆ ಅವರು ಕಲ್ಪನಾ ವಿಲಾಸಿಗಳಲ್ಲ, ವಾಸ್ತವವಾದಿಗಳು, ಆಗ ಕಾವ್ಯ ಭಾಷೆಗೂ ಆಡು-ನುಡಿಗೂ ಬಹಳ ಅಂತರವಿತ್ತು. ಜನಪದ ಸಾಹಿತ್ಯವನ್ನು ಬಿಟ್ಟರೆ, ಜನರ ನಾಲಗೆಯ ಮೇಲೆ ಬಂದ ಜೀವಭಾಷೆ. ಕಾವ್ಯಗಳಲ್ಲಿ ಕಾಣಸಿಗದಂತಾಗಿತ್ತು. ವಚನಕಾರರು ಜನಪರವಾದ ಸಾಹಿತ್ಯ ಸೃಷ್ಟಿಗೆ ಮನಸ್ಸು ಮಾಡಿ, ಜನಜೀವನದ ಉಸಿರಾಗಿದ್ದ ಆಡು-ನುಡಿಯನ್ನು ತಮ್ಮ ಅನುಭವವಾಹಕವನ್ನಾಗಿ ಮಾಡಿದ್ದರಿಂದ ಬದುಕು ಮತ್ತು ಭಾಷೆಗಳಿಗೆ ಸಾವಯವ ಸಂಬಂಧ ಏರ್ಪಟ್ಟಿತ್ತು. ಇದೊಂದು ಅಪೂರ್ವ ಸಾಧನೆ! ಇದರಿಂದ ಇನ್ನೊಂದು ಉಪಕಾರವೂ ಆಯಿತು.

ಜನವಾಹಿನಿಯನ್ನು ದೇವ ವಾಣಿಯಾಗಿಸುವ ಅವರ ಶ್ರದ್ಧಾಪೂರ್ವಕ ಪ್ರಯತ್ನದಿಂಥ ಗಾಢವಾದ ಆಧ್ಯಾತ್ಮಿಕ ವಿಚಾರಗಳನ್ನು ಸೂಕ್ಷ್ಮಾತಿಸೂಕ್ಷ್ಮ ದಿವ್ಯಾನುಭವಗಳನ್ನು ದಿನ ಬಳಕೆಯ ಮಾತುಗಳಿಂದಲೇ ಸಮರ್ಥವಾಗಿ ವ್ಯಕ್ತಗೊಳಿಸುವ ಸಾಧ್ಯತೆಯನ್ನು ಅವರು ಪ್ರಕಟಪಡಿಸಿದ್ದು."-11 ಆದ್ದರಿಂದ ಜನಸಾಮಾನ್ಯರ ಮನಸ್ಸಿಗೆ ಮುಟ್ಟುವ ಭಾಷೆಯಾಗಿ ಹತ್ತಿರವಾಯಿತ್ತು. ತಮ್ಮ ಬದುಕಿಗೆ ಪೂರಕವಾಗಿ ಸಂವಹನ ಮಾಧ್ಯಮವು ಬಹಳ ಹತ್ತಿರವಾಯಿತು, ಆದ ಕಾರಣ ಶಿವಶರಣರು ಬದುಕಿಗೆ ಹತ್ತಿರವಾಗುವ ಭಾಷೆಯನ್ನು ಮಾನವೀಯ ಮೌಲ್ಯಗೊಳಿಸಿ ಉದಾರೀಕರಿಸಿದರು. ಬಸವಣ್ಣನವರ ಈ ವಚನವು ಸ್ಪಷ್ಟೀಕರಿಸುತ್ತದೆ.

"ಏನಿ ಬಂದಿರಿ ಹದುಳಿದ್ದಿರೆ ಎಂದೆಡೆ
ನಿಮ್ಮೈಸಿರಿ ಹಾರಿಹೋಹುದೆ
ಕುಳ್ಳಿರೆಂದಡೆ ನೆಲಕುಳಿಹೋಹುದೆ
ಒಡನೆ ನುಡಿದೆಡೆ ಸಿರ, ಹೊಟ್ಟೆಯೊಡೆವುದೇ ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವದ ಮಾಬನೇ ಕೂಡಲಸಂಗಮದೇವಯ್ಯ."-12

ಸಾಮಾಜಿಕ ಜೀವನಕ್ಕೆ ಹತ್ತಿರವಾದ ರೀತಿಯಲ್ಲಿ ಸಮೂಹ ಮಾಧ್ಯಮವಾದ ಭಾಷೆಯು ಸರಳೀಕರಣಗೊಳ್ಳುವುದನ್ನು ತೋರುತ್ತದೆ. ನಮ್ಮ ಭಾಷಿಕ ಜಗತ್ತಿಗೆ ಗುಣಾತ್ಮಕವಾದ ಮೌಲ್ಯಗಳು ಇದ್ದಾಗ ಮಾತ್ರ ಆ ಭಾಷೆಗೆ ಮೌಲ್ಯ ಬರುತ್ತದೆಂಬುದು ಇವರ ಅಭಿಪ್ರಾಯವಾಗಿದೆ. "ಇದರಿಂದ ತಿಳಿಯುವ ಒಂದು ಅಂಶವೆಂದರೆ ದಿನನಿತ್ಯದ ಸಾಮಾನ್ಯ ಸಂದರ್ಭದಲ್ಲಿ ನಾವು ಭಾಷೆಯನ್ನು ಬಳಸುವ ರೀತಿಗೆ ಸಾಹಿತ್ಯಕ ಸಂದರ್ಭದಲ್ಲಿ ಬಳಸುವ ರೀತಿಗೂ ಸಾಕಷ್ಟು ವ್ಯತ್ಯಾಸವಿದ್ದು, ಕಾಲ್ಪನಿಕತೆಯ ಹಿಂದೆ ಉದ್ದೇಶಪೂರ್ವಕ ಸೂತ್ರವೊಂದು ಭಾಷೆಯನ್ನು ನಿಯಂತ್ರಿಸುತ್ತದೆ, ನಿರ್ವಹಿಸುತ್ತದೆ ಎಂಬುದು ಇನ್ನು ವಿಶೇಷವಾಗಿ ಕಾವ್ಯದಂಥ ಸಂಕೀರ್ಣ ಕಲಾಸೃಷ್ಟಿಯಲ್ಲಿ ತುಂಬಾ ಜಾಗೃತವಾಗಿ ಕೆಲಸ ಮಾಡುತ್ತದೆ ಎಂಬುದು."-13 ಭಾಷೆಯನ್ನು ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಶರಣರು ಬಹುಮುಖವಾಗಿ ಬಳಸಿದರು, ಮನುಷ್ಯನ ಒಂದು ಅವಿಭಾಜ್ಯ ಅಂಗದಂತೆ ಬಳಸಿ ಭಾಷೆಯನ್ನು ಆಧುನೀಕರಿಸಿದರು. ಭಾಷೆಯ ಉದಾರೀಕರಣ ಸಂದರ್ಭದಲ್ಲಿ ಈ ಕೆಳಕಂಡ ನಿಲುವುಗಳು ಶರಣರ ಭಾಷಾ ಮಾಧ್ಯಮದಲ್ಲಿ ಸಮಯೋಚಿತವಾಗಿ

ಪ್ರಕಟಗೊಳ್ಳುವುದನ್ನು ಕಾಣಬಹುದು. "ಈ ಆಲೋಚನೆಗಳಿಂದ ಹೊರಡುವ ಒಟ್ಟು ಅಭಿಪ್ರಾಯಗಳಲ್ಲಿ ನಾಲ್ಕು ನಿಲುವುಗಳಿರುವುದು ಕಂಡು ಬರುತ್ತದೆ.

ಅ. ಭಾಷೆಯೆಂಬುದು ಒಂದು ಯಂತ್ರ, ಅದನ್ನು ನಮ್ಮ ವಿಚಾರ ಭಾವನೆಗಳ ಘಟಕಗಳಿಗೆ ಸಮರ್ಪಕವಾಗಿ ಉಪಯೋಗಿಸಬಹುದು.

ಬ. ಭಾಷೆ ಒಂದು ಶಕ್ತಿ, ಅದು ಜೀವನಾನುಭವವನ್ನು ಅನ್ವೇಷಿಸುವ ರೂಪಿಸುವ ಒಂದು ಶಕ್ತಿಯಾಗಿ ಪ್ರಕಟವಾಗಬಹುದು.

ಕ. ಭಾಷೆ ಒಂದು ಶಕ್ತಿಯಾಗಿದ್ದರೂ ಅದು ಸೀಮಿತವಾದುದು, ಮಾನವನ ಮೂಲ ಅನುಭವವನ್ನು ಅದು ಹಿಡಿಯಲಾರದು. ಆದರೂ ಭಾಷೆಯಿಲ್ಲದೇ ಗದ್ಯಂತರವಿಲ್ಲ. ಕವಿಯಾದವನು ಭಾಷೆಯನ್ನು ಸಾಧ್ಯವಿದ್ದಷ್ಟು ದುಡಿಸಬೇಕು.

ಡ. ಭಾಷೆ ಮಾನವನು ರೂಪಿಸಿಕೊಂಡ ಸುಂದರವಾದ ಆಟಿಕೆ, ಭಾಷೆಯೊಡನೆ ಚಿನ್ನಾಟವಾಡುವುದೇ ಒಂದು ಅನುಭವ."–14

ಈ ಮೇಲ್ಕಂಡ ಎಲ್ಲಾ ನಿಲುವುಗಳನ್ನು ಶರಣರು ಅಂದಿನ ಕಾಲದಲ್ಲಿ ತಮ್ಮ ವಚನಗಳಲ್ಲಿ ಸಮರ್ಥವಾಗಿ ಬಳಸಿ, ಆಡು–ನುಡಿ, ಅನ್ಯ ಭಾಷಾ ಸ್ವೀಕರಣೆ, ನವಪದ ನಿರ್ಮಾಣ, ಕವಿ ಸಮಯದಲ್ಲಿ ಹುಟ್ಟುವ ನವಪದ, ಮುಂತಾದ ಹೊಸತೆರನಾದ ಅಂಶಗಳನ್ನು ಇಟ್ಟುಕೊಂಡು ಭಾಷೆಯನ್ನು ಪ್ರಬುದ್ಧಗೊಳಿಸುತ್ತಾರೆ. ಇದರ ಜೊತೆಯಲ್ಲಿ ಜನ ಸಾಮಾನ್ಯರನ್ನು ಕಲ್ಯಾಣಕ್ರಾಂತಿಯಲ್ಲಿ ಪ್ರತ್ಯಕ್ಷವಾಗಿ–ಪರೋಕ್ಷವಾಗಿ ಪ್ರೇರೇಪಿಸುತ್ತಾರೆ. ಈ ಕ್ರಿಯಾಶೀಲ ಜಂಗಮತತ್ವವೇ 'ಭಾಷಾ ಉದಾರೀಕರಣ' ವಾಗುತ್ತದೆ. ಕಲ್ಯಾಣ ಕ್ರಾಂತಿಯ ಭಾಷಾ ಉದಾರೀಕರಣದ ಪರಿಣಾಮವಾಗಿ ಕನ್ನಡ ಭಾಷೆ ಹೊಸತನವನ್ನು ಪಡೆಯುತ್ತದೆ. ಅನೇಕ ಅಕ್ಷರವಂಚಿತ ಸಮುದಾಯಗಳು, ಅಕ್ಷರ ಕಲಿತು ಬರೆಯತೊಡಗುತ್ತಾರೆ. ಅನಾದಿ ಕಾಲದಿಂದ ಎಲ್ಲಾ ಸವಲತ್ತುಗಳಿಂದ ವಂಚಿತವಾಗಿದ್ದ ಸ್ತ್ರೀ ಸಮೂಹವನ್ನು ಅಬಲೆಯರು ಮೂಲೆ ಗುಂಪಾಗಿದ್ದ ಮಹಿಳೆಯರೂ ಕೂಡ ಬರೆಯಲು ತೊಡಗುತ್ತಾರೆ. ಇದರ ಪರಿಣಾಮವಾಗಿ "ವಚನಕಾರರ ಅನಂತರ ಬಾಳಿದ ಹರಿಹರ–ರಾಘವಾಂಕರು, ಅವರ ಆಧ್ಯಾತ್ಮಿಕ ತೇಜಸ್ಸು ಮತ್ತು ನವೀನ ವಿಚಾರ ಪರಿಣಾಮಗಳಿಂದ ಪ್ರಭಾವಿತರಾದವರು, ರಾಜರ ಊಳಿಗಮಾನ್ಯ ವೃತ್ತಿಯನ್ನು ಧಿಕ್ಕರಿಸಿ, ಕಾವ್ಯವಸ್ತು, ಉದ್ದೇಶ, ಶೈಲಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದುಕೊಂಡರು. ಜನ ಬದುಕಬೇಕೆಂಬುದು ಕಾವ್ಯ

ರಚಿಸಲು ಹೊರಟರು. ಅವರು ತಮ್ಮ ಕಾವ್ಯಗಳಲ್ಲಿ ಜನಸಾಮಾನ್ಯಸ್ತರದಿಂದ ಬಂದ ಶರಣರ ಚರಿತ್ರೆಯನ್ನು ರಗಳೆ, ಷಟ್ಪದಿಯಂಥ ದೇಶಿ ಛಂದಗಳ ಬಳಕೆಯನ್ನು ಭಾಷೆ ಶೈಲಿಗಳಲ್ಲಿ ಬದುಕಿಗೆ ಹತ್ತಿರವಾದ ರೀತಿಯನ್ನು ತಂದುಕೊಂಡರು."-15 ಎಲ್ಲಾ ಮುಂದೆ ಸಂಭವಿಸಿದ ವಿಚಾರಗಳಲ್ಲಷ್ಟೇ ಬದಲಾಗಲಿಲ್ಲ. ಅಂದಿನ ಕಾಲದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಮೊದಲಾದ ಜನಜೀವನ ಕ್ರಮಗಳು, ಭಾಷಿಕ ಬದಲಾವಣೆಗೆ ಒಳಗಾಗುತ್ತದೆ. ಇದರ ಪರಿಣಾಮವನ್ನು ಮೇಲೆ ಹೇಳಿದ ಅಂಶಗಳು ಸ್ಪಷ್ಟಪಡಿಸುತ್ತವೆ.

6.2. ಸ್ತ್ರೀವಾದಿ ನೆಲೆಯ ಪೂರ್ವಾಪರ :

ಕಲ್ಯಾಣಕ್ರಾಂತಿಯ ಸಾಂಸ್ಕೃತಿಕ ಸನ್ನಿವೇಶದಲ್ಲಿ ಹೊಸ ಪರ್ವವೊಂದು ಪ್ರಾರಂಭವಾಯಿತೆನ್ನಬಹುದು. ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ರೀತಿ ತುಳಿತಕ್ಕೊಳಗಾದ ಪುರುಷನಷ್ಟೇ ಸಮಬಲಶಾಲಿಯಾದ ಸ್ತ್ರೀ ಗೆ ಮಹತ್ವದ ಅವಕಾಶಗಳು ದೊರಕಿದ್ದು, ಹನ್ನೆರಡನೆಯ ಶತಮಾನದ ಕ್ರಾಂತಿಯ ಪೂರ್ವಕಾಲದಲ್ಲಿ ಎನ್ನಬಹುದು. "ವಚನಪೂರ್ವ ಕಾಲದಲ್ಲಿ ನಮ್ಮ ನಾಡಿನ ಸಾಮಾಜಿಕ ಜೀವನದಲ್ಲಿ ವೈಷಮ್ಯ ತಲೆದೋರಿ ಮಹಿಳೆ ದೇವಪೂಜೆಗೆ ಅನರ್ಹಳು. ಶೂದ್ರ ಸಮಾನಳು ಎಂಬ ಭಾವನೆ ನೆಲೆಗೊಂಡಿತು. ಆಕೆ ಸರ್ವ ಕ್ಷೇತ್ರದಿಂದಲೂ ವಂಚಿತಳಾದಳು. ಹೊರಗಿನ ಸಮಾಜದಲ್ಲಿ ಬೆರೆತು ಆಕೆ ತನ್ನ ವ್ಯಕ್ತಿತ್ವ ವಿಕಾಸ ಮಾಡಿಕೊಳ್ಳುವುದು ಕನಸಿನ ಮಾತಾಗಿತ್ತು. ಪತಿ ಮತ್ತು ಹಿರಿಯರ ಆಜ್ಞಾಪಾಲನೆ, ಮಕ್ಕಳ ಪಾಲನೆ-ಪೋಷಣೆ, ಗೃಹಕೃತ್ಯ ಹೀಗೆ ಮನೆಯ ನಾಲ್ಕು ಗೋಡೆಗಳಿಗೆ ಮಾತ್ರ ಆಕೆಯ ಜೀವನದ ಆಶೋತ್ತರಗಳು ಸೀಮಿತಗೊಂಡಿದ್ದವು. ಆಕೆ ಬೌದ್ಧಿಕವಾಗಿಯೂ ಮಾನಸಿಕವಾಗಿಯೂ ಅಬಲೆಯೆಂಬ ಹುಸಿ ಸಿದ್ಧಾಂತವು ಏರ್ಪಟ್ಟಿತು. ಅವಳು ಇನ್ನೊಬ್ಬರ ರಕ್ಷಣೆಯಲ್ಲಿರಲು ಮಾತ್ರ ಯೋಗ್ಯಳು, ಆಕೆಗೆ ಸ್ವತಂತ್ರ ಸಲ್ಲದು, ಬಾಲ್ಯದಲ್ಲಿ ತಂದೆಯಿಂದ, ಯೌವನದಲ್ಲಿ ಪತಿಯಿಂದ, ಮುಪ್ಪಿನಲ್ಲಿ ಪುತ್ರರಿಂದ ರಕ್ಷಿಸಲ್ಪಡಬೇಕಾದ ಸ್ತ್ರೀ ಸ್ವಾತಂತ್ರಕ್ಕೆ ಅರ್ಹಳಲ್ಲ ಎಂದು ಮನುಮಹರ್ಷಿ ಜನರ ಮಂದಗಾಮಿ ಧೋರಣೆಯ ವಿಚಾರ ಪ್ರಣಾಳಿಕೆಗೆ ಶಾಸ್ತ್ರದ ಮುದ್ರೆಯನ್ನೊತ್ತಿದ್ದನು ಅಂತಹ ವಿಚಾರ ಪ್ರಣಾಳಿಕೆಯನ್ನು ಶರಣರು ವಿರೋಧಿಸಿದರು."-16

ಸ್ತ್ರೀವಾದಿ ಚಳುವಳಿಯನ್ನು ತಿಳಿಯುವಾಗ ಪ್ರಮುಖವಾಗಿ ತಾಂತ್ರಿಕ ಹಾಗೂ ಸೈದ್ಧಾಂತಿಕ ತಳಹದಿಯ ಮೇಲೆ ರೂಪುಗೊಂಡ ಮೊಟ್ಟಮೊದಲ ಸ್ತ್ರೀಪರವಾದ ಕ್ರಾಂತಿಯೆಂದೇ

ಬಿಂಬಿತವಾಗಬಹುದಾದ ಕ್ರಾಂತಿಯೇ 'ಕಲ್ಯಾಣದ ಸಾಂಸ್ಕೃತಿಕ ಕ್ರಾಂತಿ', ಬದುಕಿನ ಸಮಗ್ರ ಚಿತ್ರಣದ ಸ್ವರೂಪವನ್ನೇ ಬದಲಾವಣೆಯತ್ತ ಮುಖಮಾಡುವಂತೆ ಸ್ಪರ್ಶಿಸಿದ ಕ್ರಾಂತಿಯು ಸರ್ವ ರೀತಿಯಲ್ಲಿಯೂ ಸಾಮಾಜಿಕ ಜೀವನದ ಪಾಲುದಾರರಾಗಿರುವ ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಿತು. ಶಿವಶರಣರಿಗೆ ಈ ಉದ್ದೇಶವೇ ಮುಖ್ಯವಾಗಿರಲಿಲ್ಲ. ಸಮಾಜದಲ್ಲಿ ಜನಸಾಮಾನ್ಯರ ಬದುಕಿಗೆ ಸಮಾನತೆಯನ್ನು ಕಲ್ಪಿಸುವುದು ಅವರ ಗುರಿಯಾಗಿತ್ತಾದರೂ, ಈ ಕ್ರಾಂತಿಯ ನೆಪದಲ್ಲಿ ಸಮಗ್ರವಾಗಿ ಎಲ್ಲಾ ವರ್ಗಗಳನ್ನು ತಮ್ಮ ಜೊತೆಗೆ ಕೊಂಡೊಯ್ಯಬೇಕೆನ್ನುವುದೇ ಈ ಕ್ರಾಂತಿಯ ಆಶಯವಾಗಿದೆ. ಪುರೋಹಿತಶಾಹಿ, ಊಳಿಗಮಾನ್ಯ ಸಂಸ್ಕೃತಿ ಹಾಗೂ ರಾಜಪ್ರಭುತ್ವದ ದಬ್ಬಾಳಿಕೆಯಿಂದ ಮನನೊಂದಿದ್ದ ಸ್ತ್ರೀಯರಿಗೆ ಹೊಸ ಬದುಕು ಅನಿವಾರ್ಯವಾಗಿತ್ತು. ಇಂಥ ಹಿನ್ನೆಲೆಯಲ್ಲಿಯೇ ಬಂದಂತಹ "ಕೊಂಡಗುಳಿ ಕೇಶಿರಾಜ, ತೆಲುಗು ಬೊಮ್ಮಣ್ಣ, ಕೆಂಭಾವಿ ಭೋಗಣ್ಣ, ಶಂಕರದಾಸಿಮಯ್ಯ ಮುಂತಾದ ಬಸವಾದಿಗಳಿಗೆ ಪೂರ್ವದವರು ಹಿರಿಯ ಸಮಕಾಲೀನರು ಆದ ಶರಣರು ಬ್ರಾಹ್ಮಣೇತರರು ಅಥವಾ ಬ್ರಾಹ್ಮಣ್ಯವನ್ನು ತಿರಸ್ಕರಿಸಿದವರು, ರಾಜಶ್ರೇಷ್ಠತೆಯನ್ನು ಅಲ್ಲಗಳೆದವರು, ಒಂದು ಬಗೆಯಲ್ಲಿ ಹೊಸ ಸಮಾಜ ನಿರ್ಮಾಣ ಆಗಲೇ ಪ್ರಾರಂಭವಾಯಿತೆನ್ನಬೇಕು. ಇವರು ಪ್ರಾರಂಭಿಸಿದ ಕೆಲಸ ಹೆಚ್ಚು ವ್ಯಾಪಕವಾದ ಪರಿಣಾಮವನ್ನು ಬೀರುತ್ತಾ ಒಂದು ಆಂದೋಲನವಾಗಿ ರೂಪಗೊಂಡದ್ದು. ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ, ಬಸವಾದಿಗಳಿಗೆ ಈ ಹಿನ್ನೆಲೆಯಿದ್ದುದರಿಂದ ಆಂದೋಲನದ ತಾತ್ವಿಕ ತಳಹದಿ ಯಾವುದಾಗಬೇಕೆಂಬ ಸ್ಪಷ್ಟ ಕಲ್ಪನೆಯು ಅವರಿಗಿದ್ದಿತು. ಈ ತಳಹದಿಯನ್ನು ಒಂದೇ ಮಾತಿನಲ್ಲಿ ಸಾರ ರೂಪವಾಗಿ ಹೇಳಬಹುದು, ಅದೇ ಸಮಾನತೆ. "ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ, ಜಲಬಿಂದುವಿನ ವ್ಯವಹಾರ ಒಂದೇ ಆಸೆಯಾಮಿಷದೋಷ ಹರುಷವಿಷಯಾದಿಗಳೆಲ್ಲಾ ಒಂದೇ ಎಂಬ ಬಸವಣ್ಣನ ಮಾತು. ಹುಟ್ಟಿನ ಮೂಲ ಹುಟ್ಟಿನ ನಂತರದ ಸಂವೇದನೆಗಳು ಈ ವಿಚಾರಗಳಲ್ಲಿ ಎಲ್ಲಾ ಜೀವಿಗಳಿಗಿರುವ ಸರ್ವ ಸಮಾನತೆಯನ್ನು ಸೂಚಿಸುತ್ತದೆ. ಮುಂದುವರೆದು ಬಸವಣ್ಣ ಆ ಕಾಲದಿಂದಲೇ ಎಲ್ಲರೂ ಸಮಾನರು ಎಂಬ ತತ್ವವನ್ನು ಪ್ರತಿಪಾದಿಸುತ್ತಾನೆ. ಆ ಕಾಲದ ಚಳುವಳಿ ನಡೆದ ರೀತಿಯು ಈ ಸಮಾನತೆಯ ಆಧಾರದ ಮೇಲೆಯೇ ನಡೆದುದಾಗಿದೆ."-17 ಅಷ್ಟಲ್ಲದೆ ಈ ಕ್ರಾಂತಿಯು ಪ್ರಮುಖ ಆಶಯಗಳೊಂದಿಗೆ ಹೊರಹೊಮ್ಮಿ ವರ್ಣಾಶ್ರಮ ಪದ್ಧತಿಯ ಸಂಕೋಲೆಯಿಂದ ಸ್ತ್ರೀಯನ್ನು ಜಾಗೃತಗೊಳಿಸಲು ಈ ಕ್ರಾಂತಿಯು ಸನ್ನದ್ಧವಾಗಿತ್ತು. ಸಮಾಜದಲ್ಲಿ ಉಂಟಾಗಿದ್ದ ಅಸಮಾನತೆ ಶೋಷಣೆಯನ್ನು ತೊಡೆದುಹಾಕಿ ಸಮಾನ ಅವಕಾಶಗಳನ್ನು ಕಲ್ಪಿಸಲು ಶ್ರಮಿಸಿದರು.

12ನೇ ಶತಮಾನಕ್ಕಿಂತ ಹಿಂದೆ ಸ್ತ್ರೀಯರಿಗೆ ಅಂಟಿಕೊಂಡಿದ್ದ ಸಾಮಾಜಿಕ ಪಿಡುಗುಗಳ ಶೋಷಣೆಗಳಿಂದ ಮುಕ್ತಿ ಅನಿವಾರ್ಯವಾಗಿತ್ತು. ಅಂದರೆ ಹೆಣ್ಣನ್ನು ಮಾಯೆಯನ್ನಾಗಿ ಮಾಡಿದ್ದರೂ ಹೆಣ್ಣು ದುರ್ಬಲ ಶಕ್ತಿಯವಳು ಎಂದು ಅವಳನ್ನು ಕನಿಷ್ಠವಾಗಿ ನೋಡುತ್ತಿದ್ದರು. ಸಾಮಾಜಿಕವಾಗಿ ನಡೆಸುತ್ತಿದ್ದ ಪೂಜೆ, ವಿಧಿ-ವಿಧಾನಗಳಲ್ಲಿ ಬಹಿಷ್ಕೃತಗೊಂಡಿದ್ದಳು. ಏಕೆಂದರೆ "ಹೆಣ್ಣಿನ ಮಾಸಿಕ ಋತುವಿನಿಂದಾಗಿ ಅವಳನ್ನು ಅಪವಿತ್ರಳೆಂದು ಭಾವಿಸಲಾಯಿತು. ಇಂದ್ರನು ಮಾಡಿದ ವೃತ್ರಾಸುರ ವಧೆಯ ಕಾರಣದಿಂದಾಗಿ ಉಂಟಾದ ಬ್ರಹ್ಮಹತ್ಯಾ ದೋಷದ ಮೂರನೇ ಒಂದು ಭಾಗವನ್ನು ಈ ಕಾಲದಲ್ಲಿ ಸ್ತ್ರೀಯರು ಪಡೆದಿರುತ್ತರಾದ್ದರಿಂದ ಅವರಿಗೆ ತಾತ್ಕಾಲಿಕ ಮೈಲಿಗೆಯು ಪ್ರಾಪ್ತವಾಗುವುದೆಂದು ತೈತ್ತರೀಯ ಸಂಹಿತೆ (11,5,1,5,7)ಯು ಹೇಳುತ್ತದೆ. ಅವಳ ಮೈಲಿಗೆಯ ಕಾರಣದಿಂದಾಗಿ ವೇದ ವಿದ್ಯೆಯಿಂದ ಸ್ತ್ರೀ ವಂಚಿತಳಾದಳು. ಅಂದರೆ ಬೌದ್ಧಿಕ ಭಾಷೆಯೆಂದು ಪರಿಗಣಿಸಲಾಗಿದ್ದ ಸಂಸ್ಕೃತಾಧ್ಯಯನ ಅವಕಾಶ ಅವಳಿಗೆ ತಪ್ಪಿತು, ಎಲ್ಲಾ ಶಾಸ್ತ್ರ ಪರಿಣತಿಯಿಂದ ಅವಳು ದೂರವಾದಳು." -18 ಆದ್ದರಿಂದಲೇ ಶರಣರು ಹೆಣ್ಣಿಗೆ ಮಾಯೆಯ ಸ್ವರೂಪವನ್ನು ತೊಡೆದುಹಾಕಲು ಪ್ರಯತ್ನಿಸಿದರು, ಅದರ ಫಲಿತವಾಗಿಯೇ ಅಲ್ಲಮಪ್ರಭುಗಳು ಈ ರೀತಿ ಹೇಳುತ್ತಾರೆ.

" ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ.
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆಕಾಣ ಗುಹೇಶ್ವರಾ."-19

ಹೊನ್ನು, ಹೆಣ್ಣು, ಮಣ್ಣು ಎಲ್ಲಾ ವಿಷಯಗಳನ್ನು ಮಾಯಾ ಸ್ವರೂಪಿಯಾಗಿ ನೋಡುತ್ತಿದ್ದ ಕಾಲದಲ್ಲಿ ವಚನಕಾರರು ಹೆಣ್ಣಿಗೆ ಪ್ರತ್ಯೇಕ ಸ್ಥಾನಮಾನ ಕಲ್ಪಿಸಿದರು. ಈ ಸಮಸ್ಯೆಗೆ ಮೂಲ ಕಾರಣವಾಗಿರುವ 'ಮಾಯೆ' ಯ ಕಲ್ಪನೆಯನ್ನು ಬದಲಸಿ, ನಮ್ಮ ಮುಂದಿರುವ 'ಆಸೆ' ಅಥವಾ ಹೆಬ್ಬಯಕೆಯನ್ನು ಕಡಿಮೆಗೊಳಿಸಿದರೆ ಮಾನಸಿಕವಾದ ನೆಮ್ಮದಿ ದೊರೆಯುತ್ತದೆ ಎಂದು ಭಾವಿಸುತ್ತಾರೆ. ತಮ್ಮೊಳಗಿನ ಭ್ರಮೆಯನ್ನು ನೀಗಿ ವಾಸ್ತವಿಕ ತಳಹದಿಯ ಮೇಲೆ ನಿಲ್ಲಬೇಕೆಂದು ಭಾವಿಸುತ್ತಾರೆ.

ಬಹುಕಾಲದಿಂದಲೂ ಹೆಣ್ಣನ್ನು ಶಕ್ತಿದೇವತೆ ಪೂಜ್ಯವಾಗಿ ನಿಲ್ಲುವ ಸ್ಥಾನ–ಮಾನವುಳ್ಳವಳು ಎಂದು ಭಾವಿಸಿರುವುದು ಮೊದಲಿನಿಂದಲೂ ಇದೆ. ಆದರೆ ವಾಸ್ತವವಾಗಿ ಗಮನಿಸಿದರೆ ಹೇಳುವುದಕ್ಕಷ್ಟೇ ಮಾತ್ರ ಎಂಬಂತಿದ್ದ ಕಾಲದ ಪರಿಧಿಯಲ್ಲಿ ಶರಣರು ಇಂತಹ ಅಭಿಪ್ರಾಯಗಳನ್ನು ವಿರೋಧಿಸಿ ಹೆಣ್ಣಿಗೆ ತಮ್ಮ ಆರಾಧ್ಯದೈವದ ಅವತಾರವೆಂದು ಭಾವಿಸಿ, ಪುರುಷ ಸಮಾನವಾದ ಹಾಗೂ ದೈವಸಮಾನ ಗೌರವನ್ನು ಕೊಡುತ್ತಾರೆ. ಕರ್ಮಯೋಗಿ ಸಿದ್ಧರಾಮರ ಈ ವಚನ ಅದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

" ತಾಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು.
ತಾಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು.
ತಾಮಾಡಿದ ಹೆಣ್ಣು ನಾರಾಯಣನ ಎದೆಯ ಸೇರಿತು.
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ.
ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ."–20

ಹೆಣ್ಣು 'ರಾಕ್ಷಸಿ' ಎಂದು ಪರಿಗಣಿತವಾಗಿದ್ದ ಪಾರಂಪರಿಕ ಇತಿಹಾಸವನ್ನು ಮುರಿದು ಹೊಸ ಸಾಂಸ್ಕೃತಿಕ ಇತಿಹಾಸವನ್ನು ಸೃಷ್ಟಿಸಿದರು. ಇದು ಕೂಡ ಸ್ತ್ರೀವಾದಿ ಚಳುವಳಿಯ ಫಲಿತವಾಗಿದೆ.
ಈ ಮೇಲ್ಕಂಡ ವಚನದಲ್ಲಿ ಬರುವ 'ತಾ ಮಾಡಿದ ಹೆಣ್ಣು' ಎಂಬ ಅಹಃ ಪ್ರಜ್ಞೆಯು ಜಿನ ಶರಣರಲ್ಲಿ ಸರ್ವಾಧಿಕಾರಿ ದೋರಣೆಯ ರೀತಿ ಕಂಡು ಬರುವುದಿಲ್ಲ ಈ ನಿಟ್ಟಿನಲ್ಲಿ ಮೇಲಿನ ವಚನವನ್ನು ಗ್ರಹಿಸಿದಾಗ ತಾನು ಸೃಷ್ಟಿಸಿದ ಹೆಣ್ಣು ದೈವಪರಂಪರೆ ಹಿನ್ನೆಲೆಯವಳು, ಆ ಕಾರಣದಿಂದ ಆಕೆಗೆ ದೈವತ್ವದ ಜೊತೆ ಉತ್ತವ ಸಂಬಂದವನ್ನು ರೂಪಿಸಿಕೊಂಡಿದ್ದಾಳೆ. ಆದ್ದರಿಂದ ಹೆಣ್ಣನ್ನು ಕೇವಲ ಹೆಣ್ಣಾಗಿ ಪರಿಭಾವಿಸದೇ ಪೂಜನೀಯವಾದ ನೆಲೆಯಲ್ಲಿ ಆಲೋಚನೆಮಾಡಬೇಕಾಗಿದೆ. ಆಗಮಾತ್ರ ಹೆಣ್ಣು ದೈವ ಸ್ವರೂಪಿ, ಮಾತೃ ಸ್ವರೂಪಿಯಾದ ಭಾವನೆಗಳು ನಮ್ಮಲ್ಲಿ ಒಡಮೂಡುತ್ತವೆ. ಆದಕಾರಣ ಹೆಣ್ಣು ರಾಕ್ಷಸಿಗುಣದವಳಲ್ಲ ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಕರೆದಿರುವುದು ಸೂಕ್ತವಾಗಿದೆ. ಅಂದಿನ ಕಾಲದ ವಚನಗಾರ್ತಿಯರು ಇಂತಹ ವಿಚಾರಶೀಲ ನುಡಿಗಳಿಂದ ಪ್ರೇರೇಪಿತರಾದರು. ಕಾಲದ ಪರಿವರ್ತನೆಯಿಂದ ಎಲ್ಲಾ ಸಮಾನ ಮನಸ್ಕರು ಒಗ್ಗೂಡಿ ವಚನ ಕಟ್ಟುವಿಕೆ, ಅಭಿವ್ಯಕ್ತೀ ಸ್ವಾತಂತ್ರ್ಯವನ್ನ ಬಳಸಿಕೊಳ್ಳುವಲ್ಲಿ ಸಫಲರಾದರು, ಹೀಗಾಗಿ ಮೊಟ್ಟಮೊದಲ ಸ್ತ್ರೀವಾದಿ

ಭಾಷಾಪರಂಪರೆಯ ನಿರ್ಮಾಪಕರಾಗಿ ವಚನಗಾರ್ತಿಯರು ಮೂಡಿಬಂದದ್ದು ಕಲ್ಯಾಣಕ್ರಾಂತಿಯ ಪ್ರಭಾವದಿಂದ ಮಾತ್ರ..

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ 'ಸಮಾನತೆಯ ತತ್ವ' ದ ಪ್ರತಿಪಾದನೆಯಲ್ಲಿ ಮಹತ್ವದ ಸ್ಥಾನವನ್ನು ಪಡೆಯುತ್ತದೆ. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ಸಾಲುಗಳು ಶಿವಶರಣರು ಬದುಕಿನ ರೀತಿಯಿಂದಲೇ ನಮ್ಮ ಅರಿವಿಗೆ ಬರುತ್ತದೆ. ಅಂದಿನ ಕಾಲದಲ್ಲಿ ಸ್ತ್ರೀ-ಪುರುಷನೆಂಬ ಬೇಧವನ್ನು ತೊಡೆದು ಹಾಕಿ. ಹೊಸಕ್ರಾಂತಿಕಾರಕವಾದ ಹೆಜ್ಜೆಯಿಡುತ್ತಾರೆ. ಜೇಡರ ದಾಸಿಮಯ್ಯರು ಆಧ್ಯಾತ್ಮಿಕ ಜೀವನದಲ್ಲೂ ಸ್ತ್ರೀಯರಿಗೆ ಅವಕಾಶ ನೀಡಬೇಕೆಂಬುದನ್ನು ಹೇಳುತ್ತಾರೆ, ಏಕೆಂದರೆ ದೈಹಿಕವಾಗಿ ಅಂಗಾಂಗಗಳು ಬೇರೆ ಬೇರೆ ಇರಬಹುದು. ನಾವು ಆಚರಿಸುವ ಕ್ರಿಯೆ ಒಂದೇ, ಆದ್ದರಿಂದ ಹೆಣ್ಣು-ಗಂಡೆಂಬ ಬೇಧ-ಭಾವವನ್ನು ತೊಡೆದು ಹಾಕುತ್ತಾರೆ. ಈ ವಚನವು ಮೇಲಿನ ಮಾತನ್ನು ಸ್ಪಷ್ಟೀಕರಿಸುತ್ತದೆ.

" ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ
ರಾಮನಾಥ."-21

ಸಾಮಾಜಿಕ ಲಿಂಗಬೇಧದಲ್ಲಿ ಇಬ್ಬರೂ ಸಮಾನರು, ಹೆಣ್ಣು – ಗಂಡೆಂಬ ಬೇಧ ಇರಬಾರದೆಂದು ತಿಳಿಸುತ್ತಾರೆ. ಹಾಗೆಯೇ ಸಾಂಸಾರಿಕ ವಿಚಾರದಲ್ಲಿ ಹೆಣ್ಣನ್ನು ಭೋಗದ ವಸ್ತುವೆಂದು ಪರಿಪಾಲಿಸುವ ಕಾಲವಿತ್ತು. ಅಷ್ಟೇ ಅಲ್ಲದೆ ಕೆಲವು ಧರ್ಮಗಳು ಸಂಸಾರವನ್ನು ತ್ಯಜಿಸುವಂತೆ ಪ್ರೇರೇಪಿಸುತ್ತಿದ್ದ ಕಾಲದಲ್ಲಿ ಗಂಡ-ಹೆಂಡತಿ ಇಬ್ಬರೂ ಕೂಡಿ ಬಾಳುವ ಪದ್ಧತಿಯನ್ನು ಶರಣರು ಉತ್ತೇಜಿಸುತ್ತಾರೆ. ಜೇಡರ ದಾಸಿಮಯ್ಯನವರ ವಚನ ಇದನ್ನು ಸ್ಪಷ್ಟೀಕರಣ ನೀಡುತ್ತದೆ.

"ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷಬೆರೆದಂತೆ ಕಾಣಾ! ರಾಮನಾಥ."-22

ಶರಣರು ಸಂಸಾರವನ್ನು ನಿರಾಕರಿಸದೆ ಜೊತೆಗೂಡಿ ಬಾಳಿದರೆ ಸಾಮಾಜಿಕವಾಗಿ ಸಾಂಸಾರಿಕ ಬದುಕನ್ನು ಉನ್ನತೀಕರಿಸಲು ಪ್ರಯತ್ನಿಸಿದರಲ್ಲದೆ, ಹಾಗೆಯೇ ಬದುಕುತ್ತಾರೆ. ಸಾಂಸಾರಿಕ ಜೀವನವನ್ನು ವೈಯಕ್ತಿಕ ನೆಲೆಯಿಂದ ಸುಧಾರಿಸಿದರೆ, ಸಾರ್ವತ್ರಿಕ ಜೀವನವು ಸುಧಾರಿಸುತ್ತದೆಂಬುದನ್ನು ಮನಗಂಡಿದ್ದರು. ಎಲ್ಲಾ ಪ್ರಯತ್ನಗಳ ಹಿಂದೆ 'ಹೆಣ್ಣಿ'ನ ಪ್ರಯತ್ನವಿದೆಂದು ಅರಿತಿದ್ದರು. ಲಿಂಗ ಸಮಾನತೆಯನ್ನು ಹೇಳುವುದರ ಜೊತೆಗೆ ' ಹಿತ' ಮತ್ತು 'ಮಿತ'ವಾದ ಭಾಷೆಯನ್ನು ಮೇಲ್ಕಂಡ ವಚನದಲ್ಲಿ ಕಾಣಬಹುದಾಗಿದೆ. ಸಾಮಾನ್ಯ ರೂಪಕ ಉಪಮೆ ಮತ್ತು ವರ್ಣಾತೀತ ಅಂಶಗಳ ನೋಡಬಹುದಾಗಿದೆ. ಬಸವಣ್ಣನವರ ವಚನವು 'ಮಾಯೆ' ಎಂಬುದನ್ನು ಅಲ್ಲಗಳೆದು, ಹುಟ್ಟಿನಿಂದ-ಸಾಯುವವರೆಗೂ 'ಸ್ತ್ರೀ' ಪಾತ್ರ ಎಂತಹುದೆಂಬುದನ್ನು ಈ ವಚನದಲ್ಲಿ ತಿಳಿಸುತ್ತಾರೆ.

" ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ,
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ,
ಇದವಾವ ಪರಿಯಲ್ಲಿ ಕಾಡಿತು ಮಾಯೆ,
ಈ ಮಾಯೆಯ ಕಳೆವೆಡೆ ಎನ್ನವಳಲ್ಲ,
ನೀವೆ ಬಲ್ಲಿರಿ ಕೂಡಲಸಂಗಮದೇವಾ!-23

ಶರಣರು ದಾಂಪತ್ಯಧರ್ಮವನ್ನು ನಿರಾಕರಿಸದೆ ಅದರ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದನ್ನು ಈ ವಚನಗಳು ಸ್ಪಷ್ಟಪಡಿಸುತ್ತವೆ. ಸತಿ-ಪತಿಗಳು ಒಂದಾಗಿ ಮಾಡುವ ಭಕ್ತಿಯನ್ನು ಭಗವಂತನು ನೋಡುತ್ತಾನೆ. ಇಂತಹ ಲಿಂಗ-ಸಮಾನತೆಯನ್ನು ಪರಿಕಲ್ಪನೆಯನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

" ಸತಿ ಪತಿಗಳೊಂದಾದ ಭಕ್ತಿ ಹಿತವೊಪ್ಪುದು ಶಿವಂಗೆ
ಗಂಡ ಹೆಂಡಿರ ಮನಸ್ಸು ಒಂದಾಗಿದ್ದರೆ
ದೇವರ ಮುಂದೆ ನಂದಾದೀವಿಗೆಯ ಮುಡಿಸುವ ಹಾಗೆ
ಉಭಯ ದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ
ದಂಪತಿ ಏಕಭಾವವಾಗಿ ನಿಂದಲ್ಲ
ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು."

ಎಂಬ ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ ಮತ್ತು ಪ್ರಭುದೇವರ ವಚನಗಳು ದಂಪತಿ ಏಕಭಕ್ತಿಯ ಪರಿಣಾಮವನ್ನು ತಿಳಿಸುತ್ತವೆ.

ಶರಣರ ದಾಂಪತ್ಯ ಕೇವಲ ಲೌಕಿಕ ಮಟ್ಟದಲ್ಲಿ ಮಾತ್ರ ನಿಲ್ಲದೇ ಅದು ಆಧ್ಯಾತ್ಮಿಕ ಹಂತಕ್ಕೂ ಏರಿ ನಡೆಯುತ್ತದೆ. ಶರಣ ದಂಪತಿಗಳು ಸಾಮಾನ್ಯರಂತೆ ರತಿಸುಖ ಅನುಭವಿಸುವುದು ಮೊದಲ ಹಂತ. ಈಗಿನದು ದೈವೀ ದಾಂಪತ್ಯ. ಇಲ್ಲಿ ಹೆಣ್ಣು-ಗಂಡು, ಮೇಲು ಕೀಳುಗಳೆಂಬ ಬೇಧ ಉಳಿಯುವುದಿಲ್ಲ. ಆಚಾರ-ವಿಚಾರ ಸ್ವಾತಂತ್ರದಿಂದ ಅವರು ಬದುಕು ಸಾಗಿಸುತ್ತಾರೆ. ಇನ್ನು ಮುಂದೆ ಹೋಗಿ ಸಾಧನೆಯ ಚರಮ ಸೀಮೆಯನ್ನು ತಲುಪಿದಾಗ, ತಾವು ಸತಿಪತಿಗಳೆಂಬ ಭಾವ ಸಂಪೂರ್ಣ ಇಲ್ಲವಾಗಿ, 'ಶರಣಸತಿ ಲಿಂಗಪತಿ' ಭಾವ ಅವರಲ್ಲಿ ಅಳವಡುತ್ತದೆ. ಇಲ್ಲಿ ಇಬ್ಬರೂ ಆ ಲಿಂಗಪತಿಯ ಸತಿಯರಾಗಿ ತೋರುತ್ತಾರೆ." -24 ಸಾಂಸಾರಿಕ ಜೀವನದಲ್ಲಿ ಸತಿಪತಿಯರು, ಗಂಡು-ಹೆಣ್ಣು ಎಂಬ ಬೇಧ ಎಣಿಸದೇ ಇಬ್ಬರೂ ಒಂದೇ ಎಂಬ ಪರಿಭಾವನೆಯಿಂದ ಸಾಂಸಾರಿಕ ಜೀವನ ನಡೆಸಬೇಕೆಂದು ಅಭಿಪ್ರಾಯ ಪಡುತ್ತಾರೆ. ಬರೀ ಇಷ್ಟಕ್ಕೆ ಸೀಮಿತವಾಗಿದ್ದರೆ ಹೆಸರಿಸುವ ಅಗತ್ಯವಿರಲಿಲ್ಲ.

ಹಾಗಾಗಿ ಸತಿಪತಿ ಅಂಶಗಳು ಸನಾತನ ಕಾಲದಿಂದಲೂ ಭೇದಬಾವದ ತತ್ವದೆಡೆಯಲ್ಲಿ ಸಾಗಿಬಂದವುಗಳು 12 ನೇ ಶತಮಾನದಲ್ಲಿ ಶರಣರು ಗಂಡು ಹೆಣ್ಣು ಕೌಟುಂಬಿಕ ನೆಲೆಯಲ್ಲಿ ಏಕಮುಖವಾದ ಅಸ್ತಿತ್ವವುಳ್ಳ ವಿಚಾರಗಳು. ಆದ್ದರಿಂದ ಈ ಅಂಶಗಳಲ್ಲಿ ಯಾವುದೂ ಮೇಲಲ್ಲ ಯಾವುದೂ ಕೀಳಲ್ಲ ಎಂದು ಕೌಟುಂಬಿಕ ಸಮಾನತೆಯನ್ನು ತರಲು ಯತ್ನಿಸುತ್ತಾರೆ, ಏಕೆಂದರೆ ಸಮಾಜದ ಯಾವುದೇ ಒಂದು ಕ್ಷೇತ್ರ ಅಭಿವೃದ್ಧಿಯಾಗಬೇಕಾದರೆ ಕುಟುಂಬಗಳ ಪಾತ್ರ ಬಹಳ ಮುಖ್ಯವಾದುದು, ಆ ಕಾರಣದಿಂದಲೇ ಶರಣರು ಸಾಂಸಾರಿಕ ಜೀವನ ಸುಧಾರಣೆಗೆ ಒತ್ತು ನೀಡುತ್ತಾರೆ ಹಾಗೂ ಕೌಟುಂಬಿಕ ಚಿತ್ರಣ ಹೇಗಿರಬೇಕೆಂದು ಕಲ್ಪನೆಯನ್ನೂ ನೀಡುತ್ತಾರೆ.

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಶಿವಶರಣರು ಸಾಂಸಾರಿಕ ಜೀವನದಲ್ಲಿ ಆರ್ಥಿಕ ಜೀವನದ ಮೇಲೆ ಹಿಡಿತ ಹೊಂದಿದ್ದರೆಂಬುದು ತಿಳಿದು ಬರುತ್ತದೆ. ಅಂದಿನ ಕಾಲದಲ್ಲಿ ಕೆಳವರ್ಗದ ಮಹಿಳೆಯರು ಮೇಲ್ವರ್ಗದ ಶರಣ ಕ್ರಾಂತಿಯ ಪ್ರಭಾವಕ್ಕೆ ಒಳಗಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವ್ಯಕ್ತಿ ಸ್ವಾತಂತ್ರ ಪಡೆದಿದ್ದಾಳೆಂಬುದು ಗೊತ್ತಾಗುತ್ತದೆ. ಆದ್ದರಿಂದ ಸಾಂಸಾರಿಕ ಜೀವನದಲ್ಲಿ ಪ್ರಧಾನವಾದ ಪಾತ್ರವಹಿಸುತ್ತಿದ್ದಳೆಂಬುದು ಅರಿವುಂಟಾಗುತ್ತದೆ. ಈ ಭಾವನೆ ಮಾರಯ್ಯನವರ ಪತ್ನಿಯಾದ ಆಯ್ದಕ್ಕಿ ಲಕ್ಕಮ್ಮನ ವಚನದಿಂದ ತಿಳಿದು ಬರುತ್ತದೆ.

"ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ.
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರಮಾರಯ್ಯ."–25

ಅಂದಿನ ಸಾಮಾಜಿಕ ಜೀವನದಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದ ಅರಸರ ವ್ಯಕ್ತಿತ್ವ ಎಂತಹುದು ಎಂಬುದನ್ನು ಈ ವಚನವು ದೃಢೀಕರಿಸುತ್ತದೆ. ಯಾವ ಗುಣಗಳು ಯಾವ ವರ್ಗಕ್ಕೆ ಸೀಮಿತವಾಗಿರಬೇಕೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ವಚನದಲ್ಲಿ ಬರುವ 'ಈಸಕ್ಕಿಯಾಸೆ ನಿಮಗೇಕೆ' ಎಂಬ ಪ್ರಶ್ನೆಯು ಸಮಾಜದಲ್ಲಿ ಧಾನ್ಯ ಸಂಗ್ರಹವಾಗಲಿ, ಸಂಪತ್ತಿನ ಸಂಗ್ರಹವಾಗಲಿ ವ್ಯಕ್ತಿಗತವಾಗಿ ಇರಬಾರದೆಂಬುದನ್ನು ಹೇಳುತ್ತದೆ. ಅಂದರೆ ರಾಜನಿಗೆ ಸಂಪತ್ತಿನ ಸಂಗ್ರಹ ಅನಿವಾರ್ಯವಾದರೂ ಕೂಡ ಅದರ ಕ್ರಮವನ್ನು ವಿರೋಧಿಸಿದರು. ಸಮಗ್ರವಾಗಿ ಬದಲಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ನಾವು ಒಪ್ಪಲೇಬೇಕಾಗುತ್ತದೆ. ಹಾಗೆಯೇ 'ಈಸು' ಎನ್ನುವ ಆಡುನುಡಿಯನ್ನು ಮೇಲಿನ ವಚನದಲ್ಲಿ ನೋಡಬಹುದು. ಇಂತಹ ಸಾಮಾನ್ಯ ಮಟ್ಟದ ಭಾಷೆಯನ್ನು ಆಯ್ಕೆ ಮಾಡಿಕೊಂಡು ಅದರ ಮೂಲಕ ಜನರ ಮನಸ್ಸನ್ನು ತಲುಪುವ ಕೆಲಸ ಮಾಡಿದರು. ಅಂದಿನ ಕಾಲಘಟ್ಟದಲ್ಲಿ 'ಸ್ತ್ರೀ' ಯು ಯಾವುದೇ ಒಂದು ಕೆಲಸಕ್ಕೆ ಸೀಮಿತಗೊಳ್ಳದೇ ಸ್ವಾಭಿಮಾನಿಯಾದ ಜೀವನವನ್ನು ನಡೆಸಲು ಸಿದ್ಧಳಿದ್ದಾಳೆಂಬುದನ್ನು ಮಹಾದೇವಿಯಕ್ಕನ ವಚನಗಳಿಂದ ತಿಳಿದು ಬರುತ್ತದೆ. ಯಾವುದೇ

ವಚನಾಗಾರ್ತಿಯರು ತಮ್ಮ ಸಾಂಸಾರಿಕ ಜೀವನ ಕ್ರಮದಲ್ಲಿ ಶರಣ ಕ್ರಾಂತಿಯ ಪ್ರಭಾವದಿಂದಾಗಿ ದುಡಿದು ತಿನ್ನುವ ಕಾಯಕವನ್ನು ಅವಲಂಬಿಸಿದ್ದರು.

" ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯಮಾಡಿ
ಶಬ್ಧಕ್ಕೆ ನಾಚಿದೊಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ.
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೇ ಸಮಾಧಾನಿಯಾಗಿರಬೇಕು."-26

ಮಹಾದೇವಿಯಕ್ಕನ ಈ ವಚನವು ಸಾರ್ವತ್ರಿಕ ಜೀವನದಲ್ಲಿ ಸಾಮಾನ್ಯವಾಗಿರುವ ಸವಾಲುಗಳು ಇದ್ದೇ ಇರುತ್ತವೆಂಬುದನ್ನು ಹೇಳುತ್ತದೆ. ಇವುಗಳ ಮಧ್ಯೆ ನಮ್ಮ ಬದುಕನ್ನು ವ್ಯವಸ್ಥಿತವಾಗಿ ಕಟ್ಟಿಕೊಳ್ಳಬೇಕೆ ವಿನಃ ಸಮಸ್ಯೆಗಳು ಬಂದಾಗ ದೂರ ಸರಿಯಬಾರದೆಂದು ಹೇಳುತ್ತಾರೆ. ಜೀವನದಲ್ಲಿ ಯಾವಾಗಲೂ ನಕಾರಾತ್ಮಕ ಚಿಂತನೆಗಳನ್ನು ಮಾಡಬೇಕೆಂಬುದು ಈ ವಚನದ ಆಶಯವೆನಿಸುತ್ತದೆ. ಈ ದೃಷ್ಟಿಯಲ್ಲಿ ಆಲೋಚಿಸ ಹೊರಟರೆ ನಾವು ಯಾವಾಗಲೂ ಇಂತಹ ಸಂಧಿಗ್ದ ಸನ್ನಿವೇಶಗಳಲ್ಲಿ, ಮನಸ್ಸಿನಲ್ಲಿ ಕೋಪವನ್ನು ಮಾಡಿಕೊಳ್ಳದೆ ಸಮಾಧಾನದಿಂದ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಿಕೊಳ್ಳಬೇಕೆಂಬುದು ಅಕ್ಕಮಹಾದೇವಿಯವರ ನಿಲುವಾಗಿದೆ. ಇಲ್ಲಿ ನಾವು ಅಬಲೆಯರಾದರೂ, ಎದೆಗುಂದದೆ ಸಬಲೆಯರಾಗುವತ್ತ ನಡೆದು ಹೋಗಬೇಕೆಂದು ಪ್ರತಿಪಾದನೆ ಮಾಡುತ್ತಾಳೆ. ಹಾಗೆಯೇ ಇಲ್ಲಿನ ಭಾಷೆ ಜನ ಸಾಮಾನ್ಯರ ಬಳಕೆಯಲ್ಲಿದ್ದ ಗಾದೆ ಮಾತುಗಳನ್ನು ಈ ವಚನದಲ್ಲಿ ನೋಡಬಹುದು ಇಷ್ಟಲ್ಲದೇ ಸ್ತ್ರೀ ಪರವಾದ ಹೋರಾಟದ ಛಾಯೆಗಳಿಗೆ ವಚನವು ಸ್ಪಷ್ಟೀಕರಣ ನೀಡುತ್ತದೆ.

" ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದಡೆ ಕೆರೆಹಳ್ಳ ಬಾವಿಗಳುಂಟು.

ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು
ಶಯನಕ್ಕೆ ಹಾಳು ದೇವಾಲಯಗಳುಂಟು
ಚೆನ್ನಮಲ್ಲಿಕಾರ್ಜುನಯ್ಯಾ.
ಆತ್ಮಸಂಗಾತಕ್ಕೆ ನೀನೆನಗುಂಟು."–27

ಸ್ತ್ರೀ ಪರವಾದ ಹೋರಾಟದ ನಿಲುವುಗಳುಳ್ಳ ಈ ವಚನವು ವೈಯಕ್ತಿಕವಾದ ಬಯಕೆಗಳ ತೃಪ್ತಿಗೆ ಯಾರ ಹಂಗಿನ ಅವಶ್ಯವಿಲ್ಲಯೆಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ಅಂದರೆ ಒಂದು ಕಾಲದಲ್ಲಿ ಹೆಣ್ಣು ಪರಾವಲಂಬಿಯಾಗಿ ಬದುಕಬೇಕಾಗಿತ್ತು. ಆ ಸಮಯದಲ್ಲಿ ಹೆಣ್ಣು ಪರಾಧೀನದಲ್ಲಿರುತ್ತಿದ್ದಳು. ಶರಣ ಕ್ರಾಂತಿಯ ಸನ್ನಿವೇಶದಲ್ಲಿ ಈ ಹಂಗಿನ ಬದುಕನ್ನು ತೊರೆಯುವಂತೆ ತಾವೇ ನಿದರ್ಶನವಾಗಿ ನಿಲ್ಲುತ್ತಾಳೆ. ಆದ್ದರಿಂದಲೇ ಅತೀತವಾದ ಶಿವನಿಗೆ ಮೊರೆ ಹೋಗುವುದಲ್ಲದೇ ಲೌಕಿಕವಾದ ಸುಖ ಭೋಗಗಳ ಆಸೆ ಈಡೇರಿಸಿಕೊಳ್ಳಲು, ಉನ್ನತವಾದ ಜೀವನವನ್ನು ಆಯ್ದುಕೊಳ್ಳದೇ ಇರುವ ಸಿಗುವ ಅವಕಾಶಗಳಲ್ಲಿಯೇ ತೃಪ್ತಿ ಪಡಬೇಕೆಂಬ ನಿಲುವನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಅಕ್ಕಮಹಾದೇವಿಯೂ ಕಟ್ಟಿಕೊಟ್ಟಿದ್ದಾಳೆ. ಈ ವಚನದಲ್ಲಿ ವಿಶೇಷವಾಗಿ ಆದಿ ಪ್ರಾಸ ಅಂತ್ಯ ಪ್ರಾಸಗಳು ಬಂದಿವೆ. ಹಾಗಾಗಿ ವ್ಯಾಕರಣದ ವಿಷಯದಲ್ಲಿಯೂ ಶರಣ ಶರಣೆಯರಿಗೆ ಪಾಂಡಿತ್ಯಂಬುದು ಅರಿವಾಗುತ್ತದೆ.

ಕಲ್ಯಾಣಕ್ರಾಂತಿ ಸಂದರ್ಭದಲ್ಲಿ ವಚನಕಾರರ ಆಶಯಗಳು ಕ್ರಾಂತಿಯೆಷ್ಟು ಪೂರಕವಾಗಿದ್ದವೋ, ಅಷ್ಟೇ ಪೂರಕವಾಗಿ ವಚನಗಾರ್ತಿಯರು ಕಲ್ಯಾಣಕ್ರಾಂತಿಗೆ ಸ್ಪಂದಿಸಿದರು. ಕ್ರಾಂತಿಯ ಪೂರ್ವ ಕಾಲದಲ್ಲಿ ಸಾಮಾಜಿಕ ಹಿನ್ನಲೆಯಲ್ಲಿ ವೇದ, ಶಾಸ್ತ್ರ, ಆಗಮ, ಪುರಾಣಗಳ ನೀತಿ ಸಂಹಿತೆಗಳ ಮೂಲಕ ಸಾಮಾಜಿಕ ಜೀವನ ಬಲವಂತವಾಗಿ ನಡೆಯಬೇಕಿತ್ತು. ಇವೆಲ್ಲವುಗಳ ಶೋಷಣೆಗೆ ಸುಲಭವಾಗಿ ತುತ್ತಾಗುತ್ತಿದ್ದ ಸಮೂಹವೆಂದರೆ ಸ್ತ್ರೀ ಸಮೂಹವೇ ಆಗಿತ್ತು. ಇಂತಹ ಕ್ರಾಂತಿಕಾರಕ ಸಂದರ್ಭದಲ್ಲಿ ಹೊಸ ಜೀವನ ಕ್ರಮವನ್ನು ಶರಣರು ಪ್ರಾರಂಭಿಸಿದರು. ಅವರ ಆಲೋಚನೆಯ ಪ್ರತಿಫಲವೇ ಈ ಸ್ತ್ರೀ ವಾದ ಕ್ರಾಂತಿಯ ಬಿಗಿ ನಿಲುವುಗಳಲ್ಲಿ ಒಂದಾದ ಶಾಸ್ತ್ರ, ಪುರಾಣಗಳ ನಿರಾಕರಣೆಗೆ ಸ್ತ್ರೀಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಸ್ಪಂದಿಸಿದರು. ಈ ವಚನ ಮೇಲಿನ ಅಂಶಗಳನ್ನು ಸ್ಪಷ್ಟೀಕರಿಸುತ್ತದೆ.

"ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಬೋ
ಇವ ಕುಟ್ಟಲೇಕೆ ಕುಸುಕಲೇಕೆ
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ"–28

ವೇದ, ಶಾಸ್ತ್ರ, ಪುರಾಣ ಆಗಮುಗಳನ್ನಷ್ಟೇ ಅಲ್ಲದೇ, ನಿರಾಕರಿಸಿದ ಅಂಶಗಳಲ್ಲಿ ಜಾತಿಪದ್ಧತಿ, ಆಹಾರ ಪದ್ಧತಿಯಲ್ಲಿ ಭೇದವಮಾಡಕೂಡದೆಂದು ಸಮಕಾಲೀನ ಸಂದರ್ಭಗಳಲ್ಲಿ ಇದ್ದಂತಹ ದ್ವಂದ್ವವನ್ನು ಹೇಳುತ್ತಾರೆ. ಪುರುಷ ಪ್ರಧಾನ ಸಮಾಜದೊಳಗೆ ಬದುಕಿನ ಸ್ವಾತಂತ್ರ್ಯವನ್ನು ಪ್ರಶ್ನಿಸುತ್ತಾಳೆ. ಈ ಕೆಳಕಂಡ ವಚನ ತಿಳಿಸುತ್ತದೆ.

" ಕುರಿ ಕೋಳಿ ಕಿರಿಮೀನು ತಿಂಬರಿಗೆಲ್ಲ ಕುಲಜ ಕುಲಜರೆಂದೆಂಬರು.
ಶಿವಗೆ ಪಂಚಾಮೃತವ ಕರೆವ ಪಶುವತಿಂಬ ಮಾದಿಗಕೀಳು ಜಾತಿಯೆಂಬರು
ಅವರೆಂತು ಕೀಳುಜಾತಿಯಾದರೂ, ಜಾತಿಗಳು ನೀವೇಕೆ ಕೀಳಾಗಿರೋ.?
ಬ್ರಾಹ್ಮಣನುಂಡುದು ಪುಲ್ಲಿಗೆ ಬ್ರಾಹ್ಮಣನಿಗೆ ಶೋಭಿತವಾಯಿತು.
ಅದೆಂತೆಂದೆಡೆ ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು
ಸಿದ್ದಲಿಕೆಯ ತುಪ್ಪವನು ಸಗಳೆಯ ನೀರನು
ಶುದ್ಧವೆಂದು ಕುಡಿದು ಬುದ್ಧಿಗೇಡಿ ವಿಪ್ರರಿಗೆ ನಾಯಕನರಕ ತಪ್ಪದಯ್ಯಾ.
ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ."–29

ಆಹಾರ ಪದ್ದತಿಯಲ್ಲಿದ್ದ ವೈಪರೀತ್ಯಗಳನ್ನು ಗಮನಿಸಿದ ಶಿವ ಶರಣೆ ಪುಣ್ಯ ಸ್ತ್ರೀ ಕಾಳವ್ವೆಯವರು, ವರ್ಗಗಳಲ್ಲಿದ್ದ ಅಂತರಾಳಗಳ ಬಗ್ಗೆ ಪ್ರಶ್ನಿಸುತ್ತಾಳೆ. ಅಂದು ಶ್ರೇಷ್ಠ ಜಾತಿಯೆಂದು ಬಿಂಬಿತವಾಗಿದ್ದ ಬ್ರಾಹ್ಮಣ ಜಾತಿಯ ಆಚಾರ–ವಿಚಾರಗಳನ್ನು ಪ್ರಶ್ನಿಸುತ್ತಾಳೆ. ಅಂದಿನ ಪುರೋಹಿತ ಶಾಹಿಯ ದಬ್ಬಾಳಿಕೆಯನ್ನು ವಿರೋಧಿಸುತ್ತಾಳೆ ಈ ವಚನಗಾರ್ತಿಯು ಅತ್ಯಂತ ಕೆಳವರ್ಗದಿಂದ ಬಂದಿದ್ದೇನೆ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ. "ಜಾತಿಗಳು ನೀವೇಕೆ ಕೀಳಾಗಿರೋ?" ಎಂಬ ಸಾಲನ್ನು ಹೇಳಿ ಜಾತಿ ಹುಟ್ಟುವಿಕೆಯಲ್ಲಿದ್ದ ಶ್ರೇಷ್ಠತೆ ಮತ್ತು ಕನಿಷ್ಠತೆ ಬಗ್ಗೆ ಪ್ರಶ್ನೆ ಎತ್ತುತ್ತಾಳೆ. ಅಂದಿನ ಕಾಲದಲ್ಲಿ ಜಾತಿಯನ್ನು ನಿರ್ಧರಿಸುವಾಗ ಅವರು ಮಾಡುವ ವೃತ್ತಿ ಮತ್ತು ಅವರು ಬಳಸುವ

ಆಹಾರ ಪದ್ಧತಿಯಿಂದ ಜಾತಿಯನ್ನು ನಿರ್ಧರಿಸುತ್ತಿದ್ದರು, ಆದ್ದರಿಂದಲೇ ಈ ವಚನದಲ್ಲಿ ಆಹಾರ ಪದ್ಧತಿಯಲ್ಲಿ ಮೇಲು ಕೀಳು ಎಂಬ ಅಂತರಗಳು ಇರಬಾರದೆಂದು ಹೇಳುತ್ತಾರೆ.
ಅಂದು ಬಳಸುತ್ತಿದ್ದ ಸಸ್ಯಹಾರ ಮತ್ತು ಮಾಂಸಾಹಾರಗಳು ಪ್ರಧಾನ ಪಾತ್ರವಹಿಸುತ್ತವೆ. ಸಸ್ಯಾಹಾರ ಬಳಸುವವರು ಶ್ರೇಷ್ಠ ಕುಟುಂಬದಿಂದ ಬಂದಂತವರು, ಮಾಂಸಹಾರಿಗಳು ಕನಿಷ್ಠ ಕುಟುಂಬದವರೆಂದು ನಿರ್ಧರಿಸಲಾಗುತ್ತಿತ್ತು ಆ ಕಾರಣದಿಂದ 'ಆಹಾರ ಪದ್ದತಿ'ಜಾತಿ ವ್ಯವಸ್ಥೆಯ ಒಂದು ಅಂಗವಾಗಿರುವ ಕಾರಣ ಆಹಾರ ಬಳಸುವಿಕೆಯಲ್ಲಿ ಭೇದಮಾಡಬಾರದೆಂದು ಶರಣರು ಪ್ರಶ್ನಿಸುತ್ತಾರೆ.ಇದರಿಂದ ನಮಗೆ ಗೋಚರಿಸುವ ಸತ್ಯವೇನೆಂದರೆ ಸಾಮಾಜಿಕವಾಗಿ ಆಹಾರ ನೀತಿಯನ್ನು ಬಲವಂತದಿಂದ ಏರಬಾರದು ಅವರವರ ಆಯ್ಕೆವಿಚಾರ ಎಂಬಮಾತನ್ನು ಸ್ಪಷ್ಟಪಡಿಸುತ್ತದೆ. ಈ ವಿಚಾರವು ಕಲ್ಯಾಣಕ್ರಾಂತಿಗೆ ಹೊಸ ತಾತ್ವಿಕ ಸಂಘರ್ಷವನ್ನುಂಟುಮಾಡುತ್ತದೆ. ಇಲ್ಲಿ ಸ್ರೀವಚನಗಾರ್ತಿಯರು ಅದರಲ್ಲೂ ಕೆಲವರ್ಗದ ಶಿವಶರಣೆಯರು ತಾವು ಬಂದ ಪರಿಸರದ ಭಾಷೆಯ ಜೊತೆಗೆ ಕಲಿತ ಭಾಷೆ ಸಮೀಕರಿಸಿ ಬರಿದರುವುದಕ್ಕೆ ಈ ವಚನ ಸಾಕ್ಷಿಯಾಗುತ್ತದೆ.

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಸ್ತ್ರೀ-ಪುರುಷರೆಂಬ ಭೇದವೆನಿಸದೆ, ಪುರುಷನಿಗೆ ಸರಿಸಮನಾಗಿ ಕಾಯಕ ಜೀವನ ನಡೆಸುತ್ತಿದ್ದರು. ವೃತ್ತಿಯಲ್ಲಿ ಭೇದವೆನಿಸದೆ ತೊಡಗಬೇಕು ಎಂಬ ಭಾವನೆ ಅವರಲ್ಲಿತ್ತು. ಆಯ್ದಕ್ಕಿ ಮಾರಯ್ಯನವರು ಕಾಯಕಕ್ಕೆ ಹೊಸತನವನ್ನು ಕೊಟ್ಟುದ್ದನ್ನು ಇಲ್ಲಿ ಸ್ಮರಿಸಬಹುದು. ಗುರು ಲಿಂಗ ಜಂಗಮ ಎನ್ನುವ ತ್ರಿವಿಧ ಆಧ್ಯಾತ್ಮದ ಪರಿಭಾಷೆಯನ್ನು ಕಾಯಕದೊಳಗೆ ಸಮೀಕರಿಸಿರುವದನ್ನು ಮನಗಾಣ ಬಹುದು.

" ಕಾಯಕದಲ್ಲಿ ನಿರತರಾದರೆ
ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಹಂಗುಹರಿಯಬೇಕು.
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು.
ಕಾಯಕವೇ ಕೈಲಾಸದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗೂ."-30

ಸಾಮಾಜಿಕ ಜೀವನದಲ್ಲಿ ಕಾಯಕದಲ್ಲಿ ನಿರತ ಗುರು, ಜಂಗಮ, ಲಿಂಗ, ಬಂದರು, ಅವುಗಳ ಹಂಗು ತೊರೆದು ವೃತ್ತಿಯನ್ನು ಮಾಡಬೇಕೆಂದು ಹೇಳಿ ವೃತ್ತಿಯ ಪಾವಿತ್ರ್ಯವನ್ನು ಹೇಳುತ್ತಾರೆ. ವೃತ್ತಿಯ ಬದುಕನ್ನು ಮನಃಶುದ್ಧದಿಂದ ಮಾಡಬೇಕು, ಹೀಗೆ ಮಾಡಿದರೆ ಸಾಮಾಜಿಕ ಜೀವನದಲ್ಲಿ ಬಡತನವೆಂಬುದು ದೂರವಾಗುತ್ತದೆ ಎಂಬುದು ವಚನಗಾರ್ತಿ ಆಯ್ದಕ್ಕಿ ಲಕ್ಕಮ್ಮನ ನಿಲುವಾಗಿದೆ.

" ಮನಃಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೇ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತರಿಗೆ ಎತ್ತನೋಡಿದರತ್ತ ಲಕ್ಷ್ಮಿ ತಾನಾಗಿರ್ಪಳು
ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ."–31

ಒಳ್ಳೆಯ ಮನಸ್ಸು ಮತ್ತು ಭಕ್ತಿಯಿಂದ ಕಾಯಕವ ಮಾಡಿದಡೆ ದ್ರವ್ಯದ ಬಡತನ ಇರುವುದಿಲ್ಲ ಎಂಬ ಮಾತನ್ನು ಹೇಳುತ್ತಾಳೆ. ವೃತ್ತಿಯಿಂದ ವಂಚಿತವಾಗಿದ್ದ ಸ್ತ್ರೀ ಪರವಾದ, ವೃತ್ತಿಪರವಾದ ಚಟುವಟಿಕೆಯಲ್ಲಿ ನಿರತರಾಗುವಂತೆ ಈ ಕ್ರಾಂತಿಯು ಪ್ರೇರೇಪಿಸುತ್ತದೆ. ಸನಾತನ ಸಂಪ್ರದಾಯಗಳ ಚೌಕಟ್ಟಿನಲ್ಲಿ ಬದುಕುತಿದ್ದ ಸ್ತ್ರೀ ಸಮಾಜವು ಕ್ರಾಂತಿಯ ಸಮಯದಲ್ಲಿ ಸಂಕ್ರಮಣಾವಸ್ಥೆಗೆ ತೊಡಗುತ್ತದೆ, ಅವರ ಆಚಾರ–ವಿಚಾರ, ರೂಢಿ–ಸಂಪ್ರದಾಯ, ಪೂಜಾ ವಿಧಿ–ವಿಧಾನಗಳಲ್ಲಿ ಬಹುತೇಕ ಬದಲಾವಣೆಗಳಾಗುತ್ತವೆ. " ಬಸವಾದಿಗಳಿಗೆ ಹಿಂದೆ ಕರ್ನಾಟಕದ ಜನಜೀವನದಲ್ಲಿ ಕಾಣಬರುತ್ತಿದ್ದ ಮತ್ತೊಂದು ಅಂಶವೆಂದರೆ ಸ್ತ್ರೀ–ಪುರುಷರ ನಡುವೆ ಜನತೆಯು ಮಾಡುತ್ತಿದ್ದ ತಾರತಮ್ಯ, ವೈದಿಕರು ಹಾಗೂ ಜೈನರಲ್ಲಿ ಸ್ತ್ರೀಯು ಎಷ್ಟೇ ಶ್ರೇಷ್ಠಳಾದರೂ ಮೋಕ್ಷಾರ್ಹಳಲ್ಲ. ಪುರುಷ ಜನ್ಮದ ಮೂಲಕವಾಗಿ ಮಾತ್ರವೇ ಅವಳಿಗೆ ಮೋಕ್ಷಸಾಧನೆಯು ಸಾಧ್ಯವೆಂಬ ಭಾವನೆಯು ಆಗ ಬೇರೂರಿತ್ತು. "ಎನಿಸುಜ್ಜಳಯಾದೊಡೆ ಚಂದ್ರನ ತೇಜಂರವಿಯ ತೇಜಮಂ ಗೆಲ್ಲಿಯೇ? ಪೆಣ್ಣಿನಿತೊಳ್ಳಾದಡೆ ಪುರುಷನೊಳಾದ ಮಹಾಗುಣಗಳಂ ಪೋವಿಪಳೆ?' ಎಂಬ ನಯಸೇನನ ಮಾತು ಆಗಿನ ಕಾಲದ ಈ ಭಾವನೆಯನ್ನು ಸೂಚಿಸುತ್ತದೆ. ಒಂದೆಡೆ ಸ್ತ್ರೀಯರ ಬಗ್ಗೆ ಈ ಭಾವನೆಯಿದ್ದರೆ, ಮತ್ತೊಂದೆಡೆ ಕೌಲರಂತಹ ಶಕ್ತಿ ಪೂಜಕರು, ಭಕ್ತೆಯರನ್ನು ಆದಿಶಕ್ತಿ ಸ್ವರೂಪಗಳೆಂದು ಬಗೆದು ಅವರನ್ನೇ ಪೂಜಿಸುತ್ತಿದ್ದರು. ಈ ಎರಡು ಧ್ರುವಗಳ ನಡುವೆ ವಾಸ್ತವ ನೆಲೆಯಲ್ಲಿ ಆಲೋಚಿಸಿ ಸ್ತ್ರೀಯು ಸಮಾನಾವಕಾಶಗಳಿಗೆ ಅರ್ಹಳೆಂಬುದನ್ನು ಪ್ರತಿಪಾದಿಸಿದವರು ವಚನಕಾರರು. ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ–ಮೀಸೆ ಬಂದರೆ ಗಂಡೆಂಬರು, ನಡುವೆ

ಸುಳಿವಾತನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಎಂಬ ದೇವರ ದಾಸಿಮಯ್ಯನ ಮಾತು ಮುಂದೆ ಅನೇಕ ವಚನಕಾರರಲ್ಲಿ ಮಾರ್ದನಿಸಿತು. ಆವರೆಗೂ ಆಧ್ಯಾತ್ಮಿಕವಾಗಿ ಸಾಧನೆ ಮಾಡಲು ಅವಕಾಶವಿಲ್ಲ. ಹೆಣ್ಣು ಧಾರ್ಮಿಕವಾಗಿ ಗಂಡನ ನೆರಳಾಗಿರಬೇಕೆಂಬ ಭಾವನೆಯಿತ್ತೆಂಬುದನ್ನು ವಚನಕಾರರು ಅಲ್ಲಗಳೆದರು, ಆಕೆಯು ಅವಶ್ಯಕವಾದರೆ ಸ್ವತಂತ್ರ್ಯ ಮಾರ್ಗಾವಲಂಬಿಯಾಗಬಹುದೆಂದು ಸಾರಿದರು. "ಸತಿಪುರುಷರಿಗೆಲ್ಲಕ್ಕೂ ಬೇರೊಂದು ಒಡಲುಳ್ಳನ್ನಕ್ಕ, ವ್ರತದ ಸ್ತ್ರೀ ಭಾವ ಬೇರಾದಲ್ಲಿ ಬೇರೆ ಒಬ್ಬ ಒಡೆಯರ ಕಟ್ಟಣೆ ಬೇಕು" ಎಂಬ ಏಲೇಶ್ವರ ಕೇತಯ್ಯನೆಂಬ ವಚನಕಾರನ ಮಾತಿನಲ್ಲಿ ಸ್ತ್ರೀ ಯು ಧಾರ್ಮಿಕವಾಗಿ ಸ್ವತಂತ್ರವಾಗಿರುವ ಭಾವನೆಯು ಅಡಗಿರುವಂತಿದೆ. ಅಕ್ಕಮಹಾದೇವಿಯಂತಹ ಹೆಣ್ಣೊಬ್ಬಳು ಪ್ರಬಲವಾಗಿದ್ದ ಭವಿಯೊಬ್ಬನನ್ನು ಪ್ರತಿಭಟಿಸಿ ಅವನನ್ನು ತೊರೆದು ಬಂದದ್ದು ಆಕೆಯಲ್ಲಿದ್ದ ನೈತಿಕ ಸ್ಥೈರ್ಯ, ಧಾರ್ಮಿಕ ನಂಬಿಕೆಗಳು ವೀರಶೈವವು ಭೋಧಿಸಿದ ಸ್ತ್ರೀ-ಪುರುಷ ಸಮಾನತೆಯ ಫಲವೆಂಬುದನ್ನು ಧಾರಾಳವಾಗಿ ಹೇಳಬಹುದು,"-32

ಅಷ್ಟಲ್ಲದೆ ಪ್ರತಿಪಾದಿಸಿದ ವಿಚಾರಗಳನ್ನು ನಡೆ-ನುಡಿ, ಆಚಾರ-ವಿಚಾರ, ರೂಡಿ-ಸಂಪ್ರದಾಯದಲ್ಲಿ ಚಾಚುತಪ್ಪದೆ ಪಾಲಿಸಹೊರಟರು, ಇದರಿಂದ ದೊರೆತ ಸ್ತ್ರೀ-ಪುರುಷ ಸಮಾನತೆಯ ವಚನಗಾರ್ತಿಯರಲ್ಲಿದ್ದಂತಹ ಪ್ರತಿಭೆಯನ್ನು ಹೊರಹೊಮ್ಮುವಂತೆ ಮಾಡಿತ್ತು. ಇದರಿಂದ ಉತ್ತೇಜನಗೊಂಡ ಸ್ತ್ರೀ ಸಮುದಾಯ ಸಮಾಜದ ಮುಖ್ಯ ವಾಹಿನಿಯ ಭಗವಾಗಿ ಬೆರೆಯತೊಡಗಿದರು. ಇದರ ಪರಿಣಾಮವಾಗಿ ಸಮಾಜದ ಎರಡು ಕಣ್ಣುಗಳಂತೆ ಸ್ತ್ರೀ-ಪುರುಷ ಕಾರ್ಯಾರಂಭಿಸಿದರು. ಇದರ ಫಲಿತವೆಂಬಂತೆ ಆದಿಕಾಲದಿಂದ ನಿರ್ಲಕ್ಷಿಸಲ್ಪಟ್ಟಿದ್ದ ಸ್ತ್ರೀ ಜ್ಞಾನ ಸಂಪತ್ತು ಸಾಮಾಜಿಕವಾಗಿ ಉಪಯೋಗವಾಗತೊಡಗಿತು.

ಅಂದಿನ ಸಮಾಜದಲ್ಲಿ ಸ್ತ್ರೀ ಸಾಮಾನ್ಯಳ ಬದುಕು, ಕಷ್ಟಸಾಧ್ಯವಾಗಿದುದ್ದರಿಂದ ಸ್ತ್ರೀಯರಿಗೆ ಈ ಕ್ರಾಂತಿಯಿಂದ ಆನೆ ಬಲಬಂದಾಗಿತ್ತು. ಆದ್ದರಿಂದಲೇ ಅಕ್ಕಮಹಾದೇವಿ ವಚನದಲ್ಲಿ ಈ ರೀತಿ ಹೇಳುತ್ತಾಳೆ.

" ನಾಳೆ ಬರುವುದು ನಮಗಿಂದೆ ಬರಲಿ,
ಇಂದು ಬರುವುದು ನಮಗೀಗಲೇ ಬರಲಿ,

ಆಗೀಗ ಎನ್ನದಿರೋ, ಚೆನ್ನಮಲ್ಲಿಕಾರ್ಜುನಾ."-33 ಎಂಬ ಮಾತುಗಳನ್ನು ನಮ್ಮ ಬದುಕಿನಲ್ಲಿ ಸಿಗುವ ಅವಕಾಶಗಳನ್ನು ಮನಃಶುದ್ಧಿಯಿಂದ ಒಪ್ಪಿಕೊಂಡ ಮೇಲೆ ನಾಳೆ-ಇಂದುಗಳನ್ನು ಬಿಟ್ಟು, ಸದ್ಯ ಅವಕಾಶಗಳು ಮುಂಚಿತವಾಗಿಯೇ ಬರಲಿ ಎಂಬ ಎದೆಗಾರಿಕೆಯನ್ನು ಹೇಳುತ್ತಾಳೆ. ಕಾಲಘಟ್ಟಗಳಲ್ಲಿ ಬದಲಾದ ಪರಿಸ್ಥಿತಿಯು ಸ್ತ್ರೀ ಸಮೂಹದಲ್ಲಿ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ. ಯಾವ ಸಂಕಷ್ಟ ಬಂದರೂ ಹೆದರದೆ ಮುನ್ನಡೆಯಬೇಕೆಂಬ ವಿಚಾರವನ್ನು ಅಮುಗೆರಾಯಮ್ಮನ ಈ ವಚನದಲ್ಲಿ ಕಾಣಬಹುದು. ಸ್ವತಂತ್ರವಾಗಿ ಮಾತನಾಡುವ ಭಾಷಿಕಗಟ್ಟಿತನವನ್ನು ಈ ವಚನ ಧ್ವನಿಸುತ್ತದೆ.

" ಹೆದರದಿರು ಮನವೆ, ಹಿಮ್ಮೆಟ್ಟದಿರು ಮನವೆ,
ಹಿಡಿದ ಛಲವ ಬಿಡದಿರು ಮನವೆ,
ಜರಿದರೆಂದು ಝುಂಕಿಸದರೆಂದು
ಶಸ್ತ್ರಸಮಾಧಿ ನೀರು ನೇಣು ವಿಷ ಔಷಧದಲ್ಲಿ ಘಟವ ಬಿಡದೆ
ಗುರುವಾದಡು ಲಿಂಗವಾದಡು ಜಂಗಮವಾದಡು
ನೊಸಲಲ್ಲಿ ಕಣ್ಣುಳ್ಳ ಪಶುಪತಿಯಾದಡು
ತೆತ್ತಿಗರು ಕಂಡು ಒತ್ತಿ ನುಡಿದರೆಂದು ಘಟವ ಬಿಡುವ ಘಟಕ ಕರ್ಮಿಗಳು
ಏಳೇಳು ಜನ್ಮದಲ್ಲಿ ಸೊಕ್ಕನ ಹೊಟ್ಟೆಯಲ್ಲಿ ಹುಟ್ಟಿ,
ನೂರೊಂದು ಕುಲ ಹದಿನೆಂಟು ಜಾತಿಯ ಅಮಾಧ್ಯವತಿಂದು.
ಹೊಲೆಯರ ಮನೆಯ ಹೊಸ್ತಿಲ ಕಾಯ್ದು ಕೊಂಡಿಪ್ಪರಯ್ಯಾ
ಅಮುಗೇಶ್ವರಲಿಂಗವೇ ನಿಮ್ಮಾಣೆ ನಿಮ್ಮ ಪ್ರಮಥಾರಾಣೆ."-34

ಸಾಮಾಜಿಕ ಹಾಗೂ ಕೌಟುಂಬಿಕ ಸಮಸ್ಯೆಗಳು ಎದುರಾದರೆ ಮನನೊಂದು ನಿರಾಶಾವಾದಿಗಳಾಗಿ ಆತ್ಮಹತ್ಯೆಗೆ ಶರಣಾಗದೆ, ಎದೆಗುಂದದೆ ಜೀವ ನಡೆಸಬೇಕೆಂಬುದನ್ನು ಹೇಳುತ್ತದೆ.

ಶಿವಶರಣೆಯರ ಕೌಟುಂಬಿಕ ಕಲ್ಪನೆಯು ವಿಭಿನ್ನವಾದುದಾಗಿದೆ. ಸು. 33 ಕ್ಕೂ ಹೆಚ್ಚು ವಚನಗಾರ್ತಿಯರು ತಮ್ಮ ಕೌಟುಂಬಿಕ ಕಲ್ಪನೆಯಲ್ಲಿ ಭಿನ್ನವಾದ ನಿಲುವುಗಳನ್ನು ಹೊಂದಿದ್ದಾರೆ.

"ಸಾಮಾನ್ಯವಾಗಿ ಕೆಳವರ್ಗದ ವಚನಕಾರರು ಪುರುಷರನ್ನು ಪುರುಷ ಸಮಾಜವನ್ನು ಕಾಣುವ ಆ ಸಮಾಜಕ್ಕೆ ಸ್ಪಂದಿಸುವ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಸ್ವರೂಪದ ನೆಲೆಗಳಿಗೂ, ಅಕ್ಕಮಹಾದೇವಿಯ ಸಂವೇದನೆಯ ನೆಲೆಗಳಿಗೂ ತುಂಬಾ ಅಂತರವಿದೆ. ಸಾಮಾನ್ಯವಾಗಿ ಅಕ್ಕಮಹಾದೇವಿಯ ಸಂಸಾರ, ಗಂಡ. ಕುಟುಂಬ, ಕುಟುಂಬದ ಸ್ವರೂಪ ಅದರ ಅಂಗರಚನೆಯ ಬಗ್ಗೆ ವಿಭಿನ್ನ ಸ್ವರೂಪದ ನೆಲೆಗಳಲ್ಲಿ ಮಾತನಾಡುತ್ತಾಳೆ. ಆದರೆ ಕೆಳವರ್ಗದ ಜಾತಿಯ ವಚನಕಾರ್ತಿಯರು ಕೌಟುಂಬಿಕ ವ್ಯವಸ್ಥೆಯಲ್ಲಿದ್ದುಕೊಂಡೇ ಸಮಾನತೆಯನ್ನು ಸಾಧಿಸುವ ಆ ಮೂಲಕ ನವ ಸಮಾಜದ ನಿರ್ಮಾಣಕ್ಕಾಗಿ ತುಡಿಯುತ್ತಾರೆ. ಗಂಡಿನ ದ್ವೇಷಕ್ಕೆ ಅವರ ಸಂವೇದನೆ ತಿರುಗುವುದಿಲ್ಲ. ಒಂದು ವೇಳೆ ಪುರುಷದ್ವೇಷಕ್ಕೆ ತಿರುಗಿದರೆ ಸಾಮರಸ್ಯ ಹಾಳಾಗುತ್ತದೆಂಬ ನಂಬಿಕೆಯೊಂದಿಗೆ ಬದುಕುವ ಮನೋಭಾವ ಕೆಳವರ್ಗದ್ದು, ಅಕ್ಕಮಹಾದೇವಿಯ ಸಂವೇದನೆಯ ನೆಲೆಗಳು ವಿಭಿನ್ನವಾಗಲು ಕಾರಣ ಆಕೆಯು ಬದುಕುತ್ತಿದ್ದ ಪರಿಸರ ಆಕೆಯನ್ನು ಬಂಧನದಲ್ಲಿಟ್ಟಿತ್ತು. ಇದರಿಂದಾಗಿ ಆಕೆಯು ಕೌಟುಂಬಿಕ ಮತ್ತು ಸಮಾಜದ ವಿರುದ್ಧ ಬಂಡೆದ್ದು ಸ್ವಾತಂತ್ರ್ಯ ಸಮಾನತೆಯನ್ನು ಬಯಸುವ ಹಂತ ತಲುಪಿದಳು. ಯಾವುದೇ ವ್ಯಕ್ತಿಗೆ ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಏಕೆಂದರೆ ಕೌಟುಂಬಿಕ ಚೌಕಟ್ಟನ್ನಲ್ಲಿಯೂ ವ್ಯಕ್ತಿಯ ಎಲ್ಲಾ ವ್ಯವಹಾರಗಳು ನಡೆಯಬೇಕು. ಕುಟುಂಬವು ಹಾಕುವ ಎಲ್ಲಾ ನಿಯಮ ಸಂಪ್ರದಾಯಗಳ ನೆಲೆಗಳನ್ನು ಮೀರುವುದಕ್ಕೆ ಅವಕಾಶವಿರುವುದಿಲ್ಲ. ಕುಟುಂಬಕ್ಕೆ ಸೇರಿದ ವ್ಯಕ್ತಿಯು ಆ ರಚನೆಯ ಸಂವರ್ಧನೆಗೆ ದುಡಿಯಬೇಕೆ ಹೊರತು ಅದನ್ನು ಮೀರಿ ಯಾವ ಕ್ರಿಯೆಯನ್ನು ಮಾಡುವಂತಿಲ್ಲ. ವ್ಯಕ್ತಿಯು ಅಧೀನನಾಗಿರಬೇಕು ಇದರಿಂದಾಗಿ ಮನುಷ್ಯನ ಎಲ್ಲಾ ಆಲೋಚನೆಗಳು ಅವನ ಕ್ರಿಯೆಗಳು ವ್ಯಕ್ತಿತ್ವದ ಬೆಳವಣಿಗೆಗೆ ಹಾಗೂ ಸ್ವಾತಂತ್ರ್ಯಕ್ಕಿಂತ ಅದನ್ನು ಅದುಮಿಡುವುದರ ಕಡೆಗೆ ಹೆಚ್ಚು ಆಸಕ್ತಿ ಇರುತ್ತದೆ. ಅದರಲ್ಲೂ ರಾಜ್ಯವ್ಯವಸ್ಥೆಯಲ್ಲಿ ಹೆಣ್ಣು ಕುಟುಂಬದ ಭೋಗದ ವಸ್ತುವಾಗಿರುತ್ತಾಳೆ, ಆದ್ದರಿಂದಲೇ ಅಕ್ಕಮಹಾದೇವಿಯು ಕೌಟುಂಬಿಕ ಸ್ವರೂಪವನ್ನು ಪ್ರಶ್ನಿಸುತ್ತಾಳೆ."–35

"ಅತ್ತೆ ಮಾಯೆ, ಮಾವ ಸಂಸಾರಿ,
ಮೂವರು ಮೈದುನರು ಹುಲಿಯಂತವದಿರು
ನಾಲ್ವರೂ ನೆಗೆವೆಣ್ಣು ಕೇಳು ಕೆಳದಿ
ಐವರು ಭಾವದಿರನೊಯ್ವ ದೈವವಲ್ಲ.
ಆರು ಪ್ರಜ್ಞೆಯತ್ತಿಗೆಯರ ಮೀರಲಾರೆನು

ತಾಯೆ ಹೇಳುವೆಡೆ ಏಳು ಪ್ರಜೆ ತೊತ್ತಿರಕಾವು.
ಕರ್ಮವೆಂಬ ಗಂಡನ ಬಾಯಮೊಣದು
ಹಾವರವನಾಡುವೆನು, ಹರನ ಕೊಡೆ
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವದ ಕಲಿತೆನು ಶಿವನೊಡನೆ,
ಕರಚಲುವ ಶ್ರೀಶೈಲಚನ್ನಮಲ್ಲಿಕಾರ್ಜುನನ
ಸಜ್ಜನರ ಗಂಡನ ಮಾಡಿಕೊಂಬೆ."-36

"ಕುಟುಂಬದ ರಚನೆಗೂ ಮತ್ತು ಲೋಕದ ಬಂಧನಕ್ಕೂ ಆಧ್ಯಾತ್ಮಿಕ ಪರಿಭಾಷೆಯ ಮೂಲಕ ಹೋಲಿಸುತ್ತಾ ಆಕೆಯು ತನ್ನ ಭಾವನೆಗಳನ್ನು ವ್ಯಕ್ತ ಪಡಿಸುವ ಬಗೆ ಇದು."-37 ಇಷ್ಟಕ್ಕೆ ಸೀಮಿತವಾಗದೇ ಅಂದಿನ ಕಾಲದ ಕೌಟುಂಬಿಕ ಜವಾಬ್ದಾರಿಗಳನ್ನು ಹೇಳುತ್ತದೆ.

ಮಧ್ಯಕಾಲೀನ ಸಾಂಸ್ಕೃತಿಕ ಸಂಧರ್ಭದಲ್ಲಿ ಸಂಪ್ರದಾಯಸ್ಥ ಕೌಟುಂಬಿಕ ಚೌಕಟ್ಟಿನಲ್ಲಿ ಸ್ತ್ರೀಯರಿಗೆ ಸಂಪೂರ್ಣವಾದ ಸ್ವತಂತ್ರವೇನು ಇರಲಿಲ್ಲವಾದರೂ ಶರಣರ ಕ್ರಾಂತಿಯ ಪ್ರಭಾವದಿಂದ ಅಭಿವ್ಯಕ್ತ ಸ್ವಾತಂತ್ರ್ಯವನ್ನು ಸ್ತ್ರೀಯರು ಪಡೆದುಕೊಂಡರು. ಈ ಎಲ್ಲದರ ಪರಿಣಾಮವಾಗಿಯೇ ಹಿಂದೆಂದೂ ಕಂಡರಿಯದ ಬರಹಗಾರ್ತಿಯರು ಬರೆಯತೊಡಗಿದರು. ಮುಂಬರುವ ಸಾಮಾಜಿಕ ಜನಜೀವನದ ಮೇಲೆ ಸಾಕಷ್ಟು ಪರಿಣಾಮಗಳನ್ನು ಬೀರುತ್ತದೆ. ಈ ಎಲ್ಲಾ ಅಂಶಗಳ ಫಲಕೃತಿಯೇ ಹನ್ನೆರಡನೇ ಶತಮಾನದ ಸ್ತ್ರೀವಾದಿ ನೆಲೆಯು ಪೂರ್ವಾಪರವಾಗಿದೆ.

6.3 ಸ್ವಾಭಿಮಾನಿ ಚಳುವಳಿಯ ತತ್ವ ಮತ್ತು ಸಿದ್ಧಾಂತ :

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನವು ಮಹತ್ವದ ಘಟ್ಟವಾಗಿದೆ. ಅಂದಿನ ಕಲ್ಯಾಣದಲ್ಲಿ ನಡೆದ ಸಾಂಸ್ಕೃತಿಕ ಕ್ರಾಂತಿಯು ಸ್ವಾಭಿಮಾನಿ ಚಳುವಳಿಯನ್ನು ಹುಟ್ಟುಹಾಕಿತು. ಈ ಚಳುವಳಿಯು ಸ್ವತಃ ತಾನೇ ದುಡಿದು ತಿನ್ನುವ ಸ್ವಭಾವವನ್ನು ಕಲಿಸಿತು. ಅದರ ಮೂಲಕ ಪುರುಷರಿಗೆ ವೃತ್ತಿಯು ಎಷ್ಟು ಮುಖ್ಯ ಎಂಬುದನ್ನು ತೋರಿಸಿಕೊಟ್ಟಿತು.

ಇಲ್ಲಿನ ವಿಶೇಷತೆ ಎಂದರೆ ಯಾವುದೇ ಒಂದು ಕ್ರಾಂತಿ ಅಥವಾ ಚಳುವಳಿ ಸಂಭವಿಸುವಾಗ ಅದರದೇ ಆದ ಇತಿ–ಮಿತಿಗಳಿರುತ್ತವೆ. ಯಾವುದೋ ಒಂದು ಸಾಮಾಜಿಕ ಸಮಸ್ಯೆಯಿಂದ ಚಳುವಳಿಗಳು ಹುಟ್ಟಬಹುದು. ಇಲ್ಲಿನ ಅಧ್ಯಯನ ದೃಷ್ಟಿಯಿಂದ ಆಲೋಚಿಸಿದರೆ ಕಲ್ಯಾಣಕ್ರಾಂತಿಯಲ್ಲಿ ಶರಣರು ಆಲೋಚಿಸಿದ ಕ್ರಮವೇ ವಿಭಿನ್ನವಾಗಿದೆ. ಸಂಪೂರ್ಣವಾಗಿ ವೈಯಕ್ತಿಕ ನೆಲೆಯಿಂದ ಪ್ರಾರಂಭಗೊಳ್ಳುವ ಚಳುವಳಿ–ಸಾಮೂಹಿಕ ರೂಪ ಪಡೆದುಕೊಳ್ಳುತ್ತಾದರೂ, ತನ್ನ ವೈಯಕ್ತಿಕ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ಈ ಅಂಶವನ್ನು ಗಮನಿಸಿದಾಗ ಶಿವಶರಣರ ಉದ್ದೇಶ ಸ್ವಾಭಿಮಾನಿ ಚಳುವಳಿಯನ್ನು ಹುಟ್ಟುಹಾಕುವುದಲ್ಲ. ತಮ್ಮ ಬದುಕನ್ನೇ ಮೊದಲು ತಿದ್ದಿಕೊಳ್ಳಬೇಕೆಂಬುದು ಶರಣರ ಆಶಯವಾಗಿತ್ತು. ಬಸವಣ್ಣನವರ ವಚನವು ಮೇಲಿನ ಅಂಶಗಳನ್ನು ಸ್ಪಷ್ಟೀಕರಿಸುತ್ತದೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ."–38

ತಾತ್ವಿಕವಾಗಿಯಾದರೂ ಹೋರಾಟದ ಮನೋಭಾವ ಇಲ್ಲಿ ಅಡಗಿದೆಯಾದರೂ ಮೊದಲು ತನ್ನ ವೈಯಕ್ತಿಕ ನೆಲೆಯಿಂದ ಪ್ರಾರಂಭಗೊಳ್ಳಬೇಕೆಂಬುದು ಪೂರ್ವ ಗ್ರಹಿಕೆಯಾಗಿದೆ. ಈ ಸ್ವಾಭಿಮಾನಿ ಚಳುವಳಿಯನ್ನು ವಚನ ಚಳುವಳಿ ಎಂದೇ ವಿದ್ವಾಂಸರು ಕರೆದಿರುವುದಾದರೂ ಈ ವಚನ ಚಳುವಳಿಯನ್ನು ಶುದ್ಧರೂಪದ ಸಾಮಾಜಿಕ ಆಂದೋಲನ ಎಂದು ಕರೆಯುವುದು ಕಷ್ಟ ಏಕೆಂದರೆ ಆಧುನಿಕ ಪರಿಕಲ್ಪನೆಯ ಸಾಮಾಜಿಕ ಆಂದೋಲನ ಆಗ ಸಾಧ್ಯವಿರಲಿಲ್ಲ ಎಂದರೆ, ಹಾಗೆ ಮಾಡುವುದು ಸಾಧ್ಯವೆಂಬ ಕಲ್ಪನೆಯೇ ಆಗ ಇರಲಿಲ್ಲ. ಅಂದಿನ ದ್ವಿಜ ಸಮೂಹದ ಆಶೋತ್ತರಗಳಿಗೆ ಬಾಧಕವಾಗಿದ್ದ ಆಗಿನ ಸ್ಥಿರ ಸಮಾಜ ಆ ವರ್ಗದ ಜನರಲ್ಲಿ ಅತೃಪ್ತಿಯ ಬೆಂಕಿಯನ್ನು ಹೊತ್ತಿಸಿತ್ತು. ವಿಶೇಷವಾಗಿ ಅದ್ವಿಜ ಸಮುದಾಯಕ್ಕೆ ಸಾಮಾಜಿಕ–ಧಾರ್ಮಿಕ ನೆಲೆಯಲ್ಲಿ ಪುನಶ್ಚೇತನವನ್ನುಂಟು ಮಾಡಬಲ್ಲ, ವೈದಿಕ ಮತ ವ್ಯವಸ್ಥೆಗೆ ಪರ್ಯಾಯವಾದ ಒಂದು ಸಂಘಟನೆಯು ಹೊಗೆಯಾಡುತ್ತಿತ್ತು. ಕೊಂಡಗುಳಿ ಕೇಶೀರಾಜ, ಶಂಕರದಾಸಿಮಯ್ಯ, ಜೇಡರ ದಾಸಿಮಯ್ಯ

ಮುಂತಾದವರ ಕಾಲದಲ್ಲಿ ಪ್ರಾರಂಭವಾದ ಈ ಸಂಘಟನೆಯ ಲಕ್ಷಣಾಂಶಗಳನ್ನು ಡಾ॥ ಎಂ ಚಿದಾನಂದಮೂರ್ತಿ ನೀಡುತ್ತಾರೆ.

"1)ಬ್ರಾಹ್ಮಣ್ಯದ ತಿರಸ್ಕಾರ, 2) ಶಿವನ ಬಗೆಗಿನ ನೈಷ್ಠಿಕ ಭಕ್ತಿ, 3) ರಾಜನಿಗೆ ವಿಶೇಷ ಗೌರವ ನೀಡದೆ ಅವನ ಅಧಿಕಾರವನ್ನು ಪ್ರತಿಭಟಿಸಿದುದು, 4) ತಮ್ಮ ಗುಂಪಿನ ಜನರಲ್ಲಿ ಜಾತಿ ಭೇಧವನ್ನು ಮಾಡುದುದು 5) ಮಾಂಸಹಾರದ ಬಗ್ಗೆ ವಿರೋಧವಿಲ್ಲದ್ದುದು 6) ದೇವಾಲಯದ ಪ್ರತಿಮೆ ಹಾಗೂ ಒಯ್ಯಬಹುದಾದ ಲಿಂಗಗಳೆರಡಕ್ಕೂ ಸಲ್ಲಿಸಬಹುದಾದ ಪೂಜೆ 7) ತಾವು ಶಿವನಿಗೆ ವೇಳೆವಾಳಿಗಳೇ ಹೊರತು, ತಮ್ಮ ಯಜಮಾನನಿಗೆ ಅಲ್ಲ ಎಂಬ ನಿಲುವು ಹಾಗೂ 8) ಶಿವಭಕ್ತನಿಗೆ ವಿಶೇಷ ಗೌರವ(ವಚನಸಾಹಿತ್ಯ :30–32), ಬಸವಣ್ಣ ಬರುವ ಹೊತ್ತಿಗೆ ಈ ಸಂಘಟನೆ ಶಿಥಿಲ ಸ್ಥಿತಿಯನ್ನು ತಲುಪಿತ್ತು."–39

ಮೇಲೆ ಹೇಳಿದ ಲಕ್ಷಣಗಳು ಸ್ವಾಭಿಮಾನಿ ಚಳುವಳಿಗೆ ಪೂರಕ ತತ್ವಗಳಂತೆ ಕಂಡು ಬರುತ್ತಿದೆಯಾದರೂ ವಚನಗಳಲ್ಲಿಯೇ ಕಂಡು ಬರುವ ಸರಳವಾದ ಜೀವನಕ್ಕೆ ಬೇಕಾದ ಮಾನವೀಯ ಮೌಲ್ಯಗಳನ್ನು ಕಾಣಬಹುದಾಗಿದೆ. ಸಮಾಜದ ಸಮಷ್ಟಿ ದೃಷ್ಟಿಯಿಂದ ಶರಣರು ಮೊದಲು ನಾವು ಶುದ್ಧವಾಗಿರಬೇಕೆಂದು ಅನಂತರ ಬೇರೆಯವರ ವಿಚಾರವೆಂಬ ನಿಲುವನ್ನು ಸ್ಪಷ್ಟ ಪಡಿಸುತ್ತದೆ. ಮಾನವನ ಸಂಪೂರ್ಣ ಚಾರಿತ್ರ್ಯ ಒಮ್ಮುಖವಾದ ನಂತರ ಈ ಹೋರಾಟದ ಹಾದಿಗೆ ಬರಬೇಕೆನ್ನುವುದು ಬಸವಣ್ಣನವರ ಆಶಯವಾಗಿದೆ. ಇದರ ವಚನವೇ ಈ ಮಾತನ್ನು ಸ್ಪಷ್ಟೀಕರಿಸುತ್ತದೆ.

" ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ."–40

ಒಬ್ಬ ಸ್ವಾಭಿಮಾನಿ ಚಳುವಳಿಗಾರನಿಗೆ ಇರಬೇಕಾದ ಸಾಮಾನ್ಯ ನಿಯಮಗಳನ್ನು ಹೇಳುತ್ತದೆ. ಈ ಅಂಶಗಳು ಚಳುವಳಿಗಾರನಲ್ಲಿ ಇದ್ದರೆ ಅವನಿಗೆ ತಾತ್ವಿಕ ಕಳೆ ಬರುತ್ತೆನ್ನವುದನ್ನು ತಿಳಿಸುತ್ತಾರೆ. ಇದರಿಂದ ನಮ್ಮನ್ನು ನಂಬಿಕೊಂಡಿರುವ ಮಂದಿ ಸುಖವಾಗಿರುತ್ತಾರೆಂಬುದನ್ನು ತಿಳಿಸುತ್ತಾರೆ. ಶರಣರ ಹೋರಾಟದ ಹಾದಿಯಲ್ಲಿ ಕೆಲವೊಂದನ್ನು ತ್ಯಾಗ ಮಾಡಬೇಕಾಗುತ್ತದೆಂಬುದನ್ನು ತಮ್ಮ ಶರಣರ ಸಮೂಹಕ್ಕೆ ಹೇಳುತ್ತಾರೆ. ಇಲ್ಲಿ ಒಳ್ಳೆಯಗುಣಗಳನ್ನು ಒಳ್ಳೆಯ ಮಾತುಗಳಲ್ಲಿ ಬಸವಣ್ಣನವರು ಹೇಳುತ್ತಾರೆ.

" ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ,
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮವನೊಂದೆಂಬ,
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ,
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ."–41

ಶರಣನಾದವನು ಪರಧನ, ಪರಸತಿ, ಪರದೈವವನ್ನು ನಿರಾಕರಿಸುವ ಪ್ರವೃತ್ತಿ ಅವನದಾಗಬೇಕು. ತಮ್ಮ ಹೋರಾಟದ ನಿಲುವುಗಳಾದ ಗುರುಲಿಂಗ ಜಂಗಮ ಪ್ರಸಾದದಲ್ಲಿ ನಂಬಿಕೆಯಿಟ್ಟು ಸ್ವಾಭಿಮಾನಿಯಾಗಿ ಮುನ್ನಡೆಯಬೇಕೆಂಬ ಅಭಿಪ್ರಾಯವನ್ನು ಸೂಚಿಸುತ್ತಾರೆ. ಸ್ವಾಭಿಮಾನಿಯಾದ ಶರಣನಿಗೆ ಭೌತಿಕವಾಗಿರುವ ವಸ್ತುಗಳನ್ನು ನಿರಾಕರಿಸುವ ಆಲೋಚನೆಗಾಗಿಯೇ ಬರಬೇಕು ಆಗ ಮಾತ್ರ ಶರಣನಾಗುತ್ತಾನೆ ಎಂಬುದನ್ನು ಗ್ರಹಿಸಬಹುದು. ಶರಣ ಏನನ್ನು ಬಯಸಬೇಕೆಂಬುದನ್ನು ಜೇಡರ ದಾಸಿಮಯ್ಯ ನವರ ವಚನ ಈ ಹೇಳಿಕೆಯನ್ನು ಸ್ಪಷ್ಟೀಕರಿಸುತ್ತದೆ.

" ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ,
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,
ನಿಮ್ಮ ಶರಣರ ಸೂಳ್ನುಡಿಯ ಒಂದರೆ ಘಳಿಗೆಯಿತ್ತಡೆ,
ನಿನ್ನನಿತ್ತೆ ಕಾಣಾ! ರಾಮಾನಾಥ."–42

ಸೂಳ್ನುಡಿಯಂದರೆ ಅನುಭವದ ಮಾತು ಬೇಕು ಆ ಅನುಭವದ ಮಾತುಗಳೆಲ್ಲವೂ ಶ್ರೀಸಾಮಾನ್ಯನಿಗೆ ಅರ್ಥವಾಗುವಂತೆ ರಚನೆಯಾಗಿದೆ. ಈ ವಚನ ಅನುಭಾವ ಕೇಂದ್ರಿತವಾದ ಶರಣರ ಸಮಾನ್ಯವಾದ ಮಾತೇ ಸಾಕು ಎನ್ನುತ್ತಾನೆ. ಸಕಲ ಐಶ್ವರ್ಯಗಳನ್ನು ನಿರಾಕರಿಸಿದರೂ ಸ್ವಾಭಿಮಾಣಿ ಚಳುವಳಿಯ ಮುಖ್ಯ ಆಶಯ. ಶರಣ ಸೂಳ್ನುಡಿಗಳನ್ನು ಆರಿಸಬೇಕೆಂಬುದನ್ನು ಮನವರಿಕೆ ಮಾಡುತ್ತಾರೆ ಅಂದರೆ ಶರಣ ವ್ಯಕ್ತಿತ್ವ ಎಂತಹುದೆಂಬುದನ್ನು ಹೇಳುತ್ತದೆಯಲ್ಲದೆ ಯಾವುದೇ ಆಷೆ ಆಮಿಷಗಳನ್ನು ಹೊಂದಬಾರದು ಶರಣನಾದವನು ಭಕ್ತಿಯನ್ನು ಬಿಟ್ಟು ಲೌಕಿಕವಾದ ಬಯಕೆಯನ್ನು ತ್ಯಜಿಸಬೇಕು. ಆಗ ಶರಣರು ಹಾಕಿದಂತಹ ಮಾರ್ಗದಲ್ಲಿ ಕಾರ್ಯನಿರ್ವಹಿಸಿದರೆ ಮಾತ್ರ ಪ್ರತಿಫಲದೊರಕುತ್ತದೆ ಎನ್ನುತ್ತಾರೆ.

" ಶರಣ ನಿದ್ರೆಗೈದಡೆ ಜಪಕಾಣಿರೋ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೋ,
ಶರಣ ನಡೆದುದೇ ಪಾವನ ಕಾಣಿರೋ,
ಶರಣ ನುಡಿದುದೆ, ಶಿವತತ್ವ ಕಾಣೀರೋ,
ಕೂಡಲಸಂಗನ ಶರಣನ
ಕಾಯವೇ ಕೈಲಾಸ ಕಾಣಿರೋ."–43

ಸ್ವಾಭಿಮಾನಿ ಶರಣನಾಗಿರುವವನು ಯಾವಾಗಲೂ ಜಾಗೃತಿಯಿಂದ ಇರುತ್ತಾನೆ. ಇಲ್ಲಿ ಎಲ್ಲಾ ತಾತ್ವಿಕ ಗುಣಧರ್ಮಗಳನ್ನು ಮನಗೂಡಿಸಿಕೊಂಡವನು ಶರಣನಾಗುತ್ತಾನೆ. ಎಲ್ಲಾ ಗುಣಗಳು ಅವನೊಳಗಿದ್ದರೆ ಅವನ ದೇಹವೇ ಕೈಲಾಸವಾಗುತ್ತದೆಂಬುದನ್ನು ಹೇಳುತ್ತಾರೆ. ಶರಣರ ಆಚಾರ–ವಿಚಾರ, ನಡೆ–ನುಡಿ ಎಲ್ಲವೂ ಪರಿಶುದ್ಧವಾದಾಗ ಮಾತ್ರ ಅವನಲ್ಲಿಯೇ ಶಿವನ ವಾಸಸ್ಥಳವನ್ನು ಕಾಣಬಹುದಾಗಿದೆ. ಮೇಲ್ನೋಟದ ಅರ್ಥದಲ್ಲಿ ದೇವನಾಗುವ ಹಾಗೂ ಆತನ ವಾಸಸ್ಥಾನವಾಗುವ ಅಂಶವನ್ನು ಹೇಳುತ್ತದೆ. ಆದರೆ ವಾಸ್ತವಾಂಶದಲ್ಲಿ ಚಲನಶೀಲವಲ್ಲದ ಭೌತಿಕವಾದ ಸಂಪತ್ತನ್ನು ನಿರಾಕರಿಸಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತಮ್ಮನ್ನು ತಾವೇ ಸುಧಾರಿಸಿಕೊಳ್ಳಬೇಕೆಂಬುದನ್ನು ಹೇಳುತ್ತಾರೆ. ಕ್ರಾಂತಿಯ ಸಮಯದಲ್ಲಿ ಹುಟ್ಟಿಕೊಂಡ ಶರಣ ಮಾತುಗಳು ಎಷ್ಟು ಶ್ರೇಷ್ಠವಾದವೆಂಬುದನ್ನು ಸಿದ್ಧರಾಮರ ಈ ವಚನ ಹೇಳುತ್ತದೆ.

" ಎಮ್ಮ ವಚನವೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರಿ (ಯಯಾಗ) ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ,
ಗಾಯಿತ್ರಿ ಲಕ್ಷ ಜಪ ಸಮಬಾರದಯ್ಯ.
ಕಪಿಲಸಿದ್ಧ ಮಲ್ಲಿಕಾರ್ಜುನಾ."–44

ಶರಣ ಸಂಘಟನೆಗೆ ಪ್ರೇರಕ ಶಕ್ತಿಯಾಗಿರುವ ವಚನಗಳು ಸಾಮಾನ್ಯವಾದವುಗಳಲ್ಲ, ಸನಾತನ ಸಂಪ್ರದಾಯದಲ್ಲಿ ಪ್ರೇರಕಶಕ್ತಿ ಎಂಬಂತೆ ಪೂಜಿತವಾದವುಗಳು. ಧಾರ್ಮಿಕ ಚೌಕಟ್ಟಿನೊಳಗೆ ಮಾನ್ಯತೆ ಪಡೆದ ಗೌರವಾನ್ವಿತ ಗ್ರಂಥಗಳಾಗಿದ್ದವುಗಳು. ಪುರೋಹಿತಶಾಹಿ ಸಂಪ್ರದಾಯದಲ್ಲಿ ಯಜ್ಞ-ಯಾಗ ಮುಂತಾದವುಗಳಿಗೆ ಎಲ್ಲಿಲ್ಲದ ಪ್ರಾಮುಖ್ಯತೆ ದೊರೆಯುತ್ತಿತ್ತು. ಇದರಿಂದ ಸಮಾಜದಲ್ಲಿ ಅನೇಕ ರೀತಿಯ ವರ್ಗ ತಾರತಮ್ಯಗಳು ಹುಟ್ಟಿಕೊಂಡವು. ಸಾಮಾನ್ಯ ಜನರನ್ನು ಈ ಪಾರಾಯಣ-ಪುರಾಣಗಳು ಸೆಳೆಯುವಲ್ಲಿ ವಿಫಲವಾದವು ಶೋಷಿತ ಸಮುದಾಯಗಳಲ್ಲಿನ ಪ್ರಜ್ಞಾಶೀಲರು ವಚನಗಳ ಮಾತುಗಳಿಗೆ ಪ್ರಭಾವಿತರಾದರು. ಆದ್ದರಿಂದ ಸಿದ್ಧರಾಮರು ತಮ್ಮ ವ್ಯಕ್ತಿತ್ವ ಎಂತಹುದೆಂಬುದನ್ನು ತಿಳಿಸುತ್ತಾರೆ. ಸ್ವಾಭಿಮಾನಿಯಾದ ಹೋರಾಟಗಾರನಲ್ಲಿ ಕೆಟ್ಟ ಅಭ್ಯಾಸಗಳು, ನಡಾವಳಿಕೆಗಳು ಇರಬಾರದೆಂಬ ಅಂಶಗಳನ್ನು ಚೆನ್ನಬಸವಣ್ಣನವರು ಈ ವಚನದಲ್ಲಿ ಪ್ರಸ್ತಾಪಿಸುತ್ತಾರೆ.

" ದಾಸಿಯ ಸಂಗ, ಭಂಗಿಯ ಸೇವನೆ,
ವೇಶಿಯಸಂಗ, ಸುರೆಯ ಸೇವನೆ
ಕನ್ನೆಯ ಸಂಗ, ರಕ್ತದ ಸೇವನೆ,
ಇಂತಿ ಐವರ ಸಂಗವ ಮಾಡುವ ದ್ರೋಹಿಗೆ
ಕಂಠಪಾವಡ, ಧೂಳಪಾವಡ, ಸರ್ವಾಂಗಪಾವಡ ಉಂಟೆಂಬ
ಪಂಚಮಹಾಪಾತಕರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ.

ಪಾದೋದಕ ಪ್ರಸಾದವಿಲ್ಲ.
ನಾ(ನಾಮ?) ಮೊದಲೇ ಇಲ್ಲ, ಕೂಡಲಚೆನ್ನಸಂಗಮದೇವ."–45

ಅಂದಿನ ಕಾಲಮಾನದಲ್ಲಿ ಜನಸಾಮಾನ್ಯರನ್ನು ದುಶ್ಚಟಗಳಿಗೆ ತಳ್ಳಲು ನಾನಾ ಅವಕಾಶಗಳು ಇದ್ದವೆಂದು ಹೇಳುತ್ತಾರೆ. ದಾಸಿಯ ಸಂಗ, ಭಂಗಿ ಸೇವನೆ, ವೇಶಿಯರ ಸಂಗ, ಸುರೆಯ ಸೇವನೆ, ಮುಂಡೆಯ ಸಂಗ, ಅಮೇಧ್ಯರ ಸೇವನೆ, ಕನ್ನೆ ಸಂಗ, ರಕ್ತದ ಸೇವನೆ ಮಾಡುವವರು ಅಂದು ಸಾಮಾಜಿಕ ದ್ರೋಹಿಗಳಾಗಿ ಪರಿವರ್ತಿತರಾಗಿದ್ದರೆಂಬುದು ತಿಳಿದು ಬರುತ್ತದೆ. ಇವುಗಳ ಸಂಗ ಬಿದ್ದವರಿಗೆ ಗುರು–ಲಿಂಗ–ಜಂಗಮಗಳೆಂಬ ಸ್ವಾಭಿಮಾನಿ ಚಳುವಳಿ ತತ್ವ ಸಿದ್ಧಾಂತಗಳಲ್ಲಿ ಅವಕಾಶಗಳಿಲ್ಲ ಎಂಬ ಮಾತನ್ನು ಹೇಳುತ್ತಾರೆ.

" ಹೇಮನಿನ್ನದಲ್ಲ, ಭೂಮಿ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ!
ಇದು ಜಗಕಿಕ್ಕಿದ ವಿಧಿ, ನಿನ್ನ ಒಡೆವೆಯೆಂಬುದು ಜ್ಞಾನರತ್ನ!
ಅಂತಪ್ಪ ಜ್ಞಾನರತ್ನವ ಕೆಡಗುಡದೆ ನೀನಲಂಕರಿಸಿದೆಯೆಂದೊಡೆ
ನಮ್ಮ ಗುಹೇಶ್ವರಲಿಂಗದಲ್ಲಿ ನಿನ್ನಂದ ಬಿಟ್ಟು ಸಿರಿವಂತರಿಲ್ಲ ಕಾಣಾ! ಎಲೆ ಮನವೆ!"–46

ಅಲ್ಲಮ್ಮನ ಈ ವಚನವು ಸ್ವಾಭಿಮಾನಿ ಕ್ರಾಂತಿಯ ವಿಚಾರದಲ್ಲಿ ತಾತ್ವಿಕತೆಯ ವಿಮರ್ಶೆಯಾಗಿ ಹೊರಹೊಮ್ಮತ್ತದೆ. ಸ್ವಾಭಿಮಾನಿ ಚಳುವಳಿಯನ್ನು ಸ್ಪಷ್ಟೀಕರಿಸುತ್ತಾ, ಜಗತ್ತಿನಲ್ಲಿರುವ ಸಂಪತ್ತನ್ನು ಸಾರ್ವತ್ರಿಕಗೊಳಿಸಿ ಆ ಸಂಪತ್ತಿನೊಳಗೆ ಜ್ಞಾನ ಸಂಪತ್ತನ್ನು ಗಳಿಸಬೇಕೆನ್ನುತ್ತಾನೆ. ಏಕೆಂದರೆ ನಾಶವಾಗದ ರೀತಿ ನಮ್ಮೊಳಗೆ ಇರುವುದಲ್ಲದೇ ಆ ವಿಷಯ ವಸ್ತುವು ಸಾಮಾಜಿಕ ಸ್ಥಾನಮಾನವನ್ನು ತಂದುಕೊಡುತ್ತವೆ. ಕೃತಕ ವಸ್ತುಗಳಿಗೆ ವಿದಾಯ ಹೇಳಿ ಶಾಶ್ವತವಾದ ಮೌಲ್ಯಗಳಿಗೆ ಸೈದ್ಧಾಂತಿಕ ವಿಚಾರವನ್ನು ಕೊಟ್ಟು ತಾತ್ವಿಕತೆಯ ತಳಹದಿಯನ್ನು ಹಾಕುತ್ತಾನೆ.

ಒಂದು ವ್ಯವಸ್ಥಿತವಾಗಿ ರೂಪುಗೊಂಡಿರುವ ಸಾಮಾಜಿಕ ಸಮುದಾಯದ ಸಾಂಸ್ಕೃತಿಕ ಮೌಲ್ಯಗಳನ್ನು ಅಧ್ಯಯನದ ದೃಷ್ಟಿಯಿಂದ ಎರಡು ರೀತಿಯಲ್ಲಿ ವಿಭಾಗಿಸಬಹುದು.

1) ಶಾಶ್ವತ ಮೌಲ್ಯಗಳು

2) ಅಶಾಶ್ವತ ಮೌಲ್ಯಗಳು

ಈ ಎರಡು ಮೌಲ್ಯಗಳು ಹುಟ್ಟುವಿಕೆಯಲ್ಲಿ ಇರುವ ಗೊಂದಲ ಅವುಗಳಿಂದ ಉಂಟಾಗುವ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುತ್ತಾರೆ. ಅಂದು ಸೃಷ್ಟಿಸಿದ ಅಭಿವೃದ್ಧಿ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಸ್ವಾಭಿಮಾನಿ ಚಳುವಳಿಯ ಹೋರಾಟಗಾರನಿಗೆ ಕರಗುವ ಸಂಪತ್ತಿನ ಅನಿವಾರ್ಯ ಇರುವುದಿಲ್ಲ. ಆ ಹೋರಾಟಗಾರನಿಗೆ ಶಾಶ್ವತವಾಗಿ ಇರುವ ಜ್ಞಾನ ಸಂಪತ್ತಿನ ಅನಿವಾರ್ಯತೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ದೃಷ್ಟಿಕೋನದಿಂದ ಹೇಳುತ್ತಾರೆ.

ಒಬ್ಬ ಸ್ವಾಭಿಮಾನಿಯಾದ ಚಳುವಳಿಗಾರನು ಆರ್ಥಿಕವಾಗಿ ತೊಂದರೆಯಿದ್ದರೂ ಕೂಡ ಮಾನಸಿಕವಾಗಿ ಸಿರಿವಂತಿಕೆ ಇರಬೇಕೆಂದು ಬಸವಣ್ಣನವರ ಈ ವಚನ ಸ್ಪಷ್ಟೀಕರಿಸುತ್ತದೆ.

> " ಮನೆನೋಡ ಬಡವರು, ಮನನೋಡ ಘನ
> ಸೋಂಕಿನಲ್ಲಿ ಶುಚಿ ಸರ್ವಾಂಗಕಲಿಗಳು
> ಪಸರಕ್ಕನುವಿಲ್ಲ, ಬಂದ ತತ್ಕಾಲಕೆ ಉಂಟು,
> ಕೂಡಲಸಂಗಮನ ಶರಣರು ಸ್ವತಂತ್ರಧೀರರು."-47

ಸ್ವಾಭಿಮಾನಿ ಚಳುವಳಿಯಲ್ಲಿ ಹೋರಾಟ ನಿರತ ಶರಣರು ಶೋಷಿತವರ್ಗದವರೇ ಆದ್ದರಿಂದ ಆರ್ಥಿಕವಾಗಿ ಸಬಲರಾಗಲಿಲ್ಲ ಆದ್ದರಿಂದ ಚಳುವಳಿಯು ಆರ್ಥಿಕ ದೃಷ್ಟಿಯಿಂದ ದಾರಿ ತಪ್ಪದಂತೆ ಶರಣರು ಕಾಯಕ ಸಿದ್ಧಾಂತವನ್ನು ಜಾರಿಗೆ ತಂದರು, ಅಂದರೆ ಸ್ವತಃ ತಮ್ಮ ತಮ್ಮ ಜೀವನ ನಡೆಸಲು ತಾವೇ ದುಡಿದು ತಿನ್ನಬೇಕು ಎಂಬ ನೀತಿಯನ್ನು ಜಾರಿಗೊಳಿಸಿದರು. ದುಡಿಮೆಯ ಹೆಚ್ಚಿನ ಪ್ರತಿಮೆಯನ್ನು ತಮ್ಮ ಸಮಾಜದ ಹೇಳಿಕೆಗೆ ಕೊಡಬೇಕೆಂಬ ಸೈದ್ಧಾಂತಿಕ ನಿಲುವನ್ನು ಹೊಂದಿದ್ದರು, ಈ ತತ್ವಕ್ಕೆ ಬದ್ಧರಾಗಿರತಕ್ಕಂತಹ ಶರಣರು ಮಾನಸಿಕವಾಗಿ ಧೀರರು ತಮ್ಮ ಬದುಕಿನಲ್ಲಿ ಯಾವುದೇ ತಕ್ಕ ಸೋಂಕಿಲ್ಲದೇ ಶುಚಿಗೆ ಶುದ್ಧ ಜೀವನ ನಡೆಸಿಕೊಳ್ಳುವುದಕ್ಕೆ ಆದ್ಯತೆ ನೀಡಿದರು, ಇದರಿಂದಾಗಿ ಬಸವೇಶ್ವರರು, ಶರಣರನ್ನು ಸ್ವತಂತ್ರ್ಯ ಧೀರರು ಎಂಬ ಮಾತನ್ನು ಹೇಳುತ್ತಾರೆ. ಅಂದಿನ ಚಳುವಳಿಗೆ ಈ ಅಂಶವು ಅನಿವಾರ್ಯವಿತ್ತು ಎಂದೆನಿಸುತ್ತದೆ.

" ನ್ಯಾಯ ನಿಷ್ಠೂರದಾ,
ದಾಕ್ಷುಣ್ಯಪರ ನಾನಲ್ಲ,
ಲೋಕವಿರೋಧಿ ಶರಣನಾರಿಗಂಜುವನಲ್ಲ
ಕೂಡಲಸಂಗಮದೇವರ ರಾಜತೇಜರಿರ್ಪವಾಗಿ."-48

ಯಾವಾಗಲೂ ಕೂಡ ಶರಣರು ಸಾಮಾಜಿಕ ನ್ಯಾಯದ ಪರವಾಗಿ ಇರಬೇಕೇ ಹೊರತು ವಿರೋಧಿಯಾಗಿ ಅಲ್ಲ, ಒಂದು ವೇಳೆ ನ್ಯಾಯದ ಪರವಾಗಿ ಹೋರಾಟಗಾರ ನಿಂತಾಗ ಲೋಕ ಅವನನ್ನು ವಿರೋಧಿಸುವುದು ಸರ್ವೆ•ಸಾಮಾನ್ಯ ಆಗಿರುತ್ತದೆ. ಆದ್ದರಿಂದ ಈ ವಿಚಾರದಿಂದ ಎದೆಗುಂದಬೇಕಾಗಿಲ್ಲ. ಏಕೆಂದರೆ ತಮ್ಮ ಆರಾಧ್ಯದೈವದ ತಾತ್ವಿಕ ಮತ್ತು ಸೈದ್ಧಾಂತಿಕ ಆಶಯವಾಗಿತ್ತು.

ಈ ಎಲ್ಲಾ ವಿಚಾರಗಳ ಹಿಂದೆ ಶರಣರು ತಾತ್ವಿಕ ನುಡಿ ಲಿಂಗಭೇದವಿಲ್ಲದೆ ಸ್ತ್ರೀ ಮತ್ತು ಪುರುಷರು ಒಂದಾಗಿ ಕಟ್ಟಿಕೊಂಡ ಚಳುವಳಿಗೆ ಕಲ್ಪನಾತೀತವಾದ ಆರಾಧ್ಯದೈವನ ಬೆಂಬಲ ಇದ್ದೇ ಇರುತ್ತದೆ ಎಂಬ ಮಹತ್ವಾಕಾಂಕ್ಷೆಯನ್ನು ಬಸವಣ್ಣನವರು ಹೇಳುತ್ತಾರೆ. ನೀನಿಲ್ಲದೆ ಮತ್ತಾರು ಇಲ್ಲವಯ್ಯ ಎನ್ನುವಲ್ಲಿ ತನಗೆ ಆಧಾರವಾಗಿರುವ ಶಿವತತ್ವದಲ್ಲಿ ನಂಬಿಕೆಯನ್ನು ಇರಿಸಿಕೊಂಡಿದ್ದಾರೆ. ಅಂದರೆ ಯಾರೂ ಇಲ್ಲವೆಂದು ಕೊರಗಬೇಡಿ ಇರುವುದನ್ನು ಬಳಸಿ ಜೀವಿಸಿ.

" ತಂದೆ ನೀನು, ತಾಯಿ ನೀನು
ಬಂಧು ನೀನು ಬಳಗ ನೀನು
ನೀನಲ್ಲದೆ ಮತ್ತಾರು ಇಲ್ಲವಯ್ಯ,
ಕೂಡಲಸಂಗಮದೇವ ಹಾಲಲ್ಲದ್ದು, ನೀರಲ್ಲದ್ದು."-49

ಈ ವಚನವು ಚಳುವಳಿಯಲ್ಲಿ ನಿರತ ಸರ್ವ ಶರಣರಿಗೂ ಆಶ್ರಯದಾತನಾಗಿ ಕೌಟುಂಬಿಕ ಮಾತೃವಾತ್ಸಲ್ಯವನ್ನು ಆರಾಧ್ಯದೈವನೇ ಕೊಡಬೇಕೆಂದಲ್ಲದೆ, ಅವನಲ್ಲದೆ ಬೇರೆ ಯಾರ ಕೈಯಲ್ಲೂ ಸಾಧ್ಯವಿಲ್ಲ, ಆದ್ದರಿಂದ ನೀನೆ ರಕ್ಷಿಸಬೇಕೆಂಬ ಮಾತನ್ನು ಹೇಳುತ್ತಾನೆ. ಸ್ವಾಭಿಮಾನಿ

ಚಳುವಳಿಯ ಅಂತಿಮ ಘಟ್ಟದಲ್ಲಿ ಕಲ್ಯಾಣದಲ್ಲಿ ಏನು ನಡೆದಿತ್ತು ಎಂಬುದನ್ನು ಬಸವಣ್ಣನವರ ಈ ವಚನವು ಸ್ಪಷ್ಟೀಕರಿಸುತ್ತದೆ.

"ಅರಸು–ವಿಚಾರ, ಸಿರಿಯು ಶೃಂಗಾರ
ಸ್ಥಿರವಲ್ಲ ಮಾನವ!
ಕೆಟ್ಟಿತ್ತು ಕಲ್ಯಾಣ, ಹಾಳಾಗಿತ್ತು ನೋಡಾ
ಒಬ್ಬ ಜಂಗಮನ ಅಭಿಮಾನದಿಂದ
ಚಾಲುಕ್ಯರಾಯನ ಆಳ್ವಿಕೆ ತೆಗೆಯಿತ್ತು
ಸಂದಿತ್ತು ಕೂಡಲಸಂಗಮದೇವ ನಿನ್ನ ಕವಳಿಗೆ."–50

ಅಂತಿಮವಾಗಿ ಅಧಿಕಾರ ಸಂಪತ್ತು ಶಾಶ್ವತವಾದುದಲ್ಲ ಎಂಬುದನ್ನು ಈ ಸ್ವಾಭಿಮಾನಿ ಕ್ರಾಂತಿಯು ಸ್ಪಷ್ಟಪಡಿಸುತ್ತದೆ. ಇದರ ತಾತ್ವಿಕ ನಿಲುವುಗಳಾದ ಶಿವ ಸಂಸ್ಕೃತಿಯ ತತ್ವಗಳಾದ ಕಾಯಕ, ದಾಸೋಹ ಗುರು ಲಿಂಗ ಜಂಗಮತತ್ವ, ಸ್ತ್ರೀ ಸಮಾನತೆ ಎಲ್ಲವುಗಳ ಜೀವಪರವಾದ ವಿಚಾರಗಳು ಕಲ್ಯಾಣದ ಕ್ರಾಂತಿಯಲ್ಲಿ ಮೂಡಿಬಂದವು ಇದರ ಪರಿಣಾಮವಾಗಿ ಮುಂದೆ ಬಂದಂತಹ ಭಕ್ತ ಚಳುವಳಿ ಸಮಾಜ ಸುಧಾರಣೆಗಳಿಗೆ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಿದೆ.

ಪ್ರೇರಕ ಪ್ರೇರಣಾ ಶಕ್ತಿಯಾಗಿ ಧರ್ಮ ಹೊರಹುಮ್ಮುವುದು ಸಾಮಾನ್ಯವಾದ ಮಾತಲ್ಲ ಈ ಕ್ರಾಂತಿಯ ಪರಿಣಾಮದಿಂದ ಜನಸಾಮಾನ್ಯರ ಜೀವನ ಸುಗಮವಾಗಿತ್ತು. ಬದುಕುವ ಆಸಕ್ತಿಯ ಕನಸುಗಳು ಬಲಿತು ತಾವೂ ಕೂಡ ಮನುಷ್ಯರು ಎಂಬ ಅರಿವು ಮೂಡಿತು. ಸೋಮರಿತನ ನಾಶಗೊಂಡು ಕಾಯಕನಿಷ್ಠೆ ಬಲಗೊಂಡಿತು ಆ ಮೂಲಕ ಆರ್ಥಿಕವಾಗಿ ಬಲಗೊಂಡರು ಇದು ಸ್ವಾಭಿಮಾನಿ ಚಳುವಳಿಯ ಪ್ರತಿಫಲವಾಗಿದೆ.

ಅಡಿ ಟಿಪ್ಪಣಿಗಳು

1. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 206, ವ 803.
2. ಅಲ್ಲಮಪ್ರಭುದೇವರ ವಚನಗಳು ಸಂಪುಟ-2, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 24, ವ 69.
3. ಅವಲೋಕನ (ಕರ್ನಾಟಕ ಪರಂಪರೆ ಸಮೀಕ್ಷೆ), ಸಂ. ವಿಚ್ಛಕೆ (ಲೇಖನ : – ಕರ್ನಾಟಕದಲ್ಲಿ ಧರ್ಮ ವಿಕಾಸ)– ಸುರೇಂದ್ರದಾನಿ, 1985, ಪು 145.
4. ಅವಲೋಕನ (ಕರ್ನಾಟಕ ಪರಂಪರೆ ಸಮೀಕ್ಷೆ), ಸಂ. ವಿಚ್ಛಕೆ (ಲೇಖನ : – ಹಳೆಗನ್ನಡ ಸಾಹಿತ್ಯ) ಡಾ॥ ರಂ.ಶ್ರೀ. ಮುಗುಳಿ, 1985, ಪು 225.
5. ಕಾಯಕಪರಿಣಾಮಿ, ಸಂ.ಲಿಂಗಣ್ಣ ಸತ್ಯಂಪೇಟೆ ಎಂ. ಬಂಡೆಪ್ಪ (ಲೇಖನ :– ವಚನಕಾರರ ಭಾಷಾಪ್ರಜ್ಞೆ) ಸುಮತೀಂದ್ರ ನಾಡಿಗ, 1991, ಪು 197.
6. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 11 ವ 30.
7. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 216 ವ 842.
8. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 61 ವ 244.
9. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 168 ವ 672.
10. ಅಲ್ಲಮಪ್ರಭುದೇವರ ವಚನಗಳು ಸಂಪುಟ-2, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 426 ವ 1334.
11. ಸಂಶೋಧನ ಡಾ॥ ಎಂ. ಚಿದಾನಂದ ಮೂರ್ತಿ, ಸಂ. ಲಕ್ಷ್ಮಣ್ ತೆಲಗಾವಿ ಗೌರವ ಸಂಪುಟ (ಲೇಖನ , ವಚನಕಾರರ ಶಬ್ದ ಲೋಕ) ಟಿ.ಆರ್. ಮಹಾದೇವಯ್ಯ, 1991, ಪು 157, 58.
12. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 60, ವ241.
13. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ , ಡಾ॥ ಸಿ.ವಿ. ಪ್ರಭುಸ್ವಾಮಿ ಮಠ , 1996, ಪು 929.
14. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ , ಡಾ॥ ಸಿ.ವಿ. ಪ್ರಭುಸ್ವಾಮಿ ಮಠ , 1996, ಪು 130.
15. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ , ಡಾ॥ ಸಿ.ವಿ. ಪ್ರಭುಸ್ವಾಮಿ ಮಠ , 1996, ಪು 09.
16. ವಚನ ಸಾಹಿತ್ಯದಲ್ಲಿ ಸ್ತ್ರೀ ವಾದಿ ನೆಲೆಗಳು, ವಿದ್ಯಾವತಿ ಬಸವರಾಜ ಪಾಟೀಲ , 2002, ಪು 47.

17. ವಚನ ಸಮಗ್ರ , ಡಾ॥ ಪಿ.ವಿ.ನಾರಾಯಣ, 2005, ಪು 59.

18. ವಚನ ಸಮಗ್ರ , ಡಾ॥ ಪಿ.ವ್ಹಿ.ನಾರಾಯಣ, 2005, ಪು 50.

19. ಅಲ್ಲಮಪ್ರಭುದೇವರ ವಚನಗಳು ಸಂಪುಟ–2, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 25, ವ 72.

20. ಸಿದ್ದರಾಮೇಶ್ವರ ವಚನ ಸಂಪುಟ–2, ಸಂ.ಡಾ॥.ಎಸ್.ವಿದ್ಯಾಶಂಕರ, 1993, ಪು 131,468.

21. ಜೇಡರದಾಸಿಮಯ್ಯ, ಸಂ. ಡಾ॥ವಿ.ಜಿ.ಪೂಜಾರ್, 2003, ಪು 47, ವ 47.

22. ಜೇಡರದಾಸಿಮಯ್ಯ, ಸಂ. ಡಾ॥ವಿ.ಜಿ.ಪೂಜಾರ್, 2003, ಪು 48, ವ 49.

23. ಬಸವಣ್ಣನವರ ವಚನಗಳು , ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 08, ವ15.

24. ಬಸವಣ್ಣನವರ ವಚನಗಳು (ಮುನ್ನುಡಿಯಿಂದ), ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 09–10.

25. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 200 ವ 628.

26. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 78 ವ 253.

27. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 104–105 ವ 336.

28. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 14 ವ 305.

29. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 206 ವ 652.

30. ಸಂಕೀರ್ಣ ವಚನಗಳು ಸಂಪುಟ–1, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 378 ವ 1170.

31. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 203 ವ 643.

32. ವಚನಸಮಗ್ರ, ಡಾ॥ ಪಿ.ವಿ. ನಾರಾಯಣ, 2005, ಪು 364, 365.

33. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 67 ವ 212.

34. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 197–198 ವ 620.

35. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪ್ರಸಂ.ಬರಗೂರು ರಾಮಚಂದ್ರಪ್ಪ (ಲೇಖನ: "ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೇಯ ನೆಲೆಗಳು" ಎಚ್.ದಂಡಪ್ಪ (ಲೇಖಕ)), 1993, ಪು 101 .

36. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 05 ವ 13.

37. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪ್ರಸಂ.ಬರಗೂರು ರಾಮಚಂದ್ರಪ್ಪ (ಲೇಖನ: "ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು" ಎಚ್.ದಂಡಪ್ಪ (ಲೇಖಕ), 1993, ಪು 101.

38. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 34, ವ 124.

39. ವಚನಸಮಗ್ರ, ಡಾ॥ ಪಿ.ವಿ. ನಾರಾಯಣ, 2005, ಪು 121.

40. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 59, ವ 235.

41. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 169, ವ 677.

42. ಜೇಡರದಾಸಿಮಯ್ಯ, ಸಂ. ಡಾ॥ವಿ.ಜಿ.ಪೂಜಾರ್, 2003, ಪು 29, ವ 1.

43. ಬಸವಣ್ಣನವರ ವಚನ , ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 228, ವ 873.

44. ಸಿದ್ದರಾಮೇಶ್ವರ ವಚನಗಳು, ಸಂ.ಡಾ॥ಈ.ಲೋಕೇಶ್ವರಪ್ಪ, 2006, ಪು 49 ವ 194.

45. ಚೆನ್ನಬಸವಣ್ಣ , ಡಾ॥ ಜಯಶ್ರೀದಂಡೆ, 2003, ಪು 51 ವ 23.

46. ಅಲ್ಲಮಪ್ರಭುದೇವರ ವಚನಗಳು ಸಂಪುಟ-2, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 487, ವ 1639.

47. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 79, ವ 326.

48. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 188, ವ 754.

49. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 116, ವ 818.

50. ಬಸವಣ್ಣನವರ ವಚನ ಸಂಪುಟ, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 157, ವ 625.

ಅಧ್ಯಾಯ : 7

ಅನುಭವ ಮಂಟಪದ ಸೈದ್ಧಾಂತಿಕ ನೆಲೆಗಳು

ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಬದಲಾವಣೆಯನ್ನು ತರಬೇಕಾದರೆ ಸೈದ್ಧಾಂತಿಕ ವಿಚಾರಗಳು ಅವಶ್ಯವೆನಿಸುವವು. ಅಂತಹ ವೇಳೆಯಲ್ಲಿ ಚಳವಳಿಯನ್ನು ನಡೆಸುವ ಅಥವಾ ಕ್ರಾಂತಿಯನ್ನು ಉಂಟುಮಾಡುವ ಸಂಘಟನಾಕಾರರು ಇಂತಹ ವಿಚಾರ ಕೂಟಗಳನ್ನು ಸೃಷ್ಟಿಸುತ್ತಾರೆ. ಏಕೆಂದರೆ ಸಮೂಹ ಹೋರಾಟಕ್ಕೆ ವೈಚಾರಿಕ ತಳಹದಿ ಮತ್ತು ಸಿದ್ಧಾಂತಗಳು ಅನಿವಾರ್ಯವಾಗುತ್ತವೆ. ವಿಚಾರಗಳು ಸಮೂಹವನ್ನು ಆಳಬೇಕೇ ಹೊರತು ವ್ಯಕ್ತಿಗಳಲ್ಲ ಎಂಬ ಸತ್ಯವನ್ನು ಕಂಡುಕೊಳ್ಳುವ ಗುಣವನ್ನು ಇಂತಹ ವಿಚಾರಮಂಟಪಗಳು ಸೃಷ್ಟಿಸುತ್ತವೆ.

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಅನುಭವ ಮಂಟಪ ಅಧಿಕೃತವಾಗಿತ್ತೆಂಬ ಕಲ್ಪನೆ, ಚರ್ಚೆ ಅನಾವಶ್ಯಕವಾದರೂ, ಇಲ್ಲಿ ನಮಗೆ ಬೇಕಾಗಿರುವುದು ಚಲನಶಿಲವಾಗಿರುವ ವಿಚಾರಗಳು ಮಾತ್ರ. ಅಂದಿನ ಸನ್ನಿವೇಶದಲ್ಲಿ ವಿಚಾರ ವಿನಿಮಯ ನಡೆಸಲು ಅನುಭವ ಮಂಟಪದ ಅನಿವಾರ್ಯತೆ ಇತ್ತೆಂದು ತೋರುತ್ತದೆ. ಈ ಅನುಭವಮಂಟಪದಲ್ಲಿ ಶರಣರ ಚರ್ಚಾಗೋಷ್ಠಿಗಳು, ವಾಗ್ವಾದಗಳು ನಡೆಯುತ್ತವೆಂಬುದನ್ನು ವಚನಗಳು ಹೇಳುವ ಒಳಸೂಕ್ಷ್ಮಗಳಿಂದ ಕಂಡುಬರುತ್ತದೆ. ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಸಮಂಜಸವಾದ ತಾತ್ವಿಕವಾದ ನಿಲುವುಗಳ ಮಂಡನೆಯಾಗುತ್ತಿತ್ತು. ಸಮಾಜದ ಒಳಿತಿಗೋಸ್ಕರ ವಚನಗಳ ಮುಖೇನ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುತ್ತಿದ್ದರು. ಈ ವಿಚಾರವಂತಿಕೆಯ ಅನುಭವ ಮಂಟಪದಲ್ಲಿ ಗಂಡು-ಹೆಣ್ಣು ಎಂಬ ಭೇದ-ಭಾವಗಳಿಲ್ಲದೆ ಚರ್ಚಾಕೂಟದಲ್ಲಿ ತಮ್ಮ ನಿಲುವುಗಳನ್ನು ಹೇಳಲು ಅವಕಾಶವಿತ್ತು. ಹಾಗೆಯೇ ಅವರ ವಿಚಾರಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಲು ಮುಕ್ತವಾದ ಅವಕಾಶಗಳಿದ್ದವು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮೊದಲು ಸೈದ್ಧಾಂತಿಕವಾಗಿ ಅವಕಾಶ ದೊರಕಿದ್ದು ಕಲ್ಯಾಣ ಕ್ರಾಂತಿಯ ಕಾಲದಲ್ಲಿ ಎಂದುಹೇಳಬಹುದು.

12ನೇ ಶತಮಾನದ ಅನುಭವ ಮಂಟಪದ ಸಮಾನತೆಯ ತಳಹದಿಯ ಮೇಲೆ ರೂಪಗೊಳ್ಳುತ್ತದೆ. ಜಾತಿ, ವೃತ್ತಿ, ಲಿಂಗ, ವರ್ಣ, ವಯಸ್ಸಿನ ಅಂತರಗಳು, ಆರ್ಥಿಕ ಅಸಮಾನತೆಗಳು ಈ ಎಲ್ಲಾ ತಾರತಮ್ಯಗಳು ಅಂದಿನ ವಿಚಾರ ಮಂಟಪದಲ್ಲಿ ಇರುವುದಿಲ್ಲ. ಇಲ್ಲಿ ಶುದ್ಧ ಶಿವಭಕ್ತರೆಲ್ಲ ಒಂದೆಂಬ ಭಾವನೆ ಇರುತ್ತದೆ. ಕಲ್ಯಾಣಕ್ರಾಂತಿಯ ಕಾಲದಲ್ಲಿ ಅನುಭವ ಮಂಟಪ, ಮಹಾಮನೆ, ಶಿವಾನುಭವ ಮಂಟಪ, ಅನುಭಾವ ಮಂಟಪ ಮುಂತಾದ ವಿಚಾರಗಳ ಪ್ರಸ್ತುತತೆಯನ್ನು ಬಸವಣ್ಣನವರ ಈ ವಚನವು ಅನುಭವ ಮಹಾಮಂಟಪವಿತ್ತೆಂದು ದೃಢೀಕರಿಸುತ್ತದೆ.

"ಕಲ್ಪಿತವ ಕಳೆದು, ಅಕಲ್ಪಿತವ ತಿಳುಹಿದ,
ಮನವ ಮಾಣಿಸಿ ಘನವ ನೆಲೆಗೊಳಿಸಿದ.
ತನುವ ಕೆಡಿಸಿ, ಅನುವ ಸ್ವಾಪ್ಯವ ಮಾಡಿ,
ಅಂತರಂಗದಲ್ಲಿ ಮಹಾಜ್ಞಾನವ ತುಂಬಿದ,
ಬಹಿರಂಗದಲ್ಲಿ ಸದಾಚಾರವ ನೆಲೆಗೊಳಿಸಿದ.
ನಿಮ್ಮ ನಿಲವನೆನಗೆ ಒರೆದೊರೆದು ಹೇಳಿ ತೋರಿಸಿ,
ಎನ್ನ ನಿಮ್ಮ ಶ್ರೀಪಾದಕ್ಕೆ ಯೋಗ್ಯನ ಮಾಡಿದ.
ಕೂಡಲಸಂಗಮದೇವಯ್ಯಾ, ನಿಮ್ಮ ಮಹಾಮನೆಯಲ್ಲಿ
ಮಡಿವಾಳನೂ ನಾನೂ ಕೂಡಿ ಸುಖದಲ್ಲಿ ಇದ್ದೆವಯ್ಯಾ." -1

ಈ ವಿಚಾರಗಳ ಕೇಂದ್ರೀಕರಣದ ನೆಲೆಯಲ್ಲಿ ಅನುಭವ ಮಂಟಪ ಪ್ರಸ್ತುತವಾಗುತ್ತದೆ. "ಅನುಭವ ಮಂಟಪದ ಕಲ್ಪನೆ 15ನೇ ಶತಮಾನದಲ್ಲಿಯೇ ಉದ್ಭವಿಸಿತೆಂದು ಕೆಲವರವಾದ ಆದರೆ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ತಲೆದೋರಿದ ವೀರಶೈವದ ಪುನರುತ್ಥಾನ ಯುಗಕ್ಕಿಂತ ಮೊದಲೇ ಕಾವ್ಯವನ್ನು ಬರೆದ ಭೀಮಕವಿಯ ಬಸವ ಪುರಾಣದಲ್ಲಿ ಅಧಿಕಪ್ರಮಾಣದಲ್ಲಿ ತತ್ವಗೋಷ್ಠಿ, ಒಡ್ಡೋಲಗಮುಂತಾದ ಪದಗಳ ಉಲ್ಲೇಖ ಬರುವುದಲ್ಲದೆ, ಅನುಭವ ಮಂಟಪದ ಹತ್ತಿರ ಹತ್ತಿರಕ್ಕೆ ಬರುವ "ಕೂಡಲ ಸಂಗಮೇಶನ ಭವನ ಮಂಟಪದೊಳಗೆ ವಿವಿಧ ಭಕ್ತರುವೆರಸಿ" ಒಡ್ಡೋಲಗವಿತ್ತ ವಿಷಯವು ಪ್ರಸ್ತಾಪಿತವಾಗಿದೆ. ಇದು ಅನುಭವ ಮಂಟಪಕ್ಕೆ ಅನ್ವಯಿಸುತ್ತದೆ ಎಂದು ಬೇರೆ

ಹೇಳಬೇಕಾಗಿಲ್ಲ. ಈ ಮಾತು ಭೀಮಕವಿಯ ಕಲ್ಪಿತವಾಗಿರದೆ ಅದು ತೆಲಗು ಬಸವಪುರಾಣದ ಪ್ರತಿಕೃತಿಯಾಗಿರಬೇಕು, ಅಂದರೆ ಅನುಭವ ಮಂಟಪದ ಉಲ್ಲೇಖ ಹನ್ನೆರಡನೆಯ ಶತಮಾನದ ಬಸವಾದಿ ಪ್ರಥಮರ ತೀರ ಸನಿಹದ ಸಮಯಕ್ಕೆ ಹೋಗುತ್ತವೆ, ಅಲ್ಲಿಂದ 15ನೇ ಶತಮಾನಕ್ಕೆ ಬಂದರಂತೂ ಅನುಭವ ಮಂಟಪದ ಉಲ್ಲೇಖ ಬರುವ ಮಹಾಮನೆ, ಅನುಭವ ಮಂಟಪ ಹಾಗೂ ಶೂನ್ಯ ಸಿಂಹಾಸನಗಳ ಸುಂದರವಾದ ಚಿತ್ರವನ್ನು ನೋಡಬಹುದು.

" ಶ್ರೀ ಕಾರದಾಕಾರವಾಗಿ ಕಲ್ಯಾಣ ಭೂ
ನಾಕೇಶ್ವರನ ಪದಸ್ಥದ ಹಸ್ತ ತಾನಾಗಿ
ವಾಕು ಮನ ನಯನ ಕರಚರಣ ದೈಮುಖ ಪರುಷ ತನ್ನರಮನೆಯೊಳು
ಪಾಕಶಾಸನ ಪ್ರಾಸ್ತದೊಳು ಮಯನಿರ್ಮಿತನಿ
ಜಾಕಾರ ಕೈವಲ್ಯ, ನಾಮ ಜಂಗಮಲಿಂಗ
ವಾಕರುಷಣದ ಮಹಾಮಂಟಪ ಸ್ಥಳವ ಸ್ಥಳಗೊಳಿಸಪ್ಪನುತದಹೊಳು"

" ಭಾವಬ್ರಹ್ಮರೂಪಿತ ತತ್ವ ನಿಜ ಮಹಾ
ಕೇವಲಜ್ಞಾನ ಜ್ಯೋತಿರ್ಲಿಂಗ ಲಿಂಗದೇ
ಹಾವಯುವ ನಿರ್ದೇಹದೇಹಿಕದಿ ಬಂದೆನ್ನ ದಾಸೋಹಕ್ರಿಕರ್ಮನ
ತಾವವಹಿಸೆನಗೆ ಸೋಹಾಮೃತವ ನೂಡಿ
ದಾ ವಿಭು ಪ್ರಸನ್ನೋತ್ತರದಿ ಮೂರ್ತಿಗೂಳಲಹುವ
ಭಾವಕಿಕ್ಕಿದ ಪ್ರತಿಷ್ಟಿತನೆನಲು ಶೂನ್ಯ ಸಿಂಹಾಸನಮನಲ್ಲಿ ನೆಗಳ್ದ"

ಬಸವಣ್ಣನವರ ಅರಮನೆ (ಮಹಾಮನೆ) ಅದರಲ್ಲಿ ಅನುಭವಮಂಟಪ, ಆ ಅನುಭವ ಮಂಟಪದಲ್ಲಿ ಶೂನ್ಯ ಸಿಂಹಾಸನ – ಈ ಪರಿವಿಡಿಯಲ್ಲಿ ಮೂರು ನೆಲೆಗೂಂಡಂತೆ ತೋರುತ್ತದೆ. ಮಹಾಮನೆ ಎಂದರೆ ಸಾಮಾನ್ಯವಾಗಿ ಮಹಾಂತರು ನೆಲೆಸಿದ ಮನೆ ಎಂದು ತೋರುತ್ತದೆ. ಆ ಪದ ಬಸವಣ್ಣನವರಂತೆ ಮಿಕ್ಕ ಶರಣರ ಮನೆಗಳನ್ನು ಉಲ್ಲೇಖಿಸುವಲ್ಲಿಯೂ ಪ್ರಯೋಗವಾಗಿದೆ. ಬಸವಣ್ಣನವರ ಮಹಾಮನೆಯಲ್ಲಿ ಅನುಭವ ಮಂಟಪವಿದ್ದುದೂ ಆ ಅನುಭವ ಮಂಟಪದಲ್ಲಿ ಶೂನ್ಯ ಪೀಠವನ್ನು ಪ್ರತಿಷ್ಠಾಪಿಸಿದುದೂ ಅದರ ವೈಶಿಷ್ಟ್ಯ ಸಿಂಗಿರಾಜಪುರಾಣವು ಈ ವಿಷಯವನ್ನು ಖಚಿತಗೊಳಿಸಿ ಈ ಸಮಸ್ಯೆಯ ಮೇಲೆ ಪ್ರಜ್ವಲಿಸುವ ಬೆಳಕನ್ನು ಬೀರಿದೆ. ಸಿಂಗಿರಾಜ ಪುರಾಣದಲ್ಲಿ

'ಮಹಾಮಂಟಪ' ಎಂದು ಉಲ್ಲೇಖಿಸಿದ್ದರೆ, ಚನ್ನ ಬಸವಪುರಾಣ, ಪ್ರಭುದೇವರ ಪುರಾಣದಲ್ಲಿ 'ಅನುಭವಮಂಟಪ' ಎಂಬ ಪದವನ್ನೇ ಬಳಸಲಾಗಿದೆ.

" ....ಬಸವಣ್ಣನ
ವರ ಗೃಹಾಂತಸ್ಥನನು ಭವಮಂಟಪದೊಳು"
ನೆಲಗಟ್ಟು ಸಪ್ತ ಮಹಾಕೊಟಮಂತ್ರಿಂಗಳತಿ
ಚಲುವ ಮೂವತ್ತಾರು ವಂಗ ಸಾಲ್ಗಂಭಗಳು
ಲಲಿತಷಟ್‌ತ್ರಿಂಶ ಶಕ್ತಿಯರು ಬೋದಿಗೆಯ ಮೂವತ್ತಾರು ಭಕ್ತಿ ಕ್ರಮದಿಂ
ತೊಲೆಗಳುಂ ಮೇಲಿಲಗೆನೂರೊಂದು ಸ್ಥಲಗಳತಿ
ಯುಲಿವುತಿಹ ಉಪ ಮಂತ್ರ ಇಟ್ಟಿಗೆಯಮೇಲ್ಗಾರೆ
ಕಲಿತ ಷಟ್ ತ್ರಿಂಶ ಪ್ರಣಮದ ಬಸವ ರಾಜನನುಭವ ಮಂಟಪ"

ಚನ್ನಬಸವ ಪುರಾಣದಲ್ಲಿಯೂ ಸಹ ಬಸವಣ್ಣನವರ ವರಗೃಹದಲ್ಲಿಯೇ (ಮಹಾಮನೆಯಲ್ಲಿಯೇ) ಅನುಭವ ಮಂಟಪವಿದ್ದ ವಿಷಯ ಪ್ರಸ್ತಾಪಿತವಾಗಿದೆ.ಈ ಮಾತಿಗೆ ಪುಷ್ಟಿಯನ್ನು ಕೊಡುವಂತೆ ಹಡಪದ ರೇವಣ್ಣನವರ ಸುದೀರ್ಘವಾದ ಕಾಲಜ್ಞಾನ ವಚನವೊಂದರಲ್ಲಿ ಕಲ್ಯಾಣದಲ್ಲಿದ್ದ ಅನುಭವಮಂಟಪ, ಮೇರುಮಂಟಪ, ಚರಮಂಟಪ, ವಿಶಾಲಮಂಟಪ,ಪರಮಾನಂದ ಪ್ರಕಾಶಮಂಟಪ, ಪ್ರಸಾದಮಂಟಪ, ಆರಾಧ್ಯಮಂಟಪ, ಚಂಗಣಗಿಲಮಂಟಪಗಳ ಉಲ್ಲೇಖವಿದ್ದು ಆಯಾ ಶರಣರ ಉಲ್ಲೇಖ ಬೇರೆ ಬೇರೆ ಮಂಟಪಗಳಲ್ಲಿ ಬಂದರೆ, ಚನ್ನಬಸವಣ್ಣನವರ ಪ್ರಸ್ತಾಪ ಅನುಭವ ಮಂಟಪದಲ್ಲಿ ಬರುತ್ತದೆ"-2

ಮೇಲ್ಕಂಡ ವಿಚಾರಗಳ ಅನ್ವಯ ಅನುಭವ ಮಂಟಪದ ಅಸ್ತಿತ್ವ ಇತ್ತೆಂಬುದು ಸುಳಿಹು ಸಿಗುತ್ತದೆ. ಈ ಎಲ್ಲಾ ಹೇಳಿಕೆಗಳು ಕೂಡ ಪುರಾಣಕಾವ್ಯಗಳಿಗೆ ಸಂಬಂಧಿಸಿರುವುದರಿಂದ 'ಅನುಭವ ಮಂಟಪ' ದ ವಿಚಾರವನ್ನು ಸಮಗ್ರವಾಗಿ ಅಲ್ಲಗಳೆಯದೆ, ಇದರ ಸುಳುಹಿನ ಹಾದಿಯನ್ನು ಹಿಡಿಯಬೇಕಾಗುತ್ತದೆ. ಆದರೂ ಪುರಾಣಗಳನ್ನೇ ಸಾಕ್ಷಿಗಳನ್ನಾಗಿ ಪುರಸ್ಕರಿಸಲು ಸಾಧ್ಯವಿಲ್ಲ. ಆದ ಕಾರಣ ವಚನಗಳಲ್ಲಿ ಕಂಡುಬರುವ ವಿಚಾರಗಳನ್ನು ಐತಿಹಾಸಿಕ ಸತ್ಯಗಳೆಂದು ಭಾವಿಸಿ, ಈ ಕೆಳಕಂಡ ವಚನಕಾರರ ವಚನಗಳನ್ನು ದಾಖಲಿಸಿರುತ್ತೇನೆ. ಅನುಭವ ಮಂಟಪದ ಪ್ರಸ್ತುತತೆಯನ್ನು

ಬಸವಣ್ಣನವರ ಮಡದಿಯಾದ ನೀಲಮ್ಮನ ವಚನದಲ್ಲಿ ಬರುತ್ತದೆ. ಈಕೆಯ ವಚನವೂ ಈ ಅಂಶವನ್ನು ಸ್ಪಷ್ಟೀಕರಿಸುತ್ತದೆ.

" ಪ್ರಮಾಣದ ಬೀಜವ ಬಿತ್ತಿ ಪಂಚಾಕ್ಷರಿಯ ಬೆಳೆಯ ಬೆಳೆದು.
ಪರಮ ಪ್ರಸಾದವನೊಂದು ರೂಪ ಮಾಡಿ ಮೆರೆದು,
ಭಕ್ತಫಲವನುಂಡಾತ ನಮ್ಮ ಬಸವಯ್ಯನು
ಚೆನ್ನ ಬಸವನೆಂಬ ಪ್ರಸಾದಿಯ ಏಡೆದು,
ಅನುಭವಮಂಟಪವನ ಮಾಡಿ
ಅನುಭವಮೂರ್ತಿಯಾದ ನಮ್ಮ ಬಸವಯ್ಯನು,
ಅರಿವ ಸಂಪಾದಿಸಿ ಅಚಾರವನಂಗಗೊಳಿಸಿ
ಏಳುನೂರೆಪ್ಪತ್ತು ಅಮರಗಣಂಗಳ
ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು.
ಆ ಅನುಭವದಲ್ಲಿ ಐಕ್ಯಪ್ರಸಾದವನಂಗಾಗೊಂಡು,
ಮಂತ್ರ ನಿರ್ಮಂತ್ರವಾದಾತ ನಮ್ಮ ಬಸವಯ್ಯನು
ಭಕ್ತ ಸ್ಥಾನವನಳಿದು ಭಾವವಡಗಿ ಬಟ್ಟಬಯಲು ಕೂಡಿ,
ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು."–3

ಅನುಭವ ಮಂಟಪದ ಕಲ್ಪನೆಯು ನೀಲಮ್ಮನವರ ವಚನದಲ್ಲಿ ಅಧಿಕೃತವಾಗಿ ಪ್ರಸ್ತಾಪಿತವಾಗುತ್ತದೆ. ಆದ್ದರಿಂಧ ಅನುಭವ ಮಂಟಪದ ಅಸ್ತಿತ್ವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಈ ಮಂಟಪದಲ್ಲಿ ಶಿವತತ್ವ ಕೇಂದ್ರಿತವಾದ ವಿಚಾರ ವಿನಿಮಯಗಳು ನಡೆಯುತ್ತಿದ್ದವೆಂಬುದನ್ನು ಈ ವಚನದಲ್ಲಿ ಪ್ರಸ್ತಾಪಿಸಲಾಗಿದೆ. ಅಂದಿನ ಕಾಲದ ಧಾರ್ಮಿಕ ಜೀವನದಲ್ಲಿ ಪ್ರಧಾನವಾಗಿ ಪಾತ್ರವಹಿಸಿರುವ ದೇವರು, ಧರ್ಮ, ಭಕ್ತಿ, ಗುರು, ಲಿಂಗ, ಜಂಗಮ, ಪ್ರಸಾದ, ದಾಸೋಹ, ಕಾಯಕ ಮೊದಲಾದ ವಿಚಾರಗಳು ಈ ಅನುಭವ ಮಂಟಪದಲ್ಲಿ ಚರ್ಚಿತವಾಗುವ ವಿಚಾರಗಳು ಎನಿಸುತ್ತವೆ. ಈ ವಿಚಾರಗಳು ಶರಣರ ಸಾಮೂಹಿಕ ಅಭಿವ್ಯಕ್ತಿಯಲ್ಲಿ ವಿಶ್ವಾಸಪೂರ್ವಕವಾಗಿ ಅಭಿವ್ಯಕ್ತಿಗೊಂಡು ಸೃಷ್ಟಿ ಪಡೆಯುತ್ತಿದ್ದವು. ಈ ನೆಲೆಯಲ್ಲಿಯೇ ಸ್ಥಾವರ ಮತ್ತು ಜಂಗಮ ಸ್ವರೂಪಿಯಾದ ಸೈದ್ಧಾಂತಿಕ ವಿಚಾರಗಳು ಅಭಿವ್ಯಕ್ತಿಗೊಳ್ಳುತ್ತಿದ್ದವು. ಸ್ಥಾವರ ಮತ್ತು ಜಂಗಮ ಪರಸ್ಪರ ಒಂದಕ್ಕೊಂದು ವಿರೋಧಿ

ಪರಿಭಾಷಿಕ ಪದಗಳಾದರೂ ಅನುಭವ ಮಂಟಪದ ವಿಚಾರಗಳು ಸಾಮೂಹಿಕ ಅಭಿವ್ಯಕ್ತಿಯ ಮೂಲಕ ವಚನ ಮಾಧ್ಯಮದಲ್ಲಿ ಅಭಿವ್ಯಕ್ತಿಗೊಳ್ಳುತ್ತಿದ್ದವು. "ಅನುಭವ ಮಂಟಪದ ಐತಿಹಾಸಿಕತೆ ಕುರಿತು, ಶ್ರೀ ಚನ್ನಪ್ಪ ಉತ್ತಂಗಿಯವರು ಅಧಿಕೃತ ಗ್ರಂಥವನ್ನು ಬರೆದಿದ್ದರು, ಈ ಪ್ರಯೋಗ ಇಂದಿಗೂ ಶೋಧಕರ ಸಮಸ್ಯೆಯ ವಿಚಾರವಾಗಿರುವುದು. ವಿಸ್ತೃತ ಸಂಗನ ಬಸವೇಶ್ವರ ವಚನಗಳಲ್ಲಿ, ಕಾಲಜ್ಞಾನ ವಚನಗಳಲ್ಲಿ ಅನುಭವ ಮಂಟಪ ಎಂಬ ರೂಪ ವಿರಳವಾಗಿ ಕಂಡುಬಂದಿದೆ. ಆದರೂ ಇದು ಚಾಮರಸನ ಪ್ರಭುಲಿಂಗಲೀಲೆ ಹಾಗೂ ಶೂನ್ಯ ಸಂಪಾದನೆಕಾರರಿಂದ ಮೂಡಿಬಂದ ಕಲ್ಪನೆಯೆಂದು ಬಹುಮಟ್ಟಿಗೆ ವಿದ್ವಜ್ಜನರ ಗ್ರಹಿಕೆಯಾಗಿದೆ. ಕಲ್ಯಾಣದಲ್ಲಿ ವಿಚಾರ ಮಂಟಪ, ಪ್ರಸನ್ನ ಮಂಟಪ, ಜ್ಞಾನ ಪ್ರಕಾಶ ಮಂಟಪ, ಚಂಗಳಿಕೆಯ ಮಂಟಪ, ಮುಂತಾದವುಗಳು ನೆಲೆಸಿದ್ದವು ಎಂಬ ವಿಚಾರ ಕಾಲಜ್ಞಾನ ವಚನಗಳಲ್ಲಿ ಸೂಚಿತವಾಗಿದೆ. ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣವನ್ನು ಅವಿಮುಕ್ತ ಕ್ಷೇತ್ರವೆಂದು ವಚನಕಾರರು ಬಣ್ಣಿಸಿದ್ದಾರೆ. ತಾತ್ವಿಕವಾಗಿ ತಿಳಿಸುವುದಾದರೆ ಅನುಭವದ ವಿಚಾರ-ವಿಮರ್ಶೆ, ಪರಸ್ಪರ ವಿಮರ್ಶೆ, ವಿಚಾರ ಮಂಥನ, ಶಿವಶರಣರು ಎಲ್ಲಿ ನಡೆಸುವರೋ ಅನುಭವ ಎಲ್ಲಿ ಸಂಪಾದಿಸುವರೋ ಅದುವೇ ಅನುಭವ ಮಂಟಪ, ಅದನ್ನೇ ಅನುಭವ ಗೋಷ್ಠಿ ಎನ್ನಬಹುದು."-4 ಇದಿಷ್ಟಲ್ಲದೇ ಶರಣರ ಅನುಭವ ಮಂಟಪವು ಪ್ರಾರ್ಥನೆ ಮಾಡುವ ಸ್ಥಳವಲ್ಲ, ಧರ್ಮಕಟ್ಟುವ ಧಾರ್ಮಿಕ ಮಂದಿರವಲ್ಲ; ಇದು ಶರಣರು ತಮಗಾದ ಸ್ವಾನುಭವದ ನೆಲೆಯಲ್ಲಿ ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದ ಅನುಭವ ಜನ್ಯ ಜ್ಞಾನ ಕೇಂದ್ರವಾಗಿದೆ.

ಇಲ್ಲಿ ಸೇರುವ ಜನರೆಲ್ಲರೂ ಕಾಯಕನಿಷ್ಠೆಯುಳ್ಳವರಾಗಿದ್ದಾರೆಂಬುದು, ವಚನಗಳಿಂದ ತಿಳಿದು ಬರುತ್ತದೆ. ತಾವು ಜೀವಿತಾವಧಿಯಲ್ಲಿ ಕಂಡುಕೊಂಡ ಸತ್ಯನಿಷ್ಠವಾದ ಮೌಲ್ಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಪ್ರಾಯೋಗಿಕವಾಗಿ ತಮ್ಮ ವೈಯಕ್ತಿಕ ಬದುಕಿನಲ್ಲಿ ಅಳವಡಿಸಕೊಳ್ಳುತ್ತಿದ್ದರು. ಈ ಅನುಭವ ಮಂಟಪದಿಂದ ಶರಣರ ಬದುಕಿನಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಇದರ ಪರಿಣಾಮವಾಗಿಯೇ ಶರಣರು ಕಾಯಕ ವೃತ್ತಿಯಲ್ಲಿ ದೈವವನ್ನು ಕಾಣುವುದನ್ನು ಸಿದ್ಧಿಸಿಕೊಂಡರು. ವ್ಯಕ್ತಿಗತವಾಗಿ ಕೆಲವೊಂದು ನಡಾವಳಿಕೆಗಳನ್ನು ಈ ಅನುಭವ ಮಂಟಪದ ವಿಚಾರಧಾರೆಯಿಂದ ರೂಢಿಸಿಕೊಳ್ಳಲು ತೊಡಗಿದರು. ಆದ್ದರಿಂದ ಶರಣರು ತಮ್ಮ ಬದುಕನ್ನು ವಿಭಿನ್ನವಾಗಿಟ್ಟುಕೊಂಡರು. ವಚನಕಾರರು ಜೀವಿಸಲು ಕಂಡುಕೊಂಡ ಮಾರ್ಗವೆಂದರೆ ದುಡಿದು ತಿನ್ನುವುದು. ಈ ದುಡಿಮೆಯು ತಮ್ಮ ಪರಿಶ್ರಮದಿಂದ ಬರಬೇಕೆ

ಹೊರತು, ಅನ್ಯಾಯದ ಮಾರ್ಗದಿಂದಲ್ಲ ಎಂಬುದನ್ನು ಅರಿತಿದ್ದರು. ತಾವು ಗಳಿಸಿದ ದುಡಿಮೆಯನ್ನು ತಮ್ಮ ಕುಟುಂಬಕ್ಕೆ ಎಷ್ಟು ಬೇಕೋ ಅಷ್ಟನ್ನು ಖರ್ಚು ಮಾಡುತ್ತಿದ್ದರು. ಇನ್ನುಳಿದ ಸಂಪನ್ಮೂಲವನ್ನು ಸಮಾಜದ ಒಳಿತಿಗೆ ಧಾರೆಯೆರೆಯುತ್ತಿದ್ದರು. ಇದರಿಂದ ಸಂಪನ್ಮೂಲವು ಏಕವ್ಯಕ್ತಿ ಕೇಂದ್ರಿತವಲ್ಲ, ಸಮೂಹ ಕೇಂದ್ರಿತವಾದುದೆಂಬುದು ಶರಣರ ನಿಲುವಾಗಿತ್ತು. ಇದು ಅನುಭವ ಮಂಟಪದ ಕೊಡುಗೆಯಾಗಿದೆ.

ಶರಣರು ಕಂಡುಕೊಂಡ ಸತ್ಯದ ಹಾದಿಯೆಂದರೆ ಅಹಿಂಸಾಮಾರ್ಗ. ಈ ಮಾರ್ಗದಿಂದ ನಾನು ಸುಧಾರಿಸಬಹುದು ಮತ್ತು ಜಗತ್ತು ಸುಧಾರಿಸುತ್ತದೆಂಬುದನ್ನು ಅನುಭವ ಮಂಟಪದ ವಿಚಾರಧಾರೆಗಳಿಂದ ಕಂಡುಕೊಳ್ಳುತ್ತಿದ್ದರು. ಇಲ್ಲಿ ಕಾರ್ಯಗತಗೊಳ್ಳುತ್ತಿದ್ದ ಸಾಂಸ್ಕೃತಿಕ ವಿಚಾರಧಾರೆಗಳು ಅಂದಿನ ಜನಸಮುದಾಯಗಳ ಮೇಲೆ ಅಗಾಧವಾದ ಪರಿಣಾವನ್ನುಂಟು ಮಾಡುತ್ತಿದ್ದವು. ಇದರಲ್ಲಿ ಒಡಮೂಡಿದ ವಿಚಾರಾಂಶಗಳನ್ನು ವಚನಗಳಿಂದ ಸಂಗ್ರಹಿಸಬಹುದು.

1. ಕಾಯಕ ಮಾಡುವ ಮೂಲಕ ಕೈಲಾಸ ಕಾಣುವುದು.
2. ದಾಸೋಹ ಕಾರ್ಯವನ್ನು ಸಮಾಜದ ಒಳಿತಿಗಾಗಿ ಜಾರಿಗೊಳಿಸಿರುವುದು. ಇದರೊಳಗೆ ಜ್ಞಾನದ ದಾಸೋಹವನ್ನು ಸಾಮಾನ್ಯನಿಗೂ ನೀಡಿದರು.
3. ಗುರು, ಲಿಂಗ, ಜಂಗಮ ತತ್ವಗಳನ್ನು ಸಾಮಾಜಿಕವಾಗಿ ಅವುಗಳ ಮಹತ್ವವೆಂಬುದನ್ನು ತಿಳಿಸಿದರು.
4. ಅನುಭವ ಮತ್ತು ಅನಭಾವದ ಬಗ್ಗೆ ತಿಳಿಸುವುದು.
5. ಸಮಾನತೆಯ ತತ್ವವನ್ನು ಕಾರ್ಯಗತಗೊಳಿಸಿದರು.
6. ಸಾಮಾಜಿಕ ಜೀವನದಲ್ಲಿ ಸ್ತ್ರೀ-ಪುರುಷರು ಭೇದವಿಲ್ಲದೆ ಸರ್ವ ರೀತಿಯಲ್ಲಿಯೂ ಸಮಾನರೆಂಬ ಕಲ್ಪನೆಯಿತ್ತು. ಇನ್ನು ಮೊದಲಾದ ತಾತ್ವಿಕ ವಿಚಾರಧಾರೆಗಳು ಅಂದಿನ ಅನುಭವ ಮಂಟಪದಲ್ಲಿ ವಿನಿಮಯವಾಗುತ್ತಿದ್ದವು.

ಈ ಅನುಭವಮಂಟಪವು ತನ್ನ ಪ್ರಭಾವಾಲಯದಿಂದ 'ಬಹುಮುಖ' ದಿಕ್ಕಿಗೆ ಪ್ರಚಲಿತವಾಯಿತು. ಇದರ ಪರಿಣಾಮವಾಗಿ "ಶಿವಾನುಭವಿಗಳೆಲ್ಲ ಅಲ್ಲಿ ಸೇರಿ ಹೊಸ ಬದುಕನ್ನು ಪಡೆದುಕೊಳ್ಳುತ್ತಿದ್ದರು. ಆದುದರಿಂದ ಅನುಭವ ಮಂಟಪ ಅಂದಿನ ಜನತೆಯ ಆಧ್ಯಾತ್ಮಿಕ

ವಿಶ್ವವಿದ್ಯಾಲಯದಂತಿತ್ತು. ಆ ಸಂಸ್ಥೆಯ ಅಧ್ಯಕ್ಷರು ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ ಇತರೆ ಮೊದಲಾದವರು ಅನುಭವ ಮಂಟಪದಲ್ಲಿ ಸೇರುತ್ತಿದ್ದ ವ್ಯಕ್ತಿಗಳು.

ಶ್ರೀ ಬಸವೇಶ್ವರರು ಪ್ರಚಾರ ಮಾಡಿದ ವೀರಶೈವ ಧರ್ಮದ ಪ್ರಭಾವಕ್ಕೆ ಅಂದು ಅನೇಕರು ಒಳಗಾದರು, ಅದಕ್ಕೆ ಕಾರಣವೆಂದರೆ ಆ ಧರ್ಮಕ್ಕೆ ಸುಲಭವಾದ ಬೋಧೆ ಮತ್ತು ಆಚರಣೆ. ಆ ಧರ್ಮ ಅಂದು ವಿಶೇಷ ಜನಪ್ರಿಯವಾಗಿ ವಿಶ್ವ ಧರ್ಮವಾಗುವಷ್ಟು ಪ್ರಭಾವವನ್ನು ಪಡೆಯಿತು. ಭರತಖಂಡದ ನಾನಾ ಭಾಗಗಳಿಂದ ಅಸಂಖ್ಯಾತ ಸಾಧಕರು ಬಂದು ಕಲ್ಯಾಣದಲ್ಲಿ ನೆಲೆಸಿದರು. ಅವರೆಲ್ಲರೂ ಅನುಭವ ಮಂಟಪದಲ್ಲಿ ಪಾಲ್ಗೊಳ್ಳುತ್ತಿದ್ದರು. ಕಾಶ್ಮೀರದ ಮೋಳಿಗೆ ಮಾರಯ್ಯ, ದಕ್ಷಿಣದ ಸಕಲೇಶ ಮಾದರಸ, ಗುಜರಾತಿನ ಆದಯ್ಯ, ಕಳಿಂಗದ ಮರುಳು ಶಂಕರದೇವ, ಆಂಧ್ರದ ಮೈದುನ ರಾಮಯ್ಯ ಇವರೇ ಮೊದಲಾದವರು. ಕರ್ನಾಟಕದ ಹೊರಗಿನಿಂದ ಬಂದವರಲ್ಲಿ ಪ್ರಮುಖರು. ಇವರಲ್ಲಿ ಕೆಲವರು ರಾಜರಾಗಿದ್ದರು. ಶ್ರೀ ಸಾಮಾನ್ಯರೇ ಅಲ್ಲದೇ ರಾಜ-ಮಹಾರಾಜರೂ ತಮ್ಮ ಸರ್ವಸ್ವವನ್ನೂ ತ್ಯಜಿಸಿ, ಅನುಭವ ಮಂಟಪದಿಂದ ಬೆಳಕು ಪಡೆಯಲು ಕಲ್ಯಾಣಕ್ಕೆ ಬಂದು ನೆಲೆಸಿದ್ದು, ಶ್ರೀ ಬಸವೇಶ್ವರರ ಘನವಾದ ವ್ಯಕ್ತಿತ್ವವಕ್ಕೂ ಅವರ ಜನಪ್ರಿಯತೆಗೂ ದ್ಯೋತಕವಾಗಿದೆ."-5

ಶರಣರ ಪ್ರಸಿದ್ಧಿಗೆ ಕಾರಣವೆಂದರೆ ಅವರಲ್ಲಿದ್ದ ವೈಚಾರಿಕ ಪ್ರಜ್ಞೆ ಎಲ್ಲಾ ವರ್ಗದ ಪ್ರಜ್ಞಾವಂತರನ್ನು ಸೆಳೆಯುವಂತದ್ದು. ಕಲ್ಯಾಣದಲ್ಲಿದ್ದ ಶಿವಶರಣರ ಸಮೂಹದ ನಡೆ-ನುಡಿ, ಆಚಾರ-ವಿಚಾರಗಳ ಚಾಚುತಪ್ಪದ ಪಾಲನೆಯಿಂದ ನಾಡಿನಾದ್ಯಂತ ಶಿವನ ಆರಾಧಕರನ್ನು ಸೆಳೆಯಿತು. ಇವರಿದ್ದ ಸ್ಥಳವು 'ಲೋಕದೊಳಗೆ ಕಲ್ಯಾಣವೇ ಕೈಲಾಸವಾದ ಕಾರಣ' ಕೈಲಾಸವನ್ನು ಅರಸಿ ಶಿವಭಕ್ತರು ಹೇಗೆ ಹೋಗುತ್ತಾರೋ ಹಾಗೆ ಶರಣರ ಕಲ್ಯಾಣಕ್ಕೆ ವಿವಿಧೆಡೆಗಳಿಂದ ಆಗಮಿಸತೊಡಗಿದರು. ಇಷ್ಟೇ ಕಾರಣವಲ್ಲದೇ ಗುರು-ಲಿಂಗ-ಜಂಗಮ ದಾಸೋಹ ವಿಚಾರಗಳು ಬಸವಾದಿ ಪ್ರಮಥರ ಕಾಲದಲ್ಲಿ ಪ್ರಸಿದ್ಧಿ ಪಡೆತಿದ್ದವು. ಭಕ್ತ ಸಮೂಹ ತಮ್ಮಲ್ಲಿರುವ ಜ್ಞಾನಾಭಿವೃದ್ಧಿಯನ್ನು ಹೆಚ್ಚಿಸಿಕೊಳ್ಳಲು ಬರತೊಡಗಿದರೆ, ರಾಜ ಮಹಾರಾಜರುಗಳು, ಅಂದಿನ ಕಾಲದ ಯುದ್ಧಗಳ ವಿಪರೀತತೆಯಿಂದ ಬೇಸರಿಸಿ, ಅತಿ ಸಿರಿವಂತಿಕೆ, ಲೋಲುಪತೆಗಳಿಂದ ಅಜೀರ್ಣಗೊಂಡಿದ್ದರಿಂದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಬಂದಿದ್ದರು ಎಂದು

ಊಹಿಸಬಹುದು. ತಮ್ಮಲ್ಲಾ ಮಾನಸಿಕ ದೈಹಿಕ ಜಂಜಡಗಳಿಂದ ಅನುಭವ ಮಂಟಪಕ್ಕೆ ಸೇರುತ್ತಿದ್ದ ಜನರು ನಿದಾನವಾಗಿ ಅಲ್ಲಿನ ಶರಣರಿಂದ ಪ್ರಭಾವಗೊಂಡು ತಮ್ಮೆಲ್ಲಾ ದೈಹಿಕ ಸುಖಬೋಗಗಳನ್ನು ತೊರೆದು ಶಿವನ ಆರಾಧಕರಾದರು. . ಜನರು ಅನುಭವ ಮಂಟಪದ ವಿಚಾರಕ್ಕೆ ಹತ್ತಿರವಾದಂತೆ ಅಲ್ಲಮನ ಒಂದು ವಚನವು ಈ ಮೇಲಿನ ವಿಚಾರಗಳ ಸಾಮಿಪ್ಯಕ್ಕೆ ದಾಖಲೆಗಳನ್ನು ಒದಗಿಸುತ್ತದೆ.

> " ಮರ್ತ್ಯ ಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
> ಕರ್ತನಿಟ್ಟಿದ್ದನಯ್ಯಾ, ಒಬ್ಬ ಶರಣನಯ್ಯಾ, ಆ ಶರಣನ
> ಆ ಶರಣ ಬಂದು ಕಲ್ಯಾಣವೆಂಬ ಶಿವಪುರದ ಕೈಲಾಸ ಮಾಡಿ
> ರುದ್ರಗಣ ಪ್ರಮತಗಣಂಗಳೆಲ್ಲರ ಹಿಡಿ ತಂದು ಅಮರಗಳಂಗಳೆಂದು
> ಹೆಸರಿಟ್ಟು ಕರಿದು, ಅಗಣಿತ ಗಣಗಳನೆಲ್ಲರ ಹಿಡಿ ತಂದು
> ಭಕ್ತಿಯ ಕುಲಸ್ಥಳವ ಶುತದೃಷ್ಟ ಪವಾಡದಿಂದ ಮೆರೆದು,
> ತೋರಿ ಜಗವರಿಯಲು ಶಿವಾಚಾರದ ಧ್ವಜವನೆತ್ತಿ
> ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು,
> ಆ ಶಿವಶರಣರ ಮನೆಯೊಳಗಿರ್ಪ ಶಿವಶರಣಂಗಳ
> ತಿಂಥಿನಿಯ ಕಂಡು,
> ಎನ್ನ ಮನ ಉಬ್ಬಿ-ಕೊಬ್ಬಿ ಓಲಾಡುತ್ತಿದ್ದೆನಯ್ಯಾ
> ನಮ್ಮ ಗುಹೇಶ್ವರ ಶರಣ ಸಂಗನ ಬಸವಣ್ಣನ ದಾಸೋಹದ
> ಘನವೇನೆಂದೆನಬಹುದು, ನೋಡಾ ಸಿದ್ಧರಾಮಯ್ಯ."-6

ಅನುಭವ ಮಂಟಪ ಮಹಾಮನೆಯೆಂಬ ಕಲ್ಪನೆಯ ವಿಷಯಗಳು ಮರ್ತ್ಯ ಮತ್ತು ಶಿವಲೋಕಗಳ ನಡುವೆ ಸಂಬಂಧವೇರ್ಪಡಿಸುವ ರಹದಾರಿಗಳಾದವು. ಇಲ್ಲಿ ನಡೆಯುವ ವಿಚಾರಗಳು ಅಸಮಾನ್ಯ ಎನಿಸುವಂತೆ ಕಂಡರೂ ಸಾಮಾನ್ಯ ಜೀವನದಲ್ಲಿ ಕಂಡುಂಡ ಅನುಭವ ಸತ್ಯಗಳಾಗಿವೆ ಆದ್ದರಿಂದ ಅನುಭವ ಮಂಟಪ ಇತ್ತು ಅಥವಾ ಇಲ್ಲ ಎಂಬ ಪ್ರಶ್ನೆಗೆ ಹೋಗದೆ, ಅನುಭವ ಮಂಟಪದ ಪರಿಣಾಮ ಮತ್ತು ಅದರ ವಿಚಾರಧಾರೆಗಳನ್ನು ಮಾತ್ರ ಅವಲೋಕಿಸಲಾಗಿದೆ. ಶಿವಶರಣರ ದೃಷ್ಟಿಯಲ್ಲಿ ಅನುಭವ ಮಂಟಪವು ಹಲವು ರೀತಿಯಲ್ಲಿ ಅಭಿವ್ಯಕ್ತಿಗೊಂಡಿದೆ. "ಹೀಗೆ ನೀಲಮ್ಮನ ವಚನ, ಹಡಪದ ರೇವಣ್ಣದ ಕಾಲಜ್ಞಾನ ವಚನ, ಚೆನ್ನಬಸವ ಪುರಾಣ, ಹರೀಶ್ವರನ

ಪ್ರಭುದೇವ ಪುರಾಣ, ಮೊದಲಾದವುಗಳಲ್ಲಿ ಅನುಭವ ಮಂಟಪ ಸ್ಪಷ್ಟವಾಗಿ ಹೇಳಿದರೆ ಉಳಿದ ಕೃತಿಗಳು ಅದನ್ನೇ ಮಹಾಮಂಟಪ ಸ್ಥಳ, ಗಣ, ಸಮೂಹ, ಮಂಟಪ ಮಹಾಮನೆ, ಕೂಡಲಸಂಗಮೇಶನ ಭವನ ಮಂಟಪ, ಒಡ್ಡೋಲಗ ಮುಂತಾದ ಬೇರೆ ಬೇರೆ ಹೆಸರುಗಳಿಂದ ಸೂಚಿಸಿರುವುದನ್ನು ಕಾಣುತ್ತೇವೆ." -7 ಈ 'ಅನುಭವ ಮಂಟಪ' ಎಂಬುವುದಕ್ಕೆ ವಿವಿಧ ಹೆಸರುಗಳಿಂದ ಕರೆದರಾದರೂ ಅದರೊಳಗೆ ಆಂತರಂಗಿಕ ಮತ್ತು ಬಾಹ್ಯವಾಗಿ ಅಡಗಿರುವ ವಾಸ್ತವಾಂಶಗಳೆಂದರೆ ಸಮಕಾಲೀನ ಸಮಸ್ಯೆಗಳನ್ನು ಕುರಿತು ಈ ವಿಚಾರಗೋಷ್ಠಿಯಲ್ಲಿ ಚರ್ಚಿಸಲಾಗುತ್ತಿತ್ತು.

ಈ ಶಿವಾನುಭವ ಗೋಷ್ಠಿಗಳಲ್ಲಿ ಎಲ್ಲಾ ಜಾತಿಯ ಶಿವಶರಣರು ಹಾಗೂ ಶರಣೆಯರು ಸೇರಿ, ವಿಚಾರ-ವಿನಿಮಯಗಳನ್ನು ಮಾಡಿಕೊಳ್ಳುತ್ತಿದ್ದರು. ಈ ಗೋಷ್ಠಿಯಲ್ಲಿ ಸಮಾಜದ ಒರೆ-ಕೋರೆಗಳನ್ನು ಟೀಕಿಸಿ ಅದಕ್ಕೆ ಪರ್ಯಾಯವಾಗಿ ಹೇಗೆ ಬದುಕನ್ನು ಸೃಷ್ಟಿಸಬೇಕು ಎಂದು ಹೇಳುತ್ತಿದ್ದರು, ಅಂದಿನ ಸಮಸ್ಯೆಗಳ ಸಾಧಕ-ಭಾಧಕಗಳನ್ನು ತಿಳಿದು ಉತ್ತಮವಾದ ಸಮಾಜ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದರು. "ಕೆಲವು ಸಂದರ್ಭಗಳಲ್ಲಿ ಸಮಕಾಲೀನ ಸಾಮಾಜಿಕ, ಧಾರ್ಮಿಕ ಪರಿಸರಗಳ ಒತ್ತಡ ಮತ್ತು ಅಗತ್ಯಗಳು ಮಹಾಸಂಸ್ಥೆಯೊಂದರ ಸ್ಥಾಪನೆಗೆ ಕಾರಣವಾಗಬಲ್ಲುದು, ಪರಿಸರ ಎಂಥದೇ ಇರಲಿ ಅಗತ್ಯಗಳು ಏನೇ ಇರಲಿ ಅವುಗಳ ಬಗ್ಗೆ ನಿರಾಸಕ್ತರಾಗಿದ್ದು, ಪ್ರವಾಹದ ಗುಂಟತೆಯಲಿ ಹೋಗುವವರ ಸಂಖ್ಯೆಯೇ ಸಮಾಜದಲ್ಲಿ ಹೆಚ್ಚು, ಆದರೆ ಬಸವಣ್ಣನವರು ಅಂತಹ ಧಾತುವಿನಿಂದ ನಿರ್ಮಾಣಗೊಂಡ ವ್ಯಕ್ತಿಯಾಗಿರಲಿಲ್ಲ. ಮೂಲತಃ ಸಂವೇದನಾಶೀಲರಾದ ಬಸವಣ್ಣನವರಲ್ಲಿ ನ್ಯಾಯ, ನಿಷ್ಠುರತೆ, ವೈಚಾರಿಕತೆ, ನಿರ್ದಾಕ್ಷಿಣ್ಯ ಮನೋಭಾವ ಮತ್ತು ಪ್ರತಿಭಟನಾ ಗುಣಗಳು ರಕ್ತಗತವಾಗಿಯೇ ಬಂದುದಕ್ಕೆ ಅವರ ಜೀವನ ಚರಿತ್ರೆಯೇ ಸಾಕ್ಷಿಯಾಗಿದೆ. 'ಸಕಲ ಜೀವಾತ್ಮರಿಗೆ ಲೇಸನ್ನು' ಮಾಡುವ ಹಂಬಲವು ಅವರಲ್ಲಿ ತೀವ್ರತರವಾಗಿತ್ತು. ಅಂದಿನ ಪರಿಸರವನ್ನು ಸರಿಯಾಗಿ ಅಭ್ಯಸಿಸಿ ಅಂದಿನ ಸಮಾಜದ ಅಗತ್ಯಗಳನ್ನು ಅವರು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದರು, ಆ ಅಗತ್ಯಗಳ ಪೂರೈಕೆಗಾಗಿ ಆಗ ಹೇಳಬಹುದಾದ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾನ ಅಭಿಪ್ರಾಯದ ಸಮಾನ ಮನೋಧರ್ಮದ ವ್ಯಕ್ತಿಗಳ ಸಂಘಟನೆ ಅವಶ್ಯಕವೆಂದು ಅವರ ಅಂತರಂಗ ಒತ್ತಿ ಒತ್ತಿ ಹೇಳಬೇಕು. ."-8 ಇಂತಹ ಅದಮ್ಯ ಆಂತರಿಕ ಒತ್ತಡ ಕೂಡ ಅನುಭವ ಮಂಟಪದಂತಹ ವಿಶಾಲ ವ್ಯಾಪ್ತಿಯ ಸಂಸ್ಥೆಯೊಂದರ ಸ್ಥಾಪನೆಗೆ ಪ್ರೇರಣೆಯೊದಗಿಸಿರಬೇಕೆಂದು ಊಹಿಸಿದರೆ ತಪ್ಪಲಾಗಲಾರದು. ಇಂಥಹ ಸಂಕೀರ್ಣ

ಸ್ವರೂಪದ ವಿಚಾರಧಾರೆಯಿಂದ ಶಿವಶರಣರು ಕಲ್ಯಾಣಕ್ರಾಂತಿಯ ಸಾಂಸ್ಕೃತಿಕ ಸಂಘರ್ಷಕ್ಕೆ ಹೊಸ ಆಯಾಮವನ್ನೇ ಒದಗಿಸುತ್ತದೆ. ಇದರ ಪ್ರತಿಫಲವಾಗಿ ಹೊಸ ದೈನಂದಿನ ಬದುಕಿನ ಮೇಲೆ ಸಾಕಷ್ಟು ಪರಿಣಾಮಗಳುಂಟಾದವು. ಸಮಾಜದ ಬಳಕೆಯಲ್ಲಿರುವ ಗೋಚರ ಮತ್ತು ಅಗೋಚರ ವಸ್ತು ವಿಷಯಗಳನ್ನು ಪ್ರಶ್ನಿಸುವಂತಹ ವರ್ಗ ಸೃಷ್ಟಿಯಾಯಿತು. ಆ ವರ್ಗವು ತನ್ನದೇ ಆದ ವಿಭಿನ್ನ ಆಲೋಚನೆಗಳನ್ನು ಸೈದ್ಧಾಂತಿಕ ನಿಲುವುಗಳನ್ನು ಜಾರಿಗೆ ತಂದಿತು.

ಅಂದಿನ ಸಮಕಾಲೀನ ಬದುಕಿನ ಮೇಲೆ ಪ್ರಭಾವ ಬೀರುತ್ತಿದ್ದ ಧಾರ್ಮಿಕ ಸಿದ್ಧಾಂತಗಳು ರಾಜಕೀಯ ಸಿದ್ಧಾಂತಗಳು ವ್ಯವಸ್ಥೆಯ ಜೊತೆ ತಾತ್ವಿಕ ಹೊಂದಾಣಿಕೆಗಳಿಲ್ಲದೆ ಧರ್ಮಾಧರ್ಮಗಳೊಳಗೆ ಸಂಘರ್ಷಗಳು ಏರ್ಪಡುತ್ತಿದ್ದವು. ಇವುಗಳೆಲ್ಲದರ ಪರಿಣಾಮವಾಗಿ ವೈಯಕ್ತಿಕ ನೆಲೆಯಿಂದ ಪ್ರಾರಂಭಗೊಂಡು ಪ್ರಶ್ನಿಸುವಂತಹ ಸಾರ್ವತ್ರಿಕ ನೆಲೆಯನ್ನು ವಿಸ್ತರಿಸಿಕೊಂಡಿದ್ದರು. ಈ ತಾತ್ವಿಕ ನೆಲೆಗಳು ಅನುಭವದ ಅಭಿವ್ಯಕ್ತಿಗಳಾದ್ದವೇ ಹೊರತು ಬೂಟಾಟಿಕೆಯಲ್ಲ. ಪ್ರಗತಿಪರ ಮನಸ್ಸುಗಳು ನಮ್ಮ ವ್ಯಕ್ತಿಗತ ಕಲ್ಯಾಣದ ದೃಷ್ಟಿಯಿಂದ ವೈಚಾರಿಕ ಮತ್ತು ಮನೋವೈಜ್ಞಾನಿಕ ನೆಲೆಯಲ್ಲಿ ವಚನಗಳನ್ನು ಕಟ್ಟಿಕೊಡುತ್ತಾರೆ. ಈ ಸಂದರ್ಭಗಳಲ್ಲಿ ಶಿವಶರಣರು ಮತ್ತು ಶಿವಶರಣೆಯರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಸಾಂದರ್ಭಿಕ ಸನ್ನಿವೇಶದಲ್ಲಿ ಹುಟ್ಟುವ ಅನುಭವದ ವಚನಗಳು ತಮ್ಮ ಅಂತರಂಗದಲ್ಲಿ ಸಾಂದರ್ಭಿಕ ಮತ್ತು ಸ್ಫೋಟಕ ಗುಣಗಳನ್ನು ಹೊಂದಿದೆ. ಈ ಎಲ್ಲಾ ವಿಚಾರಗಳನ್ನು ಅನುಭವ ಮಂಟಪದ ಸೈದ್ಧಾಂತಿಕ ನೆಲೆಗಳಲ್ಲಿ ಕಾಣಬಹುದು.

7.1 ಮನೋವೈಜ್ಞಾನಿಕ ಮತ್ತು ಬಂಡಾಯದ ಧ್ವನಿಗಳು :

ವಚನಗಳಲ್ಲಿ ಮನೋವೈಜ್ಞಾನಿಕ ಮತ್ತು ಬಂಡಾಯದ ಅಂಶಗಳು ಹೆಚ್ಚಾಗಿ ಕಾಣಸಿಗುತ್ತದೆ. ಅಂದರೆ ವಚನಕಾರರ ಮನೋಭಾವನೆಗಳನ್ನು (ವರ್ತನೆಗಳನ್ನು) ತಮ್ಮ ವಚನಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಇಂತಹ ಮನೋಭಾವನೆಗಳೇ ವಚನಕಾರರಲ್ಲಿನ ಮನೋವೈಜ್ಞಾನಿಕ ಅಂಶಗಳಾಗಿದೆ. ವೃತ್ತಿ ಧರ್ಮಗಳ ಪ್ರತಿನಿಧಿತ್ವ ಹೊಂದಿದ್ದು, ತಮ್ಮ ವೃತ್ತಿ ಧರ್ಮಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ದೃಷ್ಟಯಿಂದ ವಚನಗಳ ಮೂಲಕ ತಮ್ಮ ಬಂಡಾಯವನ್ನು ಸಾರಿದ್ದಾರೆ. ಇವರ ವಚನಗಳನ್ನು ಮನೋವೈಜ್ಞಾನಿಕ ದೃಷ್ಟಯಿಂದ ನೋಡಿದರೆ,

ನಾನು, ನನ್ನ ಜಾತಿ, ನನ್ನ ಸಮುದಾಯ, ನನ್ನ ವೃತ್ತಿ ಧರ್ಮ, ನನ್ನ ಸಾಮಾಜಿಕ ಹಿತಚಿಂತನೆ ಮತ್ತು ಸಮಾಜದ ಸಹಭಾಗಿತ್ವವು ಸಮಾಜದ ಸುಧಾರಣೆಗೆ ಕಾರಣವೆಂದು ತಿಳಿಯುತ್ತಾರೆ. ಇಂತಹ ಮನೋಭಾವವು ಪ್ರತಿಯೊಬ್ಬ ಶರಣರು, ತಾನು ಅವಲಂಬಿತವಾಗಿರುವರೆಂದು ಅಭಿವ್ಯಕ್ತಗೊಳ್ಳುತ್ತದೆ. ಅಂದರೆ

" ಉಳ್ಳವರು ಶಿವಾಲಯವ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶರ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ.
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ." -9

ಎಂಬುದರ ಮೂಲಕ ತಮ್ಮ ಅಸಹಾಯಕತೆಯ ಮನೋಭಾವವನ್ನು ಸಾಮಾಜಿಕ ಪರಿವರ್ತನೆಗೆ ಅಸಾಧ್ಯವಾದ ಸಂದರ್ಭದಲ್ಲಿ ಅಂದರೆ ಬಂಡಾಯವನ್ನು ಎದುರಿಸಲಾಗದ ಸಂದರ್ಭದಲ್ಲಿ ಹೇಳಿರುವ ವಚನವಾಗಿದೆ, ಹಾಗೆಯೇ ಮನೋ-ಸಾಮಾಜಿಕ ಅಂಶಗಳಾಗಿವೆ.

" ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ."-10 ಎಂಬ ವಚನದ ಮೂಲಕ ತಮ್ಮ ಬಂಡಾಯದ ನಿಲುವನ್ನು ಸಡಿಲಿಸಿರುವುದು, ಅಂದರೆ ತಮ್ಮ ಮನೋ-ವೈಜ್ಞಾನಿಕ ಮನೋಭಾವವನ್ನು ಬದಲಿಸಿ, ತಮ್ಮ ಬಂಡಾಯವಿದ್ದ ಅಂಶವನ್ನು ಅಭಿವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಸಮುದಾಯಗಳೊಂದಿಗೆ ಬದುಕುವ ಮನುಷ್ಯ ಜೀವಿತಾವಧಿಯಲ್ಲಿ ಅನೇಕ ಏರುಪೇರುಗಳನ್ನು ಕಾಣುತ್ತಾನೆ. ಕೆಲವೊಂದು ಕಾಲಘಟ್ಟಗಳ ನೆಲೆಯಲ್ಲಿ ಸಾಂಸ್ಕೃತಿಕ ಬಿಕ್ಕಟ್ಟಿನಿಂದ ಉಂಟಾಗುವ ಪರಿಣಾಮಗಳು ವ್ಯಕ್ತಿಗತವಾಗಿರುವ ಮಾನಸಿಕ ಸ್ಥಿತಿಗತಿಗಳನ್ನು ಬದಲಾವಣೆಗೆ ಒಳಪಡಿಸುತ್ತದೆ. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಪ್ರಗತಿಶೀಲ ಮನಸ್ಸುಗಳು ಮತ್ತು ಪ್ರಗತಿಗೆ ಪ್ರತಿಗಾಮಿಯಾಗಿರುವ ವಿರೋಧ ಮುಖ ಮನಸ್ಸುಗಳೊಂದಿಗೆ ಹೊಂದಾಣಿಕೆ ಆಗದೇ ವರ್ಗಸೃಷ್ಟಿಯಾಗುತ್ತದೆ. ಅಕ್ಷರಸ್ಥ ಸಮುದಾಯವು ಸಂಧಿಗ್ಧ ಕಾಲಘಟ್ಟಗಳಲ್ಲಿ ತಾತ್ವಿಕ ಘರ್ಷಣೆಯಿಂದ ಉಂಟಾಗುವ ಜೀವನದ ಕ್ರಮದಲ್ಲಿನ ಏರು-ಪೇರುಗಳನ್ನು ಸರಿದೂಗಿಸಲು ವೈಜ್ಞಾನಿಕ ಹಾದಿಯನ್ನು ತುಳಿಯಬೇಕಾದ ಅನಿವಾರ್ಯತೆ ವ್ಯಕ್ತಿಗತವಾಗಿ ಮನೆ ಮಾಡುತ್ತದೆ. ಸಂಕ್ರಮಣದ ಕಾಲದ ಸ್ಥಿತಿಯಲ್ಲಿ ಮನುಷ್ಯನ ಜೀವನದ ಕ್ರಮವು ಬದಲಾಗುತ್ತಾ ಹೋದಂತೆ ಬಲಹೀನ ಮತ್ತು ಪ್ರಬಲರ ನಡುವೆ ಸ್ಪರ್ಧಾತ್ಮಕ ಪೈಪೋಟಿ ಏರ್ಪಟ್ಟು ಸಾಮಾಜಿಕ ಬದುಕಿನಲ್ಲಿ ಬಂಡಾಯದ ಧ್ವನಿಗಳು ಹುಟ್ಟುತ್ತವೆ. ಈ ಎಲ್ಲಾ ಅಂಶಗಳು ಪ್ರಯೋಗಾತ್ಮವಾಗಿ ಪ್ರಾರಂಭಗೊಳ್ಳುವುದರಿಂದ ಮನೋ ವೈಜ್ಞಾನಿಕ ನೆಲೆಯಲ್ಲಿ ಬಂಡಾಯದ ನೆಲೆಯಲ್ಲಿ ಕೆಲಸ ನಿರ್ವಹಿಸುತ್ತದೆ. ಮಾನಸಿಕ ವಿಶ್ಲೇಷಣೆಗೆ ಶಿವಶರಣರ ವಚನಗಳನ್ನು ಒಳಪಡಿಸುತ್ತಾ ಅವುಗಳ ಅಂತರಂಗದ ಪ್ರಯತ್ನವನ್ನು ಪ್ರಯೋಗಶೀಲಗುಣವನ್ನು ತಿಳಿಯಬಹುದು.

ಶಿವಶರಣೆಯರು ಕ್ರಾಂತಿಕಾರಕ ಬಂಡಾಯದ ಧ್ವನಿಗಳನ್ನು ವ್ಯವಸ್ಥೆ ವಿರುದ್ಧ ಏಕೆ ಬಳಸುತ್ತಾರೆಂಬುದನ್ನು ಗುರುತಿಸಬಹುದು. ವಚನಗಳಲ್ಲಿನ ಬಂಡಾಯದ ಧ್ವನಿಗಳಿಗೆ ತಾತ್ವಿಕ ನೆಲೆಗಳು ಅನಿವಾರ್ಯವಾಗಬೇಕಾಗುತ್ತದೆ. ಯಾವುದೇ ಸಾಹಿತ್ಯ ಚಳುವಳಿ ಅಥವಾ ಸಮಾಜಮುಖಿ ಕ್ರಾಂತಿಗಳು ಹುಟ್ಟಲು ಹಲವು ಸೈದ್ಧಾಂತಿಕ ಕುರುಹುಗಳನ್ನು ಸ್ಪಷ್ಟಿಸಬೇಕಾಗುತ್ತದೆ. ಈ ಗುರುತುಗಳು ತಮ್ಮ ಅಸ್ತಿತ್ವವನ್ನು ಬಲಗೊಳಿಸುತ್ತದೆ. ಇಂತಹ ತಾತ್ವಿಕ ಧ್ವನಿಗಳನ್ನು ನಿರ್ಧರಿಸಲು ಕೆಲವು ವೈಚಾರಿಕವಾಗಿ ಪ್ರಯೋಗಿಸಲ್ಪಟ್ಟ ಬಂಡಾಯ ಧ್ವನಿಗಳನ್ನು ಗುರುತಿಸಬಹುದು. ಇವುಗಳ ಪರಿಣಾಮವಾಗಿ ಸಾಮಾಜಿಕ ಹಾಗೂ ಸಂಸ್ಕೃತಿಯ ವ್ಯವಸ್ಥೆಯ ಮೇಲೆ ಅನೇಕ ಬದಲಾವಣೆ ಉಂಟಾದವು. ಇಂತಹ ಅಕ್ರಮಣಕಾರಿಯಾದ ಬಂಡಾಯದ ಧ್ವನಿಗಳು ಎಂತಹ ಬಗೆಯವೋ ಎಂಬುದನ್ನು ಅಧ್ಯಯನ ದೃಷ್ಟಿಯಿಂದ ಆಲೋಚಿಸಿದರೆ ವಿಭಾಗಿಸುವುದು ಕಷ್ಟ ಸಾಧ್ಯ ಆಗಬಹುದು. ಸಾಂಸ್ಕೃತಿಕ ದೃಷ್ಟಿಯಿಂದ ಧ್ವನಿಗಳನ್ನು ವಿಭಿನ್ನವಾದ ನೆಲೆಗಳನ್ನು ಆಲೋಚಿಸಿ ಈ ರೀತಿ ಹೇಳಬಹುದು.

1) ಚಲನಶೀಲ ಧ್ವನಿ

2) ಸ್ಥಗಿತ ಧ್ವನಿ

ಈ ಎರಡು ವಿಭಾಗಗಳು ಪ್ರಧಾನವಾಗಿ ಕಲ್ಯಾಣಕ್ರಾಂತಿಯ ರೂಪುರೇಷೆಗಳನ್ನು ತೆರೆಯುತ್ತವೆ. ಕಲ್ಯಾಣಕ್ರಾಂತಿಯ ಸಮಯದಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಸ್ತ್ರೀಪರವಾದ ಕಾಳಜಿಗಳು, ವೃತ್ತಿ ಕೇಂದ್ರಿತವಾದ ಆಲೋಚನೆಗಳು ಹುಟ್ಟಿಕೊಂಡವು. ಇವುಗಳಿಂದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಹಿತ್ಯಿಕ ಎಲ್ಲಾ ಸಮಗ್ರ ಸಾಮಾಜಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದವು.

ಕಲ್ಯಾಣಕ್ರಾಂತಿಯ ಪೂರ್ವದಲ್ಲಿ ಇದ್ದಂತಹ ಜಡ್ಡುಗಟ್ಟಿದ ಸನಾತನ ಸಮಾಜದಲ್ಲಿ, ಸಾಮಾಜಿಕ ಜನಜೀವನದಲ್ಲಿ ವರ್ಗ ತಾರತಮ್ಯಗಳು ತಾರಕಕ್ಕೇರಿದವು. ಪ್ರಕೃತಿಯ ದೃಷ್ಟಿಯಲ್ಲಿ ಎಲ್ಲವೂ ಒಂದೆಂಬ ಭಾವನೆಗಳು ಇದ್ದರೂ ಮಾನವನ ಅನುಕೂಲತೆಯ ದೃಷ್ಟಿಯಿಂದ ವರ್ಗ ತಾರತಮ್ಯ ಉಂಟಾಗುತ್ತದೆ. ಹೀಗೆ ಉಂಟಾದ ವರ್ಗಗಳಲ್ಲಿ ಜಾತಿ, ಜನಾಂಗ ಕುಲಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವು ಮೊದಲು ವೃತ್ತಿಕೇಂದ್ರಿತವಾಗಿದ್ದವು. ಇವು ಕ್ರಾಂತಿಯ ಸಮಯ ಸಂಭವಿಸುವುದಕ್ಕೆ ಮುಂಚೆ ವರ್ಗ ಭೇಧಗಳು ಹುಟ್ಟಿಕೊಳ್ಳಲು ಕಾರಣವಾಗಿದ್ದವು. ಕ್ರಾಂತಿಯ ನಂತರದಲ್ಲಿ ವೃತ್ತಿಪರವಾದ ಆಲೋಚನೆಗಳು ಸಾಂಸ್ಕೃತಿಕ ಬಂಡಾಯವನ್ನು ಸಾರುತ್ತವೆ.

ಅಂದಿನ ಕಾಲದಲ್ಲಿದ್ದ ಜಾತಿ ಪದ್ಧತಿ, ಸಾಮಾಜಿಕ ಅಂತರ, ಸಾಮಾಜಿಕ ಅಸಮತೋಲನ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅಡೆತಡೆಗಳನ್ನು ಅನೇಕ ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದರು. ಅನೇಕ ವಚನಕಾರರು ಸಾಮಾಜಿಕ ಅಸಮತೋಲನಗಳ ವಿರುದ್ಧ ಬಂಡಾಯವನ್ನು ತಮ್ಮ ವಚನಗಳ ಮೂಲಕ, ಅಂದರೆ ವ್ಯವಸ್ಥೆಯ ಕ್ರೂರತನದ ಬಗ್ಗೆ ತಮ್ಮದೇ ಆದ ದಾರಿಯಲ್ಲಿ ಜನ ಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ವ್ಯಕ್ತಪಡಿಸಿದರು. ಇಂತಹ ಸಾಮಾಜಿಕ ಅಸಮಾನತೆಯ ವಿರುದ್ಧ ಬುಗಿಲೆದ್ದ ವಚನಕಾರರಿಗೆ, ವಚನಗಾರ್ತಿಯರೂ ಸಹ ಅವರ ಮನೋಭಾವದ ಅಭಿವ್ಯಕ್ತಕ್ಕೆ ತಲೆಬಾಗಿ, ತಮ್ಮ ವಚನಗಳಲ್ಲಿಯೇ ಅನೇಕ ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಚಾರಧಾರೆಗಳಲ್ಲಿ ಬೆಂಬಲಿಸುವುದರ ಮೂಲಕ ಬಸವಣ್ಣನವರ ಮೋಕ್ಷ ಪ್ರಾಪ್ತಿಗೆ

'ಕಾಯಕವೇ ಕೈಲಾಸ' ಎಂಬ ನೀತಿಯ ಮೂಲಕ ಅಭಿವ್ಯಕ್ತಗೊಳಿಸಿದರು, ಅಂದರೆ ಮನುಷ್ಯ ತನ್ನ ಮೋಕ್ಷ ಪ್ರಾಪ್ತಿಗೆ ಕೇವಲ ಧಾರ್ಮಿಕ ಆಚಾರ-ವಿಚಾರಗಳಿಂದ ಸಾಧ್ಯವೆಂಬ ನಂಬಿಕೆಯಿಟ್ಟಿದ್ದ ಉನ್ನತ ವರ್ಗವು ಇದರಿಂದ ಸಮಾಜದಲ್ಲಿ ಬದಲಾವಣೆಯ ಅಲೆಯು ತೇಲಿ ಬಂದು ಸಮಾಜದ ಸಾಮಾಜಿಕ ಅಂತರದಲ್ಲಿ ಬದಲಾವಣೆಗಳು ಉಂಟಾದವು. ಸಾಮಾನ್ಯನನ್ನು ಅಸ್ಪೃಶ್ಯತೆ ಮತ್ತು ಮೂಢನಂಬಿಕೆಗಳು ಸಾಮಾಜಿಕ ವ್ಯವಸ್ಥೆಯಿಂದ ದೂರವಿಟ್ಟಿದ್ದುದರಿಂದ ನಮಗೂ ಮುಕ್ತಿ ಸಾಧ್ಯವೆಂಬ ಮನೋ-ಸಾಮಾಜಿಕ ಅಂಶವನ್ನು ಮನಗೊಂಡು, ಸಾಮಾಜಿಕ ಅಂತರದಲ್ಲಿ ಮಹತ್ವದ ಕ್ರಾಂತಿಯನ್ನು ಉಂಟುಮಾಡಿತು. ವಚನಕಾರರಲ್ಲಿ ಎಲ್ಲಾ ವರ್ಗದ ವಚನಕಾರರು ಉನ್ನತ ವರ್ಗದ ವಿರುದ್ಧ ಬಂಡಾಯವೇಳಲು ಪ್ರಮುಖವಾಗಿ ಕಾರಣವಾಯಿತು. ಸಾಮಾಜಿಕ ಅಂತರ, ಸಾಮಾಜಿಕ ಶೋಷಣೆಯಿಂದ ನಲುಗಿದ್ದ ಜನರು ತಮ್ಮ ಮನೋವೈಜ್ಞಾನಿಕ ನೆಲೆಗಟ್ಟನ್ನು ಕಂಡುಕೊಂಡರು.

"ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯಾ?
ಹೊಲೆಯ ಹೊರಕೇರಿಯಲ್ಲಿರುವನು,
ಊರೊಳಗಿಲ್ಲವೆ ಅಯ್ಯಾ, ಹೊಲೆಯರು?
ತಾಯಿಗೆ ಬೈದವನೇ ಹೊಲೆಯ,
ತಂದಗೆ ಉತ್ತರ ಕೊಟ್ಟವನೇ ಹೊಲೆಯ,
ತಂದೆಗೆ ಬೈದವನೇ ಹೊಲೆಯ
ಕೊಡುವ ದಾನಕ್ಕೆ ಅಡ್ಡ ಬಂದವನೇ ಹೊಲೆಯ,
ನಡೆವ ದಾರಿಗೆ ಮುಳ್ಳು ಹಚ್ಚಿದವನೇ ಹೊಲೆಯ,
ಬ್ರಾಹ್ಮಣನ ಕುತ್ತಿಗೆಯ ಕೊಯ್ದವನೇ ಹೊಲೆಯ,
ಹತ್ತು ಹಾಡಿದರೆ ಒಂದು ನಿಜವಿಲ್ಲದವನೇ ಹೊಲೆಯ,
ಚಿತ್ತದಲ್ಲಿ ಪರಸತಿಯ ಬಯಸಿದವನೇ ಹೊಲೆಯ,
ಲಿಂಗಮುದ್ರೆಯ ಕಿತ್ತಿದವನೇ ಹೊಲೆಯ,
ಲಿಂಗವ ಬಿಟ್ಟು ತಿರುಗುವವನೇ ಹೊಲೆಯ,
ಧರ್ಮವ ಮಾಡದವನೇ ಹೊಲೆಯ,
ಬಸವನ ಕೊಂದವನೇ ಹೊಲೆಯ,
ಬಸವನ ಇರಿದವನೇ ಹೊಲೆಯ,

ಲಿಂಗಪೂಜೆಯ ಮಾಡದವನೇ ಹೊಲೆಯ,
ಒಂತಪ್ಪ ಹೊಲೆಯರು ಊರತುಂಬ ಇರಲಾಗಿ
ಹೊರಕೇರಿಯವರಿಗೆ ಹೊಲೆಯರೆನಬಹುದೆ?

ಜಗಳ ಬಂದಾಗ ನನ್ನ ಕುಲ ಹೆಚ್ಚು, ನಿನ್ನ ಕುಲ ಹೆಚ್ಚು ಕಡಿಮೆ
ಎಂದು ಬಡಿದಾಡುವ ಕುನ್ನಿ ನಾಯಿಗಳ ಮೋರೆ ಮೋರೆಯ ಮೇಲೆ
ನಮ್ಮ ಪಡಿಹಾರಿ ಉತ್ತಣ್ಣಗಳ ವಾಮಪಾದುಕೆಯ ಕೊಂಡು
ಅವರ ಅಂಗುಳ ಮೆಟ್ಟಿ ಫಡಫಡನೆ ಹೊಡಿ ಎಂದಾತ
ನಮ್ಮ ದಿಟ್ಟ ಅಂಬಿಗರ ಚೌಡಯ್ಯ ನಿಜಶರಣನು." -11

ಈ ಮಾತನ್ನು ಅಂಬಿಗರ ಚೌಡಯ್ಯನ ವಚನವು ಪುಷ್ಟೀಕರಿಸುತ್ತದೆ. ಅದರ ವಿರುದ್ಧ ಬಂಡೆದ್ದು ಒಂದು ಸಾಮಾಜಿಕ ಅಂತರದ ಹಿತರಕ್ಷಣೆಯ ಕಾಯಕಕ್ಕೆ ನಾಂದಿ ಹಾಡಿದರು. ಇದರ ಫಲವಾಗಿ ಸಾಮಾಜಿಕ ಅನಿಷ್ಟ ಪದ್ಧತಿಗಳು ಕಾಲಕ್ರಮೇಣ ನಶಿಸುತ್ತಾ ಸಾಮಾಜಿಕ ಅಂತರ ಕಡಿಮೆಯಾಗುತ್ತಾ, ಒಂದು ಉತ್ತಮ ಸಮಾಜದ ನವ ನಿರ್ಮಾಣಕ್ಕೆ ಕಾರಣವಾಗಿದೆ. ಬಸವಣ್ಣನವರ ವಚನಗಳು ಇದನ್ನು ಸ್ಪಷ್ಟೀಕರಿಸುತ್ತದೆ.

" ನೆಲ ಒಂದೇ ಹೊಲಗೇರಿ ಶಿವಾಲಯಕ್ಕೆ
ಜಲವೊಂದೇ ಶೌಚ ಮಜ್ಜನಕ್ಕೆ
ಕುಲವೊಂದೇ ತನ್ನ ತಾ ಅರಿವಂಗೇ,
ಫಲವೊಂದೇ ಷಡುದರ್ಶನ ಮುಕ್ತಿಗೆ
ನಿಲುವೊಂದೇ ಕೂಡಲಸಂಗಮದೇವ ನಿಮ್ಮನರಿದವಂಗೆ." -12

ನೈಸರ್ಗಿಕ ದೃಷ್ಟಿಕೋನದಿಂದ ಸರ್ವರೂ ಸಮಾನರು ಎಂಬ ಪರಿಕಲ್ಪನೆಯನ್ನು ಹೇಳುತ್ತದೆ. ಯಾವ ಸ್ಥಳದಲ್ಲಿಯಾದರೂ ಪವಿತ್ರ ಶಿವಾಲಯವಿದ್ದರೂ, ಅದುಕೂಡ ನೆಲದ

ಮೇಲೆಯೇ ನಿರ್ಮಿತವಾಗಿದೆ. ಸರ್ವರಿಗೂ ಭೇಧವನ್ನೆಣಿಸದೇ ನೆಲೆಯನ್ನು ಒದಗಿಸಿರುವ ವಿಚಾರವನ್ನು ಪ್ರಸ್ತಾಪಿಸುತ್ತದೆ. ಹಾಗೆಯೇ ನಮ್ಮ ಮಾನಸಿಕವಾದ ಮಡಿಮೈಲಿಗೆಗಳು ಬದಲಾಗಬೇಕೆಂಬುದು ಬಸವಣ್ಣನವರ ಆಶಯವಾಗಿದೆ. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಜನಸಾಮಾನ್ಯರ ಬದುಕಿನ ಪರಿವರ್ತನೆಗೆ ಇಂತಹ ಅಂಶಗಳು ದಾರಿ ಮಾಡಿಕೊಟ್ಟವು. ಕ್ರಾಂತಿಯ ಸಂದರ್ಭದಲ್ಲಿ ಜ್ಞಾನದ ಪ್ರವಾಹ ಹೆಚ್ಚಿದುದರಿಂದ ಹಾಗೂ ಶೋಷಿತ ಸಮುದಾಯದ ವ್ಯಕ್ತಿಯು ವಿದ್ಯೆ ಕಲಿಯಲು ಪ್ರಾರಂಭಿಸಿದ ಅದರ ಪ್ರತಿಫಲದ ರೂಪವಾಗಿ ಜ್ಞಾನದ ವಿಕಾಸಶೀಲ ಗುಣಗಳು ಹೊರಹೊಮ್ಮುತ್ತವೆ. ಇದರಿಂದ ಅಂದಿನ ಕಾಲದ ಮನಸ್ಸುಗಳು ತಮ್ಮ ಬದುಕಿನ ಜೊತೆಗೆ ಅನುಸಂಧಾನ ಮಾರ್ಗವನ್ನು ಅನುಸರಿಸುತ್ತವೆ. ಇಂತಹ ಕೊಡುಕೊಳ್ಳುವಿಕೆಯ ಸಂಸ್ಕೃತಿಯಿಂದ ಮಾನವನ ಭೌತಿಕ ಮಟ್ಟ ವೈಜ್ಞಾನಿಕವಾಗಿ ಬೆಳವಣಿಗೆಯಾಗುತ್ತವೆ. ಇದರಿಂದ ಪ್ರೇರೇಪಿತವಾದ ಜನಸಮುದಾಯ ಸಾಂಸ್ಕೃತಿಕ ಆಲೋಚನಾ ಕ್ರಮವನ್ನು ಬದಲಿಸುತ್ತದೆ. ಇದರ ಪರಿಣಾಮವಾಗಿ ಬದಲಾದ ಜೀವನದ ಹಿನ್ನಲೆಯಲ್ಲಿ ವ್ಯವಸ್ಥೆಯನ್ನು ಪ್ರಶ್ನಿಸುವ ಅದಕ್ಕೆ ಪ್ರತಿಯಾಗಿ ಆಲೋಚಿಸುವ ಮಟ್ಟಕ್ಕೆ ಅಂದಿನ ಜನಸಮುದಾಯದ ಮನಃಸ್ಥಿತಿಗಳು ಬದಲಾದವು, ಇವುಗಳ ಅನುಭವಗಳ ಹಿನ್ನಲೆಯೇ ಮನೋವೈಜ್ಞಾನಿಕ ದೃಷ್ಟಿಯಿಂದ ನೋಡಬಹುದು. ಈ ವಚನವು ಎಲ್ಲರೊಂದಿಗೆ ಹೇಗೆ ಬಾಳುವೆ ನಡೆಸಬೇಕೆಂಬ ಅರಿವಿನ ಸಮಾನತೆಯ ಧ್ವನಿಯನ್ನು ಗುರುತಿದುತ್ತದೆ.

"ತನುವೆಂಬ ಹುತ್ತದಲ್ಲಿ ಮನವೆಂಬ ಸರ್ಪ ಹೆಡೆಯನುಡುಗಿಕೊಂಡಿರಲು
ಜ್ಞಾನಶಕ್ತಿ ಒಂದು ಎಬ್ಬಿಸಲು.
ಉರಿಭುಗಿಲೆನುತ್ತ ಹೆಡೆಯನೆತ್ತಿ ವಾರ್ಧ್ವಾಕ್ಕೇರಲಿ
ಅಷ್ಟಮದವೆಲ್ಲಿ ಹಿಟ್ಟುಗುಟ್ಟಿದವು, ಕರಣಂಗಳೆಲ್ಲ ಉರಿದುಹೋದವು.
ಇದ್ದ ಶಕ್ತಿಯನ ಕಂಡು, ಮನ ನಿಶ್ಚಯವಾದುದನೆ ನೋಡಿ,
ಪಶ್ಚಿಮದ ಕದವ ತೆಗೆದು ಬಟ್ಟಬಯಲು ಬೆಳಗಿನೊಳಗೆ ಓಲಾಡಿ
ಸುಖಿಯಾದೆನಯ್ಯಾ ಅಪ್ಪಣ್ಣಪ್ರಿಯ ಚನ್ನಬಸವಣ್ಣ"–13

ಈ ವಚನವು ಜ್ಞಾನದ ಕ್ರಿಯೆಯಿಂದ ಮನದಲ್ಲಿ ಉಂಟಾಗುವ ಬದಲಾವಣೆಯನ್ನು ಸೂಚಿಸುತ್ತದೆ. ಜ್ಞಾನಶಕ್ತಿಯ ಸ್ಫೋಟಕ ವಾತಾವರಣದಲ್ಲಿ ಅಂತರಂಗದಲ್ಲಿ ಆದಂತಹ

ಬದಲಾವಣೆಗಳನ್ನು ಹೇಳುತ್ತದೆ. ಇದು ಶರಣರ ಆಧ್ಯಾತ್ಮಿಕ ಬಂಡಾಯ ಮನೋಧರ್ಮವನ್ನು ಸೂಚಿಸುತ್ತದೆ.

" ಜನನಮರಣ ದೇಹಧರ್ಮವಲ್ಲದೇ ಜಂಗಮಕೆಲ್ಲಿವುದೋ
ಕ್ಷುದೆ-ತೃಷೆ ಪ್ರಾಣಧರ್ಮವಲ್ಲದೇ ಜಂಗಮಕ್ಕೆಲ್ಲಿವುದೋ
ಸುಖ-ದುಃಖ ಮನೋ ಧರ್ಮವಲ್ಲದೆ ಜಂಗಮಕ್ಕೆಲ್ಲಿವುದೋ
ಜ್ಞಾನ-ಜ್ಞಾನಂಗಳು ವಿಮುಕ್ಷುವಿಗಲ್ಲದೇ ನಿಮ್ಮಲ್ಲಿ ಸಮರಸವಾದ
ಸಚ್ಚದಾನಂದ ಶಿವಯೋಗಿ ಜಂಗಮಕ್ಕೆಲ್ಲಿವುದೋ ಸಚ್ಚಿದಾನಂದ
ಶಿವಯೋಗಿ ಜಂಗಮಕ್ಕೆಲ್ಲಿವನೋ ಕಪಿಲಸಿದ್ಧ ಮಲ್ಲಿಕಾರ್ಜುನ."-14

ಸಿದ್ಧರಾಮರ ಈ ವಚನವು ದೈಹಿಕ ಸಾಮರ್ಥ್ಯ ಮತ್ತು ಯಾವಾಗಲೂ ಕ್ರಿಯಾಶೀಲವಾಗಿರುವ ಜಂಗಮ ಸ್ಥಿತಿಗಳ ನಡುವೆ ಇರುವ ಮನೋ ವೈಜ್ಞಾನಿಕ ಆಂತರ್ಯವನ್ನು ತಿಳಿಸುತ್ತದೆ. ಇಲ್ಲಿ ಸವೆದು ಹೋಗುವ ತಾತ್ಕಾಲಿಕವಾದ ದೇಹದ ಬಗ್ಗೆ ಯಾವಾಗಲೂ ಚಲನಶೀಲವಾಗಿರುವ ಶಿವಯೋಗಿಯ ಜಂಗಮ ತತ್ವದ ಬಗ್ಗೆ ಸಾಮರಸ್ಯ ಭಾವನೆ ತತ್ವವನ್ನು ತಿಳಿಸಲಾಗುತ್ತದೆ. ಇದರಿಂದ ತಿಳಿದ ಅಂಶವೆಂದರೆ ವೈಜ್ಞಾನಿಕವಾಗಿ ಆಲೋಚಿಸಿದಾಗ ಕ್ರಿಯಾಶೀಲಗುಣವುಳ್ಳ ಬದುಕನ್ನು ಆರಿಸಿಕೊಳ್ಳಬೇಕು ಎಂಬ ವಿಚಾರಧಾರೆಯನ್ನು ಹೇಳುತ್ತಾರೆ.

" ಎಮಗೊಂದು ಚಿಂತೆ, ಸಮ್ಮಗಾರಗೊಂದು ಚಿಂತೆ
ಧರ್ಮಗೊಂದು ಚಿಂತೆ, ಕರ್ಮಿಗೊಂದು ಚಿಂತೆ
ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ
ಒಲ್ಲೆ ಹೋಗು, ಸೆರಗ ಬಿಡು ಮರುಳೆ.
ಎನಗೆ ಚೆನ್ನಮಲ್ಲಿಕಾರ್ಜುನದೇವರು
ಒಲಿವರೋ, ಒಲಿಯರೋ ಎಂಬ ಚಿಂತೆ."-15

ಮಹಾದೇವಿ ಅಕ್ಕ ಹೇಳಿರುವ ವಚನವು ಮನುಷ್ಯನಿಗೆ ಬರುವ ಸಮಸ್ಯೆಗಳ ಚಿಂತೆಯು ಒಬ್ಬೊಬ್ಬರಲ್ಲಿ ಒಂದೊಂದು ತೆರನಾಗಿರುತ್ತದೆಂಬ ಅಂಶವನ್ನು ಗುರುತಿಸುತ್ತಾಳೆ. ಈ

ವಚನವು ಮನೋವೈಜ್ಞಾನಿಕ ವಿಧಾನದಲ್ಲಿನ ಋಣಾತ್ಮಕ ಗುಣಗಳ ಒಂದು ಲಕ್ಷಣವಾಗಿದೆ. ಚಿಂತೆಯೊಂದು ಆಯಾ ವ್ಯಕ್ತಿಗತವಾದ ಮನಃಸ್ಥಿತಿಗೆ ಸೇರಿದ್ದು, ವಿವೇಚನೆಯಿಲ್ಲದ ಚಿಂತೆಯಿದ್ದಾಗ ಜೀವನದಲ್ಲಿ ಸಾರ್ಥಕತೆಯನ್ನು ಪಡೆಯುವುದಿಲ್ಲ. ಆದ್ದರಿಂದ ಚಿಂತೆಯನ್ನು ಮಾಡಬೇಕಾದರೆ ಅದು ನಮ್ಮ ಜೀವನದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆಂಬುದನ್ನು ಅರಿಯಬೇಕು. ಈ ವಚನಗಳ ಆಂತರ್ಯಗಳ ನಡುವೆ ವ್ಯಕ್ತಿಯ ಅಂತರಾಳದ ಮಾನಸಿಕ ಧ್ವನಿಯನ್ನು ವಿಶ್ಲೇಷಿಸುತ್ತದೆ. ಇದು ಸಾಂಸಾರಿಕ ಧ್ವನಿಯನ್ನು ಚಿತ್ರಿಸುತ್ತದೆ. ಮನೋವಿಜ್ಞಾನ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ಅಲ್ಲಮನ ವಚನವು ಈ ಕೆಳಕಂಡ ರೀತಿಯಲ್ಲಿ ಹೇಳುತ್ತದೆ.

" ಕಲ್ಲೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ, ಶಬ್ಧದೊಳಗಿನ ನಿಶ್ಯಬ್ಧದಂತೆ
ಗುಹೇಶ್ವರಾ ನಿಮ್ಮ ಶರಣರ ಸಂಬಂಧ."
(ಗೂಳೂರು ಶೂನ್ಯ ಸಂಪಾದನೆ ಸಂಪುಟ1, ಪುಟ6, ವಚನ 1)

ಬೆಂಕಿ ಕಲ್ಲಿನ ಒಡಲಲ್ಲೇ ಇದ್ದರೂ, ಅದು ಕಲ್ಲನೆಂದೂ ಸುಡದು, ಪ್ರತಿಯಾಗಿ ಕಲ್ಲು ಬೆಂಕಿಯನ್ನೂ ನಂದಿಸದು. ನೀರೊಡಲಲ್ಲಿದ ವಸ್ತುವಿನ ಪ್ರತಿಬಿಂಬದಿಂದ ನೀರಿಗೆ ನೋವಾಗದು ಅಥವಾ ಪ್ರತಿಬಿಂಬ ನೀರಿನೊಡಲಿಗೆ ನೋವು ಮಾಡದು. ಅದರಂತೆ ಬೀಜದೊಳಗೆ ಬೃಹತ್ ವೃಕ್ಷ ಅಡಗಿರುವ ಪರಿ, ಮತ್ತೇ ಅದೇ ವೃಕ್ಷದೊಳಗೆ ಬೀಜ ಬೆಳೆಯುವ ರೀತಿ, ಇವೆರಡರ ಪರಸ್ಪರ ಅಸ್ತಿತ್ವವನ್ನು ಅಲ್ಲಗಳೆಯಲಿಕ್ಕಾಗದು, ಶಬ್ಧದೊಳಗೆ ನಿಶ್ಯಬ್ಧ ಅವಿತುಕೊಂಡಿರುವಂತೆ, ನಿಶ್ಯಬ್ಧದೊಡಲೇ ಶಬ್ಧವನ್ನೂ ಹೊರಹಾಕುತ್ತದೆ. ಈ ಎಲ್ಲಾ ಹೊಂದಾಣಿಕೆಯ ಸೂಕ್ಷ್ಮ ಅರಿತವರಿಗೆ ಮಾತ್ರ ಶರಣರಿಗೆ ಸಂಬಂಧಿಸಿದ ಗೌಪ್ಯ ಗೊತ್ತಾಗಬಲ್ಲುದು."-16 ಶರಣರ ಕ್ರಾಂತಿಯ ಯಶಸ್ಸಿಗೆ ಮೂಲವಾದ ಈ ಸಂಬಂಧಗಳ ಸೂಕ್ಷ್ಮತೆಯನ್ನು ವೈಜ್ಞಾನಿಕ ನೆಲೆಯಲ್ಲಿ ಪ್ರಯೋಗಾತ್ಮಕ ದೃಷ್ಟಿಯಿಂದ ಹೇಳಿದೆ. ಈ ವಚನವು ಹಿತಭಾಷೆಯಾದರೂ ವಚನದೊಳಗೆ ಅಡಗಿರುವ ಆಧ್ಯಾತ್ಮಿಕ ಅನುಭವ ಜ್ಞಾನವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಭಾಷಿಕ ಧ್ವನಿಗಳೊಡನೆ ಚಿತ್ರಿಸುತ್ತದೆ.

"ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ಧಕ್ಕೆ ನಾಚಿದಡೆಂತಯ್ಯಾ ?
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದ ಸಮಾಧಾನಿಯಾಗಿರಬೇಕು."–17

ಮಹಾದೇವಿಯಕ್ಕನ ವಚನವು ಅಂದಿನ ಕ್ರೂರ ವ್ಯವಸ್ಥೆಯ ತಲ್ಲಣಗಳನ್ನು ಚಿತ್ರಿಸುತ್ತದೆ. ಈ ವ್ಯವಸ್ಥೆಯ ಎದುರಿಗೆ ಹೇಗೆ ನಿಲ್ಲಬೇಕೆಂಬುದನ್ನು ತಿಳಿದಸುತ್ತದೆ. ಜಗತ್ತಿನ ಒಳಗೆ ಬದುಕು ಸಾಗಿಸಬೇಕಾದರೆ ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವುದು ಅನಿವಾರ್ಯವೆಂದು ಹೇಳುತ್ತಾರೆ. ಇದನ್ನು ನಿಭಾಯಿಸಲು ಮಾನಸಿಕವಾದಂತಹ ಸಧೃಢತೆ ಬೇಕು. ಈ ವಚನದ ಮೌನ ಆಶಯವೆಂದರೆ ಮೌನಾತ್ಮಕ ಪ್ರತಿಭಟನೆಯನ್ನು ವ್ಯವಸ್ಥೆಯ ವಿರುದ್ಧ ಹೇಳುತ್ತದೆ.

ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶದಲ್ಲಿ ಈ ಮನೋವೈಜ್ಞಾನಿಕ ಮತ್ತು ಬಂಡಾಯದ ಧ್ವನಿಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ. ಈ ಎಲ್ಲಾ ಧ್ವನಿಗಳು ಶ್ರಮಮೂಲ ಸಂಸ್ಕೃತಿಯ ನೆಲೆಯಲ್ಲಿ ಹುಟ್ಟಿಕೊಳ್ಳುತ್ತದೆ. ಈ ಶೋಷಿತ ಸಮುದಾಯಗಳ ಧ್ವನಿಗಳಾಗಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಆಲೋಚನೆಗಳು ಒಡಮೂಡುತ್ತವೆ. ಕ್ರಾಂತಿಯ ಸಮಕಾಲೀನ ಸಂದರ್ಭವು ಎಲ್ಲಾ ಸಾಂಸ್ಕೃತಿಕಾಂಶಗಳ ಮೇಲೆ ಪ್ರಭಾವ ಬೀರುತ್ತದೆ. ವಚನಕಾರರ ಅಭಿವ್ಯಕ್ತಿ ಮಾಧ್ಯಮವಾದ ವಚನ ಪರಿಭಾಷೆಯಲ್ಲಿ ವ್ಯಕ್ತವಾಗಿರುವ ಪ್ರಯೋಗಶೀಲ ನುಡಿಗಳು ಜನಸಮುದಾಯವನ್ನು ವ್ಯಾಪಿಸುತ್ತವೆ. ಶಿವಶರಣರು ಮನೋವೈಜ್ಞಾನಿಕ ನೆಲೆಯಲ್ಲಿ ಅಂದಿನ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುತ್ತಾರೆ. ಸಮಾಜಸುಧಾರಿಸಬೇಕಾದರೆ ಅದರೊಳಗೆ ಸಮಾಜದ ಆರೋಗ್ಯ ವೃದ್ಧಿಸುವ ಅಂಶಗಳು ಅಡಕವಾಗಿರಬೇಕೆಂದು ಬಯಸುತ್ತಾರೆ. ಈ ಎಲ್ಲಾ ಸಮಗ್ರ ಆಯಾಮ ದೃಷ್ಟಿಗಳಿಂದ ಫಲಿತಗೊಂಡಂತಹ ಶರಣ ಸಮುದಾಯದ ಹೋರಾಟದ ಪ್ರತಿಫಲವೇ

ಮನೋವೈಜ್ಞಾನಿಕ ಮತ್ತು ಬಂಡಾಯದ ಧ್ವನಿಗಳನ್ನು ಸೂಚಿಸುತ್ತದೆ. ಈ ಸಮಗ್ರಾಂಶಗಳು ಕಲ್ಯಾಣದ ಸಂಸ್ಕೃತಿಯನ್ನು ನಿರ್ಧರಿಸುತ್ತವೆ.

7.2. ಕಲ್ಯಾಣಕ್ರಾಂತಿಯ ರಚನಾತ್ಮಕ ಪಾರ್ಲಿಮೆಂಟ್ ವ್ಯವಸ್ಥೆ :

ಇಂತಹ ಸಾಮಾಜಿಕ ಹಿತಚಿಂತನೆಯುಳ್ಳ ವಿಶೇಷ ವ್ಯವಸ್ಥೆಯ ಲಕ್ಷಣಗಳನ್ನು ಈ ರಚನಾತ್ಮಕ ಪಾರ್ಲಿಮೆಂಟ್ ವ್ಯವಸ್ಥೆ ಜಾರಿಗೆ ಬಂದಿತು. ಇಂತಹ ಪಾರ್ಲಿಮೆಂಟ್ ವ್ಯವಸ್ಥೆಯಿಂದ ಸಮಾಜದಲ್ಲಿನ ಎಲ್ಲಾ ವರ್ಗದ ಜನರೂ ಭಾಗವಹಿಸುವಿಕೆ ಅಥವಾ ಪ್ರತಿನಿದಿತ್ವವನ್ನು ಹೊಂದಿದ್ದರ ಪ್ರತಿಫಲವಾಗಿ ಸಮಾಜದಲ್ಲಿ ಕಲ್ಯಾಣ ಕ್ರಾಂತಿಗೆ ನಾಂದಿಯಾಯಿತು. 12ನೇ ಶತಮಾನದಲ್ಲಿ ರಚನಾತ್ಮಕ ಪಾರ್ಲಿಮೆಂಟಿನ ವ್ಯವಸ್ಥಯಲ್ಲಿ ತೆಗೆದುಕೊಂಡಂತಹ ಅಂಶಗಳು ಇಂದಿಗೂ ಪ್ರಸ್ತುತ ಎಂಬ ಅಂಶವನ್ನು ಅಲ್ಲಗೆಳೆಯುವಂತಿಲ್ಲ.

ಆಧುನಿಕ ಪ್ರಜಾಪ್ರಭುತ್ವದ ಕಲ್ಪನೆಯು ನಮ್ಮ ಕಣ್ಮುಂದೆ ಇದೆಯಾದರೂ, ಹನ್ನೆರಡನೆಯ ಶತಮಾನದ ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಕಟ್ಟಿದ ಆಡಳಿತ ವ್ಯವಸ್ಥೆ ಇಂದಿಗೂ ಪ್ರಸ್ತುತವಾದವು. ಸಾಮ್ರಾಜ್ಯಶಾಹಿ ವ್ಯವಸ್ಥೆಯಿಂದ ಹೊರಬಂದು ತನ್ನದೇ ಆದ ಪಾರ್ಲಿಮೆಂಟ್ ರಚಿಸುವುದೇ ಶರಣರ ಗುರಿಯಾಗಿತ್ತು. ಪರ್ಯಾಯ ವ್ಯವಸ್ಥೆಯಡಿಯಲ್ಲಿ ಶೋಷಿತ ಸಮುದಾಯಕ್ಕೆ ಭದ್ರಬುನಾದಿಯನ್ನು ಹಾಕಿಕೊಡುವುದಾಗಿತ್ತು. ಹನ್ನೆರಡನೆ ಶತಮಾನದಲ್ಲಿ ಕಲ್ಯಾಣದ ರಾಜ ಶಿವ ಶೋಷಣೆಯ ಪ್ರತಿನಿಧಿ, ಆತನಿಗೆ ಬೆಂಬಲವಾಗಿ ನಿಂತ ವೈದಿಕ ಧರ್ಮ ಜನರನ್ನು ಬಗ್ಗು ಬಡಿಯಲು ಸಾಧನವಾದ ಅಧಿಕಾರ ಶಾಹಿಕೂಡ ಶೋಷಣೆಯ ಸಂಕೇತಗಳೇ ಆಗಿವೆ. ವಚನಕಾರರ ಹೋರಾಟ ಇವೆಲ್ಲವುದರ ವಿರುದ್ಧವಾಗಿತ್ತು. ಆರ್ಥಿಕ ಅಸಮಾನತೆಯ ಜೀವಂತ ಸಂಕೇತಿಕವಾದ ರಾಜ ಮತ್ತು ಸಾಮಾಜಿಕ ಅಸಮಾನತೆ ಹೇಳುವ ವೈದಿಕ ಧರ್ಮ ಇವರ ಮುಖ್ಯ ವೈರಿಗಳಾದರು. ಇದರಿಂದಲೇ ಈ ಹೋರಾಟ ಜನಪ್ರಿಯವಾಗಲು ಕಾರಣವಾಯಿತು."-18 ಅಂದಿನ ಪಾರ್ಲಿಮೆಂಟ್ ವ್ಯವಸ್ಥೆಯ ರಚನೆಗೆ ಕಾರಣವೇನೆಂದರೆ ವ್ಯಕ್ತಿ ಕೇಂದ್ರೀಕೃತ ವಿಚಾರಧಾರೆಗಳು (ವಚನಕಾರರು) ಅವರ ಮನೊಭಾವಗಳನ್ನು ಸಂಯೋಜನೆಗೊಳಿಸಿದ ವ್ಯವಸ್ಥೆಯಿಂದ ಸಮಾಜದ ಸುಧಾರಣೆಗೆ ಕಾಯಕಲ್ಪವನ್ನು ರೂಪಿಸುವ ವ್ಯವಸ್ಥೆಯನ್ನೇ ಪಾರ್ಲಿಮೆಂಟ್ ಎನ್ನಲಾಗುತ್ತದೆ, ಅಂದರೆ ಈ ಪಾರ್ಲಿಮೆಂಟಿನಲ್ಲಿ ಎಲ್ಲಾ ವೃತ್ತಿಧರ್ಮದ ವಚನಕಾರರನ್ನು ಒಳಗೊಂಡ ವ್ಯವಸ್ಥೆ ಇದ್ದುದರಿಂದ

ಸಾಮಾಜಿಕ ಸುಧಾರಣೆಯ ಪರಿಕಲ್ಪನೆ ಈ ಪಾರ್ಲಿಮೆಂಟ್ ರಚನೆಗೆ ಕಾರಣವಾಯಿತು. ಈ ಪಾರ್ಲಿಮೆಂಟ್ ವ್ಯವಸ್ಥೆಯನ್ನು ರಚನೆಮಾಡುವಂತಹ ಸಂದರ್ಭದಲ್ಲಿ ಕೆಲವು ರಚನಾತ್ಮಕ ಪಾರ್ಲಿಮೆಂಟ್ ವ್ಯವಸ್ಥೆಯಲ್ಲಿ ತಾವು ಕಂಡುಕೊಂಡ ಸ್ವಾನುಭವದ ಲಕ್ಷಣಗಳನ್ನು ರಚಿಸಲಾಯಿತು. ಇಂತಹ ಲಕ್ಷಣಗಳಿಗೆ ಬದ್ದರಾಗಿ ಪ್ರತಿಯೊಬ್ಬ ವಚನಕಾರರು ಕಾಯಕವನ್ನು ನಿರ್ವಹಿಸಲು ಪ್ರಾರಂಭಿಸಿದರು ಇಂತಹ ವಿಶಿಷ್ಟ ಪಾರ್ಲಿಮೆಂಟಿನ ಲಕ್ಷಣಗಳೆಂದರೆ.

1. ಕಾಯಕ ವ್ಯವಸ್ಥೆ:-

ಕಾಯಕ ವ್ಯವಸ್ಥೆಯೆಂದರೆ ಸಮಾಜದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಇರುವ ಮಾರ್ಗವೇ ಕಾಯಕ ವ್ಯವಸ್ಥೆ ಆದುದರಿಂದ ಪ್ರತಿಯೊಬ್ಬರೂ ಇದಕ್ಕೆ ಬದ್ದರಾಗುವುದು.

ಈ ಮೇಲ್ಕಂಡ ಮಾತುಗಳನ್ನು ಅಮುಗೆರಾಯಮ್ಮನ ವಚನವು ದೃಢೀಕರಿಸುತ್ತದೆ.

" ಕಾಯಕದಲ್ಲಿ ನಿರತನಾದೆಡೆ, ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು,
ಜಂಗಮ ಮುಂದೆ ನಿಂತಿದ್ದರೂ ಹಂಗ ಅರಿಯಬೇಕು.
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದರೂ ಕಾಯಕದೊಳಗು".-19

2. ಸಾಮಾಜಿಕ ಸುಧಾರಣೆ:-

ಸಮಾಜದ ವ್ಯವಸ್ಥೆಯಲ್ಲಿ ಇರುವ ಅನಿಷ್ಟ ಪದ್ಧತಿಗಳನ್ನು ಕ್ರಮೇಣ ಕಡಿಮೆಮಾಡಿ ಸಾಮಾಜಿಕ ಸುಧಾರಣೆಯನ್ನು ವ್ಯವಸ್ಥಿತಗೊಳಿಸುವುದು. ಬಸವಣ್ಣನವರ ಈ ವಚನವು ಸಮಾಜ ಸುಧಾರಣೆಗೆ ವ್ಯಕ್ತಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಕೊಡುತ್ತದೆ. ಇದರಿಂದ ಸಮಾಜವು ಸುಧಾರಿಸುತ್ತದೆಂಬುದು ಬಸವಣ್ಣನವರ ಆಶಯವಾಗಿದೆ.

" ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇತರರ ಅಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮ ದೇವರನೊಲಿಸುವ ಪರಿ." –20

3. ಸಾಮಾಜಿಕ ಸಮಾನತೆ:–

ಸ್ತ್ರೀ–ಪುರುಷ, ಬಡವ–ಬಲ್ಲಿದ, ಮೇಲು–ಕೀಳು ಎಂಬ ಭೇಧ ಭಾವಗಳಿರುವ ಸಮಾಜಲ್ಲಿ ಅಸಮಾನತೆಯನ್ನು ಕಾಣುತ್ತಿದ್ದೇವೆ, ಇದನ್ನು ತೆಗೆದುಹಾಕುವಲ್ಲಿ ಈ ಮೇಲಿನ ಅಂಶಗಳಲ್ಲಿ ಸಮಾನತೆಯನ್ನು ಸಾಧಿಸುವುದು. ಬಸವಣ್ಣನವರ ಈ ವಚನವು ಮೇಲಿನ ಮಾತುಗಳನ್ನು ಪುಷ್ಟೀಕರಿಸುತ್ತವೆ.

" ಇವನಾರವ ಇವನಾರವ ಇವನಾರವನೆಂದಿರಯ್ಯಾ
ಇವ ನಮ್ಮವ, ಇವ ನಮ್ಮವ ಇವನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯಾ"–21

4. ಆರ್ಥಿಕ, ಸಾಮಾಜಿಕ ಧಾರ್ಮಿಕ ಚಿಂತನೆಗಳಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನಮಾನವನ್ನು ದೊರಕಿಸಿಕೊಟ್ಟು, ಆ ಮೂಲಕ ಸಾಮಾಜಿಕ ಹಿತಚಿಂತನೆಯನ್ನು ಸಾಧಿಸಲು ಸಾದ್ಯ ಎಂಬುದನ್ನು ತಿಳಿಸಿದ್ದಾರೆ.

" ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ
ರಾಮನಾಥ."–22

5. ಸಮಾಜದ ಪ್ರತಿ ಜನಸಾಮಾನ್ಯನಿಗೂ ಸಮಾಜ ಸುಧಾರಣೆಯ ಮಾರ್ಗಗಳನ್ನು ತಿಳಿಯುವಂತೆ ಮಾಡಲು ಸರಳ ಸಾಮಾನ್ಯ ಭಾಷೆಯಲ್ಲಿ ವಚನಗಳನ್ನು ರಚಿಸುವುದು.

ಕಲ್ಯಾಣಕ್ರಾಂತಿಯ ಸಂಧಿಗ್ಧ ಕಾಲದಲ್ಲಿ ವಚನಕಾರರು ತಮ್ಮದೇ ಆದ ರೀತಿಯಲ್ಲಿ ವ್ಯವಸ್ಥೆಯನ್ನು ಬದಲಿಸ ಹೊರಟರು. ಅವರ ಮೂಲ ಆಶಯ ಸಮಗ್ರವಾಗಿ ವ್ಯವಸ್ಥೆಯನ್ನೇ ಬದಲಾಯಿಸಬೇಕೆಂದು ಹೊರಡಲಿಲ್ಲ. ವ್ಯಕ್ತಿ ಕೇಂದ್ರಿತ ನೆಲೆಯಿಂದ ಪ್ರಾರಂಭಗೊಂಡ ಬದಲೀಕರಣ ವ್ಯವಸ್ಥೆ ಅಂತಿಮವಾಗಿ ಶರಣ ಸಮುದಾಯವನ್ನೇ ವ್ಯಾಪಿಸಿತು.

ಶರಣ ದಿನಚರಿಯಿಂದ ಬದಲಿವ್ಯವಸ್ಥೆ ಪ್ರಾರಂಭವಾಯಿತು. ಒಡೆಯನ (ರಾಜ) ಬದಲಿಗೆ ಆರಾಧ್ಯದೈವ ಒಡೆಯನಾಗುವುದು, ರಾಜಾಡಳಿತಕ್ಕೆ ಬದಲಾಗಿ ಜನಾಡಳಿತ ಇರುವುದು, ನಾಯಕತ್ವಕ್ಕಿಂತ ಸಮೂಹ ನಡೆಸುವ ವಿಚಾರಗಳಲ್ಲಿ ನಂಬಿಕೆ ಇರುವುದು, ಶಾಸ್ತ್ರ-ಪುರಾಣಗಳ ಬದಲು ವಚನಗಳನ್ನು ಬಳಸುವುದು ಭಾಷಿಕ ಮಾಧ್ಯಮ ಸಂಸ್ಕೃತದ ಬದಲಾಗಿ ಆಡುಭಾಷೆ ಉಪಯೋಗಿಸುವುದು ಅಧಿಕಾರದ ಬದಲಿ ಸೇವಕನಾಗಿ ಸೇವೆಗೈಯುವುದು.

> " ಬ್ರಹ್ಮಪದವಿಯನೊಲ್ಲೆ ವಿಷ್ಣು ಪದವಿಯನೊಲ್ಲೆ,
> ರುದ್ರ ಪದವಿಯನೊಲ್ಲೆ, ನಾನು ಮತ್ತಾವಪದವಿಯನೊಲ್ಲೆನಯ್ಯಾ
> ಕೂಡಲಸಂಗಮದೇವ ನಿಮ್ಮ ಸದ್ಭಕ್ತರ ಪಾದವನರಿವಿಪ್ಪ
> ಮಹಾಪದವಿಯ ಕರುಣಿಸಯ್ಯಾ."-23

ಒಂದು ಕಾಲದ ಸಾಮ್ರಾಜ್ಯಶಾಹಿ ನೆಲೆಯಿಂದ ಹೊರಟಂತಹ ಅಧಿಕಾರಶಾಹಿ ಧೋರಣೆಗಳು ಜನಸಾಮಾನ್ಯರ ಬದುಕನ್ನು ಯಾಂತ್ರೀಕೃತ ಸ್ಥಿತಿಯಲ್ಲಿ ಇಟ್ಟಿದ್ದವು, ಅಧಿಕಾರಶಾಹಿಯ ವಿರುದ್ಧ ದಂಗೆ ಏಳಲು ಕಷ್ಟ ಆಗುತ್ತಿತ್ತು. ಆ ಕಾರಣದಿಂದ ಸಾಮಾನ್ಯ ವರ್ಗ ರಾಜಪ್ರಭುತ್ವದಿಂದ ದೂರಸರಿಯಲು ಪ್ರಾರಂಭಿಸಿತು. ಅಂದರೆ ಹಿಂಸೆಯೇ ಪ್ರಧಾನವಾದ ಸಮಾಜದಲ್ಲಿ ಉತ್ಕೃಷ್ಟ ಸಮಾಜ ನಿರ್ಮಾಣ ಮಾಡಲು ಆಗುವುದಿಲ್ಲ ಎಂದು ಶಿವಶರಣರಲ್ಲಿತ್ತು. ಈ ಬದುಕಿಗೆ ಪೂರಕವಾಗುವಂತೆ ರಾಜನ ಆಡಳಿತವನ್ನು ನಿರಾಕರಿಸಿ ಸಾಮೂಹಿಕವಾಗಿ ಕೊಡುಕೊಳ್ಳುವಿಕೆಯ ಸಂಬಂಧಗಳಿಂದ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿಕೊಂಡರು. ಅಂದಿನ ಕಾಲದಲ್ಲಿ ವೃತ್ತಿಪರವಾದಂತಹ ಆಲೋಚನೆಗಳು ಬಹುತೇಕ ಇರಲಿಲ್ಲ ಆದರೂ ಕೂಡ ಶರಣರು ದುಡಿದು

ತಿನ್ನುವ ರೀತಿ–ನೀತಿಗಳನ್ನು ಸಮಾಜದ ಜನರಿಗೆ ಒಳಿತಾಗಲಿ ಎಂದು ಶರಣರು ಬದಲೀ ವ್ಯವಸ್ಥೆಯಡಿಯಲ್ಲಿ ನಿರತರಾದರು. ಮಧ್ಯಕಾಲೀನ ರಾಜಪ್ರಭುತ್ವ ವಿರೋಧಿ ಧೋರಣೆಗಳಿಂದ ರೋಸಿ ಹೋಗಿದುದ್ದಕ್ಕೆ ಸಾಕ್ಷಿಯೆಂಬಂತೆ ಬಸವಣ್ಣನವರ ವಚನಗಳಲ್ಲಿ ಸ್ಪಷ್ಟ ನಿದರ್ಶನಗಳಿವೆ.

" ಅರಸು ಮುನಿದೊಡೆ ನಾಡೊಳಗಿರಬಾರದಯ್ಯಾ.
ಗಂಡ ಮುನಿದೊಡೆ ಮನೆಯೊಳಗಿರಬಾರದಯ್ಯಾ
ಕೂಡಲಸಂಗಮದೇವಾ ಜಂಗಮ ಮುನಿದೊಡೆ ನಾನೆಂತು ಬದುಕುವೆ."–24

ಅಂದಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿನ ಶೋಷಣೆಯನ್ನು ಸಾಮಾನ್ಯವಾಗಿ ಕೆಳವರ್ಗದ ಜನರು ಅನುಭವಿಸುತ್ತಿದ್ದರು. ಶೋಷಿತಪರವಾಗಿ ರಾಜನು ಇಲ್ಲದಿದ್ದುದೇ ಅಂದಿನ ವ್ಯವಸ್ಥೆಯ ಕ್ರೂರತನಕ್ಕೆ ಕಾರಣವೆನ್ನಬಹುದು, ಕುಟುಂಬದಲ್ಲಿನ ಬಡತನದಿಂದ ಪ್ರಾರಂಭವಾಗಿ ಸಮಾಜದಲ್ಲಿ ಪ್ರಧಾನವಾಗಿ ರೂಪುಗೊಂಡಿದ್ದ ಆಡಳಿತ ವ್ಯವಸ್ಥೆಯ ಬಗ್ಗೆ ಅಸಹನೆಯು ಹೊರಹಾಕುತ್ತದೆ. ಪ್ರಭುತ್ವಶಾಹಿಯು ಹೇಗೆ ಕೆಟ್ಟಿತೆಂಬುದನ್ನು ಚೆನ್ನಬಸವಣ್ಣನವರ ಈ ವಚನವು ಹೇಳುತ್ತದೆ.

" ಅರಸನ ಭಕ್ತಿ ಅಹಂಕಾರದಿಂದ ಕೆಟ್ಟಿತ್ತು
ಸೂಳೆಯ ಭಕ್ತಿ ಎಂಜಲ ತಿಂದಾಗಲೇ ಹೋಯಿತ್ತು,
ನಂಟುತನದ ಭಕ್ತಿ ನಾಯಕನರಕ
ಬಡತನ ಭಕ್ತಿನಿಧನ
ಇದು ಕಾರಣ ಕೂಡಲಚೆನ್ನಸಂಗಮದೇವ
ನಿಮ್ಮ ಭಕ್ತರಿಗೆ ಬಡತನವೇ ಕೊಡು."–25

ಪರಿಶುದ್ಧವಾದ ಜೀವನದ ಕ್ರಮ ಇಲ್ಲದಿದ್ದರೆ ಸಾಮಾಜಿಕ ಬದುಕು ಅಸ್ತವ್ಯಸ್ತವಾಗುತ್ತದೆಂಬುದನ್ನು ಉದಾಹರಣೆಯ ಮೂಲಕ ವಿವರಿಸುತ್ತದೆ. ಒಂದು ಆಡಳಿತದ ಚುಕ್ಕಾಣಿ ಹಿಡಿದ ವ್ಯಕ್ತಿ ದರ್ಪ ದುರಹಂಕಾರದಿಂದ ಆಳ್ವಿಕೆ ನಡೆಸಿದರೂ. ರಾಜ್ಯವು ಹಾಳಾಗುತ್ತದೆಂಬುದನ್ನು ಹೇಳುತ್ತಾರೆ. ಬಡವನಾದರೂ ಕೂಡ ಪ್ರಮಾಣಿಕತನ ಸಮಯನಿಷ್ಠೆ, ಧೃಢವಾದ ಸಂಕಲ್ಪಗಳಿರುವ ವ್ಯಕ್ತಿಗಳ ಆದರ್ಶವು ಒಳ್ಳೆಯ ಸಮಾಜನಿರ್ಮಾಣ ಮಾಡಲು

ಅನಿವಾರ್ಯವಾಗುತ್ತದೆ. ಒಂದು ವಿಷಯಕ್ಕೆ ಇನ್ನೊಂದು ವಿಷಯವನ್ನು ಪರ್ಯಾಯವಾಗಿ ಹೇಳುತ್ತಾರೆ. ರಾಜತಂತ್ರ ವ್ಯವಸ್ಥೆಯು ಆರ್ಥಿಕತೆಯ ಮೇಲೆ ನಿಂತಿರುತ್ತದೆ. ಸಾಮಾನ್ಯ ಜೀವನದ ವ್ಯವಸ್ಥೆಯು ತಮ್ಮ ವೈಯಕ್ತಿಕ ವೃತ್ತಿ ಆಧಾರವಾಗಿ ನಿಂತಿರುತ್ತದೆ. ನಾವು ಆಯ್ದುಕೊಳ್ಳುವ ಯಾವುದೇ ವೃತ್ತಿಯನ್ನು ಶ್ರೇಷ್ಠ-ಕನಿಷ್ಠವೆನ್ನದೇ ಸಂತೃಪ್ತಿಯಿಂದ ನಿರ್ವಹಿಸಿದರೆ ಉತ್ತಮವಾದ ಜೀವನ ನಡೆಸಬಹುದೆಂದು ಸೂಚಿಸುತ್ತಾರೆ. ಇದಕ್ಕೆ ಶರಣರು 'ಕಾಯಕಸಿದ್ಧಾಂತ' ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಕಾಯವನ್ನು ದುಡಿದುಕೊಳ್ಳಬೇಕೆಂದು ನಿಂತ ನೀರಾಗಿದ್ದ ಅರ್ಥವ್ಯವಸ್ಥೆಯನ್ನು ಚಲನಶೀಲಗೊಳಿಸಿದರು. ಇದು ಯಾರಿಗೂ ಮೋಸಗೊಳಿಸುವ ಅರ್ಥವ್ಯವಸ್ಥೆಯಾಗಿರುವುದಿಲ್ಲ ಎಂಬುದು ಸ್ಪಷ್ಟ ಅಭಿಪ್ರಾಯವಾಗಿದೆ.

ಕಲ್ಯಾಣಕ್ರಾಂತಿಯ ಕೊಡುಗೆ ಎನ್ನುವಂತೆ ಅಂದಿನ ಸಾಮಾಜಿಕ ಪರ್ಯಾಯ ಚಿಂತನೆಯು ವಿಭಿನ್ನವಾಗಿದ್ದು, ಆಧುನಿಕ ಸಂದರ್ಭದಲ್ಲಿಯೂ ಕೂಡ ಪ್ರಸ್ತುತವೆನಿಸುವಷ್ಟು ವಿಚಾರಧಾರೆಗಳಿಂದ ಕೂಡಿದೆ.

ಕಲ್ಯಾಣಕ್ರಾಂತಿಯ ಅಂತಿಮ ಘಟ್ಟದ ವಿಪರೀತವಾದ ಸಾಂಸ್ಕೃತಿಕ ಬದಲಾವಣೆಗಳುಂಟಾದವು ಅವುಗಳಿಂದುಂಟಾದ ಪರಿಣಾಮವನ್ನು ಶಿವಶರಣರ ವಚನಗಳಲ್ಲಿ ಕಾಣಬಹುದು.

" ಕವಿತ್ವ ಸಾಧಕರೆಲ್ಲರೂ ಕಳವಳಿಸಿಹೋದರು.
ವಿದ್ಯಾಸಾಧಕರೆಲ್ಲರೂ ಬುದ್ಧಿಗೆಟ್ಟರು
ತತ್ವ ಸಾಧಕರೆಲ್ಲರೂ ಭಕ್ತಿಹೀನರಾದರು
ಲಿಂಗಸಾಧಕರೆಲ್ಲರೂ ಭೂಬಾರಕರಾದರು.
ಕೂಡಲಚೆನ್ನಸಂಗಮದೇವಯ್ಯಾ."-26

ಕಲ್ಯಾಣಕ್ರಾಂತಿಯಿಂದ ಜ್ಞಾನಕ್ಷೇತ್ರ, ಸಾಹಿತ್ಯಕ್ಷೇತ್ರ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಧಾರ್ಮಿಕವಾಗಿ ಆಚರಿಸಿಕೊಂಡು ಬಂದಿದ್ದ ಸನಾತನ ವಿಚಾರಧಾರೆಗಳಲ್ಲಿ ಈ ಮೇಲೆ ಹೇಳಿದ ಎಲ್ಲಾ ಕ್ಷೇತ್ರಗಳಲ್ಲಿಯೂ ಯಜಮಾನಿಕೆಯನ್ನು ಸಾಧಿಸಿದ್ದ ಕೆಲವೇ ವರ್ಗಗಳಿಂದ ದೂರ ಸರಿದು, ಈ ಸಮಗ್ರ ವಿಚಾರಕ್ಷೇತ್ರಗಳಿಂದ ವಂಚಿತರಾಗಿದ್ದ ಜನಸಮುದಾಯವು ವರ್ಗ ಬೇಧಗಳ ತಾರತಮ್ಯವಿಲ್ಲದೆ ಈ ಕ್ರಾಂತಿಗೆ ಪ್ರಭಾವಿತರಾಗಿ ಹೊಸ ಜೀವಂತಿಕೆಯಿಂದ ಉತ್ಸಾಹಭರಿತರಾಗಿ

ಪ್ರವೇಶವನ್ನು ಪಡೆದರು. ಹೀಗೆ ಪ್ರವೇಶ ಪಡೆದ ನಂತರದ ದಿನಗಳಲ್ಲಿ ಆ ಕ್ರಾಂತಿಯ ವಿಚಾರಧಾರೆ ತತ್ವಸಿದ್ಧಾಂತಗಳಿಗೆ ಬದ್ಧರಾಗಿ ತಮ್ಮ ನಡೆ-ನುಡಿಯಲ್ಲಿ ಆಚಾರ-ವಿಚಾರ ಸಂಪೂರ್ಣ ಬದಲಿಸಿಕೊಂಡರು. ಇದರ ಪರಿಣಾಮವಾಗಿ ತಾವು ಬದುಕಿಬಾಳುತ್ತಿರುವ ವ್ಯವಸ್ಥೆಯ ಕಠೋರ ಸತ್ಯಗಳ ಅರಿವಾಗತೊಡಗಿದಾಗ ಅಲ್ಲಿ ಅನುಭವದ ನೋವುಗಳು, ಸಮಸ್ಯೆಗಳು, ಸವಾಲುಗಳಿಗೆ ಪ್ರತಿಯುತ್ತರವನ್ನು ಕಂಡುಕೊಳ್ಳಲು ಸಂಘಟಿತರಾದರು. ಈ ಸಂಘಟಿತಗೊಂಡ ಸಮೂಹ ಚರ್ಚೆ ವಿಚಾರಗೊಷ್ಠಿಗಳಿಂದ ಪ್ರಭಾವಿತರಾಗಿ ಹಿಂದೆ ಕಳೆದುಕೊಂಡಿದ್ದ ಕ್ರಾಂತಿ ಧ್ವನಿಗಳನ್ನು ಅಭಿವ್ಯಕ್ತ ಸ್ವಾತಂತ್ರದ ಮೂಲಕ ಹೇಳ ಹೊರಟರು. ತಮ್ಮದೇ ವಚನ ಮಾಧ್ಯಮವನ್ನು ಬಳಸಿಕೊಂಡು ಮೂಲಭೂತವಾಗಿ ಕಾಡಿದ್ದ ಸಮಸ್ಯೆಗಳ ನಿವಾರಣೆಗೆ ತೊಡಗಿದರು. ಇದು ವೈಯಕ್ತಿಕತೆಯಲ್ಲೇ ಪ್ರಾರಂಭವಾಯಿತು.

ಈ ಕ್ರಾಂತಿಯು ಧರ್ಮಕೇಂದ್ರಿತವಾದ ನೆಲೆಯಲ್ಲಿ ಪ್ರಾರಂಭವಾದ್ದರಿಂದ ಪ್ರಾರಂಭಿಕ ಹಂತದಲ್ಲಿ ಸರ್ವಜನಾಂಗವನ್ನು ಆಕರ್ಷಿಸಿತು. ಇದು ಪ್ರಮುಖವಾಗಿ ಶೋಷಿತ ಸಮುದಾಯವರನ್ನೊಳಗೊಂಡಿದ್ದಂತೆ ಪ್ರಾರಂಭವಾಯಿತು. ಇದರಲ್ಲಿ ಮೇಲ್ವರ್ಗದ ನಾಯಕರು ಕೂಡ ಭಾಗಿಯಾಗಿದ್ದದ್ದು ವಿಶೇಷವೆನಿಸಿತು. ನಂತರದ ದಿನಗಳಲ್ಲಿ ಈ ಶೋಷಿತ ಸಮುದಾಯವು ಪ್ರಮುಖವಾಗಿ ಸಾಮ್ರಾಜ್ಯಶಾಹಿ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದರಿಂದ ಸಹಜವಾಗಿಯೇ ರಾಜನ ಅತಿಕ್ರಮವನ್ನು ಎದುರಿಸಬೇಕಾಯಿತು. ಇದರಿಂದ ಶರಣರಿಗೆ ಕಲ್ಯಾಣವನ್ನು ಬಿಟ್ಟು ಬೇರೆಡೆಗೆ ಹೋಗುವುದು ಅನಿವಾರ್ಯವಾಯಿತು. ಇದರ ಜೊತೆ ಸನಾತನ ಸಂಪ್ರದಾಯದವರು ಒಗ್ಗೂಡಿದರು. ಶರಣರು ಎಲ್ಲರ ಪ್ರತಿಭಟನೆಯನ್ನು ಎದುರಿಸಲು ಅಸಮರ್ಥರಾದರು. ಆದ್ದರಿಂದ ಕಲ್ಯಾಣದ ಕ್ರಾಂತಿಯು ಅವನತಿಯ ಹಾದಿಯನ್ನು ಹಿಡಿಯಿತಾದರೂ ಶರಣರೇ ಮೇಲುಗೈ ಸಾಧಿಸಿದರು. ಚೆನ್ನಬಸವಣ್ಣನವರ ವಚನವು ಅನಂತರ ದಿನಗಳನ್ನು ವಚನವು ಅಂದಿನ ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶವನ್ನು ಚಿತ್ರಿಸುತ್ತದೆ.

" ಆಚಾರವಡಗಿತ್ತು ಅನಾಚಾರವೆದ್ದಿತ್ತು.
ಅಲ್ಲದ ನಡೆಯ ನಡದಾರು ಸಲ್ಲದಚ್ಚುಗಳ ಮರಳಿವೊತ್ತಿಯಾರು
ಭಕ್ತನೆ ಹೊಲೆಯನಾದನು ಜಂಗಮವೇ ಅನಾಚಾರಿಯಾದನು.
ಲಂಡ ಭಕ್ತನಾದನು ಪುಂಡ ಜಂಗಮವಾದೀತು

ಲಂಡ ಪುಂಡ ಕೂಡಿ ಜಗಭಂಡರಾಗಿ ಕೆಟ್ಟಾರು.
ಮನದ ಹಿರಿಯರ ಬಿಟ್ಟಾರು, ಕುಲದ ಹಿರಿಯರ ಪೂಜಿಸಿಯಾರು
ಹದಿನೆಂಟು ಜಾತಿಯೆಲ್ಲಾ ಕೂಡಿ, ಒಂದೇ ತಳಿಗೆಯಲ್ಲಿ ಉಂಟಾರು
ಮತ್ತು ಕುಲಕ್ಕೆ ಹೋರಿಯಾಡಿಯಾರು, ಗುರುವೇ ನರನೆಂದಾರು
ಲಿಂಗವ ಶಿಲೆಯೆಂದಾರು, ಜಂಗಮ ಜಾತಿಹಿಡಿದು ಮುಡಿದಾರು
ಭಕ್ತಜಂಗಮ ಪ್ರಸಾದವನ್ನೆಂಜಲೆಂದತಿಗಳೆದಾರು
ತೊತ್ತು ಸೂಳೆಯರೆಂಜಲ ತಿಂದಾರು
ಮತ್ತೆ ನಾ ಘನ, ತಾ ಘನ ಎಂದಾರು. ಒತ್ತಿದಚ್ಚುಗಳು ಹುಚ್ಚೇರಿ ಉಳಿತಾವು
ಅಷ್ಟರೊಳಗೆ ಶರಣರು ಪುಟ್ಟಿಸಂಹಾರವ ಮಾಡಿಯಾರು. ಒಟ್ಟು ಹಾರಿತು
ಗಟ್ಟಿಯುಳಿದೀತು, ಮಿಕ್ಕದ್ದು ಪಲ್ಲವಿಸಿಯಿತು ಮರ್ತ್ಯವೇ ಕೈಲಾಸವಾದೀತು.
ಭಕ್ತಿಯಬೆಳೆ ಬೆಳೆದೀತು, ಘನ ಪ್ರಸಾದ ಉದ್ಧರಿಸಿತು
ಕೂಡಲಚೆನ್ನಸಂಗಯ್ಯನ ಶ್ರೀಪಾದವೇ ಸಾಕ್ಷಿಯಾಗಿ
ಬಸವಣ್ಣನೊಬ್ಬನೇ ಕರ್ತನಾದನು."-27

ಕಲ್ಯಾಣಕ್ರಾಂತಿಯ ಸಮಯದಲ್ಲಿ ಬದಲಿಸಹೊರಟ ವಸ್ತು ವಿಷಯಗಳ ಜೊತೆಯಲ್ಲಿ ಸಾಂಸ್ಕೃತಿಕ ಸಂಘರ್ಷಗಳು ನಡೆಯುತ್ತಿದ್ದವು. ನಂತರದ ದಿನಗಳಲ್ಲಿ ಏನಾಯಿತೆಂಬುದನ್ನು ಈ ವಚನಗಳ ಸಾಲು ಸ್ಪಷ್ಟಪಡಿಸುತ್ತದೆ. "ಅಷ್ಟರೊಳಗೆ ಶರಣರು ಪುಟ್ಟೆ ಸಂಹಾರವ ಮಾಡಿಯಾರು, ಒಟ್ಟು ಆದೀತು ಘಟ್ಟಿಯುಳೆದ್ದೀತು" ಎಂಬ ಮಾತನ್ನು ವಾಸ್ತವಾದಿ ನೆಲೆಯಲ್ಲಿ ಆಲೋಚಿಸಿದರೆ, ಸತ್ಯಕ್ಕೆ ಹತ್ತಿರವಾದ ಸಂಗತಿಯೆನಿಸುತ್ತದೆ. ಏಕೆಂದರೆ ಶರಣರು ಸೃಷ್ಟಿಸಿದ 'ಸಾಂಸ್ಕೃತಿಕ ಸನ್ನಿವೇಶ' ಇಂದಿಗೂ ಪ್ರಸ್ತುತವಾಗಿರುವುದನ್ನು ನೋಡಬಹುದು.

ಅನುಭವ ಮಂಟಪದ ಸೈದ್ಧಾಂತಿಕ ನೆಲೆಗಳ ತಲೆಬರಹದಡಿಯಲ್ಲಿ ಮೊದಲಿಗೆ ಅನುಭವ ಮಂಟಪದ ವ್ಯಾಚ್ಯಾರ್ಥದ ವಿವರಣೆಯೊಂದಿಗೆ ವಿವಿಧ ಅರ್ಥಗಳನ್ನು ವಿವರಣೆಯೊಂದಿಗೆ ತಿಳಿಸಿಕೊಡಲಾಗಿದೆ ಮೂಲೋದ್ದೇಶಗಳು ಹಾಗೂ ಅದರ ವಿಸ್ತಾರವಾದ ಕಾರ್ಯವ್ಯಾಪ್ತಿಯನ್ನು

ಪರಿಚಯಿಸಿದೆ. ಶರಣರ ತತ್ವ ಸಂಧೇಶಗಳಲ್ಲಿ ಅಡಗಿರುವ ಮನೋವೈಜ್ಞಾನಿಕತೆ ಹಾಗೂ ವೈಚಾರಿಕತೆಗಳನ್ನು ಕುರಿತು ಚರ್ಚಿಸಲಾಗಿದೆ. ಮುಂದುವರೆದಂತೆ ಅಕ್ರಮಣಕಾರಿ ಬಂಡಾಯದ ಧ್ವನಿಗಳಿಗೆ ಸಂಬಂಧಿಸಿದಂತೆ ಸ್ಥಗಿತ ಮತ್ತು ಚಲನಶೀಲ ದ್ವನಿಗಳ ಪಾತ್ರ ಎಷ್ಟೆಂಬುದ ವಿಷಯಗಳ ಹೂರಣಗಳನ್ನು ತುಂಬಲಾಗಿದೆ. ಕಲ್ಯಾಣ ಕ್ರಾಂತಿಯ ರಚನಾತ್ಮಕ ಪಾರ್ಲಿಮೆಂಟ್ ವ್ಯವಸ್ಥೆಯ ಲಕ್ಷಣಗಳನ್ನು ಚಿಂತಿಸಿ ಚರ್ಚಿಸಲಾಗಿದೆ. ಕಾಯಕ ವ್ಯವಸ್ಥೆ ಸಾಮಾಜಿಕ ಸಮಾನತೆ ಇವುಗಳು ಕಲ್ಯಾಣ ಕ್ರಾಂತಿಯಲ್ಲಿ ವಹಿಸಿರುವ ಪಾತ್ರಗಳೇನು ಎಂಬ ಬಗ್ಗೆ ಮಾಹಿತಿಗಳನ್ನು ನೀಡಿದ್ದೇನೆ.

ಅಡಿ ಟಿಪ್ಪಣಿಗಳು

1. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು. 312., ವ 1141.
2. ಚನ್ನಬಸವಣ್ಣನವರು (ಚರಿತ್ರೆ , ತತ್ವ, ಸಾಹಿತ್ಯಾದಿ ವಿವೇಚನೆ), ಡಾ॥ ಆರ್.ಸಿ.ಹಿರೇಮಠ, 1965, 45,46,47.
3. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 242 ವ 737.
4. ವಚನಕಾರರ ಪ್ರಮುಖ ಪರಿಕಲ್ಪನೆಗಳು, ಷಣ್ಮುಕಯ್ಯ ಅಕ್ಕೂರ ಮಠ, 1994, ಪು 53.
5. ಶ್ರೀ ಬಸವೇಶ್ವರರು, ಶ್ರೀ ಬಸವೇಶ್ವರ 8 ನೇ ಶತಮಾನೋತ್ಸವ ಸಮಿತಿ, ಬೆಂಗಳೂರು,. ಪುಟ 127. 1962.
6. ಅಲ್ಲಮಪ್ರಭುದೇವರ ವಚನಗಳು ಸಂಪುಟ–2, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 433, ವ 1459.
7. ಕಾಯಕ ಪರಿಣಾಮಿ , ಪ್ರಸಂ. ಶಾಂತರಸ ರಾಯಚೂರು ಚನ್ನಬಸಪ್ಪ ಬೆಟ್ಟದೇವರು, 1991, ಪು 820.
8. ಕಾಯಕ ಪರಿಣಾಮಿ , ಪ್ರಸಂ. ಶಾಂತರಸ ರಾಯಚೂರು ಚನ್ನಬಸಪ್ಪ ಬೆಟ್ಟದೇವರು, 1991, ಪು 825.
9. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು. 201., ವ 821,
10. ಬಸವಣ್ಣನವರ ವಚನಗಳು ಸಂಪುಟ–1, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು. 24, ವ 124.
11. ಅಂಬಿಗರ ಚೌಡಯ್ಯನವರ ವಚನಗಳು, ಸಂ. ಡಾ॥ ಎಸ್. ವಿದ್ಯಾಶಂಕರ, 1998. ಪು. 91, ವ 279.
12. ಬಸವಣ್ಣನವರ ವಚನಗಳು ಸಂಪುಟ–1, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 229, ವ 879.
13. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ, 1993, ಪು 346 ವ 1060.
14. ಸಿದ್ದರಾಮೇಶ್ವರ ವಚನ ಸಂಪುಟ–2, ಸಂ.ಡಾ॥.ಎಸ್.ವಿದ್ಯಾಶಂಕರ, 1993, ಪು 324 ವ 1145.
15. ಶಿವಶರಣೆಯರವಚನ ಸಂಪುಟ, ಸಂ. ಡಾ॥ ವೀರಣ್ಣರಾಜೂರ , 1993, ಪು 31 ವ 86.
16. ಕಾಯಕ ಪರಿಣಾಮಿ , ಪ್ರಸಂ. ಶಾಂತರಸ ರಾಯಚೂರು ಚನ್ನಬಸಪ್ಪ ಬೆಟ್ಟದೇವರು, 1991, ಪು 1397 –1398.
17. ಶಿವಶರಣೆಯರವಚನ ಸಂಪುಟ–5, ಸಂ. ಡಾ॥ ವೀರಣ್ಣರಾಜೂರ, 1993, ಪು 78 ವ 253.
18. ಸಿದ್ದಗಂಗಾಶ್ರೀ (ಲೇಖನ: – ವಚನ ಚಳುವಳಿ ಮತ್ತು ದಲಿತರು), ಚನ್ನಪ್ಪ ಏರೆಸೀಮೆ ಟಿ.ಆರ್.ಮಹಾದೇವಯ್ಯ – ಸಿದ್ದಲಿಂಗಯ್ಯ, 1981, ಪು 701.

19. ಸಂಕೀರ್ಣ ವಚನ ಸಂಪುಟ 1, ಸಂ. ಡಾ॥ ಎಂ.ಎಂ ಕಲ್ಬುರ್ಗಿ ಪುಟ 378, ವ 1171. 1993.

20. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 59, ವ 235.

21. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 18, ವ 62.

22. ಜೇಡರ ದಾಸಿಮಯ್ಯ, ಸಂ. ಡಾ॥ ವಿ.ಜಿ. ಪೂಜಾರ್, 2003. ಪು. 29, ವ 1.

23. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 86, ವ 361.

24. ಬಸವಣ್ಣನವರ ವಚನಗಳು, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 825, ವ 212.

25. ಬಸವಣ್ಣನವರ ವಚನ ಸಂಪುಟ-3, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 310, ವ 954.

26. ಬಸವಣ್ಣನವರ ವಚನ ಸಂಪುಟ-3, ಡಾ॥ ಬಿ.ವ್ಹಿ. ಮಲ್ಲಾಪುರ, 1993, ಪು 391, ವ 1131.

27. ಚನ್ನಬಸವಣ್ಣನವರು ವಚನ ಸಂಪುಟ-3, ಸಂ. ಡಾ॥ ಎಂ.ಎಂ. ಕಲ್ಬುರ್ಗಿ, 1993, ಪು 324, ವ 99

ಅಧ್ಯಾಯ-8

ಸಮಾರೋಪ

ಹನ್ನೆರಡನೆ ಶತಮಾನದಲ್ಲಿ ಕಲ್ಯಾಣದಲ್ಲಿ ಉಂಟಾದ ಕ್ರಾಂತಿಯು ಮನುಕುಲಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ. ಜಡ್ಡುಗಟ್ಟಿದ ಸಮಾಜದಲ್ಲಿ ಎಲ್ಲಾ ರಂಗಗಳಲ್ಲಿಯೂ ಚಲನಶೀಲವನ್ನುಂಟು ಮಾಡಿ ಮನುಕುಲದ ಮಹತ್ವದ ಬದಲಾವಣೆಗೆ ಕಾರಣವಾಯಿತು. ಸಮಾಜದಲ್ಲಿದ್ದ ಅಸಂಘಟಿತ ಜನರನ್ನು ಸಂಘಟಿತರನ್ನಾಗಿ ಮಾಡಲು ಶ್ರಮಿಸಿದ ಇದೊಂದು ಸಂಘಟಿತ ಕ್ರಾಂತಿಯಾಗಿದೆ ಎಂದೆ ಹೇಳಬಹುದು. ಅಸ್ಪೃಶ್ಯತೆ, ಸಮಾನತೆ, ಧರ್ಮ, ಭಾಷೆಮಡಿವಂತಿಕೆ, ಕಾಯಕ, ವೃತ್ತಿಗೌರವ, ಮಹಿಳಾ ಸಬಲೀಕರಣ, ಮುಂತಾದ ಕ್ರಾಂತಿಕಾರಕ ವಿಚಾರಗಳು ಅಂದಿನ ವಿಚಾರಮಂಟಪದಲ್ಲಿ ಚರ್ಚಿತವಾದವು. ಚರ್ಚಿತ ವಿಚಾರಗಳು ಚಳುವಳಿಯ ರೂಪ ಪಡೆದು ಕಾರ್ಯರೂಪಗೊಳ್ಳುವ ಸಂದರ್ಭದಲ್ಲಿ ಸಂಘರ್ಷಗಳು ಪ್ರಾರಂಭವಾಯಿತು. ಚಳುವಳಿಯಲ್ಲಿ ಭಾಗವಹಿಸಿದ್ದ ಶರಣರೆಲ್ಲರು ವಿಚಾರವಾದಿಗಳಲ್ಲ, ದೂರದೃಷ್ಟಿಯಿಂದ ಕೂಡಿರಲಿಲ್ಲ. ಮುಂಚೂಣಿಯಲ್ಲಿದ್ದ ಶರಣರು, ಅನುಭಾವಿಗಳು, ಅನಾನುಭವಿ ಯುವಕ ಶರಣರನ್ನ ಸಂಭಾಳಿಸುವುದರ ಜೊತೆಗೆ ಅಧಿಕಾರಶಾಹಿ, ಪುರೋಹಿತಶಾಹಿಗಳನ್ನು ಎದುರಿಸಬೇಕಾಯಿತು. ಈ ಎಲ್ಲ ತಾಕಲಾಟಗಳೊಂದಿಗೆ ಅನುಭವಮಂಟಪದಲ್ಲಿ ಮುಖ್ಯವಾಗಿ ಚರ್ಚಿತವಾಗಿದ್ದವು.

ಹೀಗೆ ವಿಚಾರಗಳು ಚರ್ಚಿತವಾಗುವಾಗ ಶಿಕ್ಷಿತರು, ಅಶಿಕ್ಷಿತರು ಎಲ್ಲಾ ವರ್ಗವರ್ಣದವರು, ಯಾವುದೇ ತರಹದ ಭೇದ ಭಾವಗಳಿಲ್ಲದೆ ಭಾಗವಹಿಸಿದ್ದಾರೆ. ಯಾರೊಬ್ಬರು ಕೀಳಿರಿಮೆಗಳಿಲ್ಲದೆ ಮುಕ್ತವಾಗಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ ಅದಕ್ಕೆ ಸಾಕ್ಷಿಯಾಗಿ ಅಂಬಿಗರ ಚೌಡಯ್ಯ, ಸೂಳೆಸಂಕವ್ವ, ಗೊಗ್ಗವ್ವೆ, ಆಯ್ದಕ್ಕಿಲಕ್ಕಮ್ಮ, ಆಯ್ದಕ್ಕಿಮಾರಯ್ಯ, ಅಮುಗೆಯರಾಯಮ್ಮ ಇನ್ನು ಮುಂತಾದ ವಚನಕಾರರ ವಚಗಳಲ್ಲಿ ಮನಗಾಣಬಹುದು. ವೃತ್ತಿಧರ್ಮ ದ ಬಗ್ಗೆ ಇದ್ದ ಅನಿಷ್ಠ ಮನೋಭಾವವನ್ನು ಮತ್ತು ಅದರ ವಸ್ತುಸ್ಥಿತಿಯನ್ನು ಎತ್ತಿ ಹಿಡಿದ ಕಲ್ಯಾಣವು ಸಮಾಜದ ಸಾಮಾನ್ಯ ಜನರಲ್ಲಿದ್ದ ಅನಾಗರೀಕತೆಯ ಮನೋಭಾವವನ್ನು ತೆಗೆದು ನಾಗರೀಕತೆಯ ಸ್ಪರ್ಶವನ್ನು ಉಂಟುಮಾಡಿತು.

ಆ ಮೂಲಕ ಸಮಾಜದ ಕಲ್ಯಾಣಕ್ಕೆ ನಾಂದಿಹಾಡಲು ಈ ಕಲ್ಯಾಣ ಕ್ರಾಂತಿ ಸಾಕ್ಷಿಯಾಯಿತು. ಸಮಾಜದಲ್ಲಿ ಅಂಟಿದ್ದ ಅನಿಷ್ಠ ರೂಢಿಗಳು, ಜಾತಿಪದ್ಧತಿ, ಸಾಮಾಜಿಕ, ಆರ್ಥಿಕ ಅಸಮಾನತೆಗಳಲ್ಲಿ ಇದ್ದಂತಹ ಅಂತರವನ್ನು ಕಲ್ಯಾಣ ಕ್ರಾಂತಿಯು ಗುರುತಿಸಿತು. ಹಾಗೆಯೇ ವರ್ಗ

ವರ್ಗಗಳ, ಮನುಷ್ಯ ಮನುಷ್ಯರ ನಡುವೆ ಇದ್ದಂತಹ ಅಂತರವನ್ನು ಕಲ್ಯಾಣ ಕ್ರಾಂತಿಯು ಗುರ್ತಿಸಿ, ಸಮಾನತೆಯ ತತ್ವವನ್ನು ಎತ್ತಿಹಿಡಿಯಿತು. ಆ ಮೂಲಕ ಮನುಕುಲದ ಕಲ್ಯಾಣವನ್ನು ಲೋಕಕ್ಕೆ ಸಾರಿದ್ದು ಈ ಕಲ್ಯಾಣಕ್ರಾಂತಿಯ ವೈಶಿಷ್ಟವಾಗಿದೆ. ಸಕಲ ಜೀವಿಗಳ ಸಹಬಾಳ್ವೆ, ಸಮಾನತೆಗೆ ಪ್ರಾತಿನಿಧ್ಯನೀಡಿದ ಕ್ರಾಂತಿಯ ಮಹತ್ವವನ್ನು ಈ ಮಹಾಪ್ರಬಂಧದಲ್ಲಿ ಉಲ್ಲೇಖಿಸಲಾಗಿದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ತಳವೂರಿದ್ದ ಸಾಂಪ್ರದಾಯಿಕ ವರ್ಣವ್ಯವಸ್ಥೆಯನ್ನು ಮತ್ತು ಸಾಮಾಜಿಕ ಅಸಮತೋಲನವನ್ನು ಸರಿಪಡಿಸುವ ಉದ್ದೇಶದಿಂದ ಈ ಕ್ರಾಂತಿ ಪ್ರಾರಂಭವಾಗುತ್ತದೆ. ಸಮಾನತೆಯ ಪ್ರಗತಿಗೆ ಪೂರಕವಾದ ಆಶಯಗಳನ್ನು ಹೇಳುವಲ್ಲಿ ಈ ಕಲ್ಯಾಣಕ್ರಾಂತಿಯು ಮುಂದಾಗುತ್ತದೆ. ಆರ್ಥಿಕ ಮೂಲವಂತರ ವಿರುದ್ಧ ಶ್ರಮಿಕರು ಸಾಂಸ್ಕೃತಿಕವಾಗಿ ಸಂಘರ್ಷರೂಪಕ್ಕೆ ಇಳಿದು ಸ್ವಾಭಿಮಾನಿಯಾಗಿ ಬದುಕುವ ಮಾರ್ಗವನ್ನು ಹೇಗೆ ರೂಪಿಸಿದರೆಂಬುದನ್ನು ಈ ಮಹಾಪ್ರಬಂಧದಲ್ಲಿ ತಿಳಿಸಲಾಗಿದೆ.

ಕಲ್ಯಾಣಕ್ರಾಂತಿಗೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಗಳೇನೆಂಬುದನ್ನು ವಿಶೇಷವಾಗಿ ನೋಡಲಾಗಿದೆ. ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಈ ಪ್ರಬಂಧದಲ್ಲಿ ತಿಳಿಸಲಾಗಿದೆ. ಜಗತ್ತಿನ ಕ್ರಾಂತಿಗಳಲ್ಲಿ ವಿಭಿನ್ನರೂಪವಾಗಿದ್ದು ಹಾಗೂ ವಿಶಿಷ್ಟ ಸ್ವರೂಪದ ಗುಣಗಳನ್ನು ಹೊಂದಿರುವ ಬಗ್ಗೆ ಹಲವಾರು ಪ್ರಗತಿಪರ ಧೋರಣೆಗಳನ್ನು ವಿಚಾರಧಾರೆಗಳನ್ನು ನಮೂದಿಸಲಾಗಿದೆ.

ಈ ಸಾಂಸ್ಕೃತಿಕ ಕ್ರಾಂತಿಯ ಹಲವಾರು ಸೃಜನಶೀಲ ತಿರುವುಗಳನ್ನು ಗುರುತಿಸಲಾಗಿದೆ. ಕಲ್ಯಾಣಕ್ರಾಂತಿಯ ಭಿನ್ನ ರೀತಿಯ ಬೆಳವಣಿಗೆಯ ಹಂತಗಳನ್ನು ಒಳಗೊಂಡು ವೈರುಧ್ಯಗಳೊಂದಿಗೆ ಏಕಮುಖತೆಯನ್ನು ಪಡೆದುಕೊಂಡಿರುವುದನ್ನು ಗುರುತಿಸಲಾಗಿದೆ. ಶ್ರಮಿಕ ಸಂಸ್ಕೃತಿಯ ಕೊಡುಗೆಗಳನ್ನು ಪ್ರಮುಖ ಅಧ್ಯಾಯಗಳಲ್ಲಿ ಬಳಸಿಕೊಳ್ಳಲಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಉಂಟಾದ ಈ ಕ್ರಾಂತಿಯು ಬಹುರೂಪಿಯಾಗಿದ್ದು ಆ ವಿಶಿಷ್ಟತೆಗಳನ್ನು ಗುರುತಿಸಲಾಗಿದೆ. ಈ ಕ್ರಾಂತಿಯಲ್ಲಿ ಅಸಾಮಾನ್ಯರಿಂದ ಹಿಡಿದು ಕಟ್ಟಕಡೆಯ ಮನುಷ್ಯನವರೆಗೂ ಅಂತರ್ಗತವಾಗಿರುವುದನ್ನು ತಿಳಿಸಲಾಗಿದೆ.

ಅಂದಿನ ಕಾಲಮಾನದಲ್ಲಿದ್ದ ಜೈನ, ಬೌದ್ಧ, ವೈದಿಕ, ಶೈವಧರ್ಮಗಳಲ್ಲಿ ಕಂಡುಬರುತ್ತಿದ್ದ ಏಕತಾನತೆಯನ್ನು ಹೋಗಲಾಡಿಸಲು ಈ ಹೊಸ ಧರ್ಮದ ಉದಯ ಎಷ್ಟರಮಟ್ಟಿಗೆ ಪ್ರಯತ್ನಶೀಲವಾಗಿ, ಹೇಗೆ ಭಾಗವಹಿಸಿತೆಂಬುದನ್ನು ತಿಳಿಸಲಾಗಿದೆ. ಹೀಗೆ ಪ್ರಾರಂಭಗೊಂಡ ಧರ್ಮದ ಕ್ರಾಂತಿಯು ಚೈತನ್ಯದಾಯಕ ಸಂಸ್ಕೃತಿಯನ್ನು ಹುಟ್ಟುಹಾಕಿತು. ಈ ಸನ್ನಿವೇಶ ಜಡಸಂಸ್ಕೃತಿಯ ಪಳೆಯುಳಿಕೆಗಳನ್ನು ಮುರಿಯಲು ಪ್ರಯತ್ನಿಸಲಾಗಿದೆ.

ಉಪಸಂಸ್ಕೃತಿಗಳಲ್ಲಿ ಆದಂತಹ ಸಾಂಸ್ಕೃತಿಕ ವಿಭಿನ್ನತೆ, ವೃತ್ತಿಯಲ್ಲಾದ ಗೌರವಾಧಾರಗಳನ್ನು ಗುರುತಿಸಲಾಗಿದೆ. ಇಂತಹ ಚಾರಿತ್ರಿಕ ಸಂದರ್ಭಗಳು ನನ್ನ ಸಂಶೋಧನೆಯ ವ್ಯಾಪ್ತಿಯಲ್ಲಿ ಒಳಪಡುತ್ತವೆ.

ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಟ್ಟಿದ ಕಲ್ಯಾಣಕ್ರಾಂತಿಯು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ ಬೆಳವಣಿಗೆ ಸಾಧಿಸಿದ್ದನ್ನು ಗುರುತಿಸಲಾಗಿದೆ. ಪ್ರಾಚೀನ ಮತ್ತು ಆಧುನಿಕ ಯುಗಗಳ ಕೊಂಡಿಯಂತಿರುವ ಮಧ್ಯಕಾಲದ ಸಾಂಸ್ಕೃತಿಕ ಸನ್ನಿವೇಶದ ಅವತರಣಿಕೆಯಡಿಯಲ್ಲಿ ಕ್ರಾಂತಿಗೆ ಸಂಬಂಧಿಸಿದ್ದನ್ನು ವೈಚಾರಿಕ ದೃಷ್ಟಿಕೋನದಿಂದ ಅವಲೋಕಿಸಲಾಗಿದೆ.

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಒಡಮೂಡಿಬಂದ ಮುಂಚೂಣಿ ನಾಯಕರ ವಚನಗಳನ್ನು ಆಧಾರವಾಗಿಟ್ಟುಕೊಂಡು ಆ ವಚನಗಳೊಳಗೆ ಕಂಡುಬರುವ ವಿಚಾರಗಳಲ್ಲಾದ ಬದಲಾವಣೆ, ಸಾಂಸ್ಕೃತಿಕ ಸಂಬಂಧಗಳ ಸೂಕ್ಷ್ಮತೆಯ ಬಗ್ಗೆ ಗಮನಹರಿಸಲಾಗಿದೆ. ಈ ರೀತಿ ಆದಂತಹ ಸಾಂಸ್ಕೃತಿಕ ಬದಲಾವಣೆಗಳನ್ನು ತಿಳಿಸಲಾಗಿದೆ. ಕಲ್ಯಾಣದ ಸ್ಥಳ ವಿಶೇಷ, ಸಾಂಸ್ಕೃತಿಕ ಬೆಳವಣಿಗೆಯ ಹಂತಗಳು, ಚಾರಿತ್ರಿಕ ಮಹತ್ವವು ಕ್ರಾಂತಿಗೆ ಹೇಗೆ ಪೂರಕವಾಗಿ ನಿಂತವು ಎಂಬುದರ ವಿವೇಚನೆ ಇಲ್ಲಿದೆ.

ಪ್ರಭುಮಾನ್ಯ ಸಂಸ್ಕೃತಿಯ ಕಾಲದಲ್ಲಿ ಕಂಡಂತಹ ಕ್ರಾಂತಿಕಾರಕ ಅಂಶಗಳು ಬಹುಮುಖ್ಯವಾದವು. ಕಲ್ಯಾಣದಲ್ಲಿ ಕ್ರಾಂತಿಯ ಸಂದರ್ಭದಲ್ಲಿ ಆಳುತ್ತಿದ್ದ ಬಿಜ್ಜಳ ಮಹಾರಾಜನ ಆಳ್ವಿಕೆಯ ಹೊತ್ತಿಗೆ, ಸಾಮಾನ್ಯಜನರಲ್ಲಿ ಉಂಟಾದ ಜಾಗೃತಿ ಒಂದು ಸಿದ್ಧಪರಂಪರಾಗತ ವ್ಯವಸ್ಥೆಯ ವಿರುದ್ಧ ಸಿಡಿಯುವಂತೆ ಮಾಡಿತು. ಈ ಸಂದರ್ಭದಲ್ಲಿ ಸಾಮಾಜದ ಎಲ್ಲಾ ಘಟಕಗಳ ಮೇಲೆ ಕಲ್ಯಾಣಕ್ರಾಂತಿಯು ಪರಿಣಾಮವನ್ನು ಬೀರಿತೆಂಬುದನ್ನು ವಿವೇಚಿಸಲಾಗಿದೆ.

ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಉಂಟಾದ ಬಹುತೇಕ ಕ್ರಾಂತಿಗಳಿಗೆಲ್ಲ ಮೂಲ ಕಾರಣ ಧರ್ಮ. ಕಲ್ಯಾಣಕ್ರಾಂತಿ ಹುಟ್ಟಿಕೊಂಡಿದ್ದೇ ಧರ್ಮಗಳಲ್ಲುಂಟಾದ ಆಷಾಢಭೂತಿತನದಿಂದ ಜೈನ, ವೈದಿಕ, ಶೈವ ಪಂಥಗಳ ವಿಕೃತ ಆಚರಣೆಗಳು, ಬೌದ್ಧಧರ್ಮದ ಅವನತಿ ಕ್ರಾಂತಿಗೆ ಪೂರಕವಾಗಿಯೂ ಕೆಲವೊಮ್ಮೆ ವೈರುಧ್ಯ ಅಂಶಗಳಿಂದಲೂ ಕೂಡಿಕೊಂಡು ವೀರಶೈವ ಧಾರ್ಮಿಕ ಸಂಸ್ಕೃತಿಯೊಂದು ಅವತರಿಸಲು ಕಾರಣವಾಯಿತು. ಇಂತಹ ಸ್ಥಿತ್ಯಂತರದ ಧಾರ್ಮಿಕ ಪ್ರವೃತ್ತಿಯಲ್ಲಿ ತೊಡಗಿದ ಸಾಮಾನ್ಯರು ಮತ್ತು ಬಸವಾದಿ ಶಿವಶರಣರ ಚಿಂತನೆಗಳನ್ನು ಗುರುತಿಸಲಾಗಿದೆ.

ಜೀವನೋಪಾಯಕ್ಕೆ ಕಾಯಕಸ್ವರೂಪಿಯಾದ ವೃತ್ತಿ ಆಧರಸಿ ಸನಾತನ ಧರ್ಮವನ್ನು ಪರಿಷ್ಕರಿಸಿ ಅದರೊಳಗೆ ನಮ್ಮ ಉನ್ನತಿಯ ಕಾಣುವುದು ಇವರ ಧ್ಯೇಯವಾಗಿತ್ತು. ಸಮಾಜದ ಕಟ್ಟಕಡೆಯ ಮನುಷ್ಯನನ್ನು ನಿರಾಕರಿಸಿದ್ದ ಧಾರ್ಮಿಕ ವಲಯವನ್ನು ತಿರಸ್ಕರಿಸಿ ಪರ್ಯಾಯ ಮಾರ್ಗಗಳತ್ತ ತಮ್ಮ ಮನಸ್ಸುಗಳನ್ನು ಕಟ್ಟಿಕೊಳ್ಳುವಲ್ಲಿ ಕ್ರಾಂತಿಯು ಸಫಲವಾಗುತ್ತದೆ. ಇಂಥ ಕಾಲದಲ್ಲಿದ್ದ ಮತಪಂಥಗಳಾದ ಕಾಳಾಮುಖ, ಪಾಶುಪತ, ಲಾಕುಲಿಶ, ಕಾಪಾಲಿಕ ಪಂಥಗಳನ್ನು ತಿರಸ್ಕರಿಸಿದರು. ಏಕೆಂದರೆ ಈ ಪಂಥಗಳಲ್ಲಿದ್ದ ವಿಪರೀತವಾದ ಕಠಿಣ ವ್ರತಾಚರಣೆಗಳಿಂದ ಸಾಮಾನ್ಯ ಜನ ಬೇಸರಗೊಂಡಿದ್ದರು. ಇದಲ್ಲದೆ ಶೈವಧರ್ಮ, ಜೈನಧರ್ಮಗಳು ಕೂಡ ಇದೇ ಹಾದಿಯಲ್ಲಿದ್ದವು. ಈ ಕಾರಣದಿಂದಲೆ ಹನ್ನೆರಡನೆ ಶತಮಾನದಲ್ಲಿ ಧರ್ಮಸುಧಾರಣೆಗೆ ಶರಣರು ತೊಡಗಿಕೊಂಡರು. ಧರ್ಮಸುಧಾರಣೆಯ ಪ್ರತಿಫಲದಿಂದಲೆ ವೀರಶೈವಧರ್ಮದ ಉಗಮಕ್ಕೆ ಕಾರಣವಾಯಿತೆಂಬುದು ನನ್ನ ಅಭಿಪ್ರಾಯ.

ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ, ಜಾತಿ, ರೂಢಿ, ಸಂಪ್ರದಾಯ, ನಂಬಿಕೆ, ಆಚಾರ-ವಿಚಾರಗಳಲ್ಲಿ ಹೊಸ ಬದಲಾವಣೆಗಳಾದವು. ನವೀನ ಸಮಾಜವನ್ನು ಕಟ್ಟುವಿಕೆಗೆ ಶರಣರು ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಸನ್ನಿವೇಶದಲ್ಲಿ ತಮ್ಮ ವಿಚಾರಗಳ ಚರ್ಚೆ ಅವುಗಳಿಂದ ಉಂಟಾದ ಭಿನ್ನಾಭಿಪ್ರಾಯಗಳ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ವೈರುಧ್ಯಗಳುಂಟಾಗಲು ಕಾರಣವಾದವು. ಇಲ್ಲಿ ಮುಖ್ಯವಾಗಿ ಸ್ಥಾವರ-ಜಂಗಮ, ಅರುಹು-ಕುರುಹು, ಭವಿ-ಭಕ್ತ, ಸತಿ-ಪತಿ, ಮುಂತಾದ ಸಂಗತಿಗಳನ್ನು ಕುರಿತು ಚರ್ಚಿಸಲಾಗಿದೆ. ಈ ಎಲ್ಲಾ ವೈರುಧ್ಯಗಳು ಕಲ್ಯಾಣದಕ್ರಾಂತಿಗೆ ಹೊಸ ತಿರುವುನೀಡಿರುವುದನ್ನು ಗಮನಿಸಬಹುದಾಗಿದೆ.

ಕಲ್ಯಾಣವು ರಾಜಕೀಯ, ಸಾಂಸ್ಕೃತಿಕ ಕೇಂದ್ರವಾಗಲು ಹಲವು ಕಾರಣಗಳಿದ್ದವು. ಅಂದು ಚಾಲುಕ್ಯ ಅರಸರುಗಳು ವಿಕ್ರಾಮಾದಿತ್ಯನಂತೆ ದೂರದೃಷ್ಟಿ ಪ್ರಗತಿ ಧೋರಣೆಯವರಾಗಿರಲಿಲ್ಲ. ಪುರೋಹಿತಶಾಹಿ ಪೋಷಕರಾಗಿದ್ದರು. ಈ ಸಂದರ್ಭದಲ್ಲಿ ಕೆಳಸ್ತರದಿಂದ ಹಂತ-ಹಂತವಾಗಿ ಮೇಲೇರಲು ಹವಣಿಸುತ್ತಿದ್ದ ಬಿಜ್ಜಳ ಬಸವಣ್ಣನಿಂದ ಪ್ರೇರೇಪಿತನಾಗಿದ್ದು ಮತ್ತು ಕಲ್ಯಾಣದ ರಾಜನಾಗಿದ್ದು ಕೂಡ ವಚನಕಾರರಿಗೆ ಅಲ್ಲಿ ನೆಲೆಯೂರಲು ಸಾಧ್ಯವಾಯಿತು.

11ನೇ ಶತಮಾನದ ಕೊನೆಯಲ್ಲಿ ಮತ್ತು 12ನೇ ಶತಮಾನದ ಆರಂಭದಲ್ಲಿ ಬಂದು ಹೋದ ಚಾಲುಕ್ಯ ಅರಸುಗಳು ದುರ್ಬಲರಾಗಿದ್ದರು. ಅಂತಹ ಸಂದರ್ಭದಲ್ಲಿ ಸಾಮ್ರಾಜ್ಯವೊಂದರ ಸಾಮಂತರುಗಳು ಸ್ವತಂತ್ರ್ಯರಾಗಲು ಬಯಸಿದ ಪರಿಣಾಮವಾಗಿ ದಂಗೆ ಎದ್ದ ಸಾಮಂತರುಗಳನ್ನು ನಿಯಂತ್ರಿಸುವಲ್ಲಿ ಹಲವು ಯುದ್ಧಗಳು ಘಟಿಸಿ ಸಾಮ್ರಾಜ್ಯ ಆರ್ಥಿಕವಾಗಿ ದಿವಾಳಿಯಾಯಿತು. ಜನಸಾಮಾನ್ಯರ ಮೇಲೆ ತೆರಿಗೆಯ ಭಾರ ಹೆಚ್ಚಾಯಿತು. ಪರಿಣಾಮವಾಗಿ ಜನರು ಹೊಸ ರಾಜನ ನಿರೀಕ್ಷಿಸುವಂತಾಯಿತು. ಇದೆ ಸುಸಂದರ್ಭವನ್ನು ಸುವರ್ಣಾವಕಾಶವೆಂದು ಬಳಸಿಕೊಂಡ ಚಾಲುಕ್ಯನ ಮಹಾಮಂಡಲಾಧೀಶ್ವರನಾಧ ಬಿಜ್ಜಳ, 3ನೇ ತೈಲಪನನ್ನು ಅಧಿಕಾರದಿಂದ ಕೆಳಗಿಳಿಸಿ ಮಹರಾಜನಾಗಿ ದಂಗೆಎದ್ದಿದ್ದ ಸಾಮಂತರುಗಳನ್ನು ನಿಯಂತ್ರಿಸಿ ತನ್ನೊಂದಿಗೆ ಮಂಗಳವಾಡದಿಂದ ಬಂದಿದ್ದ ಕರಣಿಕ ಬಸವಣ್ಣನವರನ್ನು ರಾಜಭಂಡಾರಿ ಮಾದಿಕೊಂಡ. ಇದರಿಂದ ಬಿಜ್ಜಳನು ಆರ್ಥಿಕ ಪ್ರಗತಿ ಸಾಧಿಸಲು ಕಾರಣವಾಯಿತು. ಬಸವಣ್ಣನವರು ಕಲ್ಯಾಣಕ್ಕೆ ಅಡಿಯಿರಿಸಿದ ಮೇಲೆ ಪರಿವರ್ತಿತ, ವೈಚಾರಿಕ ಸಮಾಜ ನಿರ್ಮಾಣಮಾಡಲು ನೆಡಿಸಿದ ಬೌದ್ಧಿಕ ಹೋರಾಟ ಅವನನ್ನು ನಾಡಿನಾದ್ಯಾಂತ ಕೀರ್ತಿಪ್ರಾಯನನ್ನಾಗಿ ಮಾಡಿತು. ಆಗ ನಾಡಿನ ನಾನಾ ಭಾಗದಿಂದ ಸಾಸಿರ ಸಂಖ್ಯೆಯಲ್ಲಿ ಕಲ್ಯಾಣದ ಕಡೆಗೆ ಜನಸಾಗರವೆ ಹರಿದು ಬಂದಿತು. ಕಾಯಕತತ್ವ ಪ್ರತಿಪಾದನೆ ಮಾಡಿದ್ದರಿಂದ ದುಡಿಮೆಯ ಕೈಗಳು ದ್ವಿಗುಣಗೊಂಡವು.

ಅಂದಿನ ಕಾಲದಲ್ಲಿ ಸಾಮಾನ್ಯನ ಬದುಕು ಸಂಕ್ರಮಣ ಸ್ಥಿತಿಯಲ್ಲಿತ್ತು. ಆದ್ದರಿಂದ ಶ್ರೀಸಾಮಾನ್ಯರು ವಿಶಿಷ್ಟವಾಗಿದ್ದ ಹಾಗೂ ತಮಗೆ ಹಿತವೆನಿಸಿದ್ದ ಬದುಕನ್ನು ಅನುಸರಿಸತೊಡಗಿದರು. ಇಂತಹ ಸನ್ನಿವೇಶದಲ್ಲಿ ರಾಜಾಶ್ರಯವನ್ನು ಅವಲಂಬಿಸಿದ್ದ ಶ್ರೀಸಾಮಾನ್ಯರ ಬದುಕಿನಲ್ಲಿ ಬಿರುಕುಗಳುಂಟಾದವು. ಬದುಕಿನಲ್ಲಾದ ವ್ಯತಿರಿಕ್ತ ಮೌಲ್ಯಗಳಿಂದ ನೊಂದು ಬೇಸತ್ತ ಜನರು ತಮ್ಮ ಹೊಸ ಸಮಾಜದತ್ತ ಮುಖಮಾಡಿದುದನ್ನು ತಿಳಿಸಲಾಗಿದೆ.

ಸಂಸ್ಕೃತಿಯು ಮಾನವನ ಜೀವನಾಡಿ. ಪ್ರಜ್ಞಾಶೂನ್ಯನನ್ನು ವಿವೇಚನಾಶೀಲನನ್ನಾಗಿ ಮಾಡುತ್ತದೆ. ಅದರೊಳಗೆ ಮಾನವನ ಅರಿವು, ನಂಬಿಕೆ, ಚಿಂತನಾವಿಧಾನ, ನಡವಳಿಕೆ ಮತ್ತು ಬದುಕಿನ ಒಟ್ಟು ವಿನ್ಯಾಸವನ್ನು ಒಳಗೊಂಡಿರುತ್ತದೆ. ಮನುಕುಲದ ಬದುಕಿನ ಚಟುವಟಿಕೆಗಳು ಸಂಸ್ಕೃತಿಯ ಮೇಲೆ ಗಾಢ ಪ್ರಭಾವ ಬೀರುತ್ತದೆ. ಮಧ್ಯಕಾಲೀನ ವಚನಚಳುವಳಿಯ ಸಂದರ್ಭದಲ್ಲಿ ಬಹುಸಂಸ್ಕೃತಿಗಳಿದ್ದರೂ. ಪ್ರಧಾನವಾಗಿ ಶರಣ ಒಪ್ಪಿತ ಸಂಸ್ಕೃತಿಗಳೇ ಮೇಲುಗೈ ಸಾಧಿಸಿದ್ದವು. ಕಲ್ಯಾಣಕ್ರಾಂತಿಯು ಪ್ರಾರಂಭವಾದ ನಂತರದಲ್ಲಿ ಶ್ರಮ ಮೂಲಪರವಾದ ಸಂಸ್ಕೃತಿಗಳ ಕ್ರಿಯಾಶೀಲತೆಯಿಂದ ಪ್ರಧಾನ ಸಂಸ್ಕೃತಿಗೆ ಪೆಟ್ಟು ಬೀಳುತ್ತದೆ. ಇದರ ಪರಿಣಾಮವಾಗಿ ಶ್ರಮಮೂಲ ಜನರ ಒಗ್ಗೂಡುವಿಕೆಯಿಂದ ಶರಣಸಂಸ್ಕೃತಿ ಪ್ರಧಾನವಾಗಿ ಮೇಳೈಸುತ್ತದೆಂಬುದನ್ನು ಗುರುತಿಸಲಾಗಿದೆ.

ಸ್ಥಾವರವಾಗಿದ್ದ ಸಂಪ್ರದಾಯಗಳನ್ನು ತಕ್ಷಣದಿಂದ ಬದಲಿಸುವ ಪ್ರವೃತ್ತಿಗಳು ಎದುರಾದಾಗ ಮೂಲ ಸ್ವರೂಪದ ಮನಃಸ್ಥಿತಿಗಳಿಗೆ ಸಹಜವಾಗಿ ಧಕ್ಕೆಯುಂಟಾಗುತ್ತದೆ. ಇದರ ಪರಿಣಾಮವಾಗಿ ಪ್ರಗತಿಪರರ ಮತ್ತು ವೈದಿಕರ ನಡುವೆ ಸಂಘರ್ಷ ನಡೆಯುತ್ತವೆ. ಇಂತಹ ಕಾಲಘಟ್ಟದಲ್ಲಿ ವಚನಗಳ ವೈಶಿಷ್ಟ್ಯ ಮತ್ತು ಬಹುರೂಪಿ ಸಂಸ್ಕೃತಿಗಳ ಬೆಳವಣಿಗೆಯಾಗುತ್ತಲೇ ವಚನಕಾರರು ಸೃಷ್ಟಿಸಿದ ವಚನಗಳ ಸಂಸ್ಕೃತಿಯ ನಡುವೆ ಜೈನ, ವೈದಿಕ, ಶೈವ ಸಂಸ್ಕೃತಿಗಳ ನಡುವೆ ತಾತ್ವಿಕ ಸಂಘರ್ಷವಾಗಿ ಹೊಸ ಜೀವನ ಶೈಲಿ ಕಂಡುಕೊಂಡರು.

ಕ್ರಾಂತಿಯ ಕಾಲದಲ್ಲಿ ಸಂಕ್ರಮಣಗೊಂಡ ಭಾಷಿಕ ಸಮುದಾಯಗಾಳು ಸ್ವತಂತ್ರವಾಗಿ ಮಾತನಾಡತೊಡಗಿದ್ದು ಈ ಕ್ರಾಂತಿಯ ವಿಶೇಷವಾಗಿದೆ. ಮಾತು ಸಂವಹನ ಮಾಧ್ಯಮವಾಗಿ ಸೃಷ್ಟಿಯ ಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಜಗತ್ತಿನೊಡನೆ ಅನನ್ಯವಾದ ಸಂಪರ್ಕಸಾಧಿಸಲು ಪ್ರಯತ್ನಿಸಿರುವುದು ಒಂದು ಸಾಂಸ್ಕೃತಿಕ ಕಥನವಾದರೆ, ಅಕ್ಷರಕಲಿತ ಒಂದು ವರ್ಗ ಸಾಹಿತ್ಯಪ್ರಭುಗಳಾಗಿ ಮೆರೆದದ್ದು ಇನ್ನೊಂದೆಡೆ. ರಾಜಾಶ್ರಯವಿಲ್ಲದೆ ಒಂದು ಅಲಂಕಾರಿಕ ಚೌಕಟ್ಟನ್ನು ಮೀರಿ 'ಆನು ಒಲಿದಂತೆ ಹಾಡುವ' ಸಹಜ ಪ್ರವೃತ್ತಿಯಿಂದ ಅಕ್ಷರಕಲಿತ ಪ್ರಗತಿಪರ ವರ್ಗ, ತಮ್ಮ ವಚನಗಳ ರಚನೆಗೆ ತೊಡಗಿದ್ದು ವಿಶೇಷ. ಇದರ ಪರಿಣಾಮವಾಗಿ ಬದುಕಿನ ಹಲವು ಮುಖಗಳ

ಬಗ್ಗೆ ಪರಿಚಯಿಸಿ, ಬದುಕಿನಲ್ಲಿ ಉಂಟಾಗುವ ಸಮಸ್ಯೆಗಳನ್ನು ತಿಳಿದು, ಅವುಗಳನ್ನು ನಿವಾರಿಸುವಲ್ಲಿ ಪ್ರಯತ್ನಶೀಲವಾಗುತ್ತದೆ ಎಂಬುದರತ್ತ ನನ್ನ ಸಂಶೋಧನೆಯಲ್ಲಿ ಚಿತ್ತಹರಿಸಲಾಗಿದೆ.

ಸರಳ, ಸುಲಲಿತವಾದ ದೇಸಿ ನೆಲೆಗಟ್ಟಿನಲ್ಲಿ ಹುಟ್ಟಿಕೊಂಡ ವಚನ ರಚನೆಯು 'ಧರ್ಮ ಮತ್ತು ಭಕ್ತಿ' ಯ ಪ್ರಧಾನ ನೆಲೆಗಟ್ಟಿನ ಮೇಲೆ ರೂಪಗೊಂಡಿತು. ಇದರ ಮುಂದುವರೆದ ಭಾಗದಂತೆ ಸಾಮಾಜಿಕ ಜನಜೀವನದಲ್ಲಿ ಅನೇಕ ಬದಲಾವಣೆಗಳನ್ನು ಹುಟ್ಟಿಹಾಕಿತು. ಸಂಸ್ಕೃತಿಗೆ ಪ್ರತಿ ಸಂಸ್ಕೃತಿ, ಮೂಲ ಮತ್ತು ಹೊಸ ಆರ್ಥಿಕ ಪರಿಕಲ್ಪನೆ, ಅನುವಂಶೀಯ ಅಥವಾ ಅಧಿಕಾರಶಾಹಿ ಪ್ರವೃತ್ತಿಯನ್ನು ತೊಡೆದುಹಾಕಿ ಸಂಘಟನಾತ್ಮಕ ಹೋರಾಟ ರೂಪಿಸಿ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿರುವುದರ ಬಗ್ಗೆ ಬೆಳಕು ಚೆಲ್ಲಲಾಗಿದೆ. ಸಮಾಜವಾದ ಮತ್ತು ಸಮತಾವಾದಗಳು ಅಂದಿನ ಕಾಲದ ರಾಜಾಶ್ರಯಕ್ಕೆ ಲಗ್ಗೆಯಿಟ್ಟು ಪ್ರಭುಮಾನ್ಯಪದ್ಧತಿಯ ವಿರುದ್ಧ ಸೆಣಸಾಡಿದ ಬಗ್ಗೆ ಹೇಳಲಾಗಿದೆ.

ಕಲ್ಯಾಣಕ್ರಾಂತಿಯ ಸಾಮಾಜಿಕ ವೈರುಧ್ಯದ ಬಗ್ಗೆ ಗಮನಹರಿಸಲಾಗಿದೆ. ಸೈದ್ಧಾಂತಿಕ ಚಿಹ್ನೆ, ಸಾಮಾಜಿಕ ಹೋರಾಟದ ರಚನಾತ್ಮಕ ವಿಚಾರಗಳ ಬಗ್ಗೆ ವಿವರಿಸಲಾಗಿದೆ. ಧಾರ್ಮಿಕ ಮತಪಂಥಗಳ ತಿರಸ್ಕಾರದ ಬಗ್ಗೆ ಹಾಗೂ ಒಂದು ಧರ್ಮ ನಿರಾಕರಿಸುತ್ತಲೇ ಇನ್ನೊಂದು ಹೊಸ ಧರ್ಮದ ಬಗ್ಗೆ ತಿಳಿಸಲಾಗಿದೆ. ಕಲ್ಯಾಣ ಕ್ರಾಂತಿಯ ಭಾಷಾಸ್ವರೂಪ, ಸ್ತ್ರೀ ಪರವಾದ ನಿಲುವುಗಳ ಬಗ್ಗೆ, ಸ್ವಾಭಿಮಾನ ಚಳುವಳಿಯ ನಿಲುವುಗಳು, ಅನುಭವ ಮಂಟಪದ ವಿಚಾರಗಳು, ಕ್ರಾಂತಿಯ ಸಂದರ್ಭದಲ್ಲಾದ ಬದಲಾವಣೆಗಳ ಬಗ್ಗೆ ಸಂಶೋಧಿಸಲಾಗಿದೆ.

ಮನುಕುಲದ ಏಳಿಗೆಗೋಸ್ಕರವಾಗಿ ಉದಯಗೊಂಡ ಕಲ್ಯಾಣಕ್ರಾಂತಿಯು ಎಲ್ಲಾ ರೀತಿಯ ಆಲೋಚನಾಕ್ರಮಗಳಿಗೆ ಒತ್ತು ನೀಡಿ, ಹೊಸ ಹಾದಿ ತೋರಿತು. ಹಲವು ಜಾತಿ–ಜನಾಂಗ–ಕುಲಗಳ ಹಿತದೃಷ್ಟಿಯಿಂದ ಸಮನ್ವಯ ನೀತಿಗಳನ್ನು ಗರ್ಭೀಕರಿಸಿಕೊಂಡಂತೆ ಕಲ್ಯಾಣಕ್ರಾಂತಿಯ ನೀತಿಗಳು ಹೊಸಬದುಕನ್ನು ಸೃಷ್ಟಿಸಿತೆಂಬುದರ ಬಗ್ಗೆ ತಿಳಿಸಲಾಗಿದೆ. ಸಮಗ್ರಾಲೋಚನೆಯ 'ಸ್ಥಾವರ ವಿರೋಧಿಸುವ ಜಂಗಮ' ವನ್ನು ಪರಿಷ್ಕರಿಸುವ ದೃಷ್ಟಿಕೋನದ ಅಂಶಗಳನ್ನು ಸಂಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಕಲ್ಯಾಣಕ್ರಾಂತಿ ಮತ್ತು ಸಾಂಸ್ಕೃತಿಕ ಸನ್ನಿವೇಶಕ್ಕೆ ಪೂರಕವಾಗಿ ನಿಲ್ಲುವಂತಹ ಗ್ರಂಥಗಳು, ಸಂಶೋಧನಾ ಲೇಖನಗಳನ್ನು ಅವಲೋಕಿಸಲಾಗಿದೆ. ಮಧ್ಯಕಾಲೀನ ಸಾಹಿತ್ಯಸಂಧರ್ಭ, ಅಂದಿನಕಾಲದ ಸಮಕಾಲೀನತೆ ತಿಳಿಸುವ ಗ್ರಂಥಗಳು, ಆಧುನಿಕ ಯುಗಧರ್ಮದಲ್ಲಿ ಮೂಡಿಬಂದ ಸಂಶೋಧನಕೃತಿ, ವೈಚಾರಿಕಲೇಖನಗಳು, ಪತ್ರಿಕೆಗಳಲ್ಲಿ ಪ್ರಕಟಗೊಂಡ ವಿಚಾರಪೂರ್ಣಲೇಖನಗಳು, ಇವುಗಳನ್ನು ಒಳಗೊಂಡಂತೆ ಪ್ರಧಾನವಾಗಿ 12ನೇ ಶತಮಾನದಲ್ಲಿದ್ದ ವಚನಗಳ ಸತ್ಯಾಸತ್ಯತೆಗಳನ್ನು ಕೇಂದ್ರವಾಗಿಸಿಕೊಂಡು ವಚನಚಳುವಳಿಯ ಪ್ರಮುಖ ಮುಂಚೂಣಿಯ ಶರಣರಲ್ಲದೆ ತೆರೆಮರೆಯಲ್ಲಿ ಕ್ರಾಂತಿಪೂರಕವೆನಿಸಿದ ವಚನಗಳನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆಯನ್ನು ಮಾಡಲಾಗಿದೆ.

12ನೇ ಶತಮಾನದ ಕಲ್ಯಾಣದಲ್ಲಿ ನಡೆದ ಸಾಂಸ್ಕೃತಿಕ ಸನ್ನಿವೇಶವನ್ನು ಮುಖ್ಯವಾಗಿ ಕುರಿತು ಈ ಸಂಶೋಧನ ಪ್ರಬಂಧದಲ್ಲಿ ಚಿಂತನೆ ಮಾಡಲಾಗಿದೆ. ಸಂಸ್ಕೃತಿ, ಭಾಷೆ, ಸಮಾಜವಾದ, ಸಮತಾವಾದ, ಸ್ವಾಭಿಮಾನಿ ಚಳುವಳಿ ಮತ್ತು ಧರ್ಮಪಂಥಗಳ ಬಗ್ಗೆ ಶರಣರಿಗಿದ್ದ ಅರಿವುಗಳ ಕಡೆಗೆ ಹೆಚ್ಚು ಒತ್ತು ನೀಡಲಾಗಿದೆ. ವಚನಗಳಲ್ಲಿ ಕಂಡುಬರುವ ಕಲ್ಯಾಣ ಕ್ರಾಂತಿಯ ಆಯಾಮಗಳು, ಸಾಮಾಜೀಕರಣದ ಸಾಂಸ್ಕೃತಿಕ ಇತಿ–ಮಿತಿಗಳು, ಉಪಸಂಸ್ಕೃತಿ ಮತ್ತು ಊಳಿಗಮಾನ್ಯ ಪದ್ಧತಿ ವಿಷಯಗಳು, ವಚನಗಳ ಮನೋವೈಜ್ಞಾನಿಕ ಬಂಡಾಯಗಳು, ಇವೆ ಮೊದಲಾದವುಗಳನ್ನು ಕುರಿತು ಅಧ್ಯಯನಮಾಡಲಾಗಿದೆ. ವಚನಗಳಲ್ಲಿನ ಬೆಡಗು, ಅನುಭವ, ಶಿವಶರಣರ ಚಾರಿತ್ರಿಕ ದಾಖಲೆಗಳ ಬಗ್ಗೆ ಇನ್ನು ಭಿನ್ನ ನೆಲೆಯಲ್ಲಿ ಕುರಿತು ಆಳವಾಗಿ ಅಧ್ಯಯನ ಮಾಡುವ ಸಾಧ್ಯತೆ ಇದೆ. ಈ ಪ್ರಬಂದದಲ್ಲಿ ಸಾಹಿತ್ಯಾಲಂಕಾರ, ಶೈಲಿ, ಜನಪದ ರೂಪಗಳ ಬಗ್ಗೆ ವಿವೇಚಿಸಿಲ್ಲ, ಗಾಢವಾಗಿ ಅಧ್ಯಯನ ಮಾಡಲು ಹೊರಟರೆ ಇದು ಇನ್ನೊಂದು ಪ್ರಬಂಧದ ರೂಪ ಪಡೆಯುತ್ತದೆ. ಹಾಗಾಗಿ ಈ ಪ್ರಬಂಧದ ಪ್ರಧಾನವಾದ ಸಂಶೋಧನೆ ಮತ್ತು ಚಿಂತನೆ ಎಂದರೆ ಕಲ್ಯಾಣದಲ್ಲಿ ಸಂಭವಿಸಿದ ಸಾಂಸ್ಕೃತಿಕ ಕ್ರಾಂತಿಯು ವಚನಗಳಲ್ಲಿ ಹೀಗೆ ಅಭಿವ್ಯಕ್ತವಾಗಿರುವ ನೆಲೆಯನ್ನು ಶೋಧಿಸುವ ಮತ್ತು ವಿಶ್ಲೇಷಿಸುವ ಉದ್ದೇಶವೆ ಆಗಿದೆ. ಇಂಥ ಒಂದು ಪ್ರಯೋಗಶೀಲ ಪ್ರಯತ್ನವನ್ನು ಈ ಮಹಾ ಪ್ರಬಂಧದಲ್ಲಿ ಕಾಣಿಸಿದೆ.

ಪರಾಮರ್ಶನ ಗ್ರಂಥಗಳು

1. ವಚನಸಮಗ್ರ : ಡಾ॥ ಪಿ.ವಿ. ನಾರಾಯಣ, ವಸಂತಪ್ರಕಾಶನ, ನಂ. 10, ತುಳಸಿಭವನ, ಬೆಂಗಳೂರು. 2005.
2. ಡಾ॥ ಎಸ್.ಸಿ. ನಂದಿಮಠರ ಲೇಖನಗಳು : ಸಂ. ಡಾ॥ ಬಿ.ವ್ಹಿ. ಶಿರೂರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, 2007.
3. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ॥ ಚಿದಾನಂದ ಮೂರ್ತಿ, ಪ್ರಸಾರಾಂಗ ಮೈಸೂರು. 1979.
4. ಸಿದ್ಧಗಂಗಾಶ್ರೀ : ಸಂ. ಸಿದ್ಧಯ್ಯಪುರಾಣಿಕ, ಹಳೆಯ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು. 1981.
5. ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳ : ಡಾ॥ ರಂ.ಶ್ರೀ. ಮುಗುಳಿ, ಭಾಷಾ ಸಾಹಿತ್ಯ ಮಾಲೆ, ಮೈಸೂರು, 1985.
6. ನಾನಿಲ್ಲುವಳಲ್ಲ : ಡಾ॥ ಚಂದ್ರಶೇಖರ ನಂಗಲಿ, ಕನ್ನಡ ಸಂಘ, ಬೆಂಗಳೂರು. 1998.
7. ಕರ್ನಾಟಕ ಸಂಕ್ಷಿಪ್ತ ಇತಿಹಾಸ : ಡಾ॥ ಸೂರ್ಯನಾಥ ಕಾಮತ್, ಎಂ.ಸಿ.ಸಿ ಪಬ್ಲಿಕೇಶನ್ಸ್. 2005.
8. ಶರಣ ತತ್ವ ವಿವೇಚನೆ : ಪ್ರೊ. ಬಿ. ವಿರೂಪಾಕ್ಷ, ಬಸವಸಮಿತಿ, ಬಸವ ಭವನ, ಬೆಂಗಳೂರು. 2003.
9. ಕರ್ನಾಟಕ ಚರಿತ್ರೆ : ಪ್ರೊ. ಬಿ. ಷೇಕ್ ಅಲಿ, ಪ್ರೊ. ಸುರೇಂದ್ರರಾವ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 1997.
10. ಸಾಲಾವಳಿ : ಎಸ್.ಜಿ. ಸಿದ್ಧರಾಮಯ್ಯ. ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ, ತುಮಕೂರು. 1988.
11. ವಚನಗಾರರ ಪ್ರಮುಖ ಪರಿಕಲ್ಪನೆಗಳು : ಸಂ. ಷಣ್ಮುಕಯ್ಯ ಅಕ್ಕೂರ ಮಠ, ಶ್ರೀ ಸರ್ಪ ಭೂಷಣ ಶಿವಯೋಗೀಶ್ವರ ಮಠ, ಕೆಂಪೇಗೌಡ ವೃತ್ತ, ಬೆಂಗಳೂರು –09, 1994.
12. ಮಹಾಯಾತ್ರೆ : ಡಾ॥ ಆರ್.ಸಿ. ಹಿರೇಮಠ, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ, –583221. 1997.
13. ಬಸವಣ್ಣನವರು ರಂಜಾನ್ ದರ್ಗಾ : ಲೋಹಿಯ ಪ್ರಕಾಶನ, ಬಳ್ಳಾರಿ., 2005.
14. ಭಕ್ತಿ ಪರಂಪರೆ ಮತ್ತು ಅದರ ಸಮಾಜೋಧಾರ್ಮಿಕ ಕಾಳಜಿಗಳು : ಸಂ. ಪ್ರೊ॥ ಜಿ.ಎಸ್ ಸಿದ್ಧಲಿಂಗಯ್ಯ, ಶ್ರೀ ಗಳಂಗಪ್ಪ ಪಾಟೀಲ, (ಪ್ರೊ॥ ಎಸ್.ಬಿ. ಪಾಟೀಲ) ಬಸವಾದಿ ಶರಣ ಸಾಹಿತ್ಯ ಕೇಂದ್ರ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ–585006. 1993
15. ಬಸವಣ್ಣ ಹಾಗೂ ಲಿಂಗಾಯಿತ ಧರ್ಮ : ಸಂ. ಡಾ॥ ಎಂ.ಎಂ ಕಲ್ಬುರ್ಗಿ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. 1993.
16. ಅಂಬಿಗರ ಚೌಡಯ್ಯನ ವಚನಗಳು : ಸಂ. ಡಾ॥ ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು–40, 1998.
17. ಕಾಯಕ ಪರಿಣಾಮಿ : ಸಂ. ಲಿಂಗಣ್ಣ ಸತ್ಯಂಪೇ, ಎಂ. ಬಂಡೆಪ್ಪ, ಲೋಕನಾಯಕ ಭೀಮಣ್ಣ ಖಂಡ್ರೆ 1991.
18. ಶೈವ ದರ್ಶನ : ಡಾ॥ ಜೆ. ರುದ್ರಪ್ಪ, ಪ್ರಸಾರಾಂಗ, ಮೈಸೂರು ವಿವಿ, 1973.

19. ವಚನಪರಿಭಾಷಿಕ ಕೋಶ : ಸಂ. ಡಾ॥ ಎಸ್. ವಿದ್ಯಾಶಂಕರ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. 1993.

20. ಚೆನ್ನಬಸವಣ್ಣನವರು (ಚರಿತ್ರೆ, ತತ್ವ, ಸಾಹಿತ್ಯಾದಿ ವಿವೇಚನೆ) : ಡಾ॥ ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1965.

21. ಅವಲೋಕನ (ಕರ್ನಾಟಕ ಪರಂಪರೆ ಸಮೀಕ್ಷೆ) : ಸಂ. ವಿಚ್ಚಿಕೆ, ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, 14/03/2006, ನೃಪತುಂಗ ರಸ್ತೆ, ಬೆಂಗಳೂರು. 1985.

22. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ : ಡಾ॥ ಸಿ.ಪಿ ಪ್ರಭುಸ್ವಾಮಿ ಮಠ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ. 1996.

23. ವಚನ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು : ವಿದ್ಯಾವತಿ ಬಸವರಾಜ ಪಾಟೀಲ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿವಿ, 2002.

24. ಜೇಡರ ದಾಸಿಮಯ್ಯ : ಸಂ. ಡಾ॥ ವಿ.ಜಿ. ಪೂಜಾರ್, ಬಸವಸಮಿತಿ, ಬಸವಭವನ, ಬಸವೇಶ್ವರ ರಸ್ತೆ, ಬಸವೇಶ್ವರ ವೃತ್ತ, ಬೆಂಗಳೂರು. 2003.

25. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಸಂ. ಪ್ರೊ॥ ಬರಗೂರು, ರಾಮಚಂದ್ರಪ್ಪ, ಕರ್ನಾಟಕ ನಾಟಕ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು. 1993.

26. ಶತಮಾನದ ಸಂಶೋಧನೆ : ಸಂ. ಎನ್.ಎಸ್. ತಾರಾನಾಥ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು. 2001.

27. ಷಟ್‌ಸ್ಥಲ ಪ್ರತಿಭೆ : ಡಾ॥ ಆರ್.ಸಿ ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1965.

28. ಸಾಹಿತ್ಯ ಕಥನ : ಡಾ॥ ಬಿ.ಆರ್. ನಾಗರಾಜು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ. 1996.

29. ಹನ್ನೆರಡನೆ ಶತಮಾನದ ಕಾಯಕ ಜೀವಿಗಳ ಚಳುವಳಿ : ಪ್ರೊ. ಸಿ. ವೀರಣ್ಣ, ನವಕರ್ನಾಟಕ ಪ್ರಕಾಶನ, 1986.

30. ವಿಮರ್ಶೆಯ ಪರಿಭಾಷೆ : ಓ.ಎಲ್. ನಾಗಭೂಷಣ ಸ್ವಾಮಿ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು. 1998.

31. ಬಸವಣ್ಣನವರ ಸಮಕಾಲೀನರು : ಸಂಪಾದಕ ಮಂಡಳಿ–ಬಸವ ಸಮಿತಿ, ಬೆಂಗಳೂರು. ಬಸವ ಸಮಿತಿ 1968.

32. ಬಸವಣ್ಣ ಹಾಗೂ ಲಿಂಗಾಯಿತ ಧರ್ಮ : (ಬಸವ ಮಾರ್ಗ–7) ಹಿರೇಮಲ್ಲೂರು ಈಶ್ವರನ್ ಕರ್ನಾಟಕ ವಿವಿ ಧಾರವಾಡ, 1989.

33. ಶರಣರ ಅನುಭಾವ ಸಾಹಿತ್ಯ : ಡಾ॥ ಹೆಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು – 4, 1963.

34. ಕನ್ನಡ ಸಂಶೋಧನೆಯ ವೈಧಾನಿಕತೆಗಳು : ಸಂ. ಡಾ॥ ಅಮರೇಶ ನುಗಡೋಣಿ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ. 2008.

35. ವೀರಶೈವ ದೀಪ್ತಿ ತತ್ವ ಚಿಂತನೆ : ಡಾ॥ ತಿಪ್ಪೇರುದ್ರಸ್ವಾಮಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ರಿ.) ಮೈಸೂರು. 1999.

36. ಭಾಷಿಕ ಬೃಹತ್ ಕರ್ನಾಟಕ, (ನೀಲಗಿರಿಯಿಂದ ನಾಸಿಕ್‌ವರೆಗೆ) : ಡಾ॥ ಎಂ. ಚಿದಾನಂದಮೂರ್ತಿ, ಸ್ವಪ್ನ ಬುಕ್ ಹೌಸ್, ಪ್ರಸಾರಾಂಗ, 2008.

37. ಸಮಾಜ ಸಂಶೋಧನೆ : ಎಂ. ಚಂದ್ರಪೂಜಾರಿ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ, 2005.

38. ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ : ಡಾ॥ ಎಂ.ಎಸ್. ಲಕ್ಷ್ಮೆ., ಕರ್ನಾಟಕ ವಿವಿ, ಧಾರವಾಡ, 1975.

39. ಗೂಳೂರು ಸಿದ್ಧವೀರಣ್ಣೊಡೆಯರು : ಪ್ರಭುದೇವರ ಶೂನ್ಯ ಸಂಪಾದನೆ, ಸಂಪುಟ-1, ಪ್ರೊ॥ ಸಂ.ಶಿ. ಭೂಸನೂರ ಮಠ, ರಾಪೂರಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಅದಮಾನ್ವ ಕಲ್ಲಿ ಮಠದ ಅಧಿಪತ್ಯಗಳು.

40. ಶರಣರ ತತ್ವ ವಿವೇಚನೆ : ಪ್ರೊ॥ ಬಿ. ವಿರೂಪಾಕ್ಷ, ಸ್ನೇಹ ಪ್ರಿಂಟರ್ಸ್, 2003.

41. ನಾನಿಲ್ಲುವಳಲ್ಲ : ವಿ. ಚಂದ್ರಶೇಖರ ನಂಗಲಿ, ನೇತ್ರ ಪ್ರಿಂಟರ್ಸ್, ಚಾಮರಾಜ ಪೇಟೆ, ಬೆಂಗಳೂರು-560018. 1998.

42. ಬಸವಸಾಹಿತ್ಯ (ವಿಮರ್ಶಾ ಲೇಖನಗಳ ಸಂಕಲನ) (ಕವಿಕೃತಿ ಆಧುನಿಕ ಚಿಂತನಮಾಲೆ -3) : ಸಂ.ಮೃತ್ಯುಂಜಯ ರುಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002. 2004.

43. ವಚನಗಳಲ್ಲಿ ಸಾಮಾಜಿಕ ಚಿಂತನೆ : ಡಾ॥ ಸಿ. ಸೋಮಶೇಖರ್, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥ, 2004.

44. ಶ್ರೀ ಕಂಠತೀರ್ಥ : ಎಂ.ಚಿದಾನಂದಮೂರ್ತಿ, ತಿ. ಶ್ರೀ ನಾಗಭೂಷಣ್, ತಿ.ನಂ. ಶಂಕರನಾರಾಯಣ, ತೀ.ನಂ.ಶ್ರೀ ಸಂಸಾರ ವರ್ಗದ ಪರವಾಗಿ ತಿ.ನಂ ನಾಗಭೂಷಣ್ 193, 3 ನೇ ಬ್ಲಾಕ್, ಜಯನಗರ, ಬೆಂಗಳೂರು. 1980.

45. ಕನ್ನಡ ಭಾಷೆಯ ಇತಿಹಾಸ : ಡಾ॥ ಬಿ. ರಾಮಚಂದ್ರರಾವ್, ಡಿ.ವಿ.ಕೆ. ಮೂರ್ತಿ ಮೈಸೂರು-4, 1998.

46. ಆದಿಮ : ಡಾ॥ ಮೊಗ್ಗಳ್ಳಿ ಗಣೇಶ್, ಲಕ್ಷ್ಮಿ ಮುದ್ರಣಾಲಯ, ಚಾಮರಾಜನಗರ ಪೇಟೆ, ಬೆಂಗಳೂರು. 2005.

47. ಅನುಭವ ಮಂಟಪ : ಟಿ.ಎಸ್. ಮಹದೇವಯ್ಯ, ಶ್ರೀ ರೇಣುಕ ಪವರ್ ಪ್ಲಸ್, ಬೆಂಗಳೂರು. 1998.

48. ಉತ್ತರ-ದಕ್ಷಿಣ : ಡಾ॥ ನಟರಾಜ್ ಹುಳಿಯಾರ್, ಪ್ರೊ॥ ಕಾಳೇಗೌಡ ನಾಗವಾರ, ಕರ್ನಾಟಕ ಸರ್ಕಾರ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

49. ಇಗೋ ಕನ್ನಡ, ಸಾಮಾಜಿಕ ನಿಘಂಟು : ಸಂಪುಟ-1,2., ಪ್ರೊ॥ ಜಿ. ವೆಂಕಟಸುಬ್ಬಯ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು. 2006.

50. ಶರಣರ ಅನುಭಾವ ಸಾಹಿತ್ಯ : ಡಾ॥ ಹೆಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು-4, 1963.

51. ವೀರಶೈವ ಪುರಾಣಗಳು ಒಂದು ಅಧ್ಯಯನ : ಡಾ. ಎಸ್. ವಿದ್ಯಾಶಂಕರ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು-560018 1983.

52. ಅನ್ವೇಷಕ ಅಭಿನಂದನಾ ಗ್ರಂಥ : ಸಂ. ಎಂ.ಹೆಚ್.ನಾಗರಾಜ್, ಎ.ಕೆ.ಹಂಪಣ್ಣ, ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋದನಾ ಕೇಂದ್ರ, ತುಮಕೂರು 1998.

53. ಪ್ರತಿ ಸಂಸ್ಕೃತಿ : ರಹಮತ್ ತರಿಕೆರೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು 1993.

54. ವಚನಗಳಲ್ಲಿ ಸಾಮಾಜಿಕ ಚಿಂತನೆ : ಡಾ. ಸೋಮಶೇಖರ, ಜಗದ್ಗುರು ಶ್ರೀ ಶಿವರಾತ್ರಿಶ್ವರ ಗ್ರಂತಮಾಲೆ, ಮೈಸೂರು 2004.

55. ಸಂಶೋಧನ ಜವಬ್ದಾರಿ : ಎಂ.ಚಂದ್ರಪೂಜಾರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2008.

56. ಸಿದ್ದರಾಮ ಸಿರಿ, ಪ್ರಸಂ. ಡಾ. ಬಿ.ಕೆಂಚವೀರಯ್ಯ : ಸಂ.ಕತ್ತಗೆ ಚನ್ನಪ್ಪ, ಶ್ರೀ.ಶ್ರೀ.ಶ್ರೀ. 1108 ಜಗದ್ಗುರು ನಂದೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ವೃಷಭಪುರಿ ಸಂಸ್ಥಾನ ಬೃಹನ್ಮಠ ನಂದಿಗುಡಿ– 577516 1999.

57. ವಚನಕಾರ್ತಿ ರಾಯಮ್ಮ : ಡಾ.ಜಯಶ್ರೀ ದಂಡೆ, ಗುಲ್ಬರ್ಗ ವಿ.ವಿ. 1998.

58. ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ : ಪ್ರೊ, ಎಂ.ಹೆಚ್.ಕೃಷ್ಣಯ್ಯ, ಸುವಿದ್ಯಾ ಪ್ರಕಾಶನ, ಡಾ. ಎ.ಆರ್. ಕೃಷ್ಣಶಾಸ್ತ್ರೀ ರಸ್ತೆ, ಬಸವನಗುಡಿ, ಬೆಂಗಳೂರು–56004 1993.

59. ಜನಪದ ಸಾಹಿತ್ಯದ ಬಂಡಾಯದ ನೆಲೆಗಳು : ಡಾ.ಡಿ. ಶಿವನಂಜಯ್ಯ, ನಿರಾ ಪಬ್ಲಿಷಿಂಗ್ ಹೌಸ್ ನಂ.83/1 ಕೆ.ಎಸ್.ಆರ್.ಟಿ.ಸಿ.ಬಡಾವಣೆ, ಹನುಮಂತನಗರ, ಬನ್ನಿಮಂಟಪ, ಮೈಸೂರು 570015 2007.

60. ಶಂಭಾ ಕೃತಿ : ಸಂಪುಟ–2, ಕಂನಡ–ಕಂನುಡಿ, ಸಂ.ಮಲ್ಲೇಪುರಂ ವೆಂಕಟೇಶ್, 1999. ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

61. ಕನ್ನಡ ಕೈಪಿಡಿ : ಸಂ–1, ಡಾ.ಕೆ.ವಿ.ಪುಟ್ಟಪ್ಪ, ಪ್ರಸಾರಾಂಗ, ಮೈಸೂರು ವಿ.ವಿ 1988.

62. ಕರ್ನಾಟಕ ಜನಪದ ಕಲೆಗಳು ಒಂದು ಪಕ್ಷಿನೋಟ : ಸಂ. ಗೊ.ರು. ಚನ್ನಬಸವಪ್ಪ, 1977 ಕನ್ನಡ ಸಾಹಿತ್ಯ ಪರಿಷತ್ತು.

63. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ : ಪ್ರಸಂ. ಬರಗೂರು ರಾಮಚಂದ್ರಪ್ಪ, 1993 ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

64. ಬಸವಣ್ಣನವರ ವಚನ ಸಂಪುಟ : ಡಾ. ಎಂ.ಎಂ. ಕಲ್ಬುರ್ಗಿ, 1993 ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

65. ಅಲ್ಲಮಪ್ರಭು ದೇವರ ವಚನ ಸಂಪುಟ : ಡಾ. ಬಿ.ವ್ಹಿ. ಮಲ್ಲಾಪುರ, 1993 ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

66. ಚನ್ನಬಸವಣ್ಣನ ವಚನ ಸಂಪುಟ : ಡಾ. ಬಿ.ವ್ಹಿ. ಮಲ್ಲಾಪುರ, 1993 ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

67. ಸಿದ್ದರಾಮೇಶ್ವರರ ವಚನ ಸಂಪುಟ : ಡಾ. ಬಿ.ವ್ಹಿ. ಮಲ್ಲಾಪುರ, 1993 ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

68. ಶಿವಶರಣೆಯರ ವಚನ ಸಂಪುಟ : ಡಾ. ಬಿ.ವ್ಹಿ. ಮಲ್ಲಾಪುರ, 1993 ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

69. ಕನ್ನಡ ಭಾಷೆಯ ಇತಿಹಾಸ : ಡಾ. ಬಿ. ರಾಮಚಂದ್ರರಾವ್, 1998 ಲಕ್ಷ್ಮಿ ಮುದ್ರಣಾಲಯ, ಚಾಮರಾಜ ಪೇಟೆ, ಬೆಂಗಳೂರು.

70. ಚನ್ನಬಸವಣ್ಣನ ವಚನಗಳು : ಸಂ. ಡಾ.ಆರ್.ಸಿ. ಹಿರೇಮಠ್, 19965 ಕರ್ನಾಟಕ ವಿ.ವಿ. ದಾರವಾಢ.

71. ಒಳಹರಿವು : ಡಾ॥ಪಿ.ವಿ.ನಾರಾಯಣ 2004, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

72. ಬಸವ ಪ್ರಜ್ಞೆ : ರಂಜಾನ್ ದರ್ಗಾ, 2002, ಲೋಹಿಯಾ ಪ್ರಕಾಶನ, ಬಳ್ಳಾರಿ.

73. ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ : ಡಿ.ಆರ್. ನಾಗರಾಜು, 1999, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ಕರ್ನಾಟಕ 577417.

74. ಸಿದ್ದರಾಮೇಶ್ವರರ ಆಯ್ದ 108 ವಚನಗಳು : ಸಂ.ಡಾ.ಎಸ್. ವಿದ್ಯಾಶಂಕರ, 2006. ಬಸವ ಸಮತಿ, ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬಸವೇಶ್ವರ ವೃತ್ತ ಬೆಂಗಳೂರು.

75. ವಚನ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು : ವಿದ್ಯಾವತಿ ಬಸವರಾಜ ಪಾಟೀಲ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿ.ವಿ.

76. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ : ಡಾ. ಸಿ.ವಿ.ಪ್ರಭುಸ್ವಾಮಿ ಮಠ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ಕರ್ನಾಟಕ 577417.

77. ಉತ್ತರ ದಕ್ಷಿಣ ರಾಮ ಮನೋಹರಲೋಹಿಯಾ ಬರಹಗಳು ಸಂ-2 : ಸಂ. ನಟರಾಜ್ ಹುಳಿಯಾರು, ಪ್ರೊ॥ ಕಾಳೇಗೌಡ ನಾಗವಾರ,

78. ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ. ಮುಗುಳಿ, ಉಷಾಸಾಹಿತ್ಯ ಮಾಲೆ, ಮೈಸೂರು. 1971.

79. ಕನ್ನಡ ಸಾಹಿತ್ಯ ಚರಿತ್ರೆ : ತ.ಸು.ಶಾಮರಾಯ.

80. ದೇವರ ದಾಸಿಮಯ್ಯನ ವಚನಗಳು : ಫ.ಗು. ಹಳಕಟ್ಟಿ, ಶಿವಾನುಭವ ಗ್ರಂಥಮಾಲೆ, 1965.

81. ನಿರ್ಮಿತಿ : ಶ್ರೀ ಸಿದ್ಧರಾರಾಮಶರಣರು ಬೆಲ್ದಾಳ, ವಚನಕಮ್ಮಟ ಪರೀಕ್ಷೆ, ಬಸವಕೇಂದ್ರ, ಶ್ರೀ ಮುರುಘಮಠ, ಚಿತ್ರದುರ್ಗ-577503.

82. ಅಲ್ಲಮನವಚನ ಪ್ರಕೋಶ : ಹ.ನಂ. ವಿಜಯಕುಮಾರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. 1982.

83. ಚಿದಾನಂದ ಮೂರ್ತಿ. ಎಂ., ಕರ್ನಾಟಕ ಸಂಸ್ಕೃತಿ : ಕ.ಸಾ. ಪರಿಷತ್ತು,. ಬೆಂಗಳೂರು. 1991.

84. ಆದಿಮ : ಡಾ॥ ಮೊಗಳ್ಳೆ ಗಣೇಶ್, ಹೊನ್ನಾರು ಮಾಸಪತ್ರಿಕೆಗಳು ಮತ್ತು ಸಾರಾಂಶ ಪ್ರಕಾಶನ, ತಿಪಟೂರು. 2005.

85. ಸಾಹಿತ್ಯ ವಿಮರ್ಶೆ : ಸಂ. ದಾರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1992.

86. ಶಿವನಬುಟ್ಟೆ : ಪ್ರೊ॥ ಹಿರೇಮಲ್ಲೂರ ಈಶ್ವರನ್, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು-560040. 1998.

87. ಶರಣ ಅಂಬಿಗರ ಚೌಡಯ್ಯ : ಗುರುಲಿಂಗಪ್ರಧಬಾಲೆ, ಗುಲ್ಬರ್ಗ ವಿವಿ, ಗುಲ್ಬರ್ಗ. 1999.

88. ಗಜೇಶ ಮಸಣಯ್ಯ : ಶ್ರೀ ಆರ್.ಎಸ್. ಸ್ವಾಮಿ, ಶ್ರೀಗಳಂಗಳಪ್ಪ ಪಾಟೀಲ, (ಮೆ॥ ಎಸ್.ಬಿ. ಪಾಟೀಲ) ಬಸವಾದಿ ಶರಣಸಾಹಿತ್ಯ ಕೆಂದ್ರ, ಗುಲ್ಬರ್ಗ ವಿವಿ, ಗುಲ್ಬರ್ಗ-585106. 1999.

89. ಇಕ್ಕಟ್ಟು–ಬಿಕ್ಕಟ್ಟು : ಪ್ರೊ॥ ಕೆ.ಜಿ. ನಾಗರಾಜಪ್ಪ, ಅನಿಕೇತನ, ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ, ತುಮಕೂರು. 1998.

90. ಆರೋಗ್ಯಮೃತ : (ಶರಣರ ವಚನಗಳಲ್ಲಿ ಆರೋಗ್ಯ ಪರಿಕಲ್ಪನೆ) ಶ್ರೀ ಬಸವಾನಂದ ಸ್ವಾಮಿಗಳು, ಪ್ರಭುದೇವ ಪ್ರಕಾಶನ, ಶ್ರೀ ಗುರುಬಸವ ಮಹಾಮನೆ, ಚೆನ್ನಯ್ಯಗಿರಿ ಮನಗುಂಡಿ, ಧಾರವಾಡ.

91. ಸಿದ್ಧರಾಮದರ್ಶನ : (ವಜ್ರ ಮಹೋತ್ಸವ ಕೃತಿ) ಪ್ರಸಂ. ಪ್ರೊ॥ ಎಂ.ಎಸ್. ರಾಮಲಿಂಗಪ್ಪ, ನೊಳಂಬ ವೀರಶೈವ ಸಂಘ, ಬೆಂಗಳೂರು. 1998.

92. ಕನ್ನಡ ಭಾಷಾ ಶಾಸ್ತ್ರ : ರಾ.ಯ. ಧಾರವಾಡಕರ, ಗೀತ ಬುಕ್ ಹೌಸ್ ಪ್ರಕಾಶಕರು, ಮೈಸೂರು. 1990.

93. ಕನ್ನಡ ನಾಡಿನ ಚರಿತ್ರೆ : (ಭಾಗ–1) ಡಾ॥ ಬಿ.ಎ. ಸಾಲೆತೊರೆ, ಡಾ॥ ದೇಸಾಯಿ ಪಾಂಡುರಂಗರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018. 1998.

94. ಭಾಷೆಯ ಸುತ್ತ–ಮುತ್ತ : ಕೆ.ವಿ. ನಾರಾಯಣ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು. 1998.

95. ಗೊಂಚಲು : ಡಾ॥ ದೇಜಗೌ, ಅಖಿಲಭಾರತ ದೇಜಗೌ ಸಾಂಸ್ಕೃತಿಕ ಟ್ರಸ್ಟ್ (ರಿ), ಜಿಲ್ಲಾ ಕನ್ನಡ ಸಾಹಿತ್ಯ ಭವನ ರಸ್ತೆ, ವಿಜಯನಗರ, 1 ನೇ ಹಂತ, ಮಐಸೂರು – 570017. 2007.

96. ಕಲ್ಯಾಣ ನಾಡಿನ ಕ್ರಾಂತಿಪುರುಷ : ಮಡಿವಾಳ ಮಾಚಿತಂದೆ, ಜಂಬಣ್ಣ ಅಮರಚಿಂತ, ರಜತರತ್ನ ಪರಕಾಶನ, ರಾಯಚೂರು. 1997.

97. ಬಸವಸಾಹಿತ್ಯ (ಕವಿ, ಕೃತಿ, ಆಧುನಿಕ ಚಿಂತನಮಾಲೆ–3, ವಿಮರ್ಶಾ ಲೇಖನಗಳ ಸಂಕಲನ) : ಸಂ. ಮೃತ್ಯುಂಜಯರಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು– 560002, 2004.

98. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ : ಡಾ॥ ಬಸವರಾಜಕಲ್ಗುಡಿ, ಕನ್ನಡ ಸಾಹಿತ್ಯ ಪರಿಷತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–5600018.

99. ಬಸವಣ್ಣನವರ ವಚನಗಳು (ಬಸವೇಶ್ವರ ವಚನಸಂಗ್ರಹ) : ಡಾ॥ ಎಲ್. ಬಸವರಾಜು, ಗೀತಾಬುಕ್ ಹೌಸ್, ಮೈಸೂರು. 1990.

100. ಹರಿಹರ ಚಿತ್ರಿಸಿದ ದಲಿತ ಶರಣರು : ಪ್ರೊ॥ ಎಸ್.ಎಸ್. ಹಿರೇಮಠ, 1999, ಪ್ರಸಾರಾಂಗ, ಕನ್ನೆ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

101. ಸಂಶೋಧನ ತರಂಗ : ಎಂ.ಚಿದಾನಂದಮೂರ್ತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. 1975.

102. ಸಂಶೋಧನ : ಡಾ॥ ಎಂ. ಚಿದಾನಂದಮೂರ್ತಿ ಗೌರವ ಸಂಪುಟ, ಸಂ. ಲಕ್ಷ್ಮಣ ತೆಲಗಾವಿ. 1991.

103. ಅರಿವಿನ ಆಂದೋಲನ : ಶ್ರೀ ಡಿ.ಎಂ. ಧನ್ನೂರ, ವಚನಕಮ್ಮಟ ಪರೀಕ್ಷೆ, ಶ್ರೀ ಮುರುಘಾಮಠ, ಚಿತ್ರದುರ್ಗ–577502.

104. ಸಂಕ್ರಾಂತಿ(ನಾಟಕ): ಪಿ.ಲಂಕೇಶ್, ಪ್ರಕಾಶನ: ಪಿ. ಲಂಕೇಶ್ ಬಸವನಗುಡಿ ಬೆಂಗಳೂರು, ಪ್ರಕಟಣೆ 2000

105. ಮಂಟೇಸ್ವಾಮಿ ಪರಂಪರೆ ಕುಲವೀಮಾಂಸೆ– ಹುಲಿಕುಂಟೆಮೂರ್ತಿ, ಪ್ರಕಟಣೆ: ಕನ್ನಡ ವಿ.ವಿ ಹಂಪಿ 2010

106. ಸಂಶೋಧನ ಚತುರ್ಮುಖ– ಡಾ.ಬಿ.ವಿ ಶಿರೂರ, ಪ್ರಕಟಣೆ: ವಿದ್ಯಾನಿಧಿ ಪ್ರಕಾಶನ ಗದಗ 2006

107. ಅಲ್ಲಮನ ವಚನ ಚಂದ್ರಿಕೆ – ಡಾ. ಎಲ್ ಬಸವರಾಜು, ಪ್ರಕಟಣೆ: ಲೋಹಿಯಾ ಪ್ರಕಾಶನ ಬಳ್ಳಾರಿ, 2001

108. ಪಾಲ್ಕುರಿಕೆ ಸೋಮನಾಥನ ಬಸವಪುರಾಣ – ಸಂ. ಡಾ.ಪಿ.ವಿ ನಾರಾಯಣ, ಪ್ರಕಟಣೆ: ವಸಂತ ಪ್ರಕಾಶನ ಬೆಂಗಳೂರು 2009

109. ಶತಮಾನದ ಸಾಹಿತ್ಯ ವಿಮರ್ಶೆ– ಸಂ. ಹೆಚ್ ಎಸ್ ರಾಘವೇಂದ್ರರಾವ್ ಪ್ರಕಟಣೆ: ಕರ್ನಾಟಕ ಸಾಹಿತ್ಯ ಅಕಾಡಮಿ

110. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ – ಡಾ.ಪಿ.ವೀರಣ್ಣ(2.ಮಧ್ಯಕಾಲೀನ ಸಾಹಿತ್ಯ), ಪ್ರಕಟಣೆ: ನವಕರ್ನಾಟಕ ಪಬ್ಲಿಕೇಷನ್ 2011

111. ವಚನ ಸಾಹಿತ್ಯ – ಎಂ. ಚಿದಾನಂದ ಮೂರ್ತಿ, ಪ್ರಕಟಣೆ: ಸಪ್ನ ಬುಕ್ ಹೌಸ್–2011

112. ವಚನ ಸಾಹಿತ್ಯದ ಹೊಸ ಪರಿಕಲ್ಪನೆ– ರಘು ಶಂಖಭಾತಂಬ್ರಾ ಪ್ರಕಟಣೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2004

113. ಕೆಟ್ಟಿತ್ತು ಕಲ್ಯಾಣ– ಡಾ.ಎಂ.ಎಂ ಕಲುಬುರ್ಗಿ ಪ್ರಕಟಣೆ: ಸಹೃದಯ ಸಾಂಸ್ಕೃತಿಕ ಆಕಾಡೆಮಿ ದಾರವಾಥ 1995

114. ತಲೆದಂಡ– ಗಿರೀಶ್ ಕಾರ್ನಾಡ ಪ್ರಕಟಣೆ: ಮನೋಹರ ಗ್ರಂಥಮಾಲಾ ಧಾರವಾಡ 1995

115. ಮಾರ್ಗ–1 – ಡಾ.ಎಂ.ಎಂ ಕಲಬುರ್ಗಿ ಕರ್ನಾಟಕ ಬುಕ್ ಹೌಸ್ ಎಜೆನ್ಸಿ 1195

116. ಹಳಕಟ್ಟಿ ನುಡಿಪರುಷ –ಸಂ. ಶಾಂತರಸ ಪ್ರಕಟಣೆ: ಕರ್ನಾಟಕ ಸರ್ಕಾರ 1983

117. ವಚನಧರ್ಮ ಸಾರ – ಎಂ.ಆರ್ ಶ್ರೀನಿವಾಸಮೂರ್ತಿ, ಪ್ರಕಟಣೆ: ಕನ್ನಡ ಮತ್ತು ಸಂಕೃತಿ ನಿರ್ದೇಶನಾಲಯ 1990

118. ಹರಿಹರ ಚಿತ್ರಿಸಿದ ದಲಿತ ಶರಣರು – ಪ್ರೋ. ಎಸ್ ಎಸ್ ಹಿರೇಮಠ ಪ್ರಕಟಣೆ: ಹಂಪಿ ವಿ.ವಿ 1998

119. ಮಾದೇಶ್ವರ– ವಿದ್ವಾನ್ ಹ.ಜ ಶಿವಶಂಕರಪ್ಪ, ಪ್ರಕಟಣೆ: ಶ್ರೀ ಮಾದೇಶ್ವರ ಸ್ವಾಮಿಯ ಇತಿಹಾಸ ಸಂಶೋದನಾ ಸಂಸ್ಥೆ 1979

120. ಕನ್ನಡ ವೃತ್ತಿಗಾಯಕ ಕಾವ್ಯಗಳು – ಸಂ. ಡಾ. ಜಿ. ಶಂ.ಪರಮ ಶಿವಯ್ಯೆ ಪ್ರಕಟಣೆ: ಕನ್ನಡ ಸಾಹಿತ್ಯ ಪರಿಷತ್

121. ಪಂಪಭಾರತಂ– ಎನ್ ಅನಂತ ರಂಗಾಚಾರ್ ಕನ್ನಡ ಸಾಹಿತ್ಯ ಪರಿಷತ್ತು.

ನಿಯತ ಕಾಲಿಕಗಳು

1.	ಸಿದ್ಧಗಂಗಾ ಮಾಸಪತ್ರಿಕೆ	ಜೂನ್ 2006.
2.	ವಿಜಯಕರ್ನಾಟಕ	ಭಾನುವಾರ 29, ಜನವರಿ 2006, ಸಾಪ್ತಾಹಿಕ ವಿಜಯ
3.	ಪ್ರಜಾವಾಣಿ ದಿನಪತ್ರಿಕೆ	ಬುಧವಾರ 7, ಜೂನ್ 2006. (ದಿನದ ವಾರ್ತೆ)
4.	'ಅಗ್ನಿ' ವಾರಪತ್ರಿಕೆ	ಜನವರಿ 13, 2004.
5.	ಅನ್ವೇಷಣೆ	(ಸಂ) ನಾಗರಾಜು ಆರ್.ಜಿ. ಹಳ್ಳಿ, ಅನ್ವೇಷಣೆ ಪ್ರಕಾಶನ, ಬೆಂಗಳೂರು.
6.	ಒಡಲಾಳ, ತ್ರೈಮಾಸಿಕ ಸಾಹಿತ್ಯ ಪತ್ರಿಕೆ	(ಸಂ) ಕೃಷ್ಣಮೂರ್ತಿ ಬಿಳಿಗೆರೆ, ಅಭಿವ್ಯಕ್ತಿ ಬಳಗ, ತಿಪಟೂರು
7.	ಕನ್ನಡ ಅಧ್ಯಯನ	(ಸಂ) ರಹಮತ್ ತರೀಕೆರೆ, ಪ್ರಸಾರಾಂಗ, ಹಂಪಿ ವಿವಿ.
8.	ಸಂಕ್ರಮಣ	(ಸಂ) ಚಂದ್ರಶೇಖರ ಪಾಟೀಲ, ಸಂಕ್ರಮಣ ಪ್ರಕಾಶನ, ಧಾರವಾಡ.
9.	ಸಾಹಿತ್ಯ ಸಂವಾದ	ರಾಘವೇಂದ್ರಪಾಟೀಲ, ಸಂಕ್ರಮಣ, ಪ್ರಕಾಶನ, ಮಲ್ಲಾಡಿಹಳ್ಳಿ.
10.	ಶೂದ್ರ	(ಸಂ) ಶೂದ್ರ ಶ್ರೀನಿವಾಸ್, ಬಾಲಾಜಿ ನಗರ, ಬೆಂಗಳೂರು.
11.	ಹೊಸತು	(ಸಂ) ರಾಮಕೃಷ್ಣ ಜಿ., ನವಕರ್ನಾಟಕ ಪ್ರಕಾಶನ, ಬೆಂಗಳೂರು.
12.	ವಚನಜ್ಯೋತಿ	ಸಾಹಿತ್ಯ ಸಾಂಸ್ಕೃತಿಕ ಮಾಸಿಕ (ಸಂ) ಎಸ್. ಪಿನಾಕಪಾಣಿ.
13.	ಅನುರಣ	(ಸಂ) ಭಾನುಪ್ರಶಾಂತ್, ತಿಪಟೂರು.
14.	ಹೊನ್ನಾರು	(ಸಂ) ಉಜ್ಜಜ್ಜಿ ರಾಜಣ್ಣ, ತಿಪಟೂರು.
15.	ರೈತಕಿರಣ	(ಸಂ) ರಂಗಸ್ವಾಮಿ, ತಿಪಟೂರು.
16.	ಪ್ರಜಾಪ್ರಗತಿ	(ಸಂ) ನಾಗಣ್ಣ, ದಿನಪತ್ರಿಕೆ, ತುಮಕೂರು.
17.	ಲಂಕೇಶ್ ಪತ್ರಿಕೆ	(ಸಂ) ಇಂದ್ರಜಿತ್.
18.	ಕರ್ನಾಟಕ ಲೋಚನ	ಷಾಣ್ಮಾಸಿಕ ವಿದ್ವತ್ ಪತ್ರಿಕೆ, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು.
19.	ಬಸವಪಥ	ಮಾಸಪತ್ರಿಕೆ, ಬೆಂಗಳೂರು.